ಡಿಸೆಂಬರ್ ೨೦೦೮ ರೂ. ೨೦

ಅಳಿದ ಕತ್ತಲೆ ರಾಜ್ಯ:

ಶ್ವೇತ ಭವನದಲ್ಲಿ ಒಬಾಮ

ಸಂವಾದ

ಮಾಸ ಪತ್ರಿಕೆ

ಸಂಪುಟ ೭ ಸಂಚಿಕೆ ೨
ಡಿಸೆಂಬರ್ ೨೦೦೮

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
✆ ೨೩೪೮೦೨೭೮/೯೪೪೮೦ ೪೮೩೦೬
ಇ-ಮೇಲ್ : samvaada@hotmail.com
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23480278, 94480 48306
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

- ಪತ್ರಗಳು ೦೩
- ಅಂತರಂಗ ೦೪
- ಜಾತಿ, ಧರ್ಮ, ತಾರತಮ್ಯ ಚರ್ಚೆ:
  ಮೂರು ಪ್ರಶ್ನೆಗಳು
  ಮತ್ತೊಂದು ಉದಾಹರಣೆ
  ○ ರಾಜಾರಾಮ ಹೆಗಡೆ ೦೬
- ದ್ರಾವಿಡ ಸಂಸ್ಕೃತಿಯ
  ಕಿಚ್ಚು ಹಚ್ಚಿದ ಪೆರಿಯಾರ್
  ○ ಅಮರ್ ಜೆ ಜೆ ೧೦
- ಮತಾಂತರ ಮತ್ತು ಕೋಮು ಸಾಮರಸ್ಯ
  ○ ಹೆಚ್.ಎಸ್ ದೊರೆಸ್ವಾಮಿ ೧೪
- ಮತಾಂತರ ಮತ್ತು ಮೂಲಭೂತ
  ಸ್ವಾತಂತ್ರ್ಯಗಳು
  ○ ಎಸ್. ಮರಿಸ್ವಾಮಿ ೧೬
- ಕೊಳೆವ ಹೊಂಡಗಳೇ ಹಿಂಡನಗಲದಿರಿ...
  ○ ಡಾ. ಮೂಡ್ನಾಕೂಡು ಚಿನ್ನಸ್ವಾಮಿ ೧೮





- ಉತ್ತಮ ಮನುಷ್ಯನ ಸೃಷ್ಟಿ...
  ○ ಶಿವಸುಂದರ್ ೨೨
- ಶ್ವೇತ ಭವನಕ್ಕೆ ಒಬಾಮ
  ○ ಡಾ. ಸುಮಾ ಬಿ ಯು ೨೪
- 'ಹೌದು ನಮ್ಮಿಂದ ಸಾಧ್ಯ'
  ○ ಸತ್ಯ ಪ್ರಕಾಶ್ ಎಂ ಆರ್ ೨೮
- ವಿನೂತನ ಸಾಧ್ಯತೆಗಳ ಒಬಾಮ
  ○ ಎನ್ ಕೆ ಪದ್ಮನಾಭ ೩೦
- ಒಡೆತನಕ್ಕೆ ಕೇಡಿಲ್ಲವಾಗಿ... ೪
  ಕೊಂದವರುಳಿವರೇ?
  ○ ಶ್ರೀಶ ಉಡುಪ ೩೪
- ಬೌದ್ಧ ಸೌಂದರ್ಯ ಮೀಮಾಂಸೆ – ೪
  ಮಹಾಯಾನವೆಂಬ ಹೊಸಯಾನ
  ○ ಡಾ. ಎಸ್. ನಟರಾಜ್ ಬೂದಾಳು ೩೮
- ಧರೆ ಹತ್ತಿ ಉರಿದರೆ... ೫
  ಅಭಿವೃದ್ಧಿಯ ಎರಡು ವಿಚಾರಧಾರೆಗಳು
  ○ ಡಾ. ಟಿ. ಆರ್ ಚಂದ್ರಶೇಖರ್ ೪೨
- ದಲಿತ್ ಡೈರಿ ೪೬
  ○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್
- ಬುದ್ಧಾಯಣ ೫೦
  ○ ಸಿ.ಎಚ್ ರಾಜಶೇಖರ್

ಕವನಗಳು :
- ಸಾವಿರ ಮರು ಭೂಮಿಗಳಾಚೆ ನೀನು ೧೩
- ಕನಲಿಕೆ ೪೯

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಈ ಪೊಲೀಸ್ ದಬ್ಬಾಳಿಕೆಗೆ ಕೊನೆ ಇಲ್ಲವೇ?

ಪ್ರೀತಿಯ ಸಂಪಾದಕರೇ,

ಶಿವಮೊಗ್ಗದಲ್ಲಿ ನಡೆಯುತ್ತಿದ್ದಂತಹ ಅನೇಕ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದ ಜಗನ್ನಾಥ್‌ರವರನ್ನು ಸುಳ್ಳು ಆರೋಪಗಳಡಿ ಪೊಲೀಸರು ಬಂಧಿಸಿದ್ದಾರೆ. ಬಂಧಿಸಿದ ನಂತರ ೨೪ ಗಂಟೆಗಳೊಳಗಾಗಿ ಕೋರ್ಟ್‌ಗೆ ಹಾಜರುಪಡಿಸಬೇಕೆಂಬ ಸಂವಿಧಾನಾತ್ಮಕ ಪೊಲೀಸ್ ಕಾಯ್ದೆಗಳಿದ್ದಾಗ್ಯೂ ಅವೆಲ್ಲವನ್ನೂ ಗಾಳಿಗೆ ತೂರಿ, ಬಂಧಿಸಿ ೫-೬ ದಿನಗಳು ಕಳೆದಿದ್ದರೂ ಯಾವ ಮಾಹಿತಿಯನ್ನೂ ಬಹಿರಂಗಪಡಿಸದೆ, ಅವರಿಗೆ ನಾನಾ ರೀತಿಯ ಚಿತ್ರಹಿಂಸೆಗಳನ್ನು ನೀಡಿ ತಾವೇ ಸೃಷ್ಠಿಸಿದ ಸುಳ್ಳುಕತೆಗಳನ್ನು ಒಪ್ಪಿಕೊಳ್ಳುವಂತೆ ಮಾಡಿರುತ್ತಾರೆ. ಇದೇ ಆರೋಪದಡಿ ಮಹಿಳಾ ಜಾಗೃತಿ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಅನಿತಾರವರನ್ನು ೨ನೇ ಆರೋಪಿಯನ್ನಾಗಿಸಿ ಎಫ್.ಐ.ಆರ್ ದಾಖಲಿಸಿರುತ್ತಾರೆ. ಇದು ಬಿ.ಜೆ.ಪಿ. ಸರ್ಕಾರ ಮತ್ತು ಪೊಲೀಸರು ಚಳುವಳಿಯನ್ನು ಹತ್ತಿಕ್ಕುವ ಫ್ಯಾಸಿಸ್ಟ್ ನೀತಿಯ ಕ್ರಮವಾಗಿದೆ. ಸರ್ಕಾರ ಮತ್ತು ಪೊಲೀಸರ ಈ ದುಷ್ಕೃತ್ಯವನ್ನು ಮಹಿಳಾ ಜಾಗೃತಿ ಸಂಘಟನೆಯು ತೀವ್ರವಾಗಿ ಖಂಡಿಸುತ್ತದೆ.

ಅನಿತಾರವರು ಎಂ.ಎ. ಪಧವೀಧರರಾಗಿದ್ದು, ಪ್ರಸ್ತುತದಲ್ಲಿ ಪ್ರಥಮ ವರ್ಷದ ಕಾನೂನು ಅಭ್ಯಾಸದ ವಿದ್ಯಾರ್ಥಿನಿಯಾಗಿರುತ್ತಾರೆ. ವಿವಿಧ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಾ, ಕುಟುಂಬದವರೊಂದಿಗಿದ್ದುಕೊಂಡೇ ಕಳೆದ ೮-೧೦ ವರ್ಷಗಳಿಂದ ಮಹಿಳಾ ಜಾಗೃತಿಯೂ ಸೇರಿದಂತೆ ರೈತ, ದಲಿತ ಸಂಘಟನೆಗಳ ಹೋರಾಟಗಳಲ್ಲಿ, ಕೋಮು ಸೌಹಾರ್ದದ ಚಳುವಳಿಗಳಲ್ಲಿ, ಪರಿಸರ ರಕ್ಷಣೆಯ ಹೋರಾಟಗಳಲ್ಲಿ ಆದಿವಾಸಿ ಗಿರಿಜನರ ಹೋರಾಟಗಳಲ್ಲಿ, ಇತ್ತೀಚಿನ ಮಲೆನಾಡು-ಕರಾವಳಿ ಉಳಿಸಿ ಭೂ ಹೋರಾಟ ವೇದಿಕೆಯ ಹೋರಾಟಗಳಲ್ಲಿ ಸಕ್ರಿಯರಾಗಿ, ಮುಂಚೂಣಿಸ್ಥಾನವನ್ನು ವಹಿಸಿಕೊಂಡು ಜಿಲ್ಲೆ ಹಾಗೂ ರಾಜ್ಯದಾದ್ಯಂತ ಕಾರ್ಯನಿರ್ವಹಿಸುತ್ತಾ ಬಂದಿರುತ್ತಾರೆ. ಈ ಎಲ್ಲಾ ಹೋರಾಟಗಳು ಸರ್ಕಾರ/ಪೊಲೀಸ್ ಹೇಳುವಂತಹ ಸಂವಿಧಾನಾತ್ಮಕ ಕಾನೂನು ಚೌಕಟ್ಟಿನಡಿಯಲ್ಲಿಯೇ ನಡೆದುಕೊಂಡು ಬಂದಿರುವಂಥದ್ದಾಗಿವೆ. ಮಹಿಳಾ ಜಾಗೃತಿ ಸಂಘಟನೆಯಿಂದ ಹೊರತರಲಾಗಿರುವ ಮಹಿಳಾ ಹೋರಾಟದ ದಾರಿ ಕುರಿತಾಗಿ ಹೇಳುವ ಪುಸ್ತಿಕೆ 'ಮಹಿಳಾ ದೃಷ್ಟಿಕೋನ' ದಲ್ಲಿಯೂ ಸ್ಪಷ್ಟವಾಗಿ ಈ ಬಗ್ಗೆ ದಾಖಲಿಸಿದ್ದೇವೆ. ಇದು ಪೊಲೀಸರಿಗೆ ತಿಳಿಯದಿರುವಂಥದ್ದೇನಲ್ಲ.

ವಾಸ್ತವದಲ್ಲಿ ಸರ್ಕಾರಗಳು/ಬಿ.ಜೆ.ಪಿ ಸರ್ಕಾರ ಮಹಿಳೆಯರು, ರೈತರು, ದಲಿತರು, ಆದಿವಾಸಿಗಳ ಮೇಲಿನ ದೌರ್ಜನ್ಯವನ್ನು, ಜಾತಿ ಮುಂದುವರೆಸಿಕೊಂಡು ಹೋಗಲು ಯಾವ ಅಡ್ಡಿ ಆತಂಕ ಬಾರದೆಂಬ ದುರುದ್ದೇಶದಿಂದಲೇ ಪ್ರಗತಿಪರ, ಜನಪರ ಹೋರಾಟಗಾರರ ಮೇಲೆ ಈ ರೀತಿಯ ಸುಳ್ಳು ಆರೋಪಗಳು, ಫ್ಯಾಸಿಸ್ಟ್ ಕ್ರಮಗಳನ್ನು ಜಾರಿಗೊಳಿಸುತ್ತಿದ್ದಾರೆ. ಈ ಮೂಲಕ ಹೋರಾಡುವ ಜನತೆಗೆ ನಾಯಕತ್ವವಿಲ್ಲದಂತೆ ಮಾಡುವುದು ಪೊಲೀಸರ ಸಂಚಾಗಿದೆ. ಇದು ಸರ್ಕಾರ ಪ್ರಜಾಪ್ರಭುತ್ವ ವ್ಯವಸ್ಥೆಯೆಂದು ಕೊಚ್ಚಿಕೊಳ್ಳುತ್ತಲೇ ಅಪ್ರಜಾತಾಂತ್ರಿಕವಾಗಿ ನಡೆದುಕೊಳ್ಳುವುದಕ್ಕೆ ಸಾಕ್ಷಿಯಾಗಿದೆ.

ಸರ್ಕಾರ ಮತ್ತು ಪೊಲೀಸರು ಸಂವಿಧಾನ ಬದ್ಧ ಸಂಘಟಿಸುವ ಪ್ರಜಾತಾಂತ್ರಿಕ ಹಕ್ಕನ್ನು ಕಸಿದುಕೊಳ್ಳುವ ಮೂಲಕ ಸಂವಿಧಾನ ಮತ್ತು ಕಾನೂನು ಬಾಹಿರ ಕೃತ್ಯವನ್ನು ಎಸಗಿರುತ್ತಾರೆ.

೨೦೦೫ ರಲ್ಲಿಯೂ ಮಹಿಳಾ ಜಾಗೃತಿ ಸಂಘಟನೆಯ ಕಾರ್ಯಕರ್ತೆಯರ ಮೇಲೆ ಬೆಂಗಳೂರಿನ ಅರುಣಾ ಎಂಬ ಬಾಲಕಿಯನ್ನು ಅಪಹರಿಸಿ, ರಾಜದ್ರೋಹದ ಕೆಲಸಗಳನ್ನು ಮಾಡುತ್ತಿದ್ದಾರೆಂಬ ಸುಳ್ಳು ಆರೋಪವನ್ನು ಹೊರಿಸಿದ್ದರು. ಸಂಘಟನೆಯ ಕಛೇರಿಯನ್ನೂ ರೈಡ್ ಮಾಡಿ ಪ್ರಗತಿಪರ, ವಿಚಾರವಾದಿ ಸಾಹಿತ್ಯಗಳನ್ನು ನಕ್ಸಲ್ ಸಾಹಿತ್ಯ ವಶಪಡಿಸಿಕೊಂಡಿರುವಂತೆ ಬಿಂಬಿಸುತ್ತಾ ಸಂಘಟನೆಯ ಬಗ್ಗೆ ನಕ್ಸಲ್ ಹಣೆಪಟ್ಟಿಕಟ್ಟಲು, ಈ ಮೂಲಕ ಜನರಲ್ಲಿ ಭಯದ ವಾತಾವರಣವನ್ನು ಮೂಡಿಸುವ ಮೂಲಕ ಹೋರಾಟವನ್ನು ಹತ್ತಿಕ್ಕಲೆತ್ನಿಸಿದ್ದರು. ಪೊಲೀಸರ ಈ ಸುಳ್ಳು ಪ್ರಕರಣ ವಿರುದ್ಧ ಸಂಘಟನೆಯು ತೀವ್ರ ರೀತಿಯ ಹೋರಾಟವನ್ನು ನಡೆಸಿತ್ತು ಈ ಪ್ರಕರಣವನ್ನು ಸತತ ಮೂರೂವರೆ ವರ್ಷಗಳ ಕಾಲ ವಿಚಾರಣೆ ನಡೆಸಿದ ಶಿವಮೊಗ್ಗದ ನ್ಯಾಯಾಲಯವು ಕಳೆದ ಆಗಸ್ಟ್ ೨೭ ರಂದು ಪೊಲೀಸರು ಸಂಘಟನೆಯ ಮೇಲೆ ಹೊರಿಸಿದ್ದ ಆರೋಪಗಳೆಲ್ಲವೂ ಸುಳ್ಳೆಂದು ತೀರ್ಪನ್ನಿತ್ತಿದೆ. ಇದು ನಾಡಿನ್ಯಾಂತ ಸುದ್ದಿಯಾಗಿದೆ. ಅರುಣಾ ಪ್ರಕರಣದಲ್ಲಿ ಇಷ್ಟೆಲ್ಲಾ ಮುಖ ಭಂಗವನ್ನು ಅನುಭವಿಸಿದ ಪೊಲೀಸರು ನಾಡಿನ ಜನತೆಯೆದುರು ತಲೆತಗ್ಗಿಸಬೇಕಾಯಿತು. ಇದರಿಂದ ಪಾಠಕಲಿಯದೆ ಪುನಃ ಅದೇ ರೀತಿಯಲ್ಲಿ ಬೇಕೆಂತಲೆ ತಮ್ಮ ಕುತಂತ್ರ ಹಾಗೂ ಫ್ಯಾಸಿಸ್ಟ್ ನೀತಿಯನ್ನು ಮುಂದುವರೆಸುವ ಭಾಗವಾಗಿ ಜಗನ್ನಾಥ್‌ರವರ ಮೇಲೆ ಹೊರಿಸಲಾಗಿರುವ ಸುಳ್ಳು ಆರೋಪದೊಂದಿಗೆ ಸಂಘಟನೆಯ ಅನಿತಾರವರ ಮೇಲೆಯೂ ಸುಳ್ಳು ಆರೋಪದ ಎಫ್.ಐ.ಆರ್‌ನ್ನು ತಯಾರಿಸಿದ್ದಾರೆ. ಇದು ಸಂಘಟನೆ ಮತ್ತು ಅದರ ನಾಯಕತ್ವದ ಮೇಲಿನ ಸೇಡಿಗಾಗಿ ಹೆಣೆಯಲಾಗಿರುವ ಪೊಲೀಸರ ವ್ಯವಸ್ಥಿತವಾದ ಸಂಚಾಗಿದೆ ಸರ್ಕಾರ ಮತ್ತು ಪೊಲೀಸರ ಈ ದುಷ್ಕೃತ್ಯವನ್ನು ನಾಡಿನ ಪ್ರಗತಿಪರ ಸಂಘಟನೆಗಳು ಮಹಿಳೆಯರು, ವಿದ್ಯಾರ್ಥಿಗಳು, ಬುದ್ಧಿಜೀವಿಗಳು, ರೈತರು, ಕಾರ್ಮಿಕರು, ಮಾಧ್ಯಮ ಮಿತ್ರರು, ಪ್ರಜ್ಞಾವಂತ ನಾಗರೀಕರೆಲ್ಲರೂ ಖಂಡಿಸಬೇಕಾಗಿ ಸಂಘಟನೆಯು ವಿನಂತಿಸಿಕೊಳ್ಳುತ್ತದೆ. ಮುಂದಿನ ದಿನಗಳಲ್ಲಿ ಇದರ ವಿರುದ್ಧವಾಗಿ ಪ್ರಜಾರಾಂದೋಲನ, ಪ್ರತಿಭಟನೆಗಳನ್ನು ಹಮ್ಮಿಕೊಳ್ಳುವುದಾಗಿ ಎಚ್ಚರಿಸುತ್ತಿದ್ದೇವೆ.

* ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಅನಿತಾರವರ ಮೇಲಿನ ಸುಳ್ಳು ಆರೋಪದ ಎಫ್.ಐ.ಆರ್ ವಜಾಗೊಳಿಸಬೇಕು.
* ಸಾಮಾಜಿಕ ಚಳಿವಳಿಗಳಲ್ಲಿ ಭಾಗಿಯಾಗುತ್ತಿದ್ದ ಜಗನ್ನಾಥ್‌ರ ಮೇಲಿನ ಸುಳ್ಳು ಆರೋಪವನ್ನೂ ವಜಾಗೊಳಿಸಬೇಕು.
* ನಕ್ಸಲ್ ಹೆಸರಿನಲ್ಲಿ ಸಾಮಜಿಕ ಹೋರಾಟಗಾರರಿಗೆ ತೊಂದರೆ ನೀಡುವ, ಪ್ರಜಾತಾಂತ್ರಿಕ ಹಕ್ಕನ್ನು ಕಿತ್ತುಕೊಳ್ಳುವ, ಸರ್ಕಾರ ಮತ್ತು ಪೊಲೀಸರ ಫ್ಯಾಸಿಸ್ಟ್ ನೀತಿಯನ್ನು ಕೈ ಬಿಡಬೇಕು.

ಸುಭದ್ರಮ್ಮ, ಲತಾ,
ಶಿವಮೊಗ್ಗ.

ಪತ್ರಗಳು

ಸರ್ಕಾರಿ ಶಾಲೆ ಉಳಿಸಿ

ಮಾನ್ಯ ಸಂಪಾದಕರಿಗೆ,

ಸರ್ಕಾರಿ ಶಾಲೆಗಳ ಸ್ಥಿತಿ ಗತಿ ಕುರಿತು ತಮ್ಮ ಗಮನ ಸೆಳೆಯಲು ಈ ಪತ್ರ ಬರೆಯುತ್ತಿದ್ದೇನೆ.

ಈಚಿನ ದಿನಗಳಲ್ಲಿ ಸರ್ಕಾರಿ ಶಾಲೆಗಳು ಮತ್ತು ಕಾಲೇಜುಗಳು ಬಹಳ ಇಳಿಮುಖವಾಗುತ್ತಿವೆ. ಸರ್ಕಾರ ಬಿಸಿಯೂಟ ಯೋಜನೆ, ಸ್ಕಾಲರ್ ಷಿಪ್, ಬೈಸಿಕಲ್, ಪುಸ್ತಕಗಳು, ಬಟ್ಟೆ ಬ್ಯಾಗ್, ಎಲ್ಲವನ್ನು ಉಚಿತವಾಗಿ ನೀಡುತ್ತಿದ್ದರೂ ಸರ್ಕಾರಿ ಶಾಲೆಗಳು ದಿನ ದಿನಕ್ಕೆ ಕುಸಿಯುತ್ತಿವೆ.

ನನ್ನ ಕುತೂಹಲಕಾರಿ ಪ್ರಶ್ನೆ ಏನೆಂದರೆ? ತಂದೆ ತಾಯಂದಿರು ಸರ್ಕಾರಿ ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಕೆಲಸ ಮಾಡಲು ಬಹಳ ಇಷ್ಟಪಡುತ್ತಾರೆ. ಆದರೆ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಲ್ಲಿ ಓದಿಸಬೇಕು ಎಂದು ಇಷ್ಟಪಡುತ್ತಾರೆ. ಯಾಕೆ ಈ ಎಡಬಿಡಂಗಿತನ?

ಖಾಸಗಿ ಶಾಲೆಗಳಲ್ಲಿ ನೀಡುವ ಉತ್ತಮ ಶಿಕ್ಷಣವನ್ನು ಸರ್ಕಾರಿ ಶಾಲೆಗಳಲ್ಲೂ ನೀಡಿದಾಗ ಮಾತ್ರ ಸರ್ಕಾರಿ ಶಾಲೆಗಳು ಉಳಿಯುತ್ತವೆ.

ಶಿವರಾಜು ಮೇದನಿ, ಬೆಂಗಳೂರು

ಚಂದಾ ವಿವರ
ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಸಂಪಾದಕೀಯ

‘ಮತಾಂತರ’ದಲ್ಲಿ ತಲೆ ಹಾಕಲು



ಅಪಾರ ನೋವು ಮತ್ತು ಯಾತನೆಗಳಿಂದ ಈ ಬರವಣಿಗೆಯನ್ನು ಆರಂಭಿಸುತ್ತಿದ್ದೇನೆ. ಭೈರಪ್ಪನವರು ‘ಮತಾಂತರ’ ಕುರಿತ ಚರ್ಚೆ ಆರಂಭಿಸಿದ ದಿನ ಅವರ ಬರಹವನ್ನು ಓದಿ ಮುಗಿಸುವಷ್ಟರಲ್ಲಿ ನನ್ನ ಕೈಕಾಲು ಕಂಪಿಸುತ್ತಿದ್ದವು. ಕಣ್ಣು ಒದ್ದೆಯಾಗಿದ್ದವು. ಹೊಟ್ಟೆಯಲ್ಲಿ ಸಂಕಟ ಮಡುಗಟ್ಟಿತ್ತು. ಸುಧಾರಿಸಿಕೊಳ್ಳಲು ತುಂಬ ಸಮಯವೇ ಹಿಡಿಯಿತು. ಜನಪ್ರಿಯ ಲೇಖಕನೊಬ್ಬ ತನಗಿರಬೇಕಾದ ಕನಿಷ್ಠ ಸಾಮಾಜಿಕ ಜವಾಬ್ದಾರಿಯ ಅರಿವೂ ಇಲ್ಲದೆ ಸಾಮಾಜಿಕ ಮಹತ್ವದ ವಿಷಯ ವೊಂದನ್ನು ಕುರಿತು ಇಷ್ಟೊಂದು ನಿರ್ಲಜ್ಜವಾಗಿ, ಅಮಾನವೀಯವಾಗಿ ಬರೆದಿರುವುದನ್ನು ನಾನೆಂದೂ ಕಂಡಿಲ್ಲ. ಅವರ ‘ಆವರಣ’ದ ಮನಸ್ಸು ಇಲ್ಲೂ ಮುಂದುವರೆದಿದೆಯಾದರೂ ಒಂದು ಕಾದಂಬರಿಗೂ, ಲೇಖನಕ್ಕೂ ಇರುವ ಸೂಕ್ಷ್ಮಗಳಾದರೂ ಅವರಿಗೆ ಅರ್ಥವಾಗಬೇಕಾಗಿತ್ತು.

ಭೈರಪ್ಪನವರ ಎಲ್ಲ ವಾದ, ತರ್ಕ, ಸಾಕ್ಷ್ಯಗಳು ಯಾವುದೇ ಆಧಾರವಿಲ್ಲದ ಬುರುಡೆಗಳೆಂದು ನಾನು ತಳ್ಳಿಹಾಕುತ್ತಿಲ್ಲ. ಆದರೆ ತಮ್ಮ ಗೌಪ್ಯ ಕಾರ್ಯಕ್ರಮಗಳ ಮುನ್ಸೂಚನೆಯಾಗಿ ಅವರು ಈ ಎಲ್ಲಾ ವಾದ, ತರ್ಕ, ಮತ್ತು ಸಾಕ್ಷ್ಯಗಳನ್ನು ಬಳಸಿಕೊಂಡಿರುವುದು ಮಾತ್ರ ಭಯಾನಕವಾಗಿದೆ. ಕಾನೂನನ್ನು ತನಗೆ ಬೇಕಾದಂತೆ ತಿರುಚಿ ವಾದಿಸಿ, ನ್ಯಾಯಾಧೀಶರಿಗೆ ಯಾಮಾರಿಸಿ ಕೇಸು ಗೆಲ್ಲುವ ಪಾಕ್‌ಡಾ ವಕೀಲನಂತೆ ಭೈರಪ್ಪ ಕಾಣಿಸುತ್ತಿದ್ದಾರೆ.

ಹುಟ್ಟು ಆಕಸ್ಮಿಕ. ಆದರೆ ಈಗ ‘ಹಿಂದೂ ಧರ್ಮ’ ಎಂದು ಕರೆಯಲ್ಪಡುವ ವೈದಿಕ ಧರ್ಮದಲ್ಲಿ ಹುಟ್ಟಿಗೇ ಪರಮ ಪ್ರಾಶಸ್ತ್ಯ. ಹುಟ್ಟಿನ ಕಾರಣಕ್ಕಾಗಿ ಕೆಲವರು ಉತ್ತಮರಾಗಿ ಮತ್ತೆ ಕೆಲವರುಅಧಮರಾಗುವುದು ಈ ಧರ್ಮದ ವೈಶಿಷ್ಟ್ಯ. ಸಾವಿರಾರು ವರ್ಷಗಳ ಈ ಧರ್ಮ ಇಂದಿಗೂ ಸಹ, ಸಹಮಾನವರನ್ನು ಪ್ರೀತಿ ವಿಶ್ವಾಸಗಳಿಂದ ಕಾಣದೆ ತನ್ನನ್ನು ತಾನೇ ಕೊಂದುಕೊಳ್ಳುತ್ತಿದೆ.

ಆದರೆ ತನ್ನನ್ನು ತಾನೇ ಕೊಂದುಕೊಳ್ಳುತ್ತಿರುವ ‘ಹಿಂದೂ ಧರ್ಮ’ದ ಈ ಪ್ರಕ್ರಿಯೆಯನ್ನು ಅರಗಿಸಿಕೊಳ್ಳಲಾರದ ಭೈರಪ್ಪ, ಪೇಜಾವರ ಸ್ವಾಮೀಜಿ ಮೊದಲಾದ ವೈದಿಕರು ಅನ್ಯಧರ್ಮೀಯರ ಮೇಲೆ ಗೂಬೆ ಕೂರಿಸುತ್ತಿದಾರೆ. ಮತ್ತು ತಮ್ಮ ಹುಳುಕನ್ನು ಮುಚ್ಚಿಕೊಳ್ಳಲು ಇತರರ ಹುಳುಕನ್ನು ಮಾತ್ರ ಎತ್ತಿ ತೋರಿಸುತ್ತಿದ್ದಾರೆ. ಆ ಮೂಲಕ ಐದು ಸಾವಿರ ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಭಾರತೀಯ ಬಹು ಸಂಖ್ಯಾತರ ಮೇಲಿನ ಸಾಂಸ್ಕೃತಿಕ ಹಾಗೂ ಧಾರ್ಮಿಕ ಆಕ್ರಮಣ ಮತ್ತು ದಬ್ಬಾಳಿಕೆಯನ್ನು ಮುಂದುವರಿಸುತ್ತಿದ್ದಾರೆ.

ಚರ್ಚೆಯನ್ನು ಆರಂಭಿಸಿರುವ ಭೈರಪ್ಪನವರು ತಮ್ಮ ವಾದಗಳನ್ನು ಮಂಡಿಸಲು ಹಲವಾರು ಐತಿಹಾಸಿಕ ದಾಖಲೆಗಳನ್ನು ಹುಡುಕಿ ತೆಗೆದಿದ್ದಾರೆ. (ಅವುಗಳ ಸಾಚಾತನದ ಬಗ್ಗೆ ಬೇರೆ ಸಂದರ್ಭದಲ್ಲಿ ಚರ್ಚಿಸಬಹುದು). ಆದರೆ ಈ ಎಲ್ಲಾ ಐತಿಹಾಸಿಕ ದಾಖಲೆಗಳನ್ನು ಅನ್ಯಧರ್ಮದವರನ್ನು ಹೀಗಳೆಯಲು ಮಾತ್ರ ಬಳಸಿಕೊಂಡಿದ್ದಾರೆಯೇ ಹೊರತು ಈ ಹೊತ್ತಿನ ‘ಹಿಂದೂ ಧರ್ಮ’ದ ಅಧೋಗತಿಯನ್ನ ವಿಶ್ಲೇಷಿಸುವ ದಾಖಲೆಗಳನ್ನಾಗಿ ಅಲ್ಲ. ಹಾಗಾಗಿ ಈ ದಾಖಲೆಗಳೆಲ್ಲ ಸದ್ಯದ ಚರ್ಚೆಗೆ ಅಪ್ರಸ್ತುತ.

ಯಾಕೆ ಭಾರತದಲ್ಲಿ, ಅದರಲ್ಲೂ ವಿಶೇಷವಾಗಿ ‘ಹಿಂದೂ ಧರ್ಮ’ದಲ್ಲಿ ಈ ಧರ್ಮಾಂತರದ ವಲಸೆ ಆರಂಭವಾಗಿದೆ? ಅದರೊಳಗಿನ ಲೋಪದೋಷಗಳೇನು? ಯಾಕೆ ‘ಹಿಂದೂ’ಗಳೇ ‘ಹಿಂದೂ’ಗಳನ್ನು ಅಮಾನವೀಯವಾಗಿ ನಡೆಸಿಕೊಳ್ಳುತ್ತಿದ್ದಾರೆ? ಇತ್ಯಾದಿ ವಿಚಾರಗಳನ್ನು ಚರ್ಚಿಸಲು ಅವರು ಐತಿಹಾಸಿಕ ದಾಖಲೆಗಳನ್ನು ಹೆಕ್ಕಿ ತೆಗೆಯಬೇಕಾಗಿತ್ತು. ಮತಾಂತರ ಕುರಿತ ಚರ್ಚೆ ನಡೆಯುತ್ತಿರುವ ಈ ಸಂದರ್ಭದಲ್ಲಿ ‘ಹಿಂದೂ ಧರ್ಮ ಯಾಕೆ ಕುಸಿಯುತ್ತಿದೆ?’ ಎಂಬ ವಿಷಯವೇ ಮಹತ್ವದ್ದು ಮತ್ತು ಚರ್ಚಿಸಬೇಕಾದ್ದು.

ಎಲ್ಲರೂ ಒಪ್ಪುವಂತೆ ‘ಹಿಂದೂ ಧರ್ಮ’ದ ಅಸ್ತಿತ್ವ ನಿಂತಿರುವುದೇ ವರ್ಣಾಶ್ರಮ ಧರ್ಮದ ಮೇಲೆ. ವರ್ಣಾಶ್ರಮ ಧರ್ಮ ನಿಂತಿರುವುದು ಜಾತಿಗಳ ಮೇಲೆ. ಜಾತಿಗಳು ನಿಂತಿರುವುದು ಅಸ್ಪೃಶ್ಯತೆಯ ಮೇಲೆ. ಅಸ್ಪೃಶ್ಯತೆ ಇಲ್ಲದೆ ಜಾತಿಗಳಿಲ್ಲ. ಜಾತಿಗಳಿಲ್ಲದೆ ವರ್ಣಾಶ್ರಮ ಧರ್ಮವಿಲ್ಲ. ವರ್ಣಾಶ್ರಮ ಧರ್ಮವಿಲ್ಲದೆ ‘ಹಿಂದೂ ಧರ್ಮ’ವೂ ಇಲ್ಲ. ಅಸ್ಪೃಶ್ಯತೆ ‘ಹಿಂದೂ ಧರ್ಮ’ದ ಅವಿಭಾಜ್ಯ ಅಂಗ. ಅಸ್ಪೃಶ್ಯತೆ ಇಲ್ಲದ ‘ಹಿಂದೂ ಧರ್ಮ’ವನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ವಸ್ತುಸ್ಥಿತಿ ಹೀಗಿರುವಾಗ ಮತಾಂತರವನ್ನು ವಿರೋಧಿಸುವ ಈ ‘ಹಿಂದೂ ಧರ್ಮ’ದ ವಕ್ತಾರರ ಉದ್ದೇಶ ಏನಿರಬಹುದು? ಸ್ವಲ್ಪ ಯೋಚಿಸಿ. ಅಸ್ಪೃಶ್ಯತೆ, ಜಾತಿಯತೆ ಮತ್ತು ಅಸಮಾನತೆಗಳನ್ನು ಹಾಗೇ ಉಳಿಸಿಕೊಂಡು ಹೋಗುವುದೇ ಈ ವೈದಿಕರ ಸಂಚು. ಈ ಸಂಚಿನ ಭಾಗವಾಗಿಯೇ ಅವರೆಲ್ಲಾ ಮತಾಂತರದ ವಿರುದ್ಧ ಕೂಗೆಬ್ಬಿಸುತ್ತಿದ್ದಾರೆ. ಹಾಗಾದರೆ ಅಸ್ಪೃಶ್ಯತೆ ಬೇಡ ಎನ್ನುವವರು ಏನು ಮಾಡಬೇಕು? ಹಿಂದೂ ಧರ್ಮ ಎನ್ನುವ ವೈದಿಕರ ಬಂದೀಖಾನೆಯಲ್ಲೇ ಇರಬೇಕೋ? ಅಥವಾ ಸಮಾನ ಅವಕಾಶ, ಸ್ವಾಭಿಮಾನ, ಆತ್ಮಗೌರವಗಳುಳ್ಳ ಇತರೆ ಧರ್ಮಗಳನ್ನು ಆಶ್ರಯಿಸಬೇಕೋ? ಇದನ್ನ ದೌರ್ಜನ್ಯಕ್ಕೆ ಗುರಿಯಾದ ಜನರೇ ತೀರ್ಮಾನಿಸಬೇಕು. ಅದರಲ್ಲಿ ತಲೆ ಹಾಕುವ ಅಧಿಕಾರ ಯಾರಿಗೂ ಇಲ್ಲ. ಅದು ಸಂವಿಧಾನ ದತ್ತ ಹಕ್ಕು. ಇದು ಭೈರಪ್ಪನವರಿಗೂ ಅನ್ವಯಿಸುತ್ತದೆ. ಪೇಜಾವರರಿಗೂ ಅನ್ವಯಿಸುತ್ತದೆ. ‘ಮರು ಮತಾಂತರ’ಕ್ಕೆ ಯತ್ನಿಸುತ್ತಿರುವ ಚಿದಾನಂದಮೂರ್ತಿ ಅವರಿಗೂ ಅನ್ವಯಿಸುತ್ತದೆ!

ಅಸ್ಪೃಶ್ಯತೆ ಹಿಂದೂ ಧರ್ಮದ ಯಾವ ಹಂತವನ್ನೂ ಬಿಟ್ಟಿಲ್ಲ. ಪ್ರತಿಯೊಂದು ಜಾತಿಯೂ ಇನ್ನೊಂದು ಜಾತಿಗೆ ಅಸ್ಪೃಶ್ಯ. ಬ್ರಾಹ್ಮಣರ ಒಳ ಜಾತಿಗಳಲ್ಲೂ ಈ ಮೇಲೂ ಕೀಳಿನ ಅಸ್ಪೃಶ್ಯತೆ ಇದೆ. ಇನ್ನು ಇತರ ಜಾತಿಗಳನ್ನಂತೂ ಕೇಳುವಂತೆಯೇ ಇಲ್ಲ. ತಾವೆಷ್ಟು ಮೇಲು ಜಾತಿಯವರೆಂದುಕೊಂಡರೂ, ಬ್ರಾಹ್ಮಣನಿಗೆ ಲಿಂಗಾಯಿತ, ಲಿಂಗಾಯಿತನಿಗೆ ಒಕ್ಕಲಿಗ, ಒಕ್ಕಲಿಗನಿಗೆ ಕುರುಬ, ಕುರುಬನಿಗೆ ಮಡಿವಾಳ, ಮಡಿವಾಳನಿಗೆ ಕ್ಷೌರಿಕ, ಕ್ಷೌರಿಕನಿಗೆ ಹೊಲೆಯ, ಹೊಲೆಯನಿಗೆ ಮಾದಿಗ, ಮಾದಿಗನಿಗೆ ಜಾಡಮಾಲಿ– ಹೀಗೆ ತಲೆಯಿಂದ ಬುಡದವರೆಗೂ ಅಸ್ಪೃಶ್ಯತೆ ವಿವಿಧ ಪ್ರಮಾಣದಲ್ಲಿ ಚಾಚಿಕೊಂಡಿದೆ. ತಾನು ಇನ್ನೊಬ್ಬನಿಗಿಂತ ಮೇಲು ಎಂದು ಕೊಳ್ಳುವುದೇ ಅಸ್ಪೃಶ್ಯತೆ. ಈ ಮೇಲು ಕೀಳಿನ ಭಾವನೆ ವೈದಿಕರ ದೇವರಂತೆಯೇ ಸರ್ವವ್ಯಾಪಿಯಾಗಿರುವುದರಿಂದ ಇಡೀ ಸಮಾಜವೇ ಅಸ್ಪೃಶ್ಯಮಯವಾಗಿದೆ. ಈ ಅಸ್ಪೃಶ್ಯತೆ ನಾಶವಾಗಬೇಕಾದರೆ ‘ಹಿಂದೂ ಧರ್ಮ’ವೇ ನಾಶವಾಗಬೇಕು. ಇಲ್ಲದಿದ್ದರೆ ದೇಶವೇ ನಾಶವಾಗುತ್ತದೆ.

ಮತಾಂತರ ವಿರೋಧಿಸಿ ಈ ಸಂವಾದದಲ್ಲಿ ಬರೆಯುತ್ತಿರುವ ಎಲ್ಲರೂ ಹೆಚ್ಚು ಕಡಿಮೆ ಅನ್ಯಧರ್ಮಗಳ ತಪ್ಪುಗಳನ್ನು ಮಾತ್ರ ಎತ್ತಿ ತೋರಿಸುತ್ತಿದ್ದಾರೆ. ಆದರೆ ಈ ಪ್ರಕ್ರಿಯೆಯಲ್ಲಿ ತಮ್ಮ ಮನೆಯ ದೋಸೆಯಲ್ಲಿರುವ ತೂತಿನ ಬಗ್ಗೆ ಮಾತ್ರ ಚರ್ಚಿಸದಿರುವುದು ಆಶ್ಚರ್ಯವೆನಿಸುತ್ತದೆ. ಬೇರೆಯವರ ತಟ್ಟೆಯಲ್ಲಿ ಬಿದ್ದಿರುವ ಸತ್ತ ನೊಣದ ಬಗ್ಗೆ ಬೊಬ್ಬೆಹಾಕುತ್ತಾ ತಮ್ಮ ತಟ್ಟೆಯಲ್ಲಿರುವ ಸತ್ತ ಹೆಗ್ಗಣವನ್ನು ಮಾತ್ರ ಆಸ್ವಾದಿಸುವುದು ಎಂಥ ಲಜ್ಜೆಗೇಡಿತನ? ಈ ಪ್ರಶ್ನೆಯನ್ನು ಮತಾಂತರವನ್ನು ವಿರೋಧಿಸುವ ಎಲ್ಲರಿಗೂ ನಾನು ಕೇಳುತ್ತಿದ್ದೇನೆ.

ಭಾರತದಲ್ಲಿ ಮತಾಂತರ ಪ್ರಕ್ರಿಯೆ ನಡೆಯುತ್ತಿರುವುದಕ್ಕೆ

ಇವರ್ಯಾರು?

ಕಾರಣಗಳೇನು? ಭೈರಪ್ಪ ಮೊದಲಾದವರು ಹೇಳುವಂತೆ ಆಮಿಷವೇ? ಬಲತ್ಕಾರವೇ? ಅಥವಾ ಸಾಮ್ರಾಜ್ಯ ವಿಸ್ತರಿಸುವ ಸಾಮ್ರಾಜ್ಯಶಾಹಿ ಧರ್ಮಗಳ ಸಂಚೆ? ಇಷ್ಟಕ್ಕೂ ಇಂಥ ಪ್ರಶ್ನೆಗಳನ್ನು ಕೇಳುತ್ತಿರುವವರೆಲ್ಲಾ ಯಾರು? ವೈದಿಕ ಪರಂಪರೆಯ ಅಸಮಾನ ಬರ್ಬರ ವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗಬೇಕೆನ್ನುವ ಭೈರಪ್ಪನವರಂತ ಬ್ರಾಹ್ಮಣರು ಮತ್ತು ಅವರ ಕಾಲಾಳುಗಳೋ? ಅಥವಾ ಭಾರತ ನೆಲದಲ್ಲಿ ಸಾವಿರಾರು ವರ್ಷಗಳ ಕಾಲ ವೈದಿಕರ ಭೀಬತ್ಸ್ಯ ದಬ್ಬಾಳಿಕೆಯಿಂದ ನೊಂದು ಬೆಂದು ಬಸವಳಿದು ಇನ್ನೂ ಜೀವ ಹಿಡಿದುಕೊಂಡಿರುವ ತಳ ಸಮುದಾಯಗಳ ಬಹು ಸಂಖ್ಯಾತ ಜನರೋ?

ಸುಳ್ಳು ಹೇಳುವವರ ಸಂಖ್ಯೆ ಜಾಸ್ತಿ ಇರುವುದರಿಂದ ಇಂಥ ಹತ್ತಾರು ಪ್ರಶ್ನೆ ಉದ್ಭವಿಸುತ್ತವೆ. ನನ್ನನ್ನು ಇನ್ನೂ ನಿಗೂಢವಾಗಿ ಕಾಡಿಸುತ್ತಿರುವ ಪ್ರಶ್ನೆ ಎಂದರೆ ಮತಾಂತರದಿಂದ ಇವರಿಗೇನು ತೊಂದರೆ? ಅಂತ. ಅಲ್ಲದೆ ಮತಾಂತರ ಅಗತ್ಯವೋ ಇಲ್ಲವೋ ಅನ್ನುವುದು ಮತಾಂತರವಾಗಬೇಕಾದವರ ಆಯ್ಕೆಯೇ ಹೊರತು ಅದು ಭೈರಪ್ಪನವರದೂ ಅಲ್ಲ, ಪೇಜಾವರರದ್ದೂ ಅಲ್ಲ. ಇವರ್ಯಾಕೆ ತಮಗೆ ಸಂಬಂಧಿಸದ ವಿಚಾರಕ್ಕೆ ತಲೆ ಹಾಕುತ್ತಾರೆ? ಅಲ್ಲದೆ ಮತಾಂತರವಾಗುತ್ತಿರುವ ದಲಿತರಾಗಲಿ, ಆದಿವಾಸಿಗಳಾಗಲಿ, ಅಥವಾ ಬೇರೆ ಯಾರೇ ಆಗಲಿ ಎಂದಾದರೂ ನಮ್ಮ ಪರ ವಕಾಲತ್ತು ವಹಿಸುವಂತೆ ಇವರುಗಳಿಗೆ ಕೇಳಿಕೊಂಡಿದ್ದರೇ?.

ಬೆಂಡಿಗೇರಿಯಲ್ಲಿ ಸವರ್ಣೀಯ ಹಿಂದೂಗಳು ದಲಿತರಿಗೆ ಮಲ ತಿನ್ನಿಸಿದಾಗ ಸುಮ್ಮನಿದ್ದವರು, ಕಂಬಾಲಪಲ್ಲಿಯಲ್ಲಿ ದಲಿತರನ್ನು ಇದೇ ಸವರ್ಣೀಯ ಹಿಂದೂಗಳು ಸುಟ್ಟು ಹಾಕಿದಾಗ ಮೌನ ವಹಿಸಿದ್ದವರು, ಹಾಗೆ ಸುಟ್ಟುಹಾಕಿದ ಕೊಲೆಗಡುಕ ಹಿಂದೂಗಳನ್ನು ನಿರಪರಾದಿಗಳೆಂದು ನ್ಯಾಯಾಲಯ ಬಿಡುಗಡೆ ಮಾಡಿದಾಗ ಮಾತನಾಡದಿದ್ದವರು ಈಗೇಕೆ ಮಾತನಾಡುತ್ತಿದ್ದಾರೆ? ದಲಿತರು, ಆದಿವಾಸಿಗಳು ಏನು ಮಾಡಬೇಕು-ಮಾಡಬಾರದು ಎನ್ನುವುದನ್ನು ನಿರ್ದೇಶಿಸುವ ಅಧಿಕಾರವನ್ನು ಇವರಿಗೆ ಯಾರು ಕೊಟ್ಟರು?

ಭಾರತದಲ್ಲಿ ಸಂವಿಧಾನ ರಚನೆಯಾದ ನಂತರ ಹಾಗೂ ಒಬ್ಬರಿಗೆ ಒಂದು ಮತ ಎಂದು ನಿರ್ಣಯವಾದ ನಂತರ, ವೈದಿಕರ ಕರಾಳ ಆಡಳಿತ ಮುಗಿಯಿತು. ಈಗೇನಿದ್ದರೂ ಸಂವಿಧಾನವೇ ಸಾರ್ವಭೌಮ. ಅದರ ಪ್ರಕಾರ ಎಲ್ಲರೂ ನಡೆಯಬೇಕು. ಅದರಲ್ಲಿ ಪೇಜಾವರರಿಗೂ ಒಂದೇ ಓಟು! ಭೈರಪ್ಪನವರಿಗೂ ಒಂದೇ ಓಟು! ಬೀದಿಯಲ್ಲಿ ಕಸಗುಡಿಸುವ ದಲಿತನಿಗೂ ಒಂದೇ ಓಟು! ಪೇಜಾವರರ ವ್ಯವಹಾರದಲ್ಲಿ ದಲಿತರಾರೂ ತಲೆ ಹಾಕದಿರುವಾಗ, ದಲಿತರ ವ್ಯವಹಾರದಲ್ಲಿ ಪೇಜಾವರರಿಗೇನು ಕೆಲಸ? ಇವರೇನು ಭಾರತದ ಸ್ವಯಂ ಘೋಷಿತ ಸಾಂಸ್ಕೃತಿಕ ವಾರಸುದಾರರೇ?

ಇನ್ನೂ ಒಂದು ಸತ್ಯವನ್ನು ಭೈರಪ್ಪನವ ರಾಗಲಿ ಪೇಜಾವರರಾಗಲಿ ಅರ್ಥಮಾಡಿಕೊಳ್ಳ ಬೇಕು. ಭಾರತದಲ್ಲಿ ಏಕ ಧರ್ಮವೆಂಬುದು ಇಲ್ಲವೇ ಇಲ್ಲ. ಇರುವುದೆಲ್ಲಾ ಜಾತಿಗಳೇ. ಜಾತಿಗಳೇ ಇಲ್ಲಿ ಧರ್ಮಗಳು. ಹಾಗಾಗಿ ಸಾವಿರಾರು ಧರ್ಮಗಳೂ ಇಲ್ಲಿವೆ. ಅವುಗಳಲ್ಲಿ ವೈದಿಕ ಬ್ರಾಹ್ಮಣರದ್ದು ಒಂದು. ಆದರೆ ಈ ಬ್ರಾಹ್ಮಣರು ಇಡೀ ದೇಶದ ಎಲ್ಲಾ ಆಗುಹೋಗುಗಳನ್ನು ಬ್ರಾಹ್ಮಣ್ಯದ ದೃಷ್ಟಿಕೋನದಿಂದಲೇ ನೋಡಿ ವಿಶ್ಲೇಸುತ್ತಿದ್ದಾರೆ. ಇವರ ಪ್ರಕಾರ ಬ್ರಾಹ್ಮಣರ ಆಚಾರ, ವಿಚಾರ, ಆಹಾರ, ಸಂಸ್ಕೃತಿಗಳೇ ಭಾರತೀಯರೆಲ್ಲರದ್ದೂ ಆಗಬೇಕಾಗಿದೆ! ಭಾರತದಲ್ಲಿರುವ ಸಾವಿರಾರು ಜಾತಿಗಳಲ್ಲಿ ಬ್ರಾಹ್ಮಣ ಜಾತಿ ಕೂಡ ಒಂದು. ಆ ಒಂದು ಬ್ರಾಹ್ಮಣ ಜಾತಿಯಲ್ಲೇ ಹಲವು ಒಳ ಜಾತಿಗಳಿದ್ದು, ಆ ಒಂದೊಂದು ಒಳಜಾತಿಗಳಿಗೂ ಹತ್ತಾರು ಮಠಗಳೂ-ಗುರುಗಳೂ

ಬೆಂಡಿಗೇರಿಯಲ್ಲಿ ಸವರ್ಣೀಯ ಹಿಂದೂಗಳು ದಲಿತರಿಗೆ ಮಲ ತಿನ್ನಿಸಿದಾಗ ಸುಮ್ಮನಿದ್ದವರು, ಕಂಬಾಲ ಪಲ್ಲಿಯಲ್ಲಿ ದಲಿತರನ್ನು ಇದೇ ಸವರ್ಣೀಯ ಹಿಂದೂಗಳು ಸುಟ್ಟು ಹಾಕಿದಾಗ ಮೌನ ವಹಿಸಿದ್ದವರು, ಹಾಗೆ ಸುಟ್ಟುಹಾಕಿದ ಕೊಲೆಗಡುಕ ಹಿಂದೂಗಳನ್ನು ನಿರಪರಾಧಿಗಳೆಂದು ನ್ಯಾಯಾಲಯ ಬಿಡುಗಡೆ ಮಾಡಿದಾಗ ಮಾತ ನಾಡದಿದ್ದವರು ಈಗೇಕೆ ಮಾತನಾಡುತ್ತಿದ್ದಾರೆ? ದಲಿತರು, ಆದಿವಾಸಿಗಳು ಏನು ಮಾಡಬೇಕು-ಮಾಡಬಾರದು ಎನ್ನುವುದನ್ನು ನಿರ್ದೇಶಿಸುವ ಅಧಿಕಾರವನ್ನು ಇವರಿಗೆ ಯಾರು ಕೊಟ್ಟರು? ಇವರೇನು ಭಾರತದ ಸ್ವಯಂ ಘೋಷಿತ ಸಾಂಸ್ಕೃತಿಕ ವಾರಸುದಾರರೇ?

ಇದ್ದಾರೆ. ಈ ಎಲ್ಲಾ ಗುಂಪುಗಳೂ ತಾವೇ ಶ್ರೇಷ್ಠರೆಂದೂ, ಉಳಿದವರೂ ಕನಿಷ್ಠರೆಂದೂ ನಿರೂಪಿಸಲು ನಿರಂತರವಾಗಿ ಪ್ರಯತ್ನಿಸುತ್ತಲೇ ಇದ್ದಾರೆ. ಇಂಥ ಒಂದು ಬ್ರಾಹ್ಮಣ ಗುಂಪಿನ ಒಂದು ಮಠಕ್ಕೆ ಸ್ವಾಮಿಜಿಗಳಾಗಿರುವ ಪೇಜಾವರರು ಭಾರತೀಯರೆಲ್ಲರಿಗೂ ಹೇಗೆ ಮಾರ್ಗದರ್ಶಕರಾಗುತ್ತಾರೆ? ಪೇಜಾವರರು ಸ್ವಾಮೀಜಿಯಾಗಿರುವುದು ಎಷ್ಟು ಜನಕ್ಕೆ? ಕೇವಲ ಶೇ. ಒಂದರಷ್ಟು ಜನರಿಗೂ ಅಲ್ಲ. ವಸ್ತು ಸ್ಥಿತಿ ಹೀಗಿರುವಾಗ ಭಾರತದ ನೂರು ಕೋಟಿ ಜನರ ಪರವಾಗಿ ಮಾತನಾಡುವ ಅಧಿಕಾರ ಇವರಿಗೆ ಹೇಗೆ ಬಂತು? ಇದು ಸಾಂಸ್ಕೃತಿಕ ಅಹಂಕಾರವಲ್ಲವೇ? ಧಾರ್ಮಿಕ ಅತಿಕ್ರಮಣವಲ್ಲವೇ? ಎಲ್ಲೋ ಕಾಡು ಮೇಡುಗಳಲ್ಲಿ, ಗಿರಿ-ಗಹ್ವರಗಳಲ್ಲಿ ಆಧ್ಯಾತ್ಮ ಸಾಧನೆ ಮಾಡಬೇಕಾದ ಇವರಿಗೆ (ಭೈರಪ್ಪನವರ ಪ್ರಕಾರ) ಈ ಎಲ್ಲಾ ಉಸಾಬರಿಗಳು ಯಾಕೆ? ಅದರಲ್ಲೂ ದಲಿತರು ಮತ್ತು ಆದಿವಾಸಿಗಳನ್ನು ಸಹಮಾನವರಂತೆ ಪ್ರೀತಿ, ವಿಶ್ವಾಸ ಸಮಾನತೆಗಳಿಂದ ಕಾಣದೆ ಸಾವಿರಾರು ವರ್ಷಗಳಿಂದ ತುಳಿದು ಸರ್ವನಾಶ ಮಾಡಿರುವ ವೈದಿಕ ಪರಂಪರೆಯ ಲೌಕಿಕ ವಾರಸುದಾರರಾದ ಪೇಜಾವರರಿಗೆ ಮತ್ತು ಭೈರಪ್ಪನವರಿಗೆ ದಲಿತರು, ಮತ್ತು ಆದಿವಾಸಿಗಳು ಮತಾಂತರವಾದರೆ ಅದನ್ನು ಪ್ರಶ್ನಿಸುವ ನೈತಿಕ ಹಕ್ಕೆಲ್ಲಿದೆ?

ಮತ್ತೊಂದು ವಿಷಯ ಇದೆ. ಅದು ದಲಿತರು ಮತ್ತು ಆದಿವಾಸಿಗಳು 'ಹಿಂದೂ'ಗಳೇ? ಅಲ್ಲವೇ? ಎಂಬುದು. ಯಾವ ಆಧಾರದ ಮೇಲೆ ದಲಿತರು ಮತ್ತು ಆದಿವಾಸಿಗಳನ್ನು 'ಹಿಂದು'ಗಳೆಂದು ಕರೆಯಲಾಗುತ್ತದೆ? ನಿಜ ಹೇಳಬೇಕೆಂದರೆ ಆದಿವಾಸಿಗಳಿಗಂತೂ ಯಾವ ಜಾತಿಗಳೂ ಇಲ್ಲ. ಹಾಗಾಗಿ ಅವರುಗಳು 'ಹಿಂದೂ'ಗಳಲ್ಲವೇ ಅಲ್ಲ. ಇನ್ನೂ ಜಾತಿ ಕಟ್ಟೆಳೆಗಳಿಗೆ ಸಿಕ್ಕಿ ಹಾಕಿಕೊಂಡಿರುವ ದಲಿತರೂ 'ಹಿಂದೂ'ಗಳಲ್ಲ. ಯಾಕೆಂದರೆ ಅವರ್ಯಾರೂ 'ಹಿಂದೂ ಧರ್ಮ'ದ ಯಾವುದೇ ನಾಲ್ಕು ವರ್ಣಗಳಿಗೂ ಸೇರಿದವರಲ್ಲ. ರಾಜಕೀಯ ಕಾರಣಗಳಿಗಾಗಿ ಸರ್ಕಾರಿ ದಾಖಲೆಗಳಲ್ಲಿ ಮಾತ್ರ ದಲಿತರನ್ನು 'ಹಿಂದು'ಗಳೆಂದು ಗುರುತಿಸಲಾಗುತಿದೆಯೇ ಹೊರತು ಸಾಂಸ್ಕೃತಿಕ ಆಚರಣೆಗಳಲ್ಲಾಗಲೀ, ಧಾರ್ಮಿಕ ಆಚರಣೆಗಳಲ್ಲಾಗಲೀ ಅವರು ಯಾವುದೇ 'ಹಿಂದೂ'(ವೈದಿಕ) ವಿಧಿ ವಿದಾನಗಳನ್ನು ಅನುಸರಿಸುತ್ತಿಲ್ಲ. ಹಾಗಿರುವಾಗ ದಲಿತರನ್ನೇಕೆ 'ಹಿಂದೂ'ಗಳೆಂದು ಕರೆಯಬೇಕು? ಹೀಗೆ ಕರೆಯುವುದರ ಹಿಂದೆ ವೈದಿಕರ ವ್ಯವಸ್ಥಿತ ಪಿತೂರಿ ಇದೆ. ರಾಜಕೀಯ ಕಾರಣಕ್ಕಾಗಿ ತಮ್ಮ ಸಂಖ್ಯಾಬಾಹುಳ್ಯವನ್ನು ತೋರಿಸಲು ವೈದಿಕರು ದಲಿತರನ್ನು 'ಹಿಂದೂ'ಗಳೆಂದು ಹೇಳಿಕೊಂಡು ಬಲವಂತವಾಗಿ 'ಹಿಂದೂ' ತೆಕ್ಕೆಯೊಳಗೆ ಬಂದಿಸಿ ಇಟ್ಟುಕೊಂಡಿದ್ದಾರೆಯೇ ಹೊರತು, ತಾವಾಗಿಯೇ ದಲಿತರು 'ಹಿಂದೂಧರ್ಮ'ವನ್ನು ಆಯ್ಕೆ ಮಾಡಿಕೊಂಡಿಲ್ಲ. ಸಾವಿರಾರು ವರ್ಷಗಳ ಈ ಸಾಂಸ್ಕೃತಿಕ ದಬ್ಬಾಳಿಕೆಯ ಪ್ರಕ್ರಿಯೆಯಲ್ಲಿ ನಿತ್ರಾಣಗೊಂಡಿರುವುದರಿಂದ ತಮಗರಿವಿಲ್ಲದೆಯೇ ತಮ್ಮನ್ನು 'ಹಿಂದೂ'ಗಳೊಂದಿಗೆ ಗುರುತಿಸಿಕೊಂಡಿರುವ ಭ್ರಮೆಯಲ್ಲಿದ್ದಾರೆ. ಇಂಥಾದ್ದರಲ್ಲಿ ದಲಿತರಾಗಲಿ, ಆದಿವಾಸಿಗಳಾಗಲಿ ಧರ್ಮರಹಿತರೇ ಹೊರತು

(೩೨ನೇ ಪುಟಕ್ಕೆ)

ಮೂರು ಪ್ರಶ್ನೆಗಳು, ಮತ್ತೊಂದು ಉದಾಹರಣೆ

ರಾಜಾರಾಮ ಹೆಗಡೆ

ವಸಾಹತು ಪೂರ್ವ ರಾಜಕೀಯದಲ್ಲಿ ಸ್ಟೇಟ್, ಸಿವಿಲ್ ಸೊಸೈಟಿ ಮುಂತಾದ ಪರಿಕಲ್ಪನೆಗಳ ಉಪಸ್ಥಿತಿಯೇ ಪ್ರಶ್ನಾರ್ಹವಾಗಿದೆ. ಹಾಗಾಗಿ ಆ ಕಾಲದಲ್ಲಿ ನಮ್ಮ ಸಮಾಜವನ್ನು ಐಕ್ಯಗೊಳಿಸಬಲ್ಲ ರಾಜಕೀಯ ವ್ಯವಸ್ಥೆ ಇದ್ದ ಕುರುಹುಗಳೂ ನಮಗೆ ಸಿಗುವುದಿಲ್ಲ. ಇನ್ನು ರಾಜಕೀಯವನ್ನು ಹೊರತುಪಡಿಸಿ ಮತ್ತೆ ಯಾವುದಾದರೂ ಐಕ್ಯ ವ್ಯವಸ್ಥೆ ಇದ್ದ ಕುರುಹುಗಳಿವೆಯೇ? ರಿಲಿಜನ್ ಎಂಬ ಸಂಸ್ಥೆ ಇಲ್ಲಿ ಇತ್ತೆ? ದೇವವಾಣಿ, ಅದನ್ನು ತಿಳಿದ ಪ್ರವಾದಿ, ಒಂದು ಪವಿತ್ರಗ್ರಂಥ, ಅದರಿಂದ ಪ್ರಣೀತವಾದ ಒಂದು ನಂಬಿಕೆಯ ವ್ಯವಸ್ಥೆ, ಅದರೊಳಗೆ ತರಲ್ಪಟ್ಟ ಒಂದು ಸಮುದಾಯ ಹಾಗೂ ಆ ಸಮುದಾಯದ ನಂಬಿಕೆಗಳನ್ನು ನಿಯಂತ್ರಿಸುತ್ತಿದ್ದ ಒಂದು ಕ್ಲೆರ್ಜಿ ಅಥವಾ ಪ್ರೀಸ್ಟ್ ವರ್ಗ ಇಲ್ಲಿ ಇರಲಿಲ್ಲ. ಈ ಎರಡೂ ಸಂಸ್ಥೆಗಳ ಭೌತಿಕ ಅನುಪರಿಸ್ಥಿತಿಗಳಲ್ಲಿ ಮತ್ತೆ ಯಾವ ಒಂದು ಐಕ್ಯ ವ್ಯವಸ್ಥೆಯನ್ನು ಊಹಿಸಿಕೊಳ್ಳೋಣ? ಜಾತಿ ವ್ಯವಸ್ಥೆಯೆ? ಆ ವ್ಯವಸ್ಥೆಯಿದ್ದಲ್ಲಿ ಅದು ಯಾವ ಮೆಕ್ಯಾನಿಸಂ ಮೇಲೆ ನಿಂತಿರಬಹುದು?

ನಾಗಭೂಷಣ ಅವರು ನವೆಂಬರ್ 2008ರ ಸಂವಾದದಲ್ಲಿ ತಮ್ಮ ಮೂರು ಪ್ರಶ್ನೆಗಳನ್ನು ಹಾಗೂ ಒಂದು ಉದಾಹರಣೆಯನ್ನು ನೀಡಿ ನನ್ನ ಗ್ರಹಿಕೆಗಳು ಹಾಸ್ಯಾಸ್ಪದ ಎಂಬುದನ್ನು ಬಿಂಬಿಸಲು ಪ್ರಯತ್ನಿಸಿದ್ದಾರೆ. ನಾಗಭೂಷಣರಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ಹಾಗೂ ಉಳಿದವರ ವಿಚಾರಗಳನ್ನು ಹಾಸ್ಯಾಸ್ಪದವಾಗಿ ಕಾಣಲಿಕ್ಕೆ ಖಂಡಿತಾ ಹಕ್ಕಿದೆ. ಅಂತೆಯೆ, ಅದನ್ನು ನಕ್ಕು ಉಪೇಕ್ಷಿಸಿ ಬಿಡುವ ಹಕ್ಕು ನನಗೂ ಇದೆ. ನನಗೆ ಸ್ವ ಸಮರ್ಥನೆ ಮಾಡಿಕೊಳ್ಳುವ ಅಗತ್ಯವಿಲ್ಲ. ಆದರೂ ಅವರಿಗೆ ಒಂದು ಪ್ರತಿಕ್ರಿಯೆ ಅಗತ್ಯವಿದೆ ಎನ್ನಿಸಿದೆ. ಏಕೆಂದರೆ ತಮ್ಮ ಪ್ರತಿಕ್ರಿಯೆಯ ಪ್ರಾರಂಭದಲ್ಲಿ ಅವರು ತಿಳಿಸಿದಂತೇ ನನಗೂ ಅವರ ಬಗ್ಗೆ ಗೌರವಾದರಗಳಿವೆ. ಅವರಿಗೆ ಒಂದು ಪ್ರತಿಕ್ರಿಯೆಯನ್ನಾದರೂ ನೀಡಬೇಕಾದದ್ದು ನನ್ನ ಧರ್ಮ. ಮೊದಲನೆಯ ಭಾಗದಲ್ಲಿ ಅವರ ಮೂರು ಪ್ರಶ್ನೆಗಳಿಗೆ ಆ ಪ್ರಶ್ನೆಗಳ ಧಾಟಿಯಲ್ಲೇ ಉತ್ತರಿಸುತ್ತೇನೆ.

ನಾಗಭೂಷಣರ ಮೊದಲನೆಯ ಪ್ರಶ್ನೆ: ಜಾತಿ ತಾರತಮ್ಯದ ಮೆಕ್ಯಾನಿಸಂ ಯಾವುದು? ಈ ಜಾತಿ ತಾರತಮ್ಯಗಳಿಗೆ ಮೆಕ್ಯಾನಿಸಂಗಳು ಇವೆ ಎಂದರೆ ಏನು ಹೇಳಿದ ಹಾಗಾಯಿತು? ನಾಗಭೂಷಣರು ಎಂಥ ಮೆಕ್ಯಾನಿಸಂಅನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದಾರೆ ಎಂಬುದು ಈ ಪ್ರಶ್ನೆಯಲ್ಲಿ ಸ್ಪಷ್ಟವಾಗುವುದಿಲ್ಲ. ಜಾತಿ ವ್ಯವಸ್ಥೆಯ ಕುರಿತು ನಮ್ಮ ಕಲ್ಪನೆ ಹೇಗಿದೆಯೆಂಬುದಕ್ಕೆ ಈ ಪ್ರಶ್ನೆ ಕೈಗನ್ನಡಿಯಾಗಿದೆ. ಕಳೆದ ನೂರಾರು ವರ್ಷಗಳ ಸಮಾಜಶಾಸ್ತ್ರೀಯ ಸಂಶೋಧನೆಗಳ ನಂತರ ಉಳಿದಿರುವ ಪ್ರಶ್ನೆಯ ಸ್ವರೂಪ ಹೀಗಿದೆ. ಅಂದರೆ ಕೊನೆಗೂ ಒಂದು ಊಹೆಯ ರೂಪದಲ್ಲಿ ಅದು ಉಳಿದುಕೊಳ್ಳುತ್ತದೆ. ಆ ಊಹೆಯು ಕೆಲವು ಅಂಶಗಳನ್ನು ಆಧರಿಸಿ ಇದೆ. ಅವೆಂದರೆ, ಕಾಲಾತೀತವಾಗಿ ಈ ಮೆಕ್ಯಾನಿಸಂ ಇದೆ, ಅದರ ತಂತ್ರ ಹಾಗೂ ರೂಪ ಬದಲಾಗುತ್ತಾ ಹೋಗಿದೆ. ಹಾಗೂ ಅದಕ್ಕೆ ಒಂದು ರಾಜಕೀಯ ವಿನ್ಯಾಸವಿದೆ. ಹಾಗಾಗಿ ಅದರ ಅಸ್ತಿತ್ವವನ್ನು ಅಲ್ಲಗಳೆಯಲಾಗುವುದಿಲ್ಲ ಎಂಬುದನ್ನು ನಾಗಭೂಷಣರು ಸ್ಪಷ್ಟಗೊಳಿಸುತ್ತಾರೆ. ನಾಗಭೂಷಣರು ಯಾವ ರಾಜಕೀಯ ವಿನ್ಯಾಸದ ಕುರಿತು ಮಾತನಾಡುತ್ತಿದ್ದಾರೆ? ವಸಾಹತು ಪೂರ್ವ ರಾಜಕೀಯದಲ್ಲಿ ಸ್ಟೇಟ್, ಸಿವಿಲ್ ಸೊಸೈಟಿ ಮುಂತಾದ ಪರಿಕಲ್ಪನೆಗಳ ಉಪಸ್ಥಿತಿಯೇ ಪ್ರಶ್ನಾರ್ಹವಾಗಿದೆ. ಹಾಗಾಗಿ ಆ ಕಾಲದಲ್ಲಿ ನಮ್ಮ ಸಮಾಜವನ್ನು ಐಕ್ಯಗೊಳಿಸಬಲ್ಲ ರಾಜಕೀಯ ವ್ಯವಸ್ಥೆ ಇದ್ದ ಕುರುಹುಗಳೂ ನಮಗೆ ಸಿಗುವುದಿಲ್ಲ.

ಇನ್ನು ರಾಜಕೀಯವನ್ನು ಹೊರತುಪಡಿಸಿ ಮತ್ತೆ ಯಾವುದಾದರೂ ಐಕ್ಯ ವ್ಯವಸ್ಥೆ ಇದ್ದ ಕುರುಹುಗಳಿವೆಯೆ? ರಿಲಿಜನ್ ಎಂಬ ಸಂಸ್ಥೆ ಇಲ್ಲಿ ಇತ್ತೆ? ದೇವವಾಣಿ, ಅದನ್ನು ತಿಳಿದ ಪ್ರವಾದಿ, ಒಂದು ಪವಿತ್ರ ಗ್ರಂಥ, ಅದರಿಂದ ಪ್ರಣೀತವಾದ ಒಂದು ನಂಬಿಕೆಯ ವ್ಯವಸ್ಥೆ, ಅದರೊಳಗೆ ತರಲ್ಪಟ್ಟ ಒಂದು ಸಮುದಾಯ ಹಾಗೂ ಆ ಸಮುದಾಯದ ನಂಬಿಕೆಗಳನ್ನು ನಿಯಂತ್ರಿಸುತ್ತಿದ್ದ ಒಂದು ಕ್ಲೆರ್ಜಿ ಅಥವಾ ಪ್ರೀಸ್ಟ್ (ಪುರೋಹಿತಶಾಹಿ ಎಂದು ಭಾಷಾಂತರಿಸಲಾಗುತ್ತದೆ) ವರ್ಗ ಇಲ್ಲಿ ಇರಲಿಲ್ಲ. ಈ ಎರಡೂ ಸಂಸ್ಥೆಗಳ ಭೌತಿಕ ಅನುಪರಿಸ್ಥಿತಿಗಳಲ್ಲಿ ಮತ್ತೆ ಯಾವ ಒಂದು ಐಕ್ಯ ವ್ಯವಸ್ಥೆಯನ್ನು ಊಹಿಸಿಕೊಳ್ಳೋಣ? ಜಾತಿ ವ್ಯವಸ್ಥೆಯೆ? ಆ ವ್ಯವಸ್ಥೆಯಿದ್ದಲ್ಲಿ ಅದು ಯಾವ ಮೆಕ್ಯಾನಿಸಂ ಮೇಲೆ ನಿಂತಿರಬಹುದು? ಈಗ ನಮಗಿರುವ ಕಥೆಗಳೆಲ್ಲ ಪುರೋಹಿತಶಾಹಿ, ಧರ್ಮಶಾಸ್ತ್ರ, ವರ್ಣವ್ಯವಸ್ಥೆ ಇಂಥ ವಿವರಣೆಗಳನ್ನೇ ನೀಡುತ್ತವೆ. ಆದರೆ ಈ ವಿವರಣೆಗಳೆಲ್ಲ ಸಮಾಜಶಾಸ್ತ್ರದಲ್ಲಿ ಎಷ್ಟು ಹಳಸಲು ವಿಚಾರಗಳೆಂಬುದನ್ನು ಈ ಕುರಿತೇ ಹತ್ತು ವರ್ಷ ಸಂಶೋಧನೆ ಮಾಡಿದ ರಮೇಶ ಬಾಯಿರಿಯವರು ಇದೇ ಸಂವಾದದಲ್ಲಿ ಹಿಂದಿನ ಸಂಚಿಕೆಯೊಂದರಲ್ಲಿ ತುಂಬಾ ಪರಿಣಾಮಕಾರಿಯಾಗಿ ತಿಳಿಸಿದ್ದಾರೆ. ಅವರ ಪ್ರಕಾರ ಇಂದೂ ಈ ವಿಚಾರಗಳನ್ನೇ ಮಾತನಾಡುವವರು ಅಜ್ಞಾನಿಗಳೇ ಸರಿ. ಹಾಗಾಗಿ ಇಷ್ಟಾಗಿಯೂ ಜಾತಿ ತಾರತಮ್ಯಗಳು ಯಾವುದಾದರೂ ಒಂದು ಕಾಲಾತೀತವಾದ ಮೆಕ್ಯಾನಿಸಂ ಅನ್ನು ಅನುಸರಿಸಿವೆ ಎಂಬುದಾಗಿ ನಾಗಭೂಷಣರು ಹೇಳುತ್ತಿದ್ದರೆ ಅದು ಸಧ್ಯಕ್ಕೆ ಊಹೆ ಮಾತ್ರವಾಗಿರುತ್ತದೆ.

ನಾಗಭೂಷಣರ ಈ ಪ್ರಶ್ನೆಗೆ ಹೀದನ್ ಘೋರಂನಲ್ಲಿ ಕಣ್ಣನ್ ಎಂಬವರು ಒಂದು ಉತ್ತರ ನೀಡಿದ್ದಾರೆ. ಅದೆಂದರೆ, ಅಮೇರಿಕಾದಲ್ಲಿ ವರ್ಣ (racism) ತಾರತಮ್ಯವಿದೆ ಆದರೆ ಅದನ್ನು ಎಂದೂ ವರ್ಣಭೇದ ವ್ಯವಸ್ಥೆ (race system) ಎಂಬುದಾಗಿ ಯಾರೂ ಕರೆದಿಲ್ಲ. ಹಾಗಾಗಿ ತಾರತಮ್ಯ ಇದೆ ಎಂದ ಮಾತ್ರಕ್ಕೆ ಅದನ್ನು ಸಿಸ್ಟಂ ಎಂದು ಕರೆಯಲೇಬೇಕಿಲ್ಲ ಹಾಗೂ ಅದು ಇರಲೇಬೇಕಿಲ್ಲ. ವ್ಯವಸ್ಥೆಯೆಂಬುದಾಗಿ ಭಾವಿಸಿಕೊಂಡಾಗ ಅದನ್ನು ಯಾರೋ ನಿರ್ಮಿಸಿ ಅದರ ನಿಯಮಗಳನ್ನು ಮಾಡಿ ಇಟ್ಟಿದ್ದಾರೆ, ಹಾಗೂ ಈ ನಿಯಮಗಳು ಎಲ್ಲಾ ಜಾತಿ ಘಟಕಗಳನ್ನು ಬಂಧಿಸುತ್ತವೆ, ಅದರ ಪ್ರಕಾರ ಜಾತಿಗಳು ನಡೆದುಕೊಳ್ಳುತ್ತಿವೆ. ಜಾತಿ ದೌರ್ಜನ್ಯಗಳೂ ಈ ನಿಯಮಗಳ ಒಂದು ಭಾಗ ಎಂದು ಗ್ರಹಿಸುತ್ತೇವೆ. ವಾಸ್ತವಿಕವಾಗಿ ನೋಡಿದಾಗ ಭಾರತದ ತುಂಬೆಲ್ಲ ಇರುವ ಇಂಥ ಜಾತಿಗಳಲ್ಲಿ ಅಂಥದ್ದೇನೂ ಏಕರೀತಿಯ ನಿಯಮ ಹಾಗೂ ರಚನೆ ನಮಗೆ ಕಾಣಿಸುವುದಿಲ್ಲ. ಕಳೆದ ನೂರು ವರ್ಷಗಳ ಸಮಾಜಶಾಸ್ತ್ರಜ್ಞರ ಗುದ್ದಾಟಗಳನ್ನು ಒದ್ದಾಟಗಳನ್ನು ನೋಡಿದರೆ ಇನ್ನೂ ಅಂಥದ್ದೊಂದು ರಚನೆ ನಮಗೆ ಕಾಣಿಸಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇದಕ್ಕೆ ಅಂಬೇಡ್ಕರರ 'ಎನಿಹಿಲೇಶನ್ ಆಫ್ ಕಾಸ್ಟ್' ಪುಸ್ತಿಕೆಯಲ್ಲಿ ಆರನೆಯ ಭಾಗವಾದ "ಹಿಂದೂ ಸೊಸೈಟಿ ಇಸ್ ಎ ಮಿಥ್" ಎಂಬ ಭಾಗವನ್ನು ನೋಡಿ. ಅವರು ಗುರುತಿಸುವಂತೆ ಈ ಜಾತಿಗಳನ್ನೆಲ್ಲ ಸೇರಿಸುವ ಯಾವ ಅಂಶವೂ ನಮಗೆ ಕಂಡುಬರುವುದಿಲ್ಲ. ಇವುಗಳಲ್ಲಿ ಯಾವುದಾದರೂ ಸಾಮ್ಯತೆಗಳಿದ್ದರೂ ಅವು ಒಬ್ಬರಿಂದೊಬ್ಬರು ತೆಗೆದುಕೊಂಡಿದ್ದೇ ವಿನಃ ಅವು ಐಕ್ಯತೆಯಿಂದ ಬಂದ ಅಂಶಗಳಲ್ಲ ಎನ್ನುತ್ತಾರೆ. ಅದಕ್ಕೆ ಕಾರಣ ಜಾತಿವ್ಯವಸ್ಥೆಯು ಹಿಂದೂಯಿಸಂನ್ನು ನಾಶಮಾಡಿದೆ ಎನ್ನುತ್ತಾರೆ. ಆದರೆ ರಚನೆಯ ಐಕ್ಯತೆಯೇ ಇಲ್ಲದ ವ್ಯವಸ್ಥೆ ಹೇಗಾಗುತ್ತದೆ? ಅಂಥದೊಂದು ವ್ಯವಸ್ಥೆ ಎಲ್ಲಾದರೂ ಇದೆಯೆ?

ಇನ್ನು ಎರಡನೆಯ ಪ್ರಶ್ನೆ: ರಿಲಿಜನ್ ಕಲ್ಪನೆ ಭಾರತಕ್ಕೆ ಅಸಂಗತವಾಗುವುದಾದರೆ ಸಮಾಜಶಾಸ್ತ್ರವೂ ಭಾರತೀಯ ಸಂಸ್ಕೃತಿಯ ಅಧ್ಯಯನಕ್ಕೆ ಅಸಂಗತವಾಗುವುದಿಲ್ಲವೆ ಎಂಬುದು. ಈ ಪ್ರಶ್ನೆಯಲ್ಲಿಯೂ ಸಮಸ್ಯೆಯಿದೆ. ರಿಲಿಜನ್ನಿನ ಮೂಲಕ ಜಗತ್ತನ್ನು ನೋಡುವುದು, ವಿಜ್ಞಾನದ ಮೂಲಕ ಜಗತ್ತನ್ನು ನೋಡುವುದು ಒಂದೇ ಎಂಬ ಅಭಿಪ್ರಾಯವನ್ನು ಹೊಂದಿದರೆ ಮಾತ್ರ ಇಂಥ ಪ್ರಶ್ನೆಗಳು ಬರುತ್ತವೆ. ಸಮಾಜಶಾಸ್ತ್ರವೊಂದು ವಿಜ್ಞಾನ. ವಿಜ್ಞಾನವು ಈ ಜಗತ್ತಿನ ವಾಸ್ತವಿಕ ವಿವರಣೆಯನ್ನು ಸಾಧಿಸುವುದಕ್ಕಾಗಿ ನಡೆಸುವ ಒಂದು ವ್ಯವಸ್ಥಿತವಾದ ಅಧ್ಯಯನವಾಗಿದೆ. ರಿಲಿಜನ್ನು ಕೂಡಾ ಈ ಜಗತ್ತಿನ ಒಂದು ವಿವರಣೆಯೇ ಆಗಿದೆ. ಆದರೆ ರಿಲಿಜನ್ನು ಜಗತ್ತಿನ ತುಂಬೆಲ್ಲಾ ತಾನು ಇದ್ದೇನೆ ಎನ್ನುತ್ತದೆ. ಹಾಗೆ ಭಾವಿಸಿಕೊಂಡರೆ ಭಾರತೀಯ ಸಮಾಜದ ಕುರಿತ ನಮ್ಮ ಗ್ರಹಿಕೆಯು ವೈಜ್ಞಾನಿಕವಾಗುವುದಿಲ್ಲ. ವಿಜ್ಞಾನವು ವಿವರಿಸುವ ಜಗತ್ತನ್ನು ಭಾರತದಲ್ಲೂ ನಾವು ಕಾಣುತ್ತೇವೆ. ಆದರೆ ಭಾರತೀಯ ಸಮಾಜದ ವಾಸ್ತವಿಕ ಚಿತ್ರಣವನ್ನು ನಡೆಸಲು ರಿಲಿಜನ್ನಿನ ವರ್ಣನೆಯು ಅಡ್ಡಿಬರುತ್ತದೆ. ವಿಜ್ಞಾನದ ವಿವರಣೆಯು ಪರಿಪೂರ್ಣ ಹಾಗೂ ಅಂತಿಮವೆ? ಎಂಬ ಪ್ರಶ್ನೆಯೂ

ಚರ್ಚೆ

ಜಾತಿ ಧರ್ಮ ತಾರತಮ್ಯ

ಇದೆ. ವಿಜ್ಞಾನ ಹಾಗೇನೂ ಪ್ರತಿಪಾದಿಸುವುದಿಲ್ಲ. ಪ್ರಪಂಚದ ಕುರಿತ ನಮ್ಮ ಗ್ರಹಿಕೆಯು ಸದಾ ವಿಸ್ತರಿಸುತ್ತಲೇ ಸಾಗುವ ಒಂದು ಸಾಧ್ಯತೆಯನ್ನು ವಿಜ್ಞಾನವು ಸೃಷ್ಟಿಸುತ್ತದೆ. ಅದು ತಾನು ಮನುಷ್ಯಜೀವನದ ಎಲ್ಲಾ ಅಗತ್ಯಗಳನ್ನಾಗಲೀ, ಮನುಷ್ಯ ಜ್ಞಾನದ ಎಲ್ಲಾ ಅಗತ್ಯಗಳನ್ನಾಗಲೀ ಪೂರೈಸುತ್ತೇನೆ ಎನ್ನು ವುದಿಲ್ಲ. ನಮಗೆ ಆತ್ಮಶಾಂತಿ ಬೇಕು, ಆತ್ಮಜ್ಞಾನ ಬೇಕು, ಮೋಕ್ಷಬೇಕು ಎಂದಾದಲ್ಲಿ ಅದು ಬೇರೆಯದೇ ವಿಚಾರ. ಇಲ್ಲಿ ನಮ್ಮ ಉದ್ದೇಶ ಅದಲ್ಲ, ಇಲ್ಲಿ ನಾವು ಯಾರೂ ಆ ಕುರಿತು ಚರ್ಚೆ ನಡೆಸುತ್ತಿಲ್ಲ. ನಾವು ಸಾಮಾಜಿಕ ವ್ಯವಸ್ಥೆಯ ಕುರಿತು, ತಾರತಮ್ಯಗಳ ಕುರಿತು ಪುರೋಹಿತಶಾಹಿಯ ಕುರಿತು ಮಾತನಾಡುತ್ತಿದ್ದೇವೆ. ಆ ಕುರಿತು ಮಾತನಾಡಲಿಕ್ಕೆ ಈ ಪ್ರಪಂಚದ ವಿದ್ಯಮಾನಗಳ ಕುರಿತು ವಾಸ್ತವಿಕ ವಿವರಣೆ ಬೇಕು. ನಾವೆಲ್ಲ ನಮ್ಮ ವಾದಗಳನ್ನು ಈ ವಸ್ತುಸ್ಥಿತಿಯನ್ನೇ ಆಧಾರವಾಗಿಟ್ಟುಕೊಂಡು ಸಮರ್ಥಿ ಸುತ್ತೇವಲ್ಲವೆ? ಅಂದರೆ ನಾವು ಈ ಚರ್ಚೆಯಲ್ಲಿ ವಿಜ್ಞಾನದ ಪ್ರಶ್ನೆಗಳನ್ನೇ ಎತ್ತಿಕೊಂಡಿದ್ದೇವೆ. ಹಾಗಾಗಿ ವಿಜ್ಞಾನದ ಮಿತಿಗಳೇನೇ ಇರಲಿ ಅದಕ್ಕೆ ಅವೈಜ್ಞಾನಿಕ ಪರಿಹಾರವನ್ನು ಹುಡುಕಲಿಕ್ಕಂತೂ ಸಾಧ್ಯವೇ ಇಲ್ಲ. ನಾವು ನಮ್ಮ ಸಮಾಜದ ಕುರಿತು ಇಂದು ಹೊಂದಿರುವ ಸಾಮಾನ್ಯಜ್ಞಾನವೂ ಇಂಗ್ಲೀಷಿನಲ್ಲೋ, ಮತ್ಯಾವ ಭಾಷೆಯಲ್ಲೋ ಇರುವ ವೈಜ್ಞಾನಿಕ ಸಿದ್ಧಾಂತಗಳನ್ನೇ ಆಧರಿಸಿದೆ. ಅದು ಹೇಗೆ ನಾಗಭೂಷಣರು ಸಮಾಜಶಾಸ್ತ್ರೀಯ ಪ್ರಶ್ನೆಗಳನ್ನು ಎತ್ತಲಿಕ್ಕೆ ಸಾಧ್ಯವಾಯಿತು? ಅಂದರೆ ಈಗ ಅವನ್ನೆಲ್ಲ ನಾವು ಕನ್ನಡದ ಒಂದು ಭಾಗವನ್ನಾಗಿ ಮಾಡಿಕೊಂಡಿದ್ದೇವೆ. ಇಷ್ಟು ಸಾಕು, ಇನ್ನು ಮುಂದೆ ಬೇಡ ಎಂದುಬಿಟ್ಟರೆ ಜ್ಞಾನದ ಹಂಗು ತೊರೆಯುವುದಿಲ್ಲ. ಅದೇ ವಿಜ್ಞಾನವೇ ತನ್ನ ಹಳೇ ವಿಚಾರಗಳು ಅಜ್ಞಾನವೆಂದು ತೋರಿಸುತ್ತದೆ. ಕಡೇ ಪಕ್ಷ ಅಜ್ಞಾನವನ್ನಾದರೂ ತೊರೆಯಬೇಕಲ್ಲ.

ಬಾಲಗಂಗಾಧರರು ಹೇಳುವುದೇನೆಂದರೆ ನಮ್ಮ ಭಾರತೀಯ ಸಮಾಜದ ಕುರಿತ ಸಮಾಜಶಾಸ್ತ್ರೀಯ ವಿವರಣೆಗಳು ಮೂಲತಃ ಥಿಯಾಲಜಿಯ ಗ್ರಹಿಕೆಯಿಂದ ಹುಟ್ಟಿವೆ. ಅವು ಇಲ್ಲಿನ ವಸ್ತುಸ್ಥಿತಿಯನ್ನಾಧರಿಸಿ ಹುಟ್ಟಿದವುಗಳಲ್ಲ ಹಾಗಾಗಿ ಅಂಥ ಗ್ರಹಿಕೆಗಳಿಗೂ ವಸ್ತುಸ್ಥಿತಿಗೂ ಸಮಾಜಶಾಸ್ತ್ರದಲ್ಲಿ ತಾಳೆ ಬರುತ್ತಿಲ್ಲ. ಅದೊಂದೇ ಅಲ್ಲ ನಮ್ಮ ಜಾತಿ ತಾರತಮ್ಯದ ಸಮಸ್ಯೆಗಳಿಗೆ ಇಂಥ ಗ್ರಹಿಕೆಗಳನ್ನಾಧರಿಸಿ ಪರಿಹಾರ ಹುಡುಕುವುದೂ ಸಾಧ್ಯವಾಗುತ್ತಿಲ್ಲ. ನಾವು ಇಂದು ನಮ್ಮ ಸಮಾಜದ ಸತ್ಯಗಳು ಎಂದು ನಂಬಿಕೊಂಡವುಗಳೆಲ್ಲ ನಮ್ಮ ಸಮಾಜದ ಸಂಶೋಧನೆ ಪ್ರಾರಂಭವಾಗುವುದಕ್ಕಿಂತಲೂ ಮೊದಲೇ ಯುರೋಪಿನಲ್ಲಿ ಸೃಷ್ಟಿಯಾದವುಗಳು. ಅದು ಹೇಗೆ ಭಾರತದಲ್ಲಿ ಜಾತಿ ವ್ಯವಸ್ಥೆಯಿದೆ ಎಂದು ಭಾರತಕ್ಕೆ ಬರುವ ಮೊದಲೇ ಕ್ರೈಸ್ತ ಮಿಶನರಿಗಳಿಗೆ ತಿಳಿಯಿತು? ಹೇಗೋ ತಿಳಿಯಿತೆನ್ನಿ. ಗುರುತ್ವಾಕರ್ಷಣೆಯ ಸಿದ್ಧಾಂತವನ್ನು ಕಂಡುಹಿಡಿದಾಗ ಭಾರತದ ವಸ್ತುಗಳನ್ನು ಪ್ರಯೋಗಕ್ಕೆ ಒಳಪಡಿಸಿರಲಿಲ್ಲ ಎಂದಾಕ್ಷಣ ಭಾರತದಲ್ಲಿ ಗುರುತ್ವಾಕರ್ಷಣೆ ಇರಲಿಲ್ಲವೆ ಎಂಬ ಪ್ರಶ್ನೆ ಏಳಬಹುದು. ಆದರೆ ಇಲ್ಲಿನ ವಿದ್ಯಮಾನಗಳೂ ಅದನ್ನು ಬೆಂಬಲಿಸಿದಾಗ ಮಾತ್ರ ನಾವು ಹಾಗೆ ಹೇಳಬಹುದು. ಅಂದರೆ ನಮ್ಮಲ್ಲಿ ಕೂಡಾ ವಾಸ್ತವ ಹಾಗೇ ಇದೆ ಎಂಬುದು ಪರೀಕ್ಷೆಯಿಂದ ಧೃಡಪಡುತ್ತದೆ. ಆದರೆ ಭಾರತೀಯ ಸಂಸ್ಕೃತಿಯ ಕುರಿತ ವಿದ್ಯಮಾನಗಳು ಐರೋಪ್ಯ ಗ್ರಹಿಕೆಗಳಿಗಿಂತ ಬೇರೆ ರೀತಿಯಲ್ಲೇ ಇವೆ

ಬಾಲಗಂಗಾಧರರು ಹೇಳುವುದೇನೆಂದರೆ ನಮ್ಮ ಭಾರತೀಯ ಸಮಾಜದ ಕುರಿತ ಸಮಾಜಶಾಸ್ತ್ರೀಯ ವಿವರಣೆಗಳು ಮೂಲತಃ ಥಿಯಾಲಜಿಯ ಗ್ರಹಿಕೆಯಿಂದ ಹುಟ್ಟಿವೆ. ಅವು ಇಲ್ಲಿನ ವಸ್ತುಸ್ಥಿತಿಯನ್ನಾಧರಿಸಿ ಹುಟ್ಟಿದವುಗಳಲ್ಲ ಹಾಗಾಗಿ ಅಂಥ ಗ್ರಹಿಕೆಗಳಿಗೂ ವಸ್ತುಸ್ಥಿತಿಗೂ ಸಮಾಜ ಶಾಸ್ತ್ರದಲ್ಲಿ ತಾಳೆ ಬರುತ್ತಿಲ್ಲ. ಅದೊಂದೇ ಅಲ್ಲ ನಮ್ಮ ಜಾತಿ ತಾರತಮ್ಯದ ಸಮಸ್ಯೆಗಳಿಗೆ ಇಂಥ ಗ್ರಹಿಕೆಗಳನ್ನಾಧರಿಸಿ ಪರಿಹಾರ ಹುಡುಕುವುದೂ ಸಾಧ್ಯವಾಗುತ್ತಿಲ್ಲ. ನಾವು ಇಂದು ನಮ್ಮ ಸಮಾಜದ ಸತ್ಯಗಳು ಎಂದು ನಂಬಿ ಕೊಂಡವುಗಳೆಲ್ಲ ನಮ್ಮ ಸಮಾಜದ ಸಂಶೋಧನೆ ಪ್ರಾರಂಭವಾಗುವುದಕ್ಕಿಂತಲೂ ಮೊದಲೇ ಯುರೋಪಿನಲ್ಲಿ ಸೃಷ್ಟಿಯಾದವುಗಳು. ಅದು ಹೇಗೆ ಭಾರತದಲ್ಲಿ ಜಾತಿ ವ್ಯವಸ್ಥೆಯಿದೆ ಎಂದು ಭಾರತಕ್ಕೆ ಬರುವ ಮೊದಲೇ ಕ್ರೈಸ್ತ ಮಿಶನರಿಗಳಿಗೆ ತಿಳಿಯಿತು?

ಯೆಂಬುದನ್ನು ಪ್ರಾರಂಭದಿಂದಲೂ ಗುರುತಿಸಲಾಗಿದೆ. ಹಾಗೂ ಸಾಂಸ್ಕೃತಿಕ ವಿದ್ಯಮಾನಗಳು ಸಂಸ್ಕೃತಿ ವಿಶಿಷ್ಟವಾಗಿರುತ್ತವೆ ಎಂಬುದನ್ನು ಎಲ್ಲರೂ ಬಲ್ಲರು. ಇಲ್ಲಿನ ಸಾಮಾಜಿಕ ಗುಂಪುಗಳನ್ನೆಲ್ಲ ಐಕ್ಯಗೊಳಿಸಬಲ್ಲ ಒಂದು ಭೌತಿಕ ವ್ಯವಸ್ಥೆ ಐತಿಹಾಸಿಕ ಕಾಲದಲ್ಲಿ ಇಲ್ಲದಿರುವುದು ವಿಜ್ಞಾನದ ಮೂಲಕವೇ ಗ್ರಹಿಕೆಗೆ ಬಂದಿದೆ. ಜಾತಿ ವ್ಯವಸ್ಥೆಯು ಇಲ್ಲಿ ಇದ್ದಿದ್ದರೆ ಮತ್ತೇಕೆ ಸಮಾಜಶಾಸ್ತ್ರಜ್ಞರ ಕೊನೆಯಿರದ ಗುದ್ದಾಟ? ಭಾರತದಲ್ಲಿ ಜಾತಿಗಳಿವೆ, ಕುಟುಂಬಗಳಿವೆ ಎನ್ನುವುದರ ಕುರಿತು ಯಾರಾದರೂ ಗುದ್ದಾಡಿದ್ದಾರೆಯೆ?

ಮೂರನೆಯ ಪ್ರಶ್ನೆಗೆ ಸಂಬಂಧಿಸಿದಂತೆ ಹೇಳುವುದಾದರೆ ಬಾಲಗಂಗಾಧರರು ಈಗ ಪ್ರಚಲಿತದಲ್ಲಿರುವ ವಿಚಾರಗಳನ್ನು ವಸಾಹತೀಕೃತವೆಂಬ ಕಾರಣಕ್ಕಾಗಿಯಾಗಲೀ, ಅವು ಪಶ್ಚಿಮದಲ್ಲಿ ಹುಟ್ಟಿದವುಗಳು ಎಂಬ ಕಾರಣಕ್ಕಾಗಿಯಾಗಲೀ ವಿಮರ್ಶೆಗೊಳಪಡಿಸಿಲ್ಲ. ಆ ಕಾರಣಕ್ಕೇ ಭಾರತದಲ್ಲಿದ್ದವುಗಳೆಲ್ಲ ಶ್ರೇಷ್ಠ ಎಂಬ ವಾದವೂ ಅವರದಲ್ಲ. ಅವರ ವಾದವನ್ನು ಸರಿಯಾಗಿ ಗ್ರಹಿಸಿಕೊಳ್ಳದೇ ಅವಸರದಲ್ಲಿ ಕೇಳಿದ ಪ್ರಶ್ನೆಗಳಾಗಿವೆ ಇವು. ಗುರುತ್ವಾಕರ್ಷಣೆಯ ಸಿದ್ಧಾಂತವು ಪಶ್ಚಿಮದಲ್ಲಿ ಹುಟ್ಟಿದೆ ಎಂಬ ಕಾರಣಕ್ಕಾಗಲೀ, ಅದು ವಸಾಹತು ದೊರೆಗಳ ಸಿದ್ಧಾಂತ ಎಂಬ ಕಾರಣಕ್ಕಾಗಲೀ ನಮ್ಮ ವಿಜ್ಞಾನಿಗಳು ಅದನ್ನು ಒಪ್ಪಿಕೊಂಡದ್ದಲ್ಲ. ಅದು ಒಂದು ಪ್ರಾಕೃತಿಕ ವಿದ್ಯಮಾನವನ್ನು ಕುರಿತು ಮನದಟ್ಟು ಮಾಡಿಕೊಡುತ್ತದೆ. ಹಾಗಾಗಿ ಈ ಸಿದ್ಧಾಂತವನ್ನು ಅದು ಹುಟ್ಟಿದ ಕಾಲವನ್ನಾಧರಿಸಿ ವಸಾಹತೀಕೃತ, ನವವಸಾಹತೀಕೃತ ಚಿಂತನೆ ಎಂದು ಕರೆದು ಮೂಲೆಗೊತ್ತಲು ಪ್ರಯತ್ನಿಸುವುದು ಅಂಥದ್ದೇ ಒಂದು ಪ್ರತಿ ರಾಜಕೀಯವಾಗಬಹುದೇ ಹೊರತೂ ವಿಜ್ಞಾನಕ್ಕೆ ಅದರಿಂದ ಯಾವ ಪ್ರಯೋಜನವೂ ಇಲ್ಲ. ವಿಜ್ಞಾನದಲ್ಲಿ ಈಗ ಇರುವ ವಿವರಣೆ ಸರಿಯಲ್ಲ ಎಂಬುದನ್ನು ಗುರುತಿಸಿ ಇನ್ನೂ ಒಳ್ಳೆಯ ವಿವರಣೆ ಬಂದರೆ ಅದನ್ನು ಭಾರತೀಯರೇ ಮಂಡಿಸಿದರೆ ಪಾಶ್ಚಾತ್ಯ ವಿಜ್ಞಾನಿಗಳೂ ಅದನ್ನು ಖಂಡಿತ ಒಪ್ಪಿಕೊಳ್ಳುತ್ತಾರೆ? ಭಾರತೀಯ ವಿಜ್ಞಾನಿಗಳು ಪಾಶ್ಚಾತ್ಯ ಹಣವನ್ನು ತಮ್ಮ ಸಂಶೋಧನೆಗಳಿಗಾಗಿ ಬಳಸಿಕೊಂಡಕೂಡಲೆ, ಅವರು ಮಂಡಿಸುವ ವಿಚಾರಗಳೆಲ್ಲಾ ಸುಳ್ಳಾಗಿ ಬಿಡುತ್ತವೆಯೆ? ಹಾಗಾಗಿ ಇದು ಮೂಲತಃ ತಿಳುವಳಿಕೆಗೆ ಸಂಬಂಧಿಸಿದ ಹುಡುಕಾಟ. ಈ ಸಮಾಜದಲ್ಲಿ ಬೆಳೆದವನೊಬ್ಬನಿಗೆ ನಮ್ಮ ಸಮಾಜದ ಕುರಿತು ಇರುವ ಚಿತ್ರಣ ಅಥವಾ ಗ್ರಹಿಕೆ ಸರಿಯಾಗಿಲ್ಲ ಎಂದು ಅನ್ನಿಸಿದಾಗ ಅವನು ಅದನ್ನು ಪ್ರಮಾಣೀಕರಿಸಿ ತೋರಿಸುತ್ತಾನಾದರೆ ಅವನು ಎಲ್ಲಿದ್ದರೆ ಏನಂತೆ? ಜೇಮ್ಸ್ ಮಿಲ್ ಬರೆದ ಇತಿಹಾಸವು ವಸಾಹತು ವಾದವನ್ನು ಪ್ರತಿಪಾದಿಸುತ್ತದೆ ಎಂಬುದಕ್ಕಿಂತ ಅದು ಭಾರತೀಯ ಸಮಾಜದ ವಾಸ್ತವಿಕ ಚಿತ್ರಣವಲ್ಲ ಎಂಬುದು ಇತಿಹಾಸಕಾರರ ಆಕ್ಷೇಪ. ಜೇಮ್ಸ್ ಮಿಲ್ ಹೇಳಿದ್ದನ್ನೇ ಭಾರತೀಯರು ಹೇಳಿದರೆ ಅದು ಸತ್ಯವಾಗಿಬಿಡುತ್ತದೆಯೆ? ಜೇಮ್ಸ್ ಮಿಲ್ ಭಾರತೀಯ ಸಮಾಜದ ಕುರಿತು ವಸಾಹತು ಹಿತಾಸಕ್ತಿಯಿಂದಾಗಿ ಸುಳ್ಳು ಬರೆದದ್ದಲ್ಲ. ಅವನು ಅದೇ ಸತ್ಯವೆಂದು ನಂಬಿಕೊಂಡಿದ್ದವನು. ವಸಾಹತುವಾದವು ಹುಟ್ಟುವುದೇ ಇಂಥ ತಪ್ಪು ಗ್ರಹಿಕೆಗಳಿಂದ. ಅನ್ಯಸಂಸ್ಕೃತಿಗಳ ಗ್ರಹಿಕೆಯಲ್ಲಿ ಇಂಥ ತಪ್ಪುಗಳು ಏಕೆ ಹುಟ್ಟುತ್ತವೆ ಎನ್ನುವುದು ವಸಾಹತುಶಾಹೀ ಸಮಸ್ಯೆಯಲ್ಲ. ಅದು ಒಂದು ಸಂಸ್ಕೃತಿಯ ಸಮಸ್ಯೆ ಹಾಗೂ ಜ್ಞಾನದ ಮಿತಿಯ ಸಮಸ್ಯೆ ಎಂಬುದನ್ನು ಬಾಲಗಂಗಾಧರ ಅವರು ಗುರುತಿಸುತ್ತಾರೆ. ಇದನ್ನು ಅವರು ಎಲ್ಲಿದ್ದು ಗುರುತಿಸಿದರೂ, ಅವರನ್ನು ಅಲ್ಲಗಳೆಯಲು ಅದು ನಿಮಿತ್ತವಾಗುವುದಿಲ್ಲ. ಗಾಂಧಿ ಕೂಡಾ ಇಂಗ್ಲೆಂಡಿನಲ್ಲಿ, ದಕ್ಷಿಣ ಆಫ್ರಿಕಾದಲ್ಲಿ ಇದ್ದು ಬಂದವರು. ಪಾಶ್ಚಾತ್ಯ ಸಂಸ್ಕೃತಿಗೆ ಅವರು ತೆರೆದುಕೊಂಡ ಮೇಲೇ ಅಲ್ಲವೆ ಅವರು ಹಿಂದ್ ಸ್ವರಾಜ್ ಬರೆದದ್ದು? ಅದರಿಂದೇನಾದರೂ ಆ ಗ್ರಂಥವು ಎತ್ತುವ ಪ್ರಶ್ನೆಗಳಿಗೆ ಧಕ್ಕೆ ಬಂದಿದೆಯೆ? ಇನ್ನು ಗಾಂಧಿಯ ನೋಟಕ್ರಮದ ಕಡೆಗೆ ನಾವು ಗಮನಹರಿಸಬೇಕು ಎಂಬ ನಾಗಭೂಷಣರ ಸಲಹೆಗೆ ಧನ್ಯವಾದಗಳು. ಅದೊಂದೇ ಅಲ್ಲ ನಮ್ಮ ಎಲ್ಲಾ ಭಾರತೀಯ ಚಿಂತಕರ ಕಡೆಗೂ ನಾವು ಇನ್ನು ಮುಂದೆ ಹೆಚ್ಚು ಹೆಚ್ಚಾಗಿ ತೊಡಗಿಕೊಳ್ಳುತ್ತೇವೆ.

ಮೂರು ಪ್ರಶ್ನೆಗಳ ನಂತರ ಒಂದು ಉದಾಹರಣೆಯತ್ತ ಗಮನಹರಿಸೋಣ. ನಾಗಭೂಷಣರ ಕಟು, ವ್ಯಂಗ್ಯಪೂರಿತ ಧಾಟಿಗೆ ಪ್ರತಿಯಾಗಿ ನಾನೂ ಉದ್ದೇಶಪೂರ್ವಕವಾಗಿ ಹಾಗೇಯೆ ಉತ್ತರಿಸುತ್ತೇನೆ.

ನನ್ನ ಲೇಖನದಲ್ಲಿ ಅವರಿಗೆ ವ್ಯಕ್ತಪಡಿಸಲಾಗದಷ್ಟು ದೋಷಗಳು ಕಾಣಿಸಿದ್ದರ ಕುರಿತು ನನ್ನ ಅಭ್ಯಂತರವೇನಿಲ್ಲ. ಆದರೆ ಅವರು ಅದನ್ನು ಇಡುವುದಕ್ಕೆ ಹಾಕಿದ ಪೀಠಿಕೆ

ಯನ್ನು ನೋಡಿ ಒಬ್ಬರ ಕುರಿತ ಗೌರವಾದರಗಳು 0ಹೀಗೂ ವ್ಯಕ್ತವಾಗಬಹುದೆ ಎಂಬ ಸೋಜಿಗವುಂಟಾಯಿತು. ಅವರು ಮೂಲತಃ ನನ್ನ ಚರ್ಚೆಯನ್ನೇ ಸಂದೇಹಾಸ್ಪದವನ್ನಾಗಿ ಮಾಡಲು ಶ್ರಮಿಸುತ್ತಾರೆ. ನಾನು ಅವರಿಗೆ ನನ್ನ ಈಮೇಲ್ ವಿಳಾಸವನ್ನು ನೀಡಲಿಲ್ಲ ಎಂಬ ವಿಚಾರವನ್ನು ಹೀಗೆ ಪತ್ರಿಕೆಗಳಲ್ಲಿ ತೋಡಿಕೊಳ್ಳುವುದಕ್ಕೆ ಇನ್ನೇನು ಉದ್ದೇಶವಿದ್ದೀತು? ಓದುಗರು ಇದರಿಂದ ಏನು ಅರ್ಥವನ್ನು ಪಡೆದುಕೊಳ್ಳಬಹುದು ಎಂಬ ವಿಚಾರವನ್ನು ಅರಿಯದಷ್ಟು ನಾಗಭೂಷಣರು ಮುಗ್ಧ ಅಮಾಯಕರು ಎಂದು ಅಭಿಪ್ರಾಯಪಡೋಣವೆ? ಅವರು ಸಾರ್ವಜನಿಕವಾಗಿ ಈ ವಿಷಯವನ್ನು ಇಟ್ಟಿರುವುದರಿಂದ ಸಾರ್ವಜನಿಕವಾಗಿಯೇ ನಾನು ಅದಕ್ಕೆ ವಿವರಣೆ ನೀಡುತ್ತೇನೆ. ನಾಗಭೂಷಣರ ಫೋನು ಬಂದಾಗ ನಾನು ಶಿವಮೊಗ್ಗದ ಜನಸಂದಣಿಯ ರಸ್ತೆಯೊಂದರಲ್ಲಿ ಡ್ರೈವ್ ಮಾಡುತ್ತಿದ್ದೆ. ಅದನ್ನು ಅವರಿಗೆ ಆಗಲೇ ತಿಳಿಸಿದ್ದೆ. ಅವರು ನನಗೆ ಈಮೇಲ್‌ನಲ್ಲಿ ತಮ್ಮ ಪ್ರತಿಕ್ರಿಯೆಯನ್ನು ಕಳುಹಿಸುತ್ತೇನೆ ಎಂದಹಾಗೇ ಆಯಿತು. ಬಹುಶಃ ಅವರು ಅಡ್ರೆಸ್ ಕೊಡಿ ಎಂದು ಕೇಳಿದ್ದನ್ನು ನಾನು ಗಮನಿಸಿಲ್ಲ. ನಾನು ರಸ್ತೆಯನ್ನೇ ಹೆಚ್ಚು ಗಮನಿಸುತ್ತಿದ್ದುದು ಸಹಜ. ಹಾಗೂ ನನ್ನ ಹಾಗೂ ನನ್ನ ಕುಟುಂಬದ ಜೀವದ ಕುರಿತು ನನ್ನ ಕಾಳಜಿಯನ್ನು ನಾಗಭೂಷಣರೂ ನನ್ನ ಗೆಳೆಯರಾಗಿ ಮೆಚ್ಚುತ್ತಾರೆ ಎಂಬ ಭರವಸೆ ನನ್ನದು. ಅವರು ಮತ್ತೆ ಫೋನು ಮಾಡಲಿಲ್ಲ ನಾನೂ ಆ ಕುರಿತು ಮರೆತೆ. ನನಗಿರುವ ಪ್ರಶ್ನೆ ಎಂದರೆ ನನಗೆ ಈಮೇಲ್ ಮಾಡಬೇಕಾದವರು ನಿಮ್ಮ ಈಮೇಲ್ ಕಳುಹಿಸಲಿಲ್ಲ ಎಂದು ಮತ್ತೊಂದು ಫೋನು ಮಾಡಬಹುದಿತ್ತು. ಈಮೇಲ್ ಅಡ್ರೆಸ್ ಕೊಡಲಿಲ್ಲ ಎಂಬ ಕಾರಣಕ್ಕೆ ಸಂವಾದದಲ್ಲಿ ಪ್ರಕಟಿಸಿ ನನ್ನ ಗಮನಕ್ಕೆ ಈ ವಿಷಯವನ್ನು ತರಹೊರಟ ನಾಗಭೂಷಣರ ಕಾಳಜಿಗೆ ನಾನಂತೂ ನಿಬ್ಬೆರಗಾಗಿದ್ದೇನೆ. ನಿಮಗೆ ಯಾರದಾದರೂ ಈಮೇಲ್ ಅಡ್ರೆಸ್ ಇಲ್ಲದಿದ್ದರೆ ಸಂದೇಶಗಳನ್ನು ತಲುಪಿಸಲು ಎಂಥ ಸುಲಭ ಉಪಾಯ! ಇದರ ಬದಲು ನನಗೆ ಇದನ್ನೊಂದು ಸಾರ್ವಜನಿಕ ಚರ್ಚೆಯನ್ನಾಗಿ ಮಾಡಬೇಕಿದೆ ಎಂದು ನಾಗಭೂಷಣರು ನೇರವಾಗಿಯೇ ಹೇಳಬಹುದಿತ್ತು.

ಇನ್ನು ಆ ಲೇಖನವನ್ನು ಇಂಗ್ಲೀಷಿನಲ್ಲಿ ಬರೆದು ಇಂಟರ್ನೆಟ್ಟಿನಲ್ಲಿ ಹಾಕಿದ ವಿಚಾರ. ಅದನ್ನು ನಾನು, ನಮ್ಮ ಸಂಶೋಧನಾ ಕೇಂದ್ರ ಆಯೋಜಿಸಿದ್ದ ಮೂರನೇ ಧರ್ಮ ಮತ್ತು ಎಥಿಕ್ಸ್ ಸಮ್ಮೇಳನದಲ್ಲಿ ಮಂಡಿಸಿದ್ದೆ. ಆಗ ಕೇಳಿದವರಿಗೆಲ್ಲಾ ಝೆರಾಕ್ಸ್ ಪ್ರತಿಗಳನ್ನು ಹಂಚಿದ್ದೇನೆ. ಹಾಗೂ ಅದನ್ನು ಕನ್ನಡದಲ್ಲಿ ಕೂಡಾ ಬರೆಯಬೇಕು ಎಂದು ಅಂದುಕೊಂಡರೂ ಇದುವರೆಗೆ ಆಗಿಲ್ಲ. ನಾನು ನಾಗಭೂಷಣರನ್ನೂ ಒಳಗೊಂಡಂತೆ ಅನೇಕರ ಕುರಿತು ಜೊತೆಗೆ ಈ ವಿಷಯವಾಗಿ ಆಗಾಗ ಚರ್ಚಿಸಿದ್ದೆ. ಅದರಲ್ಲಿ ಮುಚ್ಚಿಡುವಂಥದ್ದು ಏನೂ ಇಲ್ಲ. ಆದರೆ ಈ ಸಮ್ಮೇಳನವು ಏಶಿಯಾ ಲಿಂಕ್ ಎಂಬ ಕಾರ್ಯಕ್ರಮದ ಭಾಗವಾಗಿದ್ದುದರಿಂದ ಅದಕ್ಕೆ ಸಂಬಂಧಿಸಿದ ವೆಬ್ ಸೈಟಿನಲ್ಲಿ ನಮ್ಮ ಕಾರ್ಯಕ್ರಮಗಳ ವರದಿಯ ರೂಪದಲ್ಲಿ ಹಾಕಿದ್ದರು. ಅದರಲ್ಲಿ ನನ್ನ ನಾಲ್ಕು ಲೇಖನಗಳನ್ನು ಇದುವರೆಗೂ ಹಾಕಲಾಗಿದೆ. ಅದ್ಯಾರೋ, ನಾಗಭೂಷಣರ ಮಿತ್ರರಿಗೆ ಈ ಲೇಖನವೊಂದೇ ಆಸಕ್ತಿ ಕೆರಳಿಸಿದ್ದರೆ ಅದಕ್ಕೆ ನಾನು ಕಾರಣನಲ್ಲ, ಅವರು ಯಾವ ಗುಂಪಿಗೆ ಸೇರಿದ ಕಾರಣಕ್ಕೆ ರೋಮಾಂಚನವನ್ನನುಭವಿಸಿದರೋ ಅದೂ ನನಗೆ ತಿಳಿಯದು. ಅವರ ಆ ಮಿತ್ರರೇ ಅದನ್ನು ಹೇಳಬೇಕು. ಅದು ನನ್ನ ಸಮಸ್ಯೆಯೂ ಅಲ್ಲ. ಅದು ನಾಗಭೂಷಣರ ಸಮಸ್ಯೆ. ಯಾವೊಂದು ವಿಚಾರವನ್ನು ಒಪ್ಪಿಕೊಳ್ಳಲು ಯಾರಿಗೆ ಯಾವ ಕಾರಣವಿದೆ ಎಂಬುದರ ಕುರಿತು ತಲೆಕೆಡಿಸಿಕೊಳ್ಳುವುದಕ್ಕಿಂತ ಆ ವಿಚಾರವೇನು? ಅದು ಎಷ್ಟರಮಟ್ಟಿಗೆ ಸುಸಂಗತವಾಗಿದೆ ಎಂಬುದು ಇಂಥ ಒಂದು ಚರ್ಚೆಗೆ ಮುಖ್ಯವಾಗಬೇಕು. ಆದರೆ ವಿಷಯದ ಸುಸಂಗತತೆಯ ಕುರಿತು ಮಾತನಾಡುವುದಕ್ಕಿಂತ ಮೊದಲು ಇಂಥ ಪೀಠಿಕೆಗಳನ್ನು ಹಾಕುವ ಅಗತ್ಯ ಯಾವಾಗ ಬರುತ್ತದೆ?

ನನಗೆ ತೀವ್ರ ಖೇದವಾದ ವಿಷಯವೆಂದರೆ ಕುವೆಂಪು ನಿಲುವು ಬ್ರಾಹ್ಮಣ ವಿರೋಧ ಹಾಗೂ ದ್ವೇಷದ ಮೇಲೆ ನಿಂತಿದೆ ಎಂಬುದಾಗಿ ನಾನು ತೀರ್ಮಾನಿಸುತ್ತೇನೆ ಎಂಬ ತಪ್ಪು ಮಾಹಿತಿಯನ್ನು ನೀಡಿರುವುದು. ಇದನ್ನು ನಂಬಿದ 'ಸಂವಾದ' ಪತ್ರಿಕೆಯವರು ಓದುಗರ ವಿಶೇಷ ಗಮನಕ್ಕಾಗಿ ಈ ಭಾಗವನ್ನು ದೊಡ್ಡ ಅಕ್ಷರಗಳಲ್ಲಿ ಹಾಕಿದ್ದು ಸ್ವಾಭಾವಿಕವಾಗೇ ಇದೆ. ನನ್ನ ಲೇಖನದ ವಿಚಾರಗಳು ನಾಗಭೂಷಣರಿಗೆ ಎಷ್ಟೇ ಅಪಥ್ಯವಾಗಿರಲಿ ಈ ರೀತಿಯ ಸುಳ್ಳುಗಳನ್ನು ಸೃಷ್ಟಿಸಿ ಅದನ್ನು ಎದುರಿಸುವ ತುರ್ತು ಏನಿರಬಹುದು? ಆದರೆ ನಾಗಭೂಷಣರು ಈ ಕೆಲಸವನ್ನು ಉದ್ದೇಶಪೂರ್ವಕವಾಗಿ ಖಂಡಿತಾ ಮಾಡಿರುವುದಿಲ್ಲ. ನಾನು ನಾಗಭೂಷಣರನ್ನು ಬಲ್ಲಂತೆ ಹೀಗೆ ಅರ್ಥೈಸುತ್ತೇನೆ: ಅವರು ಆ ಲೇಖನವನ್ನು ಅವಸರದಲ್ಲಿ ಓದಿರಬಹುದು ಎಂಬುದಾಗಿ ಭಾವಿಸುತ್ತೇನೆ. ಹಾಗೂ ತಮ್ಮ ಲೇಖನದಲ್ಲೇ ತಿಳಿಸಿದಂತೆ ತಮ್ಮ ತಲೆಯಲ್ಲಿ ನಮ್ಮ ಕುರಿತು ಅನುಮಾನಗಳನ್ನು ತುಂಬಿಕೊಂಡಿರುವುದರಿಂದ ಅವರಿಗೆ ಅಂಥ ಇಲ್ಲದ ಸಾಲುಗಳು ಕಾಣಿಸಿವೆ. ಆದರೆ ಅದಕ್ಕೆ ಏನೇ ಕಾರಣಗಳಿದ್ದರೂ ಪರಿಣಾಮವಂತೂ ಸುಳ್ಳು ಮಾಹಿತಿಯೇ.

ಇನ್ನು ಮೂರನೆಯದಾಗಿ ನನಗೆ ತೀವ್ರ ಖೇದವಾದ ವಿಷಯವೆಂದರೆ ಕುವೆಂಪು ನಿಲುವು ಬ್ರಾಹ್ಮಣ ವಿರೋಧ ಹಾಗೂ ದ್ವೇಷದ ಮೇಲೆ ನಿಂತಿದೆ ಎಂಬುದಾಗಿ ನಾನು ತೀರ್ಮಾನಿಸುತ್ತೇನೆ ಎಂಬ ತಪ್ಪು ಮಾಹಿತಿಯನ್ನು ನೀಡಿರುವುದು. ಇದನ್ನು ನಂಬಿದ ಸಂವಾದ ಪತ್ರಿಕೆಯವರು ಓದುಗರ ವಿಶೇಷ ಗಮನಕ್ಕಾಗಿ ಈ ಭಾಗವನ್ನು ದೊಡ್ಡ ಅಕ್ಷರಗಳಲ್ಲಿ ಹಾಕಿದ್ದು ಸ್ವಾಭಾವಿಕವಾಗೇ ಇದೆ. ನನ್ನ ಲೇಖನದ ವಿಚಾರಗಳು ನಾಗಭೂಷಣರಿಗೆ ಎಷ್ಟೇ ಅಪಥ್ಯವಾಗಿರಲಿ ಈ ರೀತಿಯ ಸುಳ್ಳುಗಳನ್ನು ಸೃಷ್ಟಿಸಿ ಅದನ್ನು ಎದುರಿಸುವ ತುರ್ತು ಏನಿರಬಹುದು? ಆದರೆ ನಾಗಭೂಷಣರು ಈ ಕೆಲಸವನ್ನು ಉದ್ದೇಶಪೂರ್ವಕವಾಗಿ ಖಂಡಿತಾ ಮಾಡಿರುವುದಿಲ್ಲ. ನಾನು ನಾಗಭೂಷಣರನ್ನು ಬಲ್ಲಂತೆ ಹೀಗೆ ಅರ್ಥೈಸುತ್ತೇನೆ: ಅವರು ಆ ಲೇಖನವನ್ನು ಅವಸರದಲ್ಲಿ ಓದಿರಬಹುದು ಎಂಬುದಾಗಿ ಭಾವಿಸುತ್ತೇನೆ. ಹಾಗೂ ತಮ್ಮ ಲೇಖನದಲ್ಲೇ ತಿಳಿಸಿದಂತೆ ತಮ್ಮ ತಲೆಯಲ್ಲಿ ನಮ್ಮ ಕುರಿತು ಅನುಮಾನಗಳನ್ನು ತುಂಬಿಕೊಂಡಿರುವುದರಿಂದ ಅವರಿಗೆ ಅಂಥ ಇಲ್ಲದ ಸಾಲುಗಳು ಕಾಣಿಸಿವೆ. ಆದರೆ ಅದಕ್ಕೆ ಏನೇ ಕಾರಣಗಳಿದ್ದರೂ ಪರಿಣಾಮವಂತೂ ಸುಳ್ಳು ಮಾಹಿತಿಯೇ. ಅದನ್ನು ಅವರು ಮತ್ತೆ ಓದಲಿ. ಹಾಗೇನಾದರು ಕಂಡುಬರದಿದ್ದರೆ ಅವರು ಮುಂದಿನ ಸಂಚಿಕೆಯಲ್ಲಿ ಈ ಕುರಿತು ತಪ್ಪೊಪ್ಪಿಗೆಯನ್ನು ಪ್ರಕಟಿಸಿ ನನ್ನ ಮೇಲಿರುವ ತಮ್ಮ ಗೌರವಾದರಗಳನ್ನು ಸಾಬೀತು ಪಡಿಸಿ ನನ್ನ ಗೌರವವನ್ನೂ ಅಷ್ಟಿಷ್ಟು ಉಳಿಸಲಿ.

ನಾನು ಕನ್ನಡದಲ್ಲಿ ಕುವೆಂಪು ಅವರ ಕುರಿತು ಕೆಲವು ಲೇಖನಗಳನ್ನು ಬರೆದಿದ್ದೇನೆ. ನಾಗಭೂಷಣರವರ ಒತ್ತಾಯದ ಮೇರೆಗೆ ಒಂದು ಲೇಖನವನ್ನು ಕೂಡಾ ಬರೆದಿದ್ದೆ. ಅಲ್ಲದೇ ನಾಗಭೂಷಣರು ಆಮಂತ್ರಿಸಿದರೆಂದು ಕೆಲವೆಡೆ ಭಾಷಣಗಳನ್ನೂ ಮಾಡಿದ್ದೇನೆ. ಅವುಗಳಲ್ಲಿ ಕೆಲವನ್ನು ಅವರು ಬಹುವಾಗಿ ಮೆಚ್ಚಿಕೊಂಡಿದ್ದರು ಕೂಡಾ. ಅಷ್ಟಲ್ಲದೇ ಅವರು ನನ್ನ ಗತ ಕಥನಕ್ಕೆ ಒಂದು ದೀರ್ಘ ವಿಮರ್ಶೆಯನ್ನು ಕೂಡಾ ಬರೆದಿದ್ದಾರೆ. ಈ ಎಲ್ಲಾ ಲೇಖನ ಭಾಷಣಗಳಲ್ಲೂ ಅವರು ಮೆಚ್ಚಿದ ವಿಚಾರಗಳು ಯಾವುವು, ಮೆಚ್ಚದ ವಿಚಾರಗಳು ಯಾವುವು? ಎಂಬುದರ ಕುರಿತೂ ನಾನು ಕುರುಡಾಗಿಲ್ಲ. ನಾಗಭೂಷಣ ಅವರ ಸಮಸ್ಯೆ ಏನು ಎಂಬುದರ ಕುರಿತು ನನಗೂ ಒಂದು ಕುತೂಹಲವಿದೆ. ಹಾಗಾಗಿ ಅವರಿಗೂ ಕೆಲವೊಂದು ವಿಚಾರಗಳು ರೋಮಾಂಚನವನ್ನುಂಟುಮಾಡುತ್ತವೆ ಹಾಗೂ ಕೆಲವೊಂದು ಮುಳ್ಳಾಗಿ ಚುಚ್ಚುತ್ತವೆ ಎಂಬುದರ ಕುರಿತೂ ಅವರ ಗಮನವಿರಲಿ. ಅದು ಮನುಷ್ಯ ಸಹಜ. ಆದರೆ ನನಗಿರುವ ಸಮಸ್ಯೆಯೆಂದರೆ, ನಾನು ಒಂದು ಗ್ರಹಿಕೆ ಹಾಗೂ ತರ್ಕವನ್ನು ಬಳಸಿ ನನ್ನ ವಿಚಾರಗಳನ್ನು ಹೇಳುತ್ತ ಹೋಗುವಾಗ ಈ ಎಲ್ಲಾ ವಿಚಾರಗಳೂ ಸುಸಂಗತ ಎನಿಸುವಂತೇ ಹೇಳುವ ಜರೂರು ಇರುತ್ತದೆ. ಇದರಲ್ಲಿ ಕೆಲವು ನಾಗಭೂಷಣರಿಗೆ ಒಪ್ಪಿಗೆಯಾಗಿ ಕೆಲವು ಏಕೆ ಬೇರೆ ಸಮಸ್ಯೆಗಳನ್ನು ಸೃಷ್ಟಿಸುತ್ತವೆ ಎಂಬುದಂತೂ ನನಗೆ ತಿಳಿಯದು. ಅವರು ತಮ್ಮ ಸಮಸ್ಯೆಯನ್ನು ನನ್ನ ವಿಚಾರಗಳ ಅಸಂಗತತೆಯನ್ನು ಎತ್ತಿ ತೋರಿಸಿ ಹೇಳಲಿ. ಅದಕ್ಕೆ ಬದಲಾಗಿ ಒಂದು ಆರೋಗ್ಯಪೂರ್ಣ ಚರ್ಚೆಯ ಸಾಧ್ಯತೆಯನ್ನೇ ಮುಚ್ಚಿಹಾಕುವ ಪ್ರಯತ್ನವೇಕೆ?

ಅವರು ಉಲ್ಲೇಖಿಸುವ ಪ್ರಸ್ತುತ ಲೇಖನವನ್ನು ನಾನು ಕನ್ನಡ ರೂಪದಲ್ಲೂ ತರುತ್ತೇನೆ. ಅದರಲ್ಲಿ ನಾನು ಮಾಡಿದ ವಾದವಿಷ್ಟೆ: ಕುವೆಂಪುರವರೇ ತಮ್ಮ 'ನೆನಪಿನ ದೋಣಿಯಲ್ಲಿ' ಆತ್ಮ ಚರಿತ್ರೆಯಲ್ಲಿ ಜಾತಿ ವ್ಯವಸ್ಥೆಯ ಕುರಿತು ಅಲ್ಲಲ್ಲಿ ಕೆಲವು ಹೇಳಿಕೆಗಳನ್ನು ಅವರ ಕಾಲದಲ್ಲಿ ಪ್ರಚಲಿತದಲ್ಲಿದ್ದ ವಿಚಾರಗಳ ರೂಪದಲ್ಲಿ ತಿಳಿಸುತ್ತಾರೆ. ಹಾಗೂ ಇಂದಿನ ಸಮಾಜಶಾಸ್ತ್ರವು ಈ ವಿಚಾರಗಳನ್ನು ಮೂಲೆಗೊತ್ತಿದೆ. ಆದರೆ ಈ ಸಮಾಜಶಾಸ್ತ್ರೀಯ ವಿಚಾರಗಳು ಕುವೆಂಪು ಜೀವನದಲ್ಲಿ ಅನುಭವ ಪ್ರಮಾಣಿತವಾಗಿವೆ ಎಂದು ಎಲ್ಲರೂ ಹೇಳುತ್ತಾರೆ. ಆದರೆ ಕುವೆಂಪು ಅವರು

ಚರ್ಚೆ

ಜಾತಿ ಧರ್ಮ ತಾರತಮ್ಯ

ಜಾತಿವ್ಯವಸ್ಥೆಯ ಕುರಿತು ಏನನ್ನು ಹೇಳುತ್ತಾರೆ ಎಂಬುದಕ್ಕೂ ಅವರ ಜೀವನ ಚಿತ್ರಣದಲ್ಲಿ ಅವರ ಅನುಭವಗಳಿಗೂ ಹೋಲಿಕೆ ಮಾಡಿದಾಗ ನಮಗೆ ಕಂಡುಬರುವ ಅಂಶಗಳು ಇವು: 1) ಅಲ್ಲಿ ಅಂಥದೊಂದು ವ್ಯವಸ್ಥೆ ನಮಗೆ ಕಂಡುಬರುವುದಿಲ್ಲ. 2) ಈ ವ್ಯವಸ್ಥೆಯ ಲಕ್ಷಣಗಳೆಂದು ಕುವೆಂಪುರವರು ಯಾವ ಯಾವ ಉದಾಹರಣೆಗಳನ್ನು ನೀಡುತ್ತಾರೋ, ಅದಕ್ಕೆ ವಿರುದ್ಧವಾದ ಅಷ್ಟೇ, ಅಥವಾ ಅದಕ್ಕೂ ಹೆಚ್ಚಿಗೆ ಉದಾಹರಣೆಗಳು ಅವರ ಬರವಣಿಗೆಯಲ್ಲೆ ಬರುತ್ತವೆ/ತೋರಿಸಬಹುದು. 3) ಹಾಗೂ ಈ ವ್ಯವಸ್ಥೆಯ ಕುರಿತ ಕಥನವು ಅಲ್ಲಿ ನಡೆಯುತ್ತಿರುವ ಘಟನೆಗಳ ಸಂಕೀರ್ಣತೆಯನ್ನು ಲೇಖಕರ ಅನುಭವಕ್ಕೆ ಬರದ ರೀತಿ ಕೆಲವೊಮ್ಮೆ ತಡೆಯುತ್ತವೆ. ಕುವೆಂಪುರವರ ಜೀವನ ಚರಿತ್ರೆಯ ಸ್ವರೂಪ ಏನೇ ಇರಬಹುದು. ಅವರ ಅತ್ಯಂತಿಕ ನಿಲುವುಗಳ ಕುರಿತೂ ನಾನಿಲ್ಲಿ ಹೇಳುತ್ತಿಲ್ಲ. ಈ ಕೃತಿಯಲ್ಲಿ ಅವರು ನೀಡುವ ಜಾತಿ ವ್ಯವಸ್ಥೆಯ ಕುರಿತ ಹೇಳಿಕೆಗಳು ಅವರ ಕಾದಂಬರಿಗಳಲ್ಲಿ ಕೂಡಾ ಹಾಗೇ ಬರುತ್ತವೆ. ಅವರಿಗೆ ಸಂಸ್ಕೃತ ಸಂಪ್ರದಾಯದ ಕುರಿತು ಏನು ಅಭಿಪ್ರಾಯವಿದ್ದಿತ್ತು ಎಂಬ ಕುರಿತು ನಾಗಭೂಷಣ ಅವರು ಮಾಡುವ ವಾದಗಳನ್ನು, ನಾನು 'ಕುವೆಂಪು ಒಂದು ಪುನರನ್ವೇಷಣೆ' ಗ್ರಂಥದಲ್ಲಿ (ನಾಗಭೂಷಣರೇ ಸಂಪಾದಿಸಿದ್ದು) ನನ್ನ ಒಂದು ಲೇಖನದಲ್ಲಿ ವಿಷದವಾಗಿ ಚರ್ಚಿಸಿದ್ದೇನೆ. ನಾಗಭೂಷಣರು ಅದಕ್ಕಿಂತಲೂ ಭಿನ್ನವಾದ ವಿಚಾರಗಳನ್ನೇನೂ ಇಲ್ಲಿ ಹೇಳಿಲ್ಲ. ಅವರಿಗಿಂತಲೂ ಚೆನ್ನಾಗಿ ನಾನು ಆ ಕೆಲಸ ಮಾಡಿದ್ದೇನೆ. ಹಾಗಾಗಿ ಅವು ನನ್ನ ಗಮನದಲ್ಲಿಲ್ಲ ಎನ್ನುವುದು ಸುಳ್ಳು. ಕುವೆಂಪು ಅವರ ಧಾಸಿಕ ಮಹತ್ವವನ್ನು ಕುರಿತೂ ನಾನು ಅದೇ ಲೇಖನದಲ್ಲಿ ಪ್ರಸ್ತುತ ಪಡಿಸಿದ್ದೇನೆ. ನನ್ನ ನೆನಪಿನ ದೋಣಿಯಲ್ಲಿ ಕುರಿತ ಲೇಖನಕ್ಕೂ ಈ ಮೇಲಿನ ಲೇಖನಗಳಿಗೂ ಯಾವುದೇ ವೈಚಾರಿಕ ವಿರೋಧಾಭಾಸಗಳು ಇಲ್ಲ. ನನ್ನ ಗ್ರಹಿಕೆ ಸ್ಪಷ್ಟತೆಯನ್ನು ಪಡೆದುಕೊಂಡಿರಬಹುದು ಅಷ್ಟೆ.

ಹಾಗೂ ಪ್ರಸ್ತುತ ಇಡೀ ಲೇಖನದಲ್ಲಿ ಎಲ್ಲೂ ಕುವೆಂಪು ಅವರಿಗೆ ಬ್ರಾಹ್ಮಣ ವಿರೋಧ ಅಥವಾ ದ್ವೇಷ ಇತ್ತು ಎಂಬ ಇಂಗಿತವನ್ನು ನಾನು ನೀಡಿಲ್ಲ. ತಾವು ಜಾತಿ ತಾರತಮ್ಯವನ್ನು ದ್ವೇಷಿಸುವುದಾಗಿ ಕುವೆಂಪು ಅವರೇ ಪು. 173–74 ರಲ್ಲಿ ಹೇಳಿಕೊಳ್ಳುವುದನ್ನು ಉದ್ಧರಿಸಿದ್ದೇನೆ ಹಾಗೂ ಅದರಲ್ಲಿ ಆಕ್ಷೇಪಾರ್ಹವಾದದ್ದೇನೂ ನನಗೆ ಕಾಣಿಸುವುದಿಲ್ಲ. ಅದು ಹೇಗೆ ನಾಗಭೂಷಣರು ಅದನ್ನು ಈ ಮೇಲಿನ ರೀತಿ ತಿರುಚಿದರು? ಇಡೀ ಲೇಖನದಲ್ಲಿ ಕುವೆಂಪುರವರಿಗೆ ಬ್ರಾಹ್ಮಣ ಸ್ನೇಹಿತರ ಜೊತೆಗಿದ್ದ ಧೋರಣೆಯ ಕುರಿತು ನಾನು ಇಟ್ಟ ಒಂದೇ ಒಂದು ಅಭಿಪ್ರಾಯ ಹೀಗಿದೆ: ಅದೆಂದರೆ ಕುಪ್ಪಳಿಗೆ ಬಂದ ಕೆಲವು ಬ್ರಾಹ್ಮಣ ಸ್ನೇಹಿತರು ಮೊದಮೊದಲು ಅವರ ಜೊತೆಗೆ ಸಹಭೋಜನವನ್ನು ಮಾಡದೇ ಪ್ರತ್ಯೇಕವಾಗಿ ಅಡುಗೆಯನ್ನು ಮಾಡಿಕೊಳ್ಳುತ್ತಿದ್ದ ಕುರಿತ ನೆನಪುಗಳನ್ನು ಅವರು ದಾಖಲಿಸಿದ್ದಾರೆ. ಅದನ್ನು ಉಲ್ಲೇಖಿಸಿ "However, the author never recalls these incidents with bitterness or aversion. He recognised their affection and help and revered his Brahmin teachers and seniors as a sincere student, and friend. The caste difference virtually played no role in these relations." ಎಂಬುದಾಗಿ ಬರೆದಿದ್ದೇನೆ. ಆದರೆ ಬಹುಬೇಗ ಈ ಪ್ರತ್ಯೇಕತೆಯು ಮಾಯವಾಗಿ ಕುಪ್ಪಳಿಯಲ್ಲಿ ಸಹಭೋಜನವು ಪ್ರಾರಂಭವಾಗಿಬಿಡುತ್ತದೆ ಎಂಬುದನ್ನೂ ಗಮನಿಸಬೇಕು. ನನಗಿರುವ ಪ್ರಶ್ನೆಯೆಂದರೆ, ಕುವೆಂಪು ಅವರಿಗೆ ಅಷ್ಟೊಂದು ಬ್ರಾಹ್ಮಣ ಹಿತೈಷಿಗಳು, ಆತ್ಮೀಯರು ಇದ್ದೂ, ಅವರ ಗೆಳೆಯರ ಬಳಗದಲ್ಲಿ ಅವರೇ ಹೆಚ್ಚು ಜನರಿದ್ದೂ, ಶೂದ್ರರು ಸ್ವಯಂಪ್ರೇರಿತರಾಗಿ ಬ್ರಾಹ್ಮಣ ಪುರೋಹಿತರನ್ನು ಆಶ್ರಯಿಸುತ್ತಿದ್ದುದನ್ನು ಅವರು ಗುರುತಿಸಿಯೂ, ಹಾಗೂ ತಮ್ಮ ಬಾಲ್ಯದ ಅನುಭವವು ತಾವೇ ಹೇಳುವ ಜಾತಿವ್ಯವಸ್ಥೆಯ ಲಕ್ಷಣಕ್ಕೆ ವ್ಯತಿರಿಕ್ತವಾಗಿದ್ದೂ, ಅದರಿಂದ ಅಭಾದಿತವಾಗಿ ನಿಲ್ಲುವ ಈ ವ್ಯವಸ್ಥೆಯ ಕಲ್ಪನೆಯನ್ನೂ ಅವರು ಹೊಂದಿದ್ದರು. ಈ ಕಲ್ಪನೆಯು ಅವರ ವಯಕ್ತಿಕ ಜೀವನದಲ್ಲಿ ಜನರ ಜೊತೆಗಿನ ಒಡನಾಟವನ್ನು ಪ್ರಭಾವಿಸಿರಲಿಲ್ಲ ಎಂಬುದು ಅವರ ಜೀವನ ಚಿತ್ರಣದಲ್ಲೇ ವ್ಯಕ್ತವಾಗುತ್ತದೆ. ಹಾಗಾಗಿ ಇದನ್ನು ಕೇವಲ ಒಂದು ವಿವರಣೆಯ ವೈಚಾರಿಕ ಚೌಕಟ್ಟು ಎಂಬಂತೇ ಅವರು ಸ್ವೀಕರಿಸಿದ್ದೂ ಸ್ಪಷ್ಟವಾಗಿಯೇ ಇದೆ ಹಾಗೂ ಈ ಚೌಕಟ್ಟಿನ ಮೂಲ ಸಮಾಜಶಾಸ್ತ್ರೀಯ ಸಿದ್ಧಾಂತಗಳೇ ಎಂಬುದೂ ಸ್ಪಷ್ಟ. ನನ್ನ ಗುರಿಯಿರುವುದು ಆ ಸಮಾಜಶಾಸ್ತ್ರೀಯ ಸಿದ್ಧಾಂತವು ಎಷ್ಟು ವಾಸ್ತವಿಕವಾಗಿದೆ ಹಾಗೂ ಅದರ ಮಿತಿಗಳೇನು ಎಂಬದನ್ನು ಪರೀಕ್ಷಿಸುವುದು. ಆ ಮಟ್ಟಿಗೆ ನಾನು ಕುವೆಂಪುರವರಿಗೆ ಋಣಿಯಾಗಿದ್ದೇನೆ, ಏಕೆಂದರೆ ಕುವೆಂಪು ಅವರಿಗೆ ತಾವು ಒಪ್ಪಿಕೊಂಡ ವಿವರಣೆಗೆ ತಮ್ಮ ನೆನಪಿನ ದೋಣಿ ದೃಷ್ಟಾಂತವಾಗಬೇಕೆಂಬ ಹಠವಿರಲಿಲ್ಲ. ಅವರು ತಮ್ಮ ಅನುಭವವನ್ನು ಮುಕ್ತವಾಗಿ ಹೇಳಿಕೊಂಡು ಸಾಗಿದ್ದಾರೆ.

ಇನ್ನು ಕೊನೆಯ ಭಾಗದಲ್ಲಿ ನಾಗಭೂಷಣರು ನೀಡಿದ ಎಚ್ಚರಿಕೆಯ ಮಾತು ಅವರಂಥವರಿಗೆ ಭೂಷಣವಲ್ಲ. ನಮ್ಮ ಕೇಂದ್ರವು ತನ್ನ ಗುರಿ ಮುಟ್ಟಲು ಇಷ್ಟು ಅವಸರದ ಹೆಜ್ಜೆಗಳನ್ನು ಇಡಬಾರದು ಹಾಗೂ ಮುಗ್ಗರಿಸಿ ಬೀಳುವ ಅಪಾಯವನ್ನು ಸ್ವತಃ ಹೇಗೆ ತಾವೇ ಆಹ್ವಾನಿಸಿಕೊಳ್ಳಬಾರದು ಎಂಬುದಾಗಿ ನಾಗಭೂಷಣರು ಎಚ್ಚರಿಕೆಯ ಮಾತನ್ನು ಹೇಳಿದ್ದಾರೆ. ಯಾವುದು ಅವಸರದ ಹೆಜ್ಜೆ? ವರ್ಷಾನುಗಟ್ಟಲೆ ಸಂಶೋಧನೆಯಲ್ಲಿ ತೊಡಗಿಸಿಕೊಂಡು ಒಂದು ಲೇಖನವನ್ನು ಬರೆಯುವುದೋ ಇಲ್ಲ ಅದಕ್ಕೆ ಇಷ್ಟು ಅವಸರದ ಪ್ರತಿಕ್ರಿಯೆಯನ್ನು ನೀಡುವುದೊ? ಯಾವುದು ನಮ್ಮ ಗುರಿ? ನಮ್ಮ ಗುರಿ ಸಂಶೋಧನೆಯೇ ಹೌದಾದರೆ ನಾಗಭೂಷಣರ ಇಂಥ ಲೇಖನಗಳಿಂದಂತೂ ಅದು ಮುಗ್ಗರಿಸುವ ಪ್ರಶ್ನೆಯೇ ಇಲ್ಲ. ಹಾಗಾಗಿ ಅವರಿಗೆ ಈ ಕುರಿತು ಆತಂಕ ಬೇಡ. ಅವರು ನಮ್ಮ ಸಂಶೋಧನೆಯಲ್ಲಿ ಪುರೋಹಿತಶಾಹಿಯ ಸಂಚನ್ನು ಹುಡುಕುವ ಅವಸರದಲ್ಲಿ ಅದನ್ನು ತಾವೇ ಮೈಮೇಲೆ ಆಹ್ವಾನಿಸಿಕೊಂಡಂತೇ ಕಾಣುತ್ತದೆ. ಈಗ ಬಹಳ ವರ್ಷದ ಹಿಂದೆ ನಮ್ಮ ವಿಶ್ವವಿದ್ಯಾನಿಲಯಕ್ಕೆ ಬಂದ ಕುವೆಂಪು ಶಿಷ್ಯರೊಬ್ಬರು ಕುವೆಂಪು ಕುರಿತು ವಿಮರ್ಶೆಯನ್ನು ಬರೆದವರೊಬ್ಬರನ್ನು ಉಲ್ಲೇಖಿಸಿ 'ಅಂಥವರನ್ನು ಹಿಡಿದು ಹೊಡೆಯಬೇಕು' ಎಂದು ಕರೆ ಕೊಟ್ಟಿದ್ದರು. ನಾಗಭೂಷಣರ ಉತ್ಸಾಹವೂ ಇದಕ್ಕಿಂತ ಬೇರೆಯೆಂದು ನನಗನ್ನಿಸುವುದಿಲ್ಲ. ಇದನ್ನು ನನ್ನ ಅವ್ರರಿಗೆ ವಿಷಾದದಿಂದ ತಿಳಿಸುತ್ತಿದ್ದೇನೆ.

> ಲೇಖನದಲ್ಲಿ ಎಲ್ಲೂ ಕುವೆಂಪು ಅವರಿಗೆ ಬ್ರಾಹ್ಮಣ ವಿರೋಧ ಅಥವಾ ದ್ವೇಷ ಇತ್ತು ಎಂಬ ಇಂಗಿತವನ್ನು ನಾನು ನೀಡಿಲ್ಲ. ತಾವು ಜಾತಿ ತಾರತಮ್ಯವನ್ನು ದ್ವೇಷಿಸುವುದಾಗಿ ಕುವೆಂಪು ಅವರೇ ಪು. 173–74 ರಲ್ಲಿ ಹೇಳಿಕೊಳ್ಳುವುದನ್ನು ಉದ್ಧರಿಸಿದ್ದೇನೆ ಹಾಗೂ ಅದರಲ್ಲಿ ಆಕ್ಷೇಪಾರ್ಹವಾದದ್ದೇನೂ ನನಗೆ ಕಾಣಿಸುವುದಿಲ್ಲ. ಅದು ಹೇಗೆ ನಾಗಭೂಷಣರು ಅದನ್ನು ಈ ಮೇಲಿನ ರೀತಿ ತಿರುಚಿದರು?

ಒಟ್ಟಾರೆಯಾಗಿ ನಮ್ಮ ವಾದದ ಕುರಿತು ಸಂವಾದದಲ್ಲಿ ಪ್ರತಿಕ್ರಿಯಿರುತ್ತಿರುವವರಿಗೆ ಏನು ಸಮಸ್ಯೆಯಿದೆ ಎಂಬುದು ಕೊನೆಗೂ ನಮಗೆ ನಿಗೂಢವಾಗಿದೆ. ಇದರಲ್ಲಿ ಹೊಸತೇನಿದೆ ಎಂದು ಒಬ್ಬರು ಕೇಳುತ್ತಾರೆ. ರಮೇಶ ಬಾಯಿರಿಯವರಂತೂ ನಾವು ತಿಳಿಸುವ ಜಾತಿ ವ್ಯವಸ್ಥೆಯ ಕಲ್ಪನೆಯು ಈಗ ಇಲ್ಲ ಎನ್ನುತ್ತಾರೆ. ಆದರೆ ಅವರಿಗಿರುವ ಸಮಸ್ಯೆಯೆಂದರೆ ಇದನ್ನು ಆಧರಿಸಿ ನಾವು ಏನೋ ಹೊಸದಾಗಿ ಹೇಳುತ್ತಿದ್ದೇವೆ ಎಂಬಂತೆ ತೋರಿಸಿಕೊಳ್ಳುತ್ತಿದ್ದೇವೆ ಎಂಬುದು. ಅವರು ಈ ವಿಷಯವನ್ನು ತಿಳಿಸಲು ನಮ್ಮ ಗುಂಪಿನ ಕುರಿತು ಅಪ್ರಸ್ತುತವಾಗಿ ಹಾಗೂ ಅವಹೇಳನಕಾರಿಯಾಗಿ ಮಾತನಾಡಬೇಕಾಗುತ್ತದೆ. (ಇದನ್ನೂ ಅವರು ತಮ್ಮ ಜಾತಿ ಸಂಶೋಧನೆಯಿಂದಲೇ ಕಲಿತರೊ?) ಆಯಿತು, ಇಲ್ಲಿ ಹೊಸದೇನೂ ಇಲ್ಲ ಎಂದರೆ ಇಷ್ಟೆಲ್ಲ ಕೋಲಾಹಲವೇಕೆ? ಬಾಯಿರಿಯವರು ಈ ಅಮೂಲ್ಯ ವಿಚಾರವನ್ನು ತಮ್ಮ ಗೆಳೆಯರಿಗೇ ತಿಳಿಸಿದ್ದರೆ ಅವರ ಆತಂಕ ಸ್ವಲ್ಪವಾದರೂ ಕಡಿಮೆಯಾಗುತ್ತಿತ್ತು. ನಾನು ಗಮನಿಸಿದ ಮತ್ತೊಂದು ವಿಚಾರವೆಂದರೆ ಪ್ರತಿಕ್ರಿಯಿಸಿದವರು ಬಾಲಗಂಗಾಧರ ಅವರ ವಾದವನ್ನು ಎದುರಿಸಲು ಒಂದೆಡೆ ವಸಾಹತೋತ್ತರವಾದಕ್ಕೆ ಪ್ರತಿಯಾಗಿ ಬಂದ ಟೀಕೆಗಳನ್ನು ತಂದು ಪ್ರಯೋಗಿಸುತ್ತಾರೆ ಮತ್ತೊಂದೆಡೆ ಯಾವುದೇ ಎಗ್ಗಿಲ್ಲದೇ ವಸಾಹತುವಾದಕ್ಕೆ ಪ್ರತಿಯಾಗಿ ಬಂದ ವಸಾಹತೋತ್ತರವಾದೀ ಟೀಕೆಗಳನ್ನೂ ಪ್ರಯೋಗಿಸುತ್ತಾರೆ. ಈ ಯಾವ ಸಿದ್ಧ ಟೀಕೆಗಳೂ ಬಾಲಗಂಗಾಧರ ಅವರ ವಾದಕ್ಕೆ ಉತ್ತರವಾಗುವುದಿಲ್ಲ. ಏಕೆಂದರೆ ಈ ಟೀಕೆಗಳನ್ನು ಗಮನದಲ್ಲಿಟ್ಟೇ ಅವರ ವಾದವು ಬೆಳೆದಿದೆ. ಹಾಗಾದರೆ ನಮ್ಮ ವಿಚಾರಕ್ಕೆ ಸಂಬಂಧಿಸಿದ ಸಮಸ್ಯೆ ಏನು ಎಂಬುದನ್ನು ಸರಿಯಾಗಿ ಗುರುತಿಸದೇ ಏಕೆ ಈ ವಾಗ್ವಾದ? ಇದೆಲ್ಲಕ್ಕಿಂತ ಬೇಸರ ತರಿಸುವ ವಿಷಯವೆಂದರೆ ನಮ್ಮ ಉದ್ದೇಶದ ಕುರಿತು ತಪ್ಪು ಕಲ್ಪನೆಗಳನ್ನು ಹಾಗೂ ಸಂದೇಹಗಳನ್ನು ಹುಟ್ಟುಹಾಕುವುದು. ನನ್ನ ಗೆಳೆಯ ನಾಗಭೂಷಣರ ಲೇಖನವೇ ಅದಕ್ಕೆ 'ಒಂದು ಉದಾಹರಣೆ' ಒಟ್ಟಾರೆಯಾಗಿ ಇಲ್ಲಿ ನಮ್ಮ ವಿಚಾರಗಳನ್ನು ಗುರಿಯಾಗಿಟ್ಟುಕೊಳ್ಳಲಾಗಿದೆಯೋ, ಇಲ್ಲ ಬೇರೇನನ್ನೋ ಎನ್ನುವ ಪ್ರಶ್ನೆ ನನ್ನದು. □

ದ್ರಾವಿಡ ಸಂಸ್ಕೃತಿಯ ಕಿಚ್ಚು ಹಚ್ಚಿದ ಪೆರಿಯಾರ್ ಎಂಬ ಕ್ರಾಂತಿಕಾರಿಯ ಅನಿವಾರ್ಯತೆ?

ಜೆ. ಜೆ. ಅಮರ್

ಪೆರಿಯಾರ್‌ರವರು ಬ್ರಾಹ್ಮಣಶಾಹಿ ದಬ್ಬಾಳಿಕೆ, ಹಾಗೂ ಉತ್ತರ ಭಾರತದ ಆಕ್ರಮಣವನ್ನು ಸತತವಾಗಿ ವಿರೋಧಿಸಿದ್ದರು. ಇದರೊಂದಿಗೆ ಹಿಂದಿ ವಿರೋಧಿ ಚಳುವಳಿಯನ್ನು ಕೈಗೊಂಡಿದ್ದರು. ಬ್ರಾಹ್ಮಣಶಾಹಿ ಸಂಸ್ಕೃತಿ ಹಾಗೂ ಅದರ ಅತಿಕ್ರಮಣ ತಮಿಳುನಾಡಿನಲ್ಲಿ ತೀವ್ರವಾದಂತಹ ಸಂದರ್ಭದಲ್ಲಿಯ ಮೂಲ ತಮಿಳು ಸಂಸ್ಕೃತಿಯನ್ನು ಅನಾವರಣಗೊಳಿಸಲು ಸಿದ್ದರಾದರು. ಜಾತಿ ವ್ಯವಸ್ಥೆಗೆ ಕಾರಣವಾದ ವೈದಿಕ ಮನೋಧರ್ಮವನ್ನು ಪ್ರಶ್ನಿಸುವತ್ತ ಯುವ ಜನತೆಯನ್ನು ವೈಚಾರಿಕ ಬರಹಗಳ ಮೂಲಕ ಎಚ್ಚರಿಸಿದರು. ೧೯೨೫ ರಲ್ಲಿ "ಆತ್ಮಗೌರವ" ಚಳವಳಿಯನ್ನು ಉದ್ದೀಪಿಸಿದವರು. ೯೪ರ ವಯಸ್ಸಿನಲ್ಲಿಯೂ ಸಾಮಾಜಿಕ ಹಾಗೂ ರಾಜಕೀಯ ಚಳವಳಿಯ ಬಗ್ಗೆ ಬತ್ತದ ಉತ್ಸಾಹ ಹೊಂದಿದ ಚೈತನ್ಯದ ಚಿಲುಮೆಯಾಗಿದ್ದರು ಪೆರಿಯಾರ್. ಪೆರಿಯಾರ್‌ರವರು ೧೮೭೯ ಸೆಪ್ಟೆಂಬರ್ ೧೭ ರಂದು ತಮಿಳುನಾಡಿನ ಈ ರೋಡಿನ ಕನ್ನಡ ನಾಯ್ಡು ಮನೆತನದಲ್ಲಿ ಜನಿಸಿದರು.

ಜಾಗತೀಕರಣ ತೀವ್ರಗೊಳ್ಳುತ್ತಿದೆ. ಅದರ ಜೊತೆ ಜೊತೆಯಲ್ಲಿ ಹಿಂದುತ್ವದ ಭಜನೆ ಮಾಡುತ್ತ ಪುರೋಹಿತಶಾಹಿ ವರ್ಗವೊಂದು ಎಂದಿಗಿಂತ ಇಂದು, ಚೆನ್ನಾಗಿ ಮೇಯುತ್ತಾ, ತಲೆ ತಲಾಂತರದಿಂದ ಸಾಮಾಜಿಕವಾಗಿ ಕೀಳರಿಮೆಯಿಂದ ನರಳುತ್ತಿರುವ ಅವಕಾಶಗಳಿಂದ ವಂಚಿತರಾಗಿರುವ ಶೂದ್ರ, ದಲಿತರಿಗೆ ಹಿಂದುತ್ವದ ಅಮಲೇರಿಸುತ್ತಾ ಅವರೆಲ್ಲರ ಅಜ್ಞಾನದಿಂದ ರಾಜಕೀಯ ದಾಳಗಳನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತಾ ಖಾಸಗೀಕರಣದ ಮಂತ್ರ ಜಪಿಸಿ ಮೀಸಲಾತಿಯನ್ನು ಮೂಲೆಗೆಸೆದು ಬಡವ ಶ್ರೀಮಂತರ ನಡುವೆ ವ್ಯತ್ಯಾಸ ವಿಸ್ತಾರಗೊಳ್ಳುತ್ತಿರುವಾಗ ಈ ಪುರೋಹಿತಶಾಹಿ ವರ್ಗ ಮಧ್ಯದಲ್ಲಿ ನಿಂತು ಮೋಜು ನೋಡುತ್ತಿರುವುದು ಪರಿಸ್ಥಿತಿಯ ವಿಪರ್ಯಾಸವಲ್ಲದೆ ಮತ್ತೇನು?

ಕುವೆಂಪುರವರ ಜಲಗಾರ ನಾಟಕದಲ್ಲಿಯ ಒಂದು ಮಾತು ಅದೆಷ್ಟು ನಿಜ!

'ಮೊದಲ ರಕ್ಕಸು ಮೊದಲ ಬೆಪ್ಪನಂ ಸಂಧಿಸಲು
ಸಂಭವಿಸಿತೆಂಬರೀ ಮತ ಎಂಬ ಮತಿವಿಕಾರಂ
ದೊರೆ ಪುರೋಹಿತರ್ ಅವಳಿ ಮೊಲೆಯೂಡಿಸಿ
-ಸಲಹಿದರದಂ
ಮತದ ಮದಿರೆಯನೀಂಟೆ ಮಂಕುಬಡಿದಿದೆ ಜನಕೆ
ಕೊನೆಯ ದೊರೆಯ ಕೊರಳಿಗಾ ಕೊನೆ ಪುರೋಹಿತನ ಕರುಳ್
ಉರುಳಾಗುವವರೆಗೆ ಸುಖವಿಲ್ಲ ಧರೆಗೆ!

ಪೆರಿಯಾರ್‌ರವರು ಬ್ರಾಹ್ಮಣಶಾಹಿ ದಬ್ಬಾಳಿಕೆ, ಹಾಗೂ ಉತ್ತರ ಭಾರತದ ಆಕ್ರಮಣವನ್ನು ಸತತವಾಗಿ ವಿರೋಧಿಸಿದ್ದರು. ಇದರೊಂದಿಗೆ ಹಿಂದಿ ವಿರೋಧಿ ಚಳವಳಿಯನ್ನು ಕೈಗೊಂಡಿದ್ದರು. ಬ್ರಾಹ್ಮಣಶಾಹಿ ಸಂಸ್ಕೃತಿ ಹಾಗೂ ಅದರ ಅತಿಕ್ರಮಣ ತಮಿಳುನಾಡಿನಲ್ಲಿ ತೀವ್ರವಾದಂತಹ ಸಂದರ್ಭದಲ್ಲಿಯೇ ಮೂಲ ತಮಿಳು ಸಂಸ್ಕೃತಿಯನ್ನು ಅನಾವರಣಗೊಳಿಸಲು ಸಿದ್ದರಾದರು. ಜಾತಿ ವ್ಯವಸ್ಥೆಗೆ ಕಾರಣವಾದ ವೈದಿಕ ಮನೋಧರ್ಮವನ್ನು ಪ್ರಶ್ನಿಸುವತ್ತ ಯುವ ಜನತೆಯನ್ನು ವೈಚಾರಿಕ ಬರಹಗಳ ಮೂಲಕ ಎಚ್ಚರಿಸಿದರು. ೧೯೨೫ ರಲ್ಲಿ "ಆತ್ಮಗೌರವ" ಚಳವಳಿಯನ್ನು ಉದ್ದೀಪಿಸಿದವರು. ೯೪ರ ವಯಸ್ಸಿನಲ್ಲಿಯೂ ಸಾಮಾಜಿಕ ಹಾಗೂ ರಾಜಕೀಯ ಚಳವಳಿಯ ಬಗ್ಗೆ ಬತ್ತದ ಉತ್ಸಾಹ ಹೊಂದಿದ ಚೈತನ್ಯದ ಚಿಲುಮೆಯಾಗಿದ್ದರು ಪೆರಿಯಾರ್.



ಇ.ವಿ. ರಾಮಸ್ವಾಮಿ ನಾಯ್ಕರ್ ಪೆರಿಯಾರ್‌ರವರು ೧೮೭೯ ಸೆಪ್ಟೆಂಬರ್ ೧೭ ರಂದು ತಮಿಳುನಾಡಿನ ಈ ರೋಡಿನ ಕನ್ನಡ ನಾಯ್ಡು ಮನೆತನದಲ್ಲಿ ಜನಿಸಿದರು. ಇವರದು ಶ್ರೀಮಂತ ಹಾಗೂ ಸಂಪ್ರದಾಯ ಕುಟುಂಬ. ಓದಿದ್ದು ಅಲ್ಪವಾದರು ಸಂಪಾದಿಸಿದು ಪ್ರಾಪಂಚಿಕ ಜ್ಞಾನ ಅಪಾರ. "ಪವಿತ್ರ ನಗರ" ಬನಾರಸಿನಲ್ಲಿ ಪುರೋಹಿತಶಾಹಿಗಳ ಅಸಹ್ಯ ವರ್ತನೆಗಳಿಂದ ಕ್ಷುದ್ರರಾದ ಪೆರಿಯಾರ್ ಪುರೋಹಿತಶಾಹಿ ಶೋಷಣೆಯ ಬಗ್ಗೆ ತಮ್ಮ ಧ್ವನಿ ಎತ್ತಿದರು.

ಖಾದಿ, ಗ್ರಾಮೋದ್ಯೋಗ, ಅಸ್ಪೃಶ್ಯತೆ ನಿವಾರಣೆ, ವಿಧವಾ ವಿವಾಹ, ಮಹಿಳಾ ಹಕ್ಕುಗಳು,

ಪುರೋಹಿತಶಾಹಿಗಳ (ಬ್ರಾಹ್ಮಣರ) ವಿರೋಧಿ ನಿಲುವು ಇವೆಲ್ಲಾ ಹುಟ್ಟು ಕ್ರಾಂತಿಕಾರಿಯೊಬ್ಬನಿಗೆ ಮಾತ್ರ ಸಾಧ್ಯ. ಶೂದ್ರಪರ ವಿಚಾರಗಳನ್ನು ಪ್ರಚಾರ ಮಾಡಲಿಕ್ಕಾಗಿಯೆ ಪತ್ರಿಕೆಯೊಂದರ ಅಗತ್ಯ ಮನಗಂಡರು.

ದಲಿತರಿಗೆ ದೇವಾಲಯ ಪ್ರವೇಶದ ಹಕ್ಕು, ಎಲ್ಲಾ ಜಾತಿಯವರಿಗೂ ಪೌರೋಹಿತ್ಯದ ಅವಕಾಶ. ೧೯೩೭ರಲ್ಲಿ ಕೇರಳದ ವೈಶಂನಲ್ಲಿ ನಡೆದ ದಲಿತರ ದೇವಾಲಯ ಪ್ರವೇಶ ಮುಂದೆ ದೇವಾಲಯ ಪ್ರವೇಶ ಕಾಯಿದೆಗೆ ಎಡೆಕೊಟ್ಟಿತು. ವೈಶಂ ಸತ್ಯಾಗ್ರಹಕ್ಕೆ ಸಂಬಂಧಪಟ್ಟಂತೆ ಗಾಂಧಿ ಹಾಗೂ ಪೆರಿಯಾರ್ ನಾಯಕತ್ವದ ಬಗೆಗಿನ ವೈರುಧ್ಯದ ವರದಿಗಳು ಚರಿತ್ರೆಗೆ ಸಂದಾಯವಾಗಿದೆ. ಗಾಂಧಿ ಪಕ್ಷಪಾತಿಗಳು ವೈಶಂ ಸತ್ಯಾಗ್ರಹದ ಸಂದರ್ಭದಲ್ಲಿ ಪೆರಿಯಾರರ ಹೆಸರನ್ನು ದಾಖಲಿಸಲಿಲ್ಲ. ಆದರೆ ತಮಿಳು ಮೂಲಗಳು ಅವರನ್ನು 'ವೈಶಂನ ನಾಯಕ' ಎಂದೆ ಕರೆದವು. ಇದು ಗಾಂಧಿ ಅಂಬೇಡ್ಕರ ನಡುವಿನ ವೈರುದ್ಯಗಳಂತೆ ಕಾಣುತ್ತದೆ. ಅಸ್ಪೃಶ್ಯರನ್ನು ಹಿಂದೂ ಧಾರ್ಮಿಕ ವಲಯದಲ್ಲಿ ತರಲು ಪ್ರಯತ್ನಿಸುತ್ತಿದ್ದ ಗಾಂಧೀಜಿಯವರಿಗೆ ವಿರುದ್ಧವಾಗಿ ಪೆರಿಯಾರರು ಜಾತೀಯತೆಯನ್ನು ಪ್ರತಿಪಾದಿಸುವ ಹಿಂದುತ್ವವನ್ನು ವಿರೋಧಿಸಿದರು. ೧೯೩೮ರಲ್ಲಿ ಜೈಲಿನಲ್ಲಿದ್ದರೂ ಜಸ್ಟೀಸ್ ಪಕ್ಷದ ಅಧ್ಯಕ್ಷ ಹುದ್ದೆಗೆ ಆಯ್ಕೆಯಾದರು. ಮೀಸಲಾತಿ ಸ್ಪರ್ಧೆ ಹಾಗೂ ಪ್ರತಿಭೆಯ ಆಧಾರದ ಮೇಲಲ್ಲ ಸಮುದಾಯದ ಸಂಖ್ಯೆಯ ಆಧಾರದ ಮೇಲೆ ಎಂದು ಬಲವಾಗಿ ಪ್ರತಿಪಾದಿಸಿದರು. ಪೆರಿಯಾರರ ಬ್ರಾಹ್ಮಣ ವಿರೋಧಿ ನಿಲುವು ಅದೆಷ್ಟು ತೀವ್ರವಾಗಿತ್ತೆಂದರೆ ೧೯೩೭ರ ಚುನಾವಣೆಯಲ್ಲಿ 'ಜಸ್ಟೀಸ್ ಪಕ್ಷ' 'ಸ್ವರಾಜ್ಯವಾದಿಗಳು' ಹಾಗೂ 'ಹೋಂ ರೂಲ್' ಚಳವಳಿಗಾರರು ವಿರೋಧಿಸಿ ಸೋತು "ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಏಜೆಂಟ್ ಎಂದು ಕರೆಸಿಕೊಂಡರು. ಆದರೆ ಶೂದ್ರ ಶಕ್ತಿಗಳನ್ನು ಒಂದುಗೂಡಿಸುವಲ್ಲಿ ಹಾಗೂ ಅವರಲ್ಲಿ ಆತ್ಮಗೌರವ ತುಂಬುವುದರಲ್ಲಿ ಯಶಸ್ವಿಯಾದರು.

ಇಂದಿನ ಹಿಂದುತ್ವವಾದಿ ರಾಜಕಾರಣದ ವಿರುದ್ಧ ಸಮರ್ಥವಾಗಿ ಹೋರಾಡಬಲ್ಲ ಯಾವುದೇ ಪಕ್ಷಗಳು, ನಾಯಕರು ಪೆರಿಯಾರರ ವಿಚಾರಗಳನ್ನು ಎಂದಿಗಿಂತ ಇಂದು ಅಧ್ಯಯನ ಮಾಡುವುದು ಸಾಂಧರ್ಭಿಕ ಎನ್ನಿಸುತ್ತದೆ. ತಮಿಳುನಾಡಿನ ಅಂದಿನ ಸಂದರ್ಭವೇ ಇಂದು ಕರ್ನಾಟಕದಲ್ಲಿದೆ ವ್ಯವಹಾರದ ವಲಯಗಳಲ್ಲಿ ಉತ್ತರ ಭಾರತೀಯರ (ಆರ್ಯರ) ಬೌದ್ಧಿಕ ಹಾಗೂ ಆರ್ಥಿಕ ಹಿಡಿತ ಹೆಚ್ಚುತ್ತಿದೆ. ಈ

ನೆಲದ ಮಕ್ಕಳು ಭೂಮಿ ಕಳೆದುಕೊಂಡು ಎಸ್.ಇ.ಜಡ್ ನಂತಹ ನೇಣುಗಂಬಕ್ಕೆ ಶರಣಾಗಬೇಕಾಗಿದೆ. ಒಂದೆಡೆ ಬಂಡವಾಳ ಶಾಹಿಗಳು ಮತ್ತೊಂದೆಡೆ ಪುರೋಹಿತರು ಇವರ ನಡುವೆ ಬಡವನ ಬದುಕನ್ನು ಕೇಳುವವನೇ ಇಲ್ಲದಂತಾಗಿದೆ. ಸತ್ಯ ಬಂಡವಾಳ ಶಾಹಿಗಳ ಹಿಡಿತದಲ್ಲಿದ್ದರೆ, ಪ್ರಜಾಪ್ರಭುತ್ವದ ಪ್ರತಿಭಟನೆಗಳ ಕಿಂಚಿತ್ತು ಗೌರವ ಸಿಗಬಹುದೆಂಬ ನಂಬಿಕೆ ಹುಸಿಯಾಗುತ್ತಿದೆ. ಇಡೀ ವ್ಯವಸ್ಥೆ ನಾಯಕತ್ವದ ಕೊರತೆಯಿಂದ ನಲುಗುತ್ತಿದೆ. ಮೌಲ್ಯಗಳೆಲ್ಲಾ ಹಣಕ್ಕೆ ಹರಾಜಾಗಿದೆ.

ಸಮಾಜದಲ್ಲಿ ಪ್ರಗತಿ ಹಾಗೂ ನ್ಯಾಯ ಬೇಕೆಂದರೆ ಧರ್ಮವನ್ನು ಅಳಿಸಬೇಕು ಎಂದವರು ಪೆರಿಯಾರ್. ಅವರದೇ ಶಿಲ್ಪಾಕೃತಿಯಿರುವ ತಿರುಚನಾಪಳ್ಳಿಯ ಸಾರಕವು ಹೇಳುವ ಮಾತು "ದೇವರಅಸ್ತಿತ್ವವೇಯಿಲ್ಲ. ದೇವರನ್ನು ಸೃಷ್ಟಿಸಿದವನು ಮೂರ್ಖ, ದೇವರನ್ನು ಪ್ರತಿಪಾದಿಸುವವನು ವಂಚಕ, ಹಾಗೂ ದೇವರನ್ನು ಪೂಜಿಸುವವನು ಅನಾಗರಿಕ" ಪೆರಿಯಾರ್ ಒಬ್ಬ ಆಕ್ರಮಣಕಾರಿ ನಾಸ್ತಿಕರಾಗಿದ್ದರು. ಧರ್ಮವೆಂದರೆ ಪ್ರಾಮಾಣಿಕತೆ, ಶಾಂತಿ, ಸ್ವಾತಂತ್ರ್ಯ ಮತ್ತು ಭ್ರಾತೃತ್ವ ವಿಧಿ, ದೈವೇಚ್ಛೆ, ಅಥವಾ ಸ್ವರ್ಗವಾಸಿಗಳಾಗುವುದಲ್ಲ ಎಂದು ನುಡಿದವರು. "ವೈಚಾರಿಕತೆಯ ಆಧಾರದ ಮೇಲೆ ಯಾವ ಧರ್ಮವೂಯಿರಲು ಸಾಧ್ಯವಿಲ್ಲ "ಧರ್ಮವೆಂದರೆ ಮೂಢನಂಬಿಕೆಯನ್ನು ಒಪ್ಪಿಕೊಳ್ಳುವುದು ಎಂದರ್ಥ".

ಹಿಂದೂ ಧರ್ಮದಲ್ಲಿರುವ ಜಾತೀಯತೆ, ಅಸ್ಪೃಶ್ಯತೆಯನ್ನು ವಿರೋಧಿ ಮತಾಂತರದಲ್ಲಿ ತಪ್ಪೇನಿದೆ' ಎಂದರು. ಹೀಗೆ ಪೆರಿಯಾರರ ವಿಚಾರಗಳ ಪ್ರಸ್ತುತ ರಾಜಕೀಯ, ಸಾಮಾಜಿಕ ಸಂದರ್ಭದಲ್ಲಿ ಹೆಚ್ಚು ವಾಸ್ತವಿಕ ಪಡದುಕೊಳ್ಳುತ್ತದೆ. ಹಲವಾರು ವಿಚಾರಗಳಲ್ಲಿ ಅಂಬೇಡ್ಕರ್ ಹಾಗೂ ಪೆರಿಯಾರವರು ಒಂದೇ ನಾಣ್ಯದ ಎರಡು ಮುಖಗಳಂತೆ ಭಾಸವಾಗುತ್ತದೆ. ಆ ಕಾರಣಕ್ಕಾಗಿ ಪೆರಿಯಾರ್‌ರವರ ವಿಚಾರಗಳ ಬಗ್ಗೆ ನಮ್ಮ ಯುವ ಜನತೆ ಹೆಚ್ಚಿನ ವಿಚಾರ ಗ್ರಹಿಸಿದರೆ ಮುಂದೆ ಚಳವಳಿಗಳಿಗೆ ಒಂದು ಭದ್ರ ಬುನಾದಿಯ ಸಾಧ್ಯತೆ ದೊರಕಲು ಸಾಧ್ಯ.

ದ್ರಾವಿಡ ಚಳವಳಿಯ ಹರಿಕಾರರಾಗಿದ್ದ ಪೆರಿಯಾರ್‌ರವರಿಗೆ ಬ್ರಾಹ್ಮಣಶಾಹಿ ವ್ಯವಸ್ಥೆ ಬಗ್ಗೆ ಇದ್ದ ಭಿನ್ನಾಭಿಪ್ರಾಯ ಅದು ಒಂದು ಜನಾಂಗೀಯ ಸಮೂಹವಾಗಿ ಮತ್ತು ವರ್ಗವಾಗಿ. ಡಿ.ಎಂ.ಕೆ. ಚಳವಳಯಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಿಲ್ಲದಿರುವುದು ಅಣ್ಣಾದೊರೈಗೆ ಅಸಮಧಾನವನ್ನುಂಟು ಮಾಡಿತ್ತು. ೧೯೫೭-ಭಾರತದ ಸಂವಿಧಾನವನ್ನು ಸುಟ್ಟ ಕಾರಣಕ್ಕಾಗಿ ಅವರನ್ನು ೬ತಿಂಗಳು ಜೈಲಿನಲ್ಲಿಡಲಾಯಿತು. ಪುರೋಹಿತರ ಹೊರತಾದ ಮದುವೆ, ನಾಮಕರಣ ಇವುಗಳನ್ನು 'ಪುರೋಹಿತ ವಿರೋಧಿ ಸಂಸ್ಥೆ'ಗಳಿಂದ ನಡೆಸಲಾಗುತ್ತಿತ್ತು. ಇದು ನಮಗೆ ಕುವೆಂಪುರವರ ಮಂತ್ರ ಮಾಂಗಲ್ಯದ ನೆನಪು ತರುತ್ತದೆ. ತಮ್ಮ ೯೫ರ ಇಳಿವಯಸ್ಸಿನಲ್ಲಿಯೂ ಪೆರಿಯಾರ್‌ರವರ ಬತ್ತದ ಉತ್ಸಾಹ ಎಂತಹವರಿಗೂ ಸ್ಪೂರ್ತಿದಾಯಕವಾಗಿತ್ತು. ಧರ್ಮ ಎಲ್ಲ ರೀತಿಯ ಅನ್ಯಾಯಗಳಿಗೆ ಕಾರಣ ಎನ್ನುವುದು ಪೆರಿಯಾರ್‌ರವರ ನಂಬಿಕೆಯಾಗಿತ್ತು. ಧರ್ಮವನ್ನು ಉಪಯೋಗಿಸಿಕೊಳ್ಳುವ ಪುರೋಹಿತ ಶಾಹಿಗಳು ಸಮಾಜದ ತಾರತಮ್ಯಕ್ಕೆ ಮುಖ್ಯಕಾರಣ. ಇದು ಕೂಡ ಕುವೆಂಪುರವರ ಚಿಂತನೆಯಂತೆ. "ಆತ್ಮ-ಗೌರವದ" ಚಳುವಳಿಯ ಮೂಲಕ ಜಾತಿ ನಿರ್ಮೂಲನಾ ಹೋರಾಟ ಕೈಗೊಂಡರು. ಅಸ್ಪೃಶ್ಯತೆಯನ್ನು

ಸಾಂಪ್ರದಾಯಿಕ ಮದುವೆಯನ್ನು ಲೇವಡಿ ಮಾಡುತ್ತಿದ್ದ ಪೆರಿಯಾರ್ ಮದುವೆಯ ಸಮಯದಲ್ಲಿ ಸಾಂಪ್ರದಾಯಿಕವಾಗಿ ಧರಿಸುತ್ತಿದ್ದ ತಾಳಿಯನ್ನು ವಿರೋಧಿಸಿದರು. ಅವರ ಮೊದಲ ಮದುವೆಯ ನಂತರ ಅವರು ಕಿರಿಯ ಹೆಂಡತಿ ನಾಕಮಾಯಿಯನ್ನು ವಿವಾಹವಾದ ಸಂದರ್ಭದಲ್ಲಿ ನಾಕಮಯಿಯವರೆ ಹೇಳುವಂತೆ 'ಯಾವುದೇ ಹಿಂದು ಮಹಿಳೆಗೆ ತಾಳಿ ಪಾವಿತ್ರ್ಯದ ಸಂಕೇತ, ಆದರೆ ಆತ್ಮಗೌರವದ ಚಳವಳಿಗಾರಳಿಗೆ ತಾಳಿ ಮಹಿಳೆಯ ದಾಸ್ಯದ ಸಂಕೇತ. ಮಹಿಳೆಯ ಪ್ರತಿಷ್ಠೆಯನ್ನು ಗೌರವಿಸುವಾಗ ತಾಳಿಯ ಪ್ರಶ್ನೆ ಬೇಡ ಎಂಬುದು ಪೆರಿಯಾರ್‌ರವರ ವಾದ.

ವಿರೋಧಿಸಿ ಆಂಧೋಲನ ನಡೆಸಿದರು. ಮನು ಸಂಸ್ಕೃತಿಯ ಮೂಲಕ ವೈದಿಕ ಸಂಸ್ಕೃತಿಯನ್ನು ಹೇರಲು ಬಯಸುವ ಬ್ರಾಹ್ಮಣರನ್ನು ಆರ್ಯರೆಂದು ಸಂಭೋಧಿಸುವ ಪೆರಿಯಾರ್ ಹಿಂದಿ ಭಾಷೆಯ ಕಟ್ಟಾವಿರೋಧಿಯಾಗಿದ್ದರು. ತೀವ್ರವಾದ ತಮಿಳು-ದ್ರಾವಿಡ ಸಂಸ್ಕೃತಿಯ ಪ್ರಚಾರಕ್ಕೆ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡರು ಧಾರ್ಮಿಕ, ಸಾಮಾಜಿಕ, ಹಾಗೂ ರಾಜಕೀಯ ರಂಗಗಳು ಪರಸ್ಪರ ಪೂರಕವಾಗಿದ್ದು ಅವುಗಳ ನಡುವೆ ಯಾವುದೇ ಒಂದನ್ನು ಬಿಟ್ಟು ಒಟ್ಟಾರೆ ವ್ಯವಸ್ಥೆಯ ಬಗ್ಗೆ ಮಾತನಾಡುವ ಹಾಗಿರಲಿಲ್ಲ. ಪೆರಿಯಾರ್‌ರವರ ಪ್ರಕಾರ 'ದೇವರು, ಧರ್ಮ, ಶಾಸ್ತ್ರ, ಪುರಾಣ, ಇತಿಹಾಸ (ಪುರಾಣದ ಐತಿಹ್ಯ) ಇದು ಈ ನಾಡಿನ ಮಣ್ಣಿನ ಮಕ್ಕಳನ್ನು ವರ್ಣಾಶ್ರಮದ ಪ್ರಕಾರ ಶೋಷಿಸಲು ಇರುವ ಅಸ್ತ್ರ. ೯೭% ಜನರನ್ನು ಕಾನೂನುಬಾಹಿರ ಪ್ರಜೆಗಳಾಗಿ ಪರಿಗಣಿಸಿ ಧರ್ಮ ದೇವರು ಕರ್ತವ್ಯದ ಹೆಸರಿನಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದಾರೆ.

ಹಿಂದೂತ್ವ ಒಂದು ಧರ್ಮವೇ ಅಲ್ಲ, ಕೇವಲ ಕೆಲವೇ ಜನರ ಒಂದು ಸಮೂಹದಿಂದ ಅವರ ಹಿತಾಸಕ್ತಿಗಾಗಿ ಉಳಿದ ಜನರ ಅಜ್ಞಾನ ಹಾಗೂ ಮೌಢ್ಯತೆಯನ್ನು ಶೋಷಿಸಲು ಇರುವ ಸಾಧನೆ. ' ಮೂಢನಂಬಿಕೆ' ಮತ್ತು 'ಶೋಷಣೆ' ಇವೆರಡು ಪೆಂಯಾರ್ ರವರು ಹಿಂದೂ ಧರ್ಮವನ್ನು ವಿಶ್ಲೇಷಿಸಲು ಉಪಯೋಗಿಸುತ್ತಿದ್ದ ಶಬ್ಧಗಳು ಮನುವಿನ ಪ್ರಕಾರ ಶೂದ್ರರೆಲ್ಲರೂ ಬ್ರಾಹ್ಮಣರ ಸೇವಕರು. ಬ್ರಾಹ್ಮಣರಿಗೆ ಎಲ್ಲಾ ಜಾತಿಗಳಿಂದ ದಾನ ತೆಗೆದುಕೊಳ್ಳುವ ಅಧಿಕಾರವಿದೆ. ಆದರೆ ಬ್ರಾಹ್ಮಣ ತಂದೆಯಿಂದ ಶೂದ್ರತಾಯಿ ಯಲ್ಲಿ ಹುಟ್ಟಿದ ಮಗುವಿಗೆ ಆಸ್ತಿಯ ಹಕ್ಕಿರುವುದಿಲ್ಲ.

ದೇವಸ್ಥಾನಗಳು ಶೋಷಣೆಯ ಮೊದಲ ಸ್ಥಾನವಾಗಿದ್ದು ಆದಾಯದ ಮೂಲವಾಗಿದೆ. ೧೯೭೨ರ ಮೇ ೨೭ರಂದು ಪೆರಿಯಾರ್ ರವರು ದೇವಸ್ಥಾನಗಳಿಗೆ ಹೋಗುವುದನ್ನು ತಡೆಗಟ್ಟುವ ಚಳುವಳಿ ಹಮ್ಮಿಕೊಳ್ಳುತ್ತಾರೆ. ತಂಜಾವೂರು ಜಿಲ್ಲೆಯಿಂದ ಈ ಚಳುವಳಿ ಆರಂಭವಾಗುತ್ತದೆ. 'ಸುಮಾರು ೨೨ ಕೋಟಿ ಹಿಂದುಗಳಿಗೆ ೩೩ಕೋಟಿ ದೇವತೆಗಳಿದ್ದು ಪ್ರತಿಯೊಬ್ಬ ವ್ಯಕ್ತಿಗೂ ೧½ ದೇವರು ಹಂಚಿಕೆಯಾಗುತ್ತದೆ.'

ಸಾಂಪ್ರದಾಯಿಕ ಮದುವೆಯನ್ನು ಲೇವಡಿ ಮಾಡುತ್ತಿದ್ದ ಪೆರಿಯಾರ್ ಮದುವೆಯ ಸಮಯದಲ್ಲಿ ಸಾಂಪ್ರದಾಯಿಕವಾಗಿ ಧರಿಸುತ್ತಿದ್ದ ತಾಳಿಯನ್ನು ವಿರೋಧಿಸಿದರು. ಅವರ ಮೊದಲ ಮದುವೆಯ ನಂತರ ಅವರು ಕಿರಿಯ ಹೆಂಡತಿ ನಾಕಮಾಯಿಯನ್ನು ವಿವಾಹವಾದ ಸಂದರ್ಭದಲ್ಲಿ ನಾಕಮಯಿಯವರೆ ಹೇಳುವಂತೆ 'ಯಾವುದೇ ಹಿಂದು ಮಹಿಳೆಗೆ ತಾಳಿ ಪಾವಿತ್ರ್ಯದ ಸಂಕೇತ, ಆದರೆ ಆತ್ಮಗೌರವದ ಚಳವಳಿಗಾರಳಿಗೆ ತಾಳಿ ಮಹಿಳೆಯ ದಾಸ್ಯದ ಸಂಕೇತ. ಮಹಿಳೆಯ ಪ್ರತಿಷ್ಠೆಯನ್ನು ಗೌರವಿಸುವಾಗ ತಾಳಿಯ ಪ್ರಶ್ನೆ ಬೇಡ ಎಂಬುದು ಪೆರಿಯಾರ್‌ರವರ ವಾದ.

'ಧರ್ಮವೆಂದರೆ ಪ್ರೀತಿ, ಸ್ವಾತಂತ್ರ, ಭ್ರಾತೃತ್ವ, ಅದು ವಿಧಿಯಲ್ಲ ಸ್ವರ್ಗದ ಗುಲಾಮಗಿರಿಯಲ್ಲ' ಶಿಕ್ಷಣದ ಮೂಲಕ ವೈಚಾರಿಕತೆಯನ್ನು ತಂದಾಗ ಮೂಢನಂಬಿಕೆ ಹಾಗೂ ಅಂಧಕಾರವನ್ನು ಅಳಿಸಿ ಸಮಾಜದಲ್ಲಿ ನೈತಿಕತೆ ಹಾಗೂ ನ್ಯಾಯವನ್ನು ತರಲು ಸಾಧ್ಯ. "ಉತ್ತಮ ನಡವಳಿಕೆ "ವ್ಯಕ್ತಿತ್ವ" ಹಾಗೂ "ಸತ್ಯ" ಇವು ಉತ್ತಮ ಸಮಾಜದ ಅಗತ್ಯಗಳು, ಜಾತಿ ವಿರೋಧಿ ಸಂದರ್ಭದಲ್ಲಿ ಪೆರಿಯಾರರ ೩ಮುಖ್ಯ ಸಿದ್ಧಾಂತ

(೧) ಅಸ್ಪೃಶ್ಯತೆ ನಿವಾರಣೆ ದೇವಾಲಯದ ಪ್ರವೇಶದ ಕಾನೂನಿಗೆ ತಡೆ

(೨) ಹರಿಜನರಿಗೆ ಪೌರೋಹಿತ್ಯದ ಹಕ್ಕು

(೩) ಸಮುದಾಯದ ಪ್ರಾತಿನಿತ್ಯದ ಹಕ್ಕು ಕೆಳವರ್ಗದ, ಜಾತಿಯ ಜನಗಳಿಗೆ ಸಂಪೂರ್ಣ ಸಾಮಾಜಿಕ ಜೀವನದ ಹಕ್ಕು.

ಮಹಿಳೆಯರ ವಿಚಾರದಲ್ಲಿ ಪೆರಿಯಾರರ ಆಲೋಚನೆ ಗಂಭೀರ ಮತ್ತು ಆತ್ಮಗೌರವದ ಹೆಸರಿನಲ್ಲಿ ಮದುವೆಯಾದವರು ಸಮಾನಹಕ್ಕು ಮತ್ತು ಜವಾಬ್ದಾರಿಯನ್ನು ಹಂಚಿಕೊಳ್ಳುವಂತಿರಬೇಕು. 'ದೇವದಾಸಿ' ಮಹಿಳೆಯರಿಗೆ ಸ್ವಾತಂತ್ರ ನೀಡಿ ಮತ್ತು ವಿವಾಹವಾಗಿ ಎಂದು ಕರೆಯಿತ್ತರು. ತನ್ನ ಹರೆಯದ ವಯಸ್ಸಿನ ನಾದಿನಿ ವಿಧವೆಯಾದಾಗ ಮರುಮದುವೆಯಾಗಲು ಪ್ರೋತ್ಸಾಹಿಸಿ. ವಿಚ್ಛೇದನಕ್ಕೆ ಮಹಿಳೆಯರು ಹಕ್ಕುಗಳನ್ನು ಪ್ರತಿಪಾದಿಸಿದರಷ್ಟೇ ಅಲ್ಲ ಆಸ್ತಿಯ ಹಕ್ಕನ್ನು ಒತ್ತಿಹೇಳಿದರು. "ಇಂದು ಮದುವೆ ಎಂಬುದು ಏನಾಗಿದೆ ನಾವು ಯಾವುದೇ ಸಂಪ್ರದಾಯಕ್ಕೆ ಬಂಧಿಗಳಲ್ಲ. ವಿವಾಹ ಒಂದು ಒಪ್ಪಂದ. ಲೈಂಗಿಕತೆಗಾಗಿ ವಿವಾಹ ತಪ್ಪು. ಪರಸ್ಪರ ಜ್ಞಾನ, ಪ್ರೀತಿ, ಹೊಂದಾಣಿಕೆ ಅನುಭವ ಅತಿಮುಖ್ಯ". ವರದಕ್ಷಿಣೆಯನ್ನು ವಿರೋದಿಸಿದ್ದರು.

ನಗರೀಕರಣದ ಹೊರತಾಗಿಯೂ ಭಾರತ ಹಳ್ಳಿಗಳ ದೇಶ, ನಗರ ಹಾಗೂ ಗ್ರಾಮೀಣ ಪ್ರದೇಶದ ಆಧುನಿಕ ಹಾಗೂ ಸಾಮಾಜಿಕ ಸ್ಥಿತಿಯ ಅಂತರ ಗ್ರಾಮಿಣ ಮಾಡುವ ಅವಮಾನ. ೧೯೨೦ರಲ್ಲಿ ಉತ್ತರ ಭಾರತದ ಸಾಮಾಜಿಕ ರಾಜಕೀಯ ಪ್ರಭಾವವನ್ನು ವಿರೋಧಿಸಿ ಕಾಂಗ್ರೆಸ್ ಪಾರ್ಟಿಯನ್ನು ತ್ಯಜಿಸಿ ೧೯೨೫ರಲ್ಲಿ "ಆತ್ಮಗೌರವ ಚಳುವಳಿಯನ್ನು ಆರಂಭಿಸಿದರು. ೧೯೪೮ರಲ್ಲಿ ಹಿಂದಿ ವಿರೋಧಿ ಹೋರಾಟಕ್ಕೆ ಅಭೂತ ಪೂರ್ವ

[illegible] ಅವರು ಹೇಳಿದ ಮಾತು 'All india union govt.' ಎಂದು ಹಿಂದು ಧರ್ಮವನ್ನು ರಕ್ಷಿಸುವುದು ಎಂದು ಅರ್ಥ ತಮಿಳುನಾಡಿನ ಸ್ಥಾಪನೆಯಲ್ಲಿ ಅಣ್ಣಾ ದೂರ್ಯ ಪೆರಿಯಾರ್ ನಡುವಿನ ಭಿನ್ನಾಭಿಪ್ರಾಯ ಐತಿಹಾಸಿಕವಾಗಿದೆ.

ದ್ರಾವಿಡ ಸಂಸ್ಕೃತಿಯನ್ನು ನಾಶಮಾಡಲು ಹವಣಿಸುತ್ತಿದ್ದ ಕರ್ಮಠ ಹಿಂದೂ ಧರ್ಮದಿಂದ ತಮಿಳು ನಾಡನ್ನು ರಕ್ಷಿಸಲು ಪೆರಿಯಾರ್‌ರು ತಮಿಳು ನಾಡನ್ನು ಶೂದ್ರರ ನಾಡು ಎಂದು ಕರೆದರು. ಆ ಕಾರಣಕ್ಕಾಗಿಯೆ ಅವರು ಡಿ.ಎಂ.ಕೆ.ಗೆ ಸಹಾಯ ಹಸ್ತ ಚಾಚಿದರು. ಪೆರಿಯಾರ್ ತಮ್ಮನ್ನು ತಾವು ಸ್ವಾರ್ಥರಹಿತ ಸರ್ವಾಧಿಕಾರಿಯೆಂದು ಕರೆದುಕೊಳ್ಳುತ್ತಾ "ನಾನು ಎಲ್ಲಾ ಸರ್ವಾಧಿಕಾರಿಗಳನ್ನು ಬೆಂಬಲಿಸುತ್ತೇನೆ. ಕಾರಣ ಸರ್ವಾಧಿಕಾರದಲ್ಲಿ ಒಬ್ಬ ಮಾತ್ರ ತಪ್ಪು ಮಾಡಲು ಸಾಧ್ಯ. ಆದರೆ ಪ್ರಜಾಪ್ರಭುತ್ವದಲ್ಲಿ ಹಲವು ಸಾವಿರ ತಪ್ಪುಗಳಾಗುವ ಸಾಧ್ಯತೆಯಿದೆ". ಮಾರ್ಕ್ಸ್‌ನ ಸಿದ್ದಾಂತವನ್ನು ದಕ್ಷಿಣಭಾರತದ ವಾತಾವರಣಕ್ಕೆ ಹೊಂದುವಂತೆ ರೂಢಿಗೊಳಿಸಬಹುದು ಎಂಬ ವಾದ ಅವರದಾಗಿತ್ತು. ಪೆರಿಯಾರ್‌ರವರ ಹೋರಾಟದಿಂದ ತಮಿಳುನಾಡು ಸ್ವಾಭಿಮಾನದ ಚಳುವಳಿಗೆ ನಾಂದಿಯಾಗುವುದರ ಮೂಲಕ ದ್ರಾವಿಡ ಸಂಸ್ಕೃತಿಯ ಹಿರಿಮೆಯನ್ನು ಎತ್ತಿಹಿಡಿಯಿತು. ಅಣ್ಣಾದೊರೈ ಹೇಳುವಂತೆ "ಪೆರಿಯಾರ್ ಒಬ್ಬ ಮನುಷ್ಯನಲ್ಲ ಆತ ಒಂದು ಯುಗ ಇತಿಹಾಸದ ಹರಿಕಾರ".

ಇ.ವಿ.ರಾಮಸ್ವಾಮಿ ಪೆರಿಯಾರ್‌ರವರ ತತ್ವಸಿದ್ಧಾಂತ ಎಂದಿಗಿಂತ ಇಂದು ಹೆಚ್ಚು ಪ್ರಸ್ತುತವಾಗಿದೆ. ಹೆಚ್ಚುತ್ತಿರುವ ಮಾರುಕಟ್ಟೆ ಮನೋಭಾವ ಮಹನವೀಯತೆಯನ್ನು ನುಂಗಿ ಹಾಕಿದೆ. ಅಸಮಾನತೆ, ಅನ್ಯಾಯ ಎಲ್ಲೆಡೆ ಮೇರೆ ಮೀರಿದೆ ಕೆಳಜಾತಿಯ ಹಿಂದೂ ಯುವಕರು ಮನುವಾದಿಗಳ ಕೈಗೊಂಬೆಗಳಾಗಿದ್ದಾರೆ. ಎಲ್ಲೆಲ್ಲೂ ಹಿಂಸೆ, ಅಪನಂಬಿಕೆ ಸಮಾಜದ ಸಮುದಾಯದ ಬದುಕು ಹಾಳಾಗುತ್ತಿದೆ. ಬ್ರಿಟಿಷರ ಕಾಲದಲ್ಲಿದ್ದ ಪರರ ಆಡಳಿತದ ವಾತಾವರಣ ನಮ್ಮದಾಗಿದೆ. ಈ ದೇಶದ, ಈ ಮಣ್ಣಿನ ಪ್ರಜೆಗಳಾಗಿ ನಾಳೆಯ ಹಾಗೂ ಹಕ್ಕುಗಳ ಬಗೆ ಹೋರಾಡುವ ಧ್ವನಿಯನ್ನು ಕಳೆದುಕೊಳ್ಳುತ್ತಿರುವಂತೆ ಭಾಸವಾಗುತ್ತಿದೆ. ಪ್ರೀತಿ, ನಿರ್ಭಯವನ್ನು ಸಾರ ಬೇಕಾದ ಧರ್ಮಗಳು ಇಂದು ರಕ್ತ ಪಿಪಾಸುಗಳಾಗುತ್ತಿವೆ. ಇಂತಹ ಧರ್ಮಗಳು ನಮಗೆ ಬೇಕೆ?

ಸಮಾಜದಲ್ಲಿ ಹೆಣ್ಣಿಗೆ ಸರಿಯಾದ ಸ್ಥಾನಮಾನ ದೊರಕಬೇಕು. ಆಕೆಗೂ ಆಯ್ಕೆಯ ಹಕ್ಕಿದೆ. ಆದರೆ ಇಂದು ಮಹಿಳೆಯರ ಸ್ಥಾನಮಾನ ಏನಾಗಿದೆ? ಆಕೆ ಕೇವಲ ಭೋಗದ ವಸ್ತುವೆಂದು ಭಾವಿಸಲಾಗುತ್ತಿದೆ.

ಪೆರಿಯಾರ್ ಈ ಸಂರ್ಭದಲ್ಲಿ ಪ್ರಸ್ತುತವಾಗಲು ಮತ್ತೊಂದು ಕಾರಣ ದಕ್ಷಿಣ ಭಾರತದ ಮೇಲಾಗುತ್ತಿರುವ ಉತ್ತರ ಭಾರತೀಯರ ಅತಿಕ್ರಮಣ. ವ್ಯಾಪಾರಿವರ್ಗ ಇಡೀ ಸಮಾಜದ ಮೌಲ್ಯಗಳನ್ನು ಹಾಗೂ ರಾಜಕೀಯ ವಾತಾವರಣವನ್ನು ವಿಧವರಿಸುವಂತಾಗಿದೆ ಜನ ಸಾಮಾನ್ಯರಿಗೆ ಅಭಿವ್ಯಕ್ತಿಯ ಸ್ವಾತಂತ್ರವೇ ಇಲ್ಲದಂತ ಸ್ಥಿತಿ. ಉಳ್ಳವರು ಇಲ್ಲದವರ ನಡುವಿನ ಅಂತರ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. "ಧರ್ಮ ನಿರಪೇಕ್ಷ ಜಾತ್ಯಾತೀತ ಸ್ವತಂತ್ರ ಭಾರತದಲ್ಲಿ ಜಾತಿವಾದ, ಉಗ್ರವಾದ ಹೆಡೆಯಾಡುತ್ತಿದೆ.

ದ್ರಾವಿಡ ಸಂಸ್ಕೃತಿಯನ್ನು ನಾಶಮಾಡಲು ಹವಣಿಸುತ್ತಿದ್ದ ಕರ್ಮಠ ಹಿಂದೂ ಧರ್ಮದಿಂದ ತಮಿಳುನಾಡನ್ನು ರಕ್ಷಿಸಲು ಪೆರಿಯಾರ್‌ರು ತಮಿಳು ನಾಡನ್ನು ಶೂದ್ರರ ನಾಡು ಎಂದು ಕರೆದರು. ಆ ಕಾರಣಕ್ಕಾಗಿಯೆ ಅವರು ಡಿ.ಎಂ.ಕೆ.ಗೆ ಸಹಾಯ ಹಸ್ತ ಚಾಚಿದರು. ಪೆರಿಯಾರ್ ತಮ್ಮನ್ನು ತಾವು ಸ್ವಾರ್ಥರಹಿತ ಸರ್ವಾಧಿಕಾರಿಯೆಂದು ಕರೆದುಕೊಳ್ಳುತ್ತಾ 'ನಾನು ಎಲ್ಲಾ ಸರ್ವಾಧಿಕಾರಿಗಳನ್ನು ಬೆಂಬಲಿಸುತ್ತೇನೆ. ಕಾರಣ ಸರ್ವಾಧಿಕಾರದಲ್ಲಿ ಒಬ್ಬ ಮಾತ್ರ ತಪ್ಪು ಮಾಡಲು ಸಾಧ್ಯ. ಆದರೆ ಪ್ರಜಾಪ್ರಭುತ್ವದಲ್ಲಿ ಹಲವು ಸಾವಿರ ತಪ್ಪುಗಳಾಗುವ ಸಾಧ್ಯತೆಯಿದೆ.' ಮಾರ್ಕ್ಸ್‌ನ ಸಿದ್ದಾಂತವನ್ನು ದಕ್ಷಿಣಭಾರತದ ವಾತಾವರಣಕ್ಕೆ ಹೊಂದುವಂತೆ ರೂಢಿಗೊಳಿಸಬಹುದು ಎಂಬ ವಾದ ಅವರದಾಗಿತ್ತು. ಪೆರಿಯಾರ್‌ರವರ ಹೋರಾಟ ತಮಿಳುನಾಡು ಸ್ವಾಭಿಮಾನದ ಚಳವಳಿಗೆ ನಾಂದಿಯಾಗುವುದರ ಮೂಲಕ ದ್ರಾವಿಡ ಸಂಸ್ಕೃತಿಯ ಹಿರಿಮೆಯನ್ನು ಎತ್ತಿ ಹಿಡಿಯಿತು.

ಈ ಸಮಾಜದಲ್ಲಿ ಪೆರಿಯಾರ್ ರಂತಹ ನಾಯಕನೊಬ್ಬ ಬೇಕು ಎನಿಸುತ್ತದೆ. ಯಾವುದೇ ರಾಜಕೀಯ ಅಧಿಕಾರದ ಅಪೇಕ್ಷೆಯಿಲ್ಲದೆ ಕೇವಲ ಬಾವನಾತ್ಮಕವಾಗಿ ತನ್ನ ವಿಚಾರಗಳಿಂದಲೆ ಚಳುವಳಿಯನ್ನು ರೂಪಿಸಿದ ಈ ನಾಯಕ ತನ್ನ ೯೫ನೇ ಇಳಿವಯಸ್ಸಿನವರೆಗೂ ಕ್ರಿಯಾಶೀಲರಾಗಿದ್ದರು.

ಧರ್ಮ, ಜಾತಿಗಳ ಹೆಸರಿನಲ್ಲಿ [illegible] ಕರು ಇಂದಿನ ಯುವ ಜನತೆಯನ್ನು ದಾರಿತಪ್ಪಿಸುತ್ತಿ[illegible]ವಾಗ ಅವರಿಗೆ ಅಗತ್ಯವಾದ ಅರಿವನ್ನು ಮೂಡಿಸುವ ಕಾರ್ಯ ಅಗತ್ಯವಾಗಿದೆ. ಕರ್ನಾಟಕದ ಅನೇಕ [illegible] ಧರ್ಮದ ಹೆಸರಿನಲ್ಲಿ ಮಾನವರ ನಡುವಿನ ಸಂಬಂಧಗಳನ್ನು ಹಾಳುಗೆಡುವುತ್ತಿರುವಾಗ ನಿಜವಾದ ಮಾನವ ಪ್ರೀತಿಯನ್ನು ಉದ್ದೀಪಿಸುವ ಕಾರ್ಯವಾಗಬೇಕಿದೆ. ನಮ್ಮದಲ್ಲದ ಜೀವನ ಮೌಲ್ಯಗಳನ್ನು ಅನುಕರಿಸಲು ಹೋಗಿ ನಮ್ಮ ಸಾಮುದಾಯಿಕ ಬದುಕು ದ್ವೀಪದಂತಾಗಿದೆ. ಪ್ರೀತಿ, ಪ್ರೇಮ, ವಿಶ್ವಾಸ ನಂಬಿಕೆಗಳಿಲ್ಲದ ನಾಳೆಗಳ ಬಗ್ಗೆ ಯುವ ಜನತೆ ಖಿನ್ನರಾಗಿದ್ದಾರೆ. ಸಮಾಜದಲ್ಲಿ ದೊರಕಬೇಕಾದ ಭರವಸೆ ಗಾಳಿಗೋಪುರವಾಗುತ್ತಿದೆ.

'Small is beautiful' ಎನ್ನುವ ಒಂದು ಮಾತು ಮರೆತು ಸಾಮ್ರಾಜ್ಯ ಶಾಹಿ ವ್ಯವಸ್ಥೆಯೊಂದು ಇಡೀ ಜಗತ್ತಿನ ವ್ಯವಸ್ಥೆಯನ್ನು ತೀರ್ಮಾನಿಸುತ್ತದೆ. ಅನುಕರಣೆಯ ಜೀವನದಲ್ಲಿ ನಮ್ಮತನ ಕಳೆದುಹೋಗುತ್ತಿದೆ. ಈ ಬೆಳವಣಿಗೆಗಳು ನಮ್ಮನ್ನು ಹತಾಶರನ್ನಾಗಿಸುವ ಮೊದಲು ಪೆರಿಯಾರ್, ಜೆಪಿ, ಡಾ॥ಅಂಬೇಡ್ಕರ್, ರಾಮಮನೋಹರ ಲೋಹಿಯಾ ಚಿಂತನೆಗಳ ಮೂಲಕ ನಮ್ಮ ಯುವ ಜನತೆ ಸ್ವತಂತ್ರ ಮನೋಭಾವವನ್ನು ಬೆಳಸಿಕೊಳ್ಳಲು ಸಿದ್ದರಾಗಬೇಕಿದೆ. ಅಭಿವೃದ್ಧಿಯ ಹೆಸರಿನಲ್ಲಿ ನಮ್ಮ ನೆಲ, ಜಲ ಸಂಸ್ಕೃತಿ ಯಾವುದೋ ಬಂಡವಾಳ ಶಾಹಿಗಳ ಆಸ್ತಿಯಾಗುತ್ತಿದೆ. ಧರ್ಮದ ಹೆಸರಿನಲ್ಲಿ ಹಾದಿ ತಪ್ಪುತ್ತಿರುವ ನಾವು ನಿಜವಾದ ರಾಜಕೀಯ, ಸಾಮಾಜಿಕ, ಆರ್ಥಿಕ ವ್ಯವಸ್ಥೆಯನ್ನು ಅರ್ಥೈಸಿಕೊಳ್ಳುವಲ್ಲಿ ಸೋಲುತ್ತಿದ್ದೇವೆ.

ಪೆರಿಯಾರ್‌ರವರು ಹೇಳುವ ವಿಮೋಚನೆಯು ನ್ಯಾಯದ, ಪ್ರೀತಿಯ ಸಮಾಜದ ನಿರ್ಮಾಣ, ಮಹಿಳೆಯರು ಸ್ವತಂತ್ರವಾಗಿ, ವ್ಯಕ್ತಿಗಳಾಗಿ ಬದುಕುವ ತಮ್ಮ ಅಭಿಪ್ರಾಯಗಳನ್ನು ಹೇಳುವ ಮುಕ್ತ ಮತ್ತು ಭದ್ರವಾದ ವಾತಾವರಣದ ನಿರ್ಮಾಣ ಸಾಧ್ಯವೆ?

ಪೆರಿಯಾರರ "justice party" "self respect movement" ಬಗೆಗಿನ ಕೆಲವು ಲೇಖನಗಳನ್ನು ಓದಿ ಮೆಚ್ಚಿಕೊಂಡ ಕೆಲವು ಅಂಶಗಳನ್ನು ಸ್ವಾಭಾವಿಕವಾಗಿ ನಿಮ್ಮೊಡನೆ ಹಂಚಿಕೊಂಡಿದ್ದೇನೆ. ☐

ನಾನು ಅಳುತ್ತೇನೆ

ನಾನು ಅಳುತ್ತೇನೆ–
ಸಣ್ಣ ಮಕ್ಕಳ ಹಾಗೆ ಅರಚಾಡುತ್ತ ಅಲ್ಲ
ಮುದುಕರಂತೆ ಮೂಲೆಯಲ್ಲಿ ಮುಲುಗುತ್ತ ಅಲ್ಲ
ಆದರೆ ನಿಶ್ಯಬ್ದವಾಗಿ
ನನ್ನ ಕಣ್ಣೀರ ಹನಿಗಳು
ನನ್ನ ತೆರೆದ ಬೊಗಸೆಯೊಳಗೆ ಬೀಳುವುದ ನೀನು ಕಂಡೆ
ಅವು ಮಿನುಗುತ್ತಿದ್ದವಲ್ಲವೆ,
ನಿನಗೆ ತಿಳಿಯಲೇ ಇಲ್ಲ
ನಾನು ಅಳುತ್ತಿದ್ದುದು.



ಮೂಲ: ಆಂಜೆಲಿನಾ ವೆಲ್ಡ್ ಗ್ರಿಮೆ
ಕನ್ನಡಕ್ಕೆ: ಡಾ॥ ಜೆ. ಬಾಲಕೃಷ್ಣ

ಸಾವಿರ ಮರುಭೂಮಿಗಳಾಚೆಗೆ ನೀನು

ಸಾವಿರ ಮರಭೂಮಿಗಳಾಚೆಗೆ ನೀನು
ಮುಚ್ಚಿದ ಮನೆಯ ಗೇಟಿನ ಮುಂದೆ ನಾನು,
ಹಾಕಿದ ರೈಲು ಗೇಟಿನಾಚೆಗೆ ನೀನು
ಈ ಕಡೆಗೆ ನಾನು,

ಇದರ ಮಹಾವೇಗದಿಂದ ಹೋಗುತ್ತಿರುವ ರೈಲು
ಚಲಿಸುತ್ತಿರುವ ರೈಲುಕೆಳಗೆ ಕೈಗಳನ್ನು ಯಾರಿಡುತ್ತಾರೆ?
ನೋಟವನ್ನಿಡಬಹುದು, ತುಂಡಾದರೂ
ತಕ್ಷಣ ಅಂಟಿಕೊಳ್ಳುವ ನೋಟವನ್ನು ಇಡುತ್ತಾನೆ

ಪ್ರಾರಂಭವಾಗುವುದೆನೊ ಸರಿಯಾಗಿಯೆ ಪ್ರಾರಂಭವಾಗುತ್ತದೆ
ಮುಕ್ತಾಯವೆ ಸರಿಯಾಗಿರುವುದಿಲ್ಲ-ಪ್ರತಿಯೊಂದು ಅಷ್ಟೇ,
ಯಾವಾಗಲೂ ಇಷ್ಟೇ ಅಂತಿಯಾ



ಸುಂದರವಾಗಿ ಪ್ರಾರಂಭವಾಗುವ ಪ್ರತಿಯೊಂದಕ್ಕೂ ಸಹ
ಸಂತೋಷವಾಗುವಂತಹ ಮುಕ್ತಾಯ ಇಲ್ಲವೆನ್ನುತ್ತೀಯಾ?

ಷೇಕ್ಸ್‌ಪಿಯರನ ಪಂಚ ವಿಷಾದ ಕಾವ್ಯಗಳು
ಸರನರಗಳಲ್ಲಿ ವಿಕಾಸವಾಗುತ್ತಿರುವಂತೆ ನಮ್ಮ ಬದುಕು
ಇನ್ನು ಹೇಗೆ ಆರಾಮವಾಗಿರುವ ನಗೆ ಮುಖದಲ್ಲಿರುತ್ತದೆ ಎನ್ನುವೆ:

ಈಗೀಗ ಗೊತ್ತಾಗುತ್ತಿದೆ ಜಗತ್ತು
ತುಂಡಾದ ಕೈಗಳ ಮೇಲೆ, ತುಂಡಾಗದ ಕೈಗಳ ಮೇಲೆ
ಬೆಳದಿಂಗಳು ಸಮ ಪ್ರಮಾಣದಲ್ಲಿ ಸುರಿಯುತ್ತದೆ

ಚಲಿಸುತ್ತಿರುವ ರೈಲು ಕೆಳಗೆ
ರೂಪಾಯಿ ನಾಣ್ಯವಿಡುವ ಬದಲಾಗಿ
ಮರೆತು ತಲೆಯನ್ನಿಟ್ಟು ಬಿಟ್ಟಿದ್ದಾನೆ
ನಾಣ್ಯವಾದರೆ ಎರಡು ನಾಣ್ಯಗಳಷ್ಟು ಅಗಲವಾಗುತ್ತದೆ
ತುಂಡಾದ ತಲೆಯು ಎರಡು ತಲೆಗಳಾಗಲಾರವು,
ತುಂಡಾಗಿ, ರೈಲುಹಳಿಗಳಾಚೆಗೆ ಬಿದ್ದ ರುಂಡ
ಮೊಂಡಾದ ದೇಹವನ್ನು ಎಟುಕಲೂ ಆಗದು,
ನೋಡುತ್ತಾ ನಿಂತಿದ್ದಾರೆ
ಒಂದೊಂದು ದಿಕ್ಕಲ್ಲೂ ಕಾಳಿದಾಸ, ಷೇಕ್ಸ್‌ಪಿಯರ್

ತೆಲುಗು ಮೂಲ: ಡಾ. ಕೆ. ಸಿವಾರೆಡ್ಡಿ
ಕನ್ನಡಕ್ಕೆ: ವೆಂಕಟಾಪು ಸತ್ಯಂ

ಭಾರತದಲ್ಲಿ ಮುಸ್ಲಿಂರ ಸಂಖ್ಯೆ ನಮ್ಮ ಒಟ್ಟು ಜನ ಸಂಖ್ಯೆ ಶೇ.೧೪ರಷ್ಟು ಮುಸ್ಲಿಂರಿಗೆ ಭಾರತದ ಆಳರಸರಾಗಿದ್ದ ತಮ್ಮನ್ನು ಪದಚ್ಯುತಿಗೊಳಿಸಿ ಅವರಿಗಿದ್ದ ಅಧಿಕಾರವನ್ನೆಲ್ಲ ಕಿತ್ತುಕೊಂಡ ಬ್ರಿಟಿಷರ ಮೇಲೆ ಹಾಗೂ ಭಾರತದ ಹಿಂದುಗಳ ಮೇಲೆ ಆಕ್ರೋಶ ಬೆಳೆಯಿತು. ಇದು ಭಾರತದಲ್ಲಿ ಮೇಲಿಂದ ಮೇಲೆ ಹಿಂದು ಮುಸ್ಲಿಂ ಘರ್ಷಣೆಗ ಆಗೆ ಎಡೆಕೊಟ್ಟಿತ್ತು. ಇದನ್ನು ಕಂಡಗಾಂಧೀಜಿ ಈ ಘರ್ಷಣೆ ಮನಸ್ತಾಪಗಳನ್ನು ಈಗಲೇ ಬಗೆಹರಿಸದಿದ್ದರೆ ಅದು ವ್ಯಾಪಕವಾದ ದುಷ್ಪರಿಣಾಮಕ್ಕೆ ಎಡೆಕೊಡಬಹುದೆಂದು ಶಂಕಿಸಿದರು. ಸ್ವಾತಂತ್ರ್ಯ ಬಂದ ಮೇಲೂ ಹಿಂದು ಮುಸ್ಲಿಂ ಘರ್ಷಣೆಗಳಾದಾಗ ಹಿಂದು ಮುಸ್ಲಿಂ ಸಖ್ಯವನ್ನು ತಮ್ಮ ೧೮ ರಚನಾತ್ಮಕ ಕಾರ್ಯಗಳಲ್ಲಿ ಒಂದನ್ನಾಗಿ ಗಾಂಧೀಜಿ ಪರಿಗಣಿಸಿದರು. ಈ ೧೮ ರಚನಾತ್ಮಕ ಕಾರ್ಯಕ್ರಮಗಳ ಮಹತ್ವವನ್ನು ತಿಳಿಸಿ ಅವುಗಳನ್ನು ಕೈಗೊಳ್ಳುವುದು ಅಂದಿನ ಕಾಂಗ್ರೆಸ್‌ನ ಸಕ್ರಿಯ ಸದಸ್ಯರಿಗೆ ಕಡ್ಡಾಯ ಮಾಡಿದರು.

ಹೆಚ್. ಎಸ್. ದೊರೆಸ್ವಾಮಿ

[illegible] ಘರ್ಷಣೆಗಳು ಬಹುಕಾಲದಿಂದ ಆಗಾಗ [illegible] ಇವೆ. ಹಿಂದು. ಕ್ರಿಶ್ಚಿಯನ್ ಘರ್ಷಣೆಗಳು ಯಾವಾಗಲೋ [illegible] ನಡೆಯುತ್ತಿತ್ತು. ಆದರೆ ಆರ್.ಎಸ್.ಎಸ್., ಬಿಜೆಪಿ, ಭಜರಂಗದಳ ವಿಶ್ವಹಿಂದು ಪರಿಷತ್ ಮುಂತಾದ ಸಂಘಟನೆಗಳು ಹುಟ್ಟಿಕೊಂಡ ಮೇಲೆ ಅದು ಹೆಚ್ಚುತ್ತಾ ಇರುವುದನ್ನು ನಾವು ಕಾಣುತ್ತೇವೆ.

ಹಿಂದು ಮುಸ್ಲಿಂ ಸೌಹಾರ್ದತೆಗಾಗಿ ತುಂಬ ಶ್ರಮಿಸಿದ ವ್ಯಕ್ತಿ ಗಾಂಧೀಜಿಯೊಬ್ಬರೇ ಎಂದರೂ ತಪ್ಪಾಗಲಿಕ್ಕಿಲ್ಲ ಸ್ವಾತಂತ್ರ್ಯ ಬಂದ ಮೇಲಂತೂ ಹಿಂದು ಮುಸ್ಲಿಂ ಸೌಹಾರ್ದ ವಿಷಯದಲ್ಲಿ ತಲೆಕೆಡಿಸಿಕೊಳ್ಳುವುದಿರಲಿ ಪ್ರಸ್ತಾಪ ಮಾಡಿದವರೂ ಕಡಿಮೆ ಜನ.

ಭಾರತದಲ್ಲಿ ಮುಸ್ಲಿಂರ ಸಂಖ್ಯೆ ನಮ್ಮ ಒಟ್ಟು ಜನಸಂಖ್ಯೆ ಶೇ. 14ರಷ್ಟು ಮುಸ್ಲಿಂರಿಗೆ ಭಾರತದ ಆಳರಸರಾಗಿದ್ದ ತಮ್ಮನ್ನು ಪದಚ್ಯುತಿಗೊಳಿಸಿ ಅವರಿಗಿದ್ದ ಅಧಿಕಾರವನ್ನೆಲ್ಲ ಕಿತ್ತುಕೊಂಡ ಬ್ರಿಟೀಷರ ಮೇಲೆ ಹಾಗೂ ಭಾರತದ ಹಿಂದೂಗಳ ಮೇಲೆ ಆಕ್ರೋಶ ಬೆಳೆಯಿತು. ಇದು ಭಾರತದಲ್ಲಿ ಮೇಲಿಂದ ಮೇಲೆ ಹಿಂದು ಮುಸ್ಲಿಂ ಘರ್ಷಣೆಗಳಿಗೆ ಎಡೆಕೊಟ್ಟಿತು. ಇದನ್ನು ಕಂಡ ಗಾಂಧೀಜಿ ಈ ಘರ್ಷಣೆ ಮನಸ್ತಾಪಗಳನ್ನು ಈಗಲೇ ಬಗೆಹರಿಸದಿದ್ದರೆ ಅದು ವ್ಯಾಪಕವಾದ ದುಷ್ಪರಿಣಾಮಕ್ಕೆ ಎಡೆಕೊಡಬಹುದೆಂದು ಶಂಕಿಸಿದರು. ಸ್ವಾತಂತ್ರ್ಯ ಬಂದ ಮೇಲೂ ಹಿಂದು ಮುಸ್ಲಿಂ ಘರ್ಷಣೆಗಳಾದಾಗ ಶಾಂತಿ ಸೌಹಾರ್ದ ಸ್ಥಾಪನೆಗಾಗಿ ಪದೇ ಪದೇ ದುಡಿದದ್ದಲ್ಲದೆ, ಹಿಂದು ಮುಸ್ಲಿಂ ಸಖ್ಯವನ್ನು ತಮ್ಮ 18 ರಚನಾತ್ಮಕ ಕಾರ್ಯಗಳಲ್ಲಿ ಒಂದನ್ನಾಗಿ ಗಾಂಧೀಜಿ ಪರಿಗಣಿಸಿದರು ಕಾಂಗ್ರೆಸ್ಸಿಗರಿಗೆ ಈ 18 ರಚನಾತ್ಮಕ ಕಾರ್ಯಕ್ರಮಗಳ ಮಹತ್ವವನ್ನು ತಿಳಿಸಿ ಅವುಗಳನ್ನು ಕೈಗೊಳ್ಳುವುದು ಅಂದಿನ ಕಾಂಗ್ರೆಸ್‌ನ ಸಕ್ರಿಯ ಸದಸ್ಯರಿಗೆ (Active Members) ಕಡ್ಡಾಯ ಮಾಡಿದರು.

ಸ್ವಾತಂತ್ರ್ಯ ಪ್ರಾಪ್ತವಾದ ಮೇಲೆ ಅದರಲ್ಲೂ ಭಾರತ, ಪಾಕಿಸ್ತಾನ ಪ್ರತ್ಯೇಕಗೊಳ್ಳುವ ಮೊದಲು ಮತ್ತು ಅನಂತರ ಹಿಂದು ಮುಸ್ಲಿಂ ಘರ್ಷಣೆಗಳು ಭಾರತದಲ್ಲಿ ವ್ಯಾಪಕವಾಗಿ ಬೆಳೆದವು.

ಈ ಕಾರಣದಿಂದ ಹಿಂದು ಮುಸ್ಲಿಂ ಉದ್ವೇಗ ಪರಸ್ಪರ ಅಪನಂಬಿಕೆ ಘರ್ಷಣೆಗಳು ಹೆಚ್ಚಾದರು ಇತ್ತೀಚೆಗಂತೂ ಈ ಉದ್ವೇಗವನ್ನು ಬೆಳೆಸುವ ಕೆಲಸವನ್ನು ಹಿಂದು ಮತ್ತು ಮುಸ್ಲಿಂ ಮತಾಂಧರು ಸತತವಾಗಿ ಮಾಡುತ್ತಾಬಂದಿದ್ದಾರೆ. ಈಗ ಅದು ವಿಪರೀತಕ್ಕೆ ಹೋಗಿದೆ. ಅದರ ಫಲವಾಗಿ ಈಗ ಕೋಮು ಉದ್ವೇಗ, ಕೋಮು ಗಲಭೆ, ಭಯೋತ್ಪಾದಕರ ಹುಟ್ಟು ಎಲ್ಲ ಏಕಕಾಲದಲ್ಲಿ ಭಾರತವನ್ನು ವ್ಯಾಪಕವಾಗಿ ಆವರಿಸಿದೆ. ಹಿಂದು ಮುಸ್ಲಿಂ ಘರ್ಷಣೆಗೆ ಮುಸ್ಲಿಂರು ಮಾತ್ರ ಕಾರಣರಲ್ಲ ಹಿಡಿಮಂದಿ ಹಿಂದು ಮತಾಂಧರು, ಮತಾಂಧ ಸಂಘಗಳು, ಮತಾಧಿಪತಿಗಳು ಇವರು ಕಾರಣರಾಗಿದ್ದಾರೆ ಎಂಬುದನ್ನು ನಾವು ಮನಗಾಣಬೇಕು.

ಮತೀಯ ಗಲಭೆಗಳಿಗೆ ಬೇರೆ ಕ್ಷುಲ್ಲಕ ಕಾರಣಗಳೂ ಪ್ರಚೋದನೆ ನೀಡುತ್ತವೆ. ಒಬ್ಬ ಮುಸ್ಲಿಂ ಹುಡುಗ ಅಥವಾ ಹುಡುಗಿ ಒಬ್ಬ ಹಿಂದು ಹುಡುಗಿ ಅಥವಾ ಹುಡುಗನನ್ನು ಪ್ರೀತಿಸಿ ಹಾಗೆ ಪರಸ್ಪರ ಪ್ರೀತಿಸಿದವರು ಊರು ಬಿಟ್ಟು ಓಡಿ ಹೋದರೆ ಅದು ಮತೀಯ ಗಲಭೆಯಾಗಿ ಪರಿವರ್ತನೆಗೊಳ್ಳುವುದನ್ನು ನಾವು ಕಾಣುತೇವೆ. ಇಬ್ಬರು ಹಿಂದು ಮುಸ್ಲಿಮರು ಜಗಳ ಆಡಿದರೆ ಆ ಕ್ಷುಲ್ಲಕ ಕಾರಣ [illegible] ಕೋಮುಗಲಭೆಯನ್ನಾಗಿ ಪರಿವರ್ತಿಸುವ ಮತಾಂಧರೂ ಇದ್ದಾರೆ. ಹಿಂದುಗಳು ಆಗ (Hinduism in danger) ಎಂದೂ ಮುಸ್ಲಿಮರು (Islam in danger) ಎಂದೂ ಕೂಗೆಬ್ಬಿಸಿ ಈ ಕ್ಷುದ್ರ ವೈಯಕ್ತಿಕ ಪ್ರಕರಣವನ್ನು ಸಾಮೂಹಿಕ ಸನ್ನಿವೇಶವಾಗಿ ಪರಿವರ್ತಿಸಲು ತೊಡಗುತ್ತಾರೆ.

ಮತಾಂತರವನ್ನು ಮುಸ್ಲಿಂರೂ ಕ್ರಿಶ್ಚಿಯನ್ನರೂ ತಮ್ಮ ಕಾಯಕ ಮಾಡಿಕೊಂಡಿದ್ದಾರೆ. ಮುಸ್ಲಿಮರು ಹೆಚ್ಚಾಗಿ ಯುದ್ಧ ಹೂಡಿ ಗೆದ್ದಾಗ ಆಕ್ರಮಿತ ದೇಶದ ಅಥವಾ ಪ್ರದೇಶದಲ್ಲಿ ವ್ಯಾಪಕವಾಗಿ ಕಡ್ಡಾಯವಾಗಿ ಮತಾಂತರಗೊಳಿಸಿರುವುದನ್ನು ಇತಿಹಾಸದಲ್ಲಿ ಓದಿದ್ದೇವೆ.

ಕ್ರಿಶ್ಚಿಯನ್ ಪಾದ್ರಿಗಳು ಭಾರತಕ್ಕೆ ಬಂದಾಗ ಬ್ರಿಟೀಷರದೇ ಪ್ರಭುತ್ವವಿದ್ದುದರಿಂದ ಅವರ ಬೆಂಬಲವೂ ಪಾದ್ರಿಗಳಿಗಿತ್ತು. ಭಾರತದ ಎಲ್ಲಕಡೆಯೂ ಹತ್ತಾರು ನೂರಾರು ಎಕರೆಗಳ ಲೆಕ್ಕದಲ್ಲಿ ಪ್ರತಿ ಚರ್ಚಿಗೆ ಪ್ರತಿ ಕ್ರಿಶ್ಚಿಯನ್ ಶಾಲೆಗಳಿಗೆ ನೀಡಿರುವುದನ್ನು ಕಾಣುತ್ತೇವೆ. ಆಗ ಪಾದ್ರಿಗಳು ಸಂತೆಗಳಿಗೆ ಬಂದು ಕ್ರಿಶ್ಚಿಯನ್ ಧರ್ಮದ ಪ್ರಚಾರ ಮಾಡುತ್ತಿದ್ದರು. ಬೈಬಲ್ಲನ್ನು ಪುಕ್ಕಟ್ಟೆ ಹಂಚುತ್ತಿದ್ದರು. ಭಾರತೀಯ ಹಿಂದುಳಿದವರ ಬಡತನದ ಅಜ್ಞಾನವನ್ನು ಬಳಸಿಕೊಂಡು ಪ್ರಲೋಭನೆಗಳನ್ನ ಒಡ್ಡಿ ಮತಾಂತರಗೊಳಿಸುತ್ತಿದ್ದರು. ಈ ದಲಿತರನ್ನು ಹಿಂದೂ ಸಮಾಜ ನಿರ್ಲಕ್ಷಿಸಿದ್ದ ಬಡವರನ್ನು ಮತಾಂತರಗೊಳಿಸುವುದರ ಜೊತೆಜೊತೆಗೇ ಅವರಿಗೆ ಆಶ್ರಯಕೊಟ್ಟು ಊಟವಸತಿ ಒದಗಿಸಿ, ತಾವು ತೆರೆದ ಶಾಲೆಗಳಲ್ಲಿ ಶಿಕ್ಷಣವನ್ನು ನೀಡುತ್ತಿದ್ದರು. ಹಿಂದೂಗಳಿಂದ ನಿರ್ಲಕ್ಷ್ಯಕ್ಕೊಳಗಾದ ಬಡಕುಟುಂಬದ ಕೆಲ ಮಕ್ಕಳಿಗಾದರೂ ಮತಾಂತರದ ಜೊತೆಜೊತೆಗೇ ವಿದ್ಯಾರ್ಜನೆ ಕೆಲಸ ಕಾರ್ಯಗಳು ದೊರಕುವಂತಾಯಿತು ಎಂಬುದನ್ನು ಮರೆಯುವಂತಿಲ್ಲ.

ಪಾದ್ರಿಗಳು ಮತಾಂತರಕ್ಕೆ ಪ್ರೇರಣೆ ನೀಡಲು ಹಿಂದು ದೇವರುಗಳ ದೂಷಣೆಯನ್ನು ಒಂದು ಅಸ್ತ್ರವನ್ನಾಗಿ ಬಳಸುತ್ತಿದ್ದರು. ರಾಮಕೃಷ್ಣ ಇವರನ್ನೆಲ್ಲ ಅವಹೇಳನ ಮಾಡಿ ಏಸುಕ್ರಿಸ್ತನ ಗುಣಗಾನಮಾಡಿ ಆ ಮೂಲಕ ಮತಾಂತರಕ್ಕೆ ಪ್ರೇರಣೆ ನೀಡುತ್ತಿದ್ದರು. ಟಿ.ಪಿ.ಕೈಲಾಸಂ ಅವರು ಮತಾಂತರ ಪ್ರಚಾರ ವೈಖರಿಯನ್ನು ತಮ್ಮದೇ ರೀತಿಯಲ್ಲಿ ಲೇವಡಿ ಮಾಡಿದ್ದಾರೆ. ಒಬ್ಬ ಪಾದ್ರಿ ಕ್ರೈಸ್ತ ಮತದ ಪ್ರಚಾರ ಭಾಷಣ ಮಾಡುತ್ತಾ ಒಂದು ಪ್ರಸಂಗವನ್ನು ಬಿತ್ತರಿಸಿದನಂತೆ. ಒಂದು ಬೆಕ್ಕು ಒಂದು ಇಲಿಯನ್ನು ಹಿಡಿಯಿತು. ಆ ಇಲಿಯನ್ನು ಬೆಕ್ಕಿನಿಂದ ಪಾರುಮಾಡಲು ನಿಮ್ಮ ಕೃಷ್ಣ ಬಂದನೆ? ಇಲ್ಲ, ನಿಮ್ಮ ರಾಮ ಬಂದನೇ? ಇಲ್ಲ. ನಮ್ಮ ಏಸು ಸ್ವಾಮಿ ಬಂದು ಆ ಬೆಕ್ಕನ್ನು ಕೊಂದು ಇಲಿಯನ್ನು ತಿಂದನ್ನು ಎಂದು ಹೇಳಿ ಪಾದ್ರಿಯನ್ನು ಲೇವಡಿ ಮಾಡಿದ್ದಾರೆ.

ಇಂದಿಗೂ ಪಾದ್ರಿಗಳು ಚರ್ಚಿನ ಶಾಲೆಗಳು, ಬಡವರನ್ನು, ನಿರಕ್ಷರರನ್ನು, ಹಿಂದೂಳಿದವರನ್ನು ಪ್ರಲೋಭನೆ ಒಡ್ಡಿ ಮತಾಂತರಗೊಳಿಸುವುದು ನಡೆದೇ ಇದೆ. ಧರ್ಮ ಪ್ರಚಾರ ಮಾಡುವ ಸ್ವಾತಂತ್ರ್ಯವನ್ನು ರಾಜ್ಯಾಂಗ ನೀಡಿರುವುದು ನಿಜ. ಆದರೆ ಆ ಕೆಸವನ್ನೂ ಪ್ರಲೋಭನಗಳನ್ನು ಒಡ್ಡುವ ಮೂಲಕ ಅವರ ಅಸಹಾಯಕತೆ, ಬಡತನ, ಅಜ್ಞಾನ ಇವುಗಳನ್ನು ಬಳಸಿಕೊಳ್ಳುವ ಮೂಲಕ ಮಾಡಲಾಗುತ್ತದೆ. ಈ ಪ್ರವೃತ್ತಿಯನ್ನು ಚರ್ಚುಗಳು, ಪಾದ್ರಿಗಳು ಕೈ ಬಿಡಬೇಕು.

ಮುಸ್ಲಿಂರು ಕ್ರೀಶ್ಚಿಯನ್‌ರ ತಮ್ಮ ಪ್ರತ್ಯೇಕತೆಯನ್ನು ತೊರೆದು

ಮತಾಂತರ ಮತ್ತು ಕೋಮು ಸಾಮರಸ್ಯ

ಮುಖ್ಯವಾಹಿನಿಯ ಜೊತೆಗೆ ಕೂಡಿಕೊಳ್ಳಬೇಕು. ಮಸೀದಿಗಳು, ಚರ್ಚುಗಳು ಅವುಗಳ ಮುಖ್ಯರು ಈ ಪ್ರವೃತ್ತಿಯನ್ನು ಬೆಳೆಸಲು ಸಹಕಾರಿಗಳಾಗಲೇಬೇಕು.

ಹಿಂದು ಮತಾಂಧ ಸಂಸ್ಥೆಗಳು, ಮುಸ್ಲಿಮರನ್ನು, ಕ್ರಿಶ್ಚಿಯನರನ್ನು ದ್ವೇಷಿಸುವ, ದ್ವೇಷವನ್ನು ಪ್ರಚೋದನೆ ಮಾಡುವ ಕೆಲಸವನ್ನು ಮಾಡಬಾರದು. ಭಾರತ ದೇಶ ಎಲ್ಲರಿಗೂ ಸೇರಿದ್ದು ಸಾವಿರಾರು ವರ್ಷಗಳಿಂದ ಭಾರತದ ಅವಿಭಾಜ್ಯ ಅಂಗವಾಗಿ ಬೆಳೆದ ಕ್ರೈಸ್ತರು ಮಾತ್ರ ಮುಸ್ಲಿಂರನ್ನು ಪ್ರತ್ಯೇಕ ದೃಷ್ಟಿಯಿಂದ ನೋಡುವುದು ಸರಿಯಲ್ಲ. ಈ ನಮ್ಮ ದೇಶದಲ್ಲಿ ನೆಲೆಸಲು ಬದುಕಲು ಹಿಂದುಗಳಿಗೆ ಎಷ್ಟು ಅಧಿಕಾರ ಇದೆಯೋ ಅಷ್ಟೇ ಅಧಿಕಾರ ಕ್ರಿಶ್ಚಿಯನರು, ಮುಸ್ಲಿಂರು, ಪಾರ್ಸಿಗಳು,........ ಇವರೆಲ್ಲರಿಗೂ ಇದೆ. ಹಿಂದು ಮತಾಂಧರಿಗೂ ಮತಾಂಧ ಸಂಸ್ಥೆಗಳಿಗೂ ಎರಡನೇ ದರ್ಜೆ ಪ್ರಜೆಗಳನ್ನಾಗಿ ನೋಡುವ ಅಧಿಕಾರ ಇಲ್ಲ. ಈ ಮಾತನ್ನು ಒತ್ತಿ ಹೇಳುವುದಕ್ಕೆ ಕಾರಣ ವೇನೆಂದರೆ ಹಿಂದು ಮತಾಂಧ ನಾಯಕರ ಹಿಂದಿನ ಹೇಳಿಕೆಗಳು ಲೇಖನಗಳು ಭಾಷಣಗಳು ಆರ್.ಎಸ್.ಎಸ್. ನ ಮುಖ್ಯರಾಗಿದ್ದ ಗೋಲ್ವಾಲ್ಕರ್ 1960ರ ಮಾರ್ಚ್ 20 ನೇ ತಾರೀಖು ದೆಹಲಿಯ ರಾಮಲೀಲ ಮೈದಾನದಲ್ಲಿ ಮಾತನಾಡುತ್ತಾ 'ಹಿಂದು ಮುಸಲ್ಮಾನ್ ಇಬ್ಬರೂ ಭಾರತ ದಲ್ಲಿ ವಾಸಿಸುತ್ತಿದ್ದಾರೆ. ಆದ್ದರಿಂದ ಇದೊಂದು ಸಂಯುಕ್ತ ರಾಷ್ಟ್ರ ಎನ್ನುತಾರೆ. ಆದರೆ ಇವರಲ್ಲಿ ಒಬ್ಬ ಆಕ್ರಮಣಕಾರಿ; ಇನ್ನೊಬ್ಬ ಅವನನ್ನು ಪ್ರತಿಭಟಿಸಿದವನು ಎಂಬುದನ್ನು ಹೇಗೆ ಮರೆಯುವುದು ? ಇವರಿಬ್ಬರೂ ಸೇರಿ ಒಂದು ರಾಷ್ಟ್ರವಾಗುವುದು ಹೇಗೆ ಸಾಧ್ಯ? ಸಾರ್ವಭೌಮ ಹಿಂದೂ ರಾಷ್ಟ್ರ ಎಂದು ಸ್ಥಾಪನೆಯಾಗುವುದೋ ಅಂದು ಮಾತ್ರ ಸ್ವಾತಂತ್ರ ನಮಗೆ ಉದಯಿಸಲಿದೆ.

ಇಲ್ಲಿ ವಾಸಿಸುವ ಹಿಂದುಗಳು ಮುಸ್ಲಿಂರು ಕ್ರಿಶ್ಚಿಯನರು ಎಲ್ಲ ಸೇರಿ ಒಂದು ರಾಷ್ಟ್ರವಾಗಲು ಸಾಧ್ಯವಿಲ್ಲ. ಆದ್ದರಿಂದ ಸತ್ಯವನ್ನು ಗೌರವಿಸುವವರೆಲ್ಲರೂ ನಮ್ಮದು ಹಿಂದು ರಾಷ್ಟ್ರ ಎಂದು ಒಪ್ಪಲೇಬೇಕು ಎಂದು ಹೇಳಿದ್ದಾರೆ.

'ಹಿಂದುಗಳು ಜಾತ್ಯತೀತೆಯನ್ನು ಒಪ್ಪಿಕೊಂಡಿರುವವರು. ಮುಸ್ಲಿಂರು ಕಟ್ಟಾಜಾತೀಯ ವಾದಿಗಳು' ಎನ್ನುತಾರೆ ನಾನಾಜಿ ದೇಶ್‌ಮುಖ್. ಅವರು ಮುಂದುವರೆದು ಹಿಂದುಗಳ ಭಾಷೆ, ಜಾತಿ ಪ್ರಾಂತ ಭಾವನೆಯಿಂದ ಕೂಡಿದವರು. ಜಾತಿ, ಭಾಷೆ, ಪ್ರಾಂತೀಯ ಭಾವನೆಯುಳ್ಳ ಹಿಂದುಗಳು ಜಾತ್ಯತೀತರಾಗುವುದು ಹೇಗೆ ಸಾಧ್ಯ? ಎಂದು ಹೇಳುತ್ತಾರೆ.

ಭಾರತದ್ದು ಅನೇಕತ್ವದ ಸಂಸ್ಕೃತಿ ಸಾವಿರಾರು ವರ್ಷಗಳಿಂದ ಅನೇಕ ಜಾತಿ, ಭಾಷೆ, ಸಂಪ್ರದಾಯಗಳ ಜನ ಸೇರಿಕೊಂಡು ನಮ್ಮ ಸಂಸ್ಕೃತಿಯನ್ನು ಪೋಷಿಸಿ ಬೆಳೆಸಿದ್ದಾರೆ. ಕೋಮುವಾರು ವಿಷಾನಲ ಸಾರ್ವಜನಿಕದಲ್ಲಿ, ಧಾರ್ಮಿಕದಲ್ಲಿ, ರಾಜಕೀಯದಲ್ಲಿ ಎಂದೆಂದೂ ತಲೆ ಎತ್ತದಂತೆ ಹರಡದಂತೆ ನಡೆದುಕೊಳ್ಳಬೇಕಾದ ನಮ್ಮೆಲ್ಲರ ಕರ್ತವ್ಯ.

ಶಾಂತಿ, ನೆಮ್ಮದಿಗಳನ್ನು ಬಯಸುವ ಎಲ್ಲ ಧರ್ಮೀಯರೂ ಕೂಡಿಕೊಂಡು ಇಂತಹ ಸಮಜ ಭಂಜಕರ ದುರ್ವರ್ತನೆಯನ್ನು ತಡೆಗಟ್ಟಲು ಪ್ರಯತ್ನ ಶೀಲರಾಗಬೇಕು. ಜನ ಸಾಮಾನ್ಯರಿಗೆ ಸರಿಯಾದ ಮಾರ್ಗ ದರ್ಶನ ಮಾಡಿ. ಮತಾಂಧರು ಹಾಗೂ ರಾಜಕೀಯ ಪುಢಾರಿಗಳು ಮತೀಯ ಭಾವನೆಯನ್ನು ಕೆರಳಿಸಿ ಸಮಾಜವನ್ನು ಒಡೆಯುವ ಹುನ್ನಾರವನ್ನು ತಡೆಗಟ್ಟಬೇಕು.

ಕ್ರಿಶ್ಚಿಯನ ಪಾದ್ರಿಗಳು ಭಾರತಕ್ಕೆ ಬಂದಾಗ ಬ್ರಿಟಿಷರದೇ ಪ್ರಭುತ್ವವಿದ್ದುದರಿಂದ ಅವರ ಬೆಂಬಲವೂ ಪಾದ್ರಿಗಳಿಗಿತ್ತು. ಭಾರತದ ಎಲ್ಲಕಡೆಯೂ ಹತ್ತಾರು ನೂರಾರು ಎಕರೆಗಳ ಲೆಕ್ಕದಲ್ಲಿ ಪ್ರತಿ ಚರ್ಚಿಗೆ ಪ್ರತಿ ಕ್ರಿಶ್ಚಿಯನ್ ಶಾಲೆಗಳಿಗೆ ನೀಡಿರುವುದ್ದನ್ನು ಕಾಣುತ್ತೇವೆ. ಆಗ ಪಾದ್ರಿಗಳು ಸಂತೆಗಳಿಗೆ ಬಂದು ಕ್ರಿಶ್ಚಿಯನ್ ಧರ್ಮದ ಪ್ರಚಾರ ಮಾಡುತ್ತಿದ್ದರು. ಬೈಬಲ್ಲನ್ನು ಪುಕ್ಕಟ್ಟೆ ಹಂಚುತ್ತಿದ್ದರು. ಭಾರತೀಯ ಹಿಂದುಳಿದವರ ಬಡತನದ ಅಜ್ಞಾನವನ್ನು ಬಳಸಿಕೊಂಡು ಪ್ರಲೋಭನೆಗಳನ್ನ ಒಡ್ಡಿ ಮತಾಂತರಗೊಳಿಸುತ್ತಿದ್ದರು. ಈ ದಲಿತರನ್ನು ಹಿಂದು ಜೊತೆಜೊತೆಗೆ ಅವರಿಗೆ ಆಶ್ರಯಕೊಟ್ಟು ಊಟವಸತಿ ಒದಗಿಸಿ ತಾವೇ ತೆರೆದ ಶಾಲೆಗಳಲ್ಲಿ ಶಿಕ್ಷಣವನ್ನು ನೀಡುತ್ತಿದ್ದರು. ಹಿಂದುಗಳಿಂದ ನಿರ್ಲಕ್ಷ್ಯಕೊಳಗಾದ ಬಡಕುಟಂಬದ ಕೆಲ ಮಕ್ಕಳಿಗಾದರೂ ಮತಾಂತರದ ಜೊತೆಜೊತೆಗೇ ವಿದ್ಯಾರ್ಜನೆ ಕೆಲಸ ಕಾರ್ಯಗಳು ದೊರಕುವಂತಾಯಿತು ಎಂಬುದನ್ನು ಮರೆಯುವಂತಿಲ್ಲ.

ಮತಾಂಧತೆ ಮಾನವನನ್ನು ಮತಿ ಹೀನನನ್ನಾಗಿ ಮಾಡುತ್ತದೆ. ಧರ್ಮದ ಅಮಲೇರಿದ ವ್ಯಕ್ತಿ ಎಂತಹ ದುಷ್ಕೃತ್ಯ ಮಾಡಲೂ ಹಿಂಜರಿಯುವುದಿಲ್ಲ. ಮತಾಂಧ ಇತರೆ ಧರ್ಮಗಳನ್ನು ಅಲ್ಲಗಳೆಯುತ್ತಾನೆ ಮತಾಂಧತೆ ಒಂದು ವ್ಯಾಧಿ ಅದು ಕಟ್ಟಾ ಜಾತಿವಾದಿಗಳನ್ನು ಸೃಷ್ಟಿಸುತ್ತದೆ.

ಮಹಮದೀಯರೆಲ್ಲ ಭಯೋತ್ಪಾದಕರಲ್ಲ, ಭಯೋತ್ಪಾದಕರೆಲ್ಲ ಮುಸ್ಲಿಮರೇ ಎಂಬ ಆತಂಕಕಾರಿ ಬೆಳವಣಿಗೆ ಭಾರತದಲ್ಲಿ ವ್ಯಾಪಕವಾಗಿ ಬೆಳೆದು ನಿಂತಿದೆ. ಮುಸ್ಲಿಂ ನಾಯಕರು, ಮುಸ್ಲಿಂ ಧರ್ಮ ಗುರುಗಳು ಇಸ್ಲಾಂ ದಾಸೆಯನ್ನು ಒಪ್ಪುವುದಿಲ್ಲ. ಹಿಂಸಾಚಾರ ನಡೆಸುವವರು ಇಸ್ಲಾಂ ಧರ್ಮಕ್ಕೆ ಅತ್ಯಚಾರ ಮಾಡುತ್ತಿದ್ದಾರೆ ಎಂದು ಹೇಳಿರುವುದು ಸ್ವಾಗತಾರ್ಹವಾದರೂ, ಇಷ್ಟರಿಂದಲೇ ಅವರು ತೃಪ್ತಿಪಟ್ಟುಕೊಳ್ಳಬಾರದು. ಈ ದಾರಿತಪ್ಪಿದ ಯುವಕರನ್ನು ಅವರ ತಂದೆ ತಾಯಿಗಳನ್ನು ಇಸ್ಲಾಂ ಧರ್ಮ ಹೇಳುವ ರೀತಿಯಲ್ಲಿ ದಂಡಿಸಬೇಕು. ಅಂತಹವರನ್ನು ಕಾಫರರೆಂದು ಕರೆಯಬೇಕು ಮತ್ತು ಅದಕ್ಕೂ ಮುಖ್ಯವಾಗಿ ಅವರನ್ನೆಲ ಹಿಡಿದು ಸರ್ಕಾರಕ್ಕೆ ಒಪ್ಪಿಸಬೇಕು ಹಾಗೆ ಮಾಡಲಿಲ್ಲವಾದರೆ, ಈ ಧರ್ಮ ಗುರುಗಳು ಪರೋಕ್ಷವಾಗಿ ಈ ದಾರಿತಪ್ಪಿದ ಮುಸ್ಲಿಂ ಯುವಕರಿಗೆ ಪ್ರೋತ್ಸಾಹ ನೀಡುವವರೇ ಎಂದು ಭಾವಿಸಬೇಕಾದೀತು. □

ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ಮತಾಂತರ ಮತ್ತು ಮೂಲಭೂತ ಸ್ವಾತಂತ್ರ್ಯಗಳು

ಮತಾಂತರದ ಬಗೆಗಿನ ಚರ್ಚೆ ಹಿಂದೂ ಮೂಲಭೂತವಾದಿಗಳು ಮತ್ತು ಕ್ರೈಸ್ತ ಪಾದ್ರಿಗಳಿಗೆ ಸೀಮಿತಗೊಂಡಿದೆ. ನೀವು ಬಲಾತ್ಕಾರದಿಂದ ಮತ್ತು ಆಶೇ ಆಮಿಷ ಗಳನ್ನು ಒಡ್ಡುವುದರ ಮೂಲಕ ಮತಾಂತರ ಮಾಡುತ್ತಿದ್ದೀರೆಂದು ಮೊದಲನೆಯ ಗುಂಪೂ, ನಾವು ಹಾಗೆ ಮಾಡುತ್ತಿಲ್ಲವೆಂದು ಎರಡನೆಯ ಗುಂಪೂ ಆರೋಪ ಮಾಡುವ ಮತ್ತು ಅದನ್ನ ಅಲ್ಲಗೆಳೆಯುವ ಕಾರ್ಯದಲ್ಲಿ ತೊಡಗಿವೆ. ಈ ಚರ್ಚೆ ಮತಾಂತರಗೊಳ್ಳಲು ಇಚ್ಛಿಸುವವರ ಭಾವನೆಗಳು, ಅವಶ್ಯಕತೆಗಳು ಮತ್ತು ನೈಜ ಇಚ್ಛೆಗಳನ್ನು ಸಂಪೂರ್ಣವಾಗಿ ಕಡೆಗಣಿಸಿದೆ, ಈಗ ನಡೆದಿರುವ ಹಿಂಸೆಗೆ ಅವರೇ ಗುರಿಯಾಗಿರುವುದು. ಅವರ ಮನೆಗಳೆ ಬೆಂಕಿಗಾಹುತಿಯಾಗಿರುವುದು ಮತ್ತು ಅವರೆ ಬೀದಿಪಾಲಾಗಿರುವವರು. ಅವರ ಹೆಣ್ಣು ಮಕ್ಕಳೆ ಬಲಾತ್ಕಾರಕ್ಕೊಳಗಾಗಿರುವವರು. ಅವರಿಂದಲೇ ಹಿಂದೂ ಮೂಲಭೂತವಾದಿಗಳು ಅವರ ಸ್ವಂತ ಮನೆಯೊಳಗೆ ಬಿಡಲು, ಹಿಂದೂ ಧರ್ಮದೊಳಗೆ ಉಳಿಯುವ ಪ್ರಮಾಣ ಪತ್ರ ಪಡೆಯುತ್ತಿರುವುದು.

ಎಸ್. ಮರಿಸ್ವಾಮಿ

ಇತ್ತೀಚೆಗೆ ದೇಶದಲ್ಲಿ, ಅದರಲ್ಲೂ ಒರಿಸ್ಸಾ ಮತ್ತು ಕರ್ನಾಟಕದಲ್ಲಿ ಚರ್ಚುಗಳ ಮೇಲೆ ಅನೇಕ ಕಡೆ ದಾಳಿಗಳು ನಡೆದಿದ್ದನ್ನು ನಾವು ನೋಡಿದ್ದೇವೆ. ಕರ್ನಾಟಕದಲ್ಲಿ ಪರಿಸ್ಥಿತಿ ಬೇಗ ಸುಧಾರಿಸಿದರೂ, ಒರಿಸ್ಸಾದಲ್ಲಿ ಪರಿಸ್ಥಿತಿಯನ್ನು ತಹಬಂದಿಗೆ ತರಲು ಬಹಳ ಸಮಯ ಕಾಯಬೇಕಾಯಿತು. ಈ ಗಲಭೆಗಳಲ್ಲಿ ಒರಿಸ್ಸಾದಲ್ಲಿ ಸಾವಿರಾರು ಜನರು ತಮ್ಮ ಮನೆ ಮಠಗಳನ್ನು ಕಳೆದುಕೊಂಡರು. ಅವರು ನಿರಾಶ್ರಿತರ ಶಿಬಿರಗಳಲ್ಲಿ ಸ್ಥಳ ಪಡೆಯಬೇಕಾಯಿತು. ೩೫ಕ್ಕೂ ಹೆಚ್ಚು ಜನರು ಪ್ರಾಣ ಕಳೆದುಕೊಂಡರು. ಅನೇಕ ಗ್ರಾಮಗಳು ಬೆಂಕಿಗಾಹುತಿಯಾದವು. ಕ್ರೈಸ್ತ ಸನ್ಯಾಸಿನಿಯನ್ನೊಳಗೊಂಡಂತೆ ಅನೇಕ ಮಹಿಳೆಯರ ಮಾನಹರಣವಾಯಿತು.

ಈ ಘಟನೆಗಳ ಬಗೆಗಿನ ಆ ರಾಜ್ಯಗಳ ಪ್ರತಿಕ್ರಿಯೆ ಬಹಳ ಮೃದುವೂ, ಸಾಮನ್ಯವೂ ಆಗಿತ್ತು. ಗಲಭೆಯ ಮೊದಲ ದಿನಗಳಲ್ಲಿ ಕರ್ನಾಟಕದ ಮುಖ್ಯಮಂತ್ರಿ ಯಡಿಯೂರಪ್ಪನವರು ಇಂತಹ ಗಲಭೆಗಳು ಬಹಳ ಸಾಮನ್ಯ ಎಂಬಂತೆ ಪ್ರತಿಕ್ರಿಯೆ ನೀಡಿದರು. ಅವರು ಮತಾಂತರದಿಂದಲೇ ಈ ಗಲಭೆಗಳು ಉಂಟಾಗಿರುವುದು ಎಂಬಂತಹ ಹೇಳಿಕೆ ನೀಡಿ, ಸ್ವಲ್ಪ ಮಟ್ಟಿಗೆ ಅವು ಸರಿ ಎನ್ನುವ ಮಟ್ಟಿಗೆ ಮಾತನಾಡಿದರು. ಕೇಂದ್ರ ಸರ್ಕಾರ ಒಂದು ಸಲಹಾ ಪತ್ರ ಕಳಿಸಿ, ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿನ ವಿಫಲತೆಗಾಗಿ ಸರ್ಕಾರವನ್ನು ಕಿತ್ತು ಹಾಕಬಹುದು ಎಂಬ ಸೂಚನೆ ನೀಡಿದ ನಂತರವಷ್ಟೇ ಅವರು ಈ ಘಟನೆಗಳನ್ನು ಕಟುವಾಗಿ ಟೀಕಿಸಿದ್ದು, ಮತ್ತು ಗಲಭೆಕೋರರ ಮೇಲೆ ಕಠಿಣ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಸೂಚಿಸಿದ್ದು. ಅಲ್ಲಿಯವರೆಗೆ ಪೋಲೀಸರು ಏನೂ ಗಂಭೀರವಾದದ್ದು ನಡೆಯುತ್ತಲೇ ಇಲ್ಲ ಎಂಬಂತಿದ್ದರಲ್ಲದೆ, ಗಲಭೇ ಮತ್ತು ಹಿಂಸಾಚಾರಗಳನ್ನು ಪ್ರತಿಭಟಿಸುತ್ತಿದ್ದ ಕ್ರೈಸ್ತ ಯುವಕರ ಮೇಲೆ ಕಾನೂನು ಭಂಗ ಮಾಡಿದರೆಂಬ ಆರೋಪ ಹೊರಿಸಿ ಕೇಸು ದಾಖಲಿಸಿದ್ದೂ ಉಂಟು.

ಒರಿಸ್ಸಾದ ಕಂಧಮಾಲ್ ಜಿಲ್ಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ಕೇಂದ್ರ ಪಡೆಗಳನ್ನು ತುರ್ತಾಗಿ ಕಳುಹಿಸಿತ್ತಾದರೂ, ಅವುಗಳನ್ನು ನೇಮಿಸುವುದರಲ್ಲಿ ರಾಜ್ಯ ಬಹಳ ವಿಳಂಬ ಮಾಡಿತು. ಅದು ಕಿಡಿಗೇಡಿಗಳ ಮೇಲೆ ಕ್ರಮಕೈಗೊಳ್ಳಲು ಹಿಂದು ಮುಂದು ನೋಡಿತು. ಕೇಂದ್ರ ಸರ್ಕಾರದಿಂದ ಕಳುಹಿಸಲ್ಪಟ್ಟ ಸಲಹಾ ಪತ್ರಗಳೂ ಅದರ ಮೇಲೆ ಹೆಚ್ಚು ಪರಿಣಾಮ ಬೀರಲಿಲ್ಲ. ಇನ್ನೇನು ಕೇಂದ್ರಾಡಳಿತವನ್ನು ರಾಜ್ಯದ ಮೇಲೆ ಹೇರಬಹುದು ಎಂಬ ಸೂಚನೆ ಬಂದಾಗಲಷ್ಟೆ ಅದು ಗಲಭೆಕೋರರ ಮೇಲೆ ಕ್ರಮ ಕೈಗೊಳ್ಳಲು ಮುಂದಾಯಿತು.

ಈ ರಾಜ್ಯಗಳ ಸರ್ಕಾರಗಳಲ್ಲಿನ ವಿವಿಧ ಹಂತಗಳ ಮುಖ್ಯಸ್ಥರು ಮತ್ತು ಅಧಿಕಾರಿಗಳ ಗಲಭೆ ಸಂದರ್ಭದಲ್ಲಿನ ಹೇಳಿಕೆಗಳು ಮತ್ತು ನಡವಳಿಕೆಗಳು ಅವರ ಮನಃಸ್ಥಿತಿಯ ಬಗ್ಗೆ ಬಹಳಷ್ಟು ಬೆಳಕು ಚೆಲ್ಲುತ್ತವೆ. ರಾಜ್ಯ ಸರ್ಕಾರದ ಕಡೆಯ ಪ್ರತಿಯೊಬ್ಬರೂ ಈ ಗಲಭೆಗಳಿಗೆ ಮತಾಂತರ, ಅವರ ಮಾತಿನಲ್ಲೆ ಹೇಳುವುದಾದರೆ ಬಲತ್ಕಾರದ ಮತಾಂತರವೇ ಕಾರಣ ಎಂಬ ನಿರ್ಧಾರವನ್ನು ಘೋಷಿಸಿದರು. ಮತಾಂತರಗೊಂಡವರಿಂದ, ಬಲಾತ್ಕಾರದ ಯಾವುದೇ ಫಿರ್ಯಾದು ಇಲ್ಲ ಎಂಬುದು ಅವರ ನಿಲುವಿನಲ್ಲಿ ಯಾವುದೇ ಬದಲಾವಣೆ ಮಾಡಲಿಲ್ಲ. ಜತೆಗೆ ಗಲಭೆಗೊಳಗಾದವರಿಂದ ಬಂದ ಅನೇಕ ಫಿರ್ಯಾದುಗಳನ್ನು ಪೋಲೀಸರು ಪುರಸ್ಕರಿಸಲಿಲ್ಲ. ಭಜರಂಗದಳದಂತ ಸ್ವಯಂ ನೇಮಿತ ಪೋಲೀಸರ ಒತ್ತಡಕ್ಕೊಳಗಾಗಿ ಸುಳ್ಳು ಮಾಹಿತಿ ಮೇಲೆ ಗಲಭೆಗೊಳಗಾದವರ ಮೇಲೆ ಅನೇಕ ಮೊಕದ್ದಮೆಗಳು ಸಹಾ ದಾಖಲಾದವು. ಸಮಾಜ ಚಿಂತಕರೊಬ್ಬರ ಪ್ರಶ್ನೆಗೆ ಪೋಲೀಸ್ ಇನ್ಸ್‌ಪೆಕ್ಟರ್ ಒಬ್ಬರು ಈ ವೈಚಿತ್ರ್ಯವನ್ನು ಒಪ್ಪಿಕೊಂಡು "ಅಷ್ಟು ಜನ ಬಂದು ಒತ್ತಾಯಿಸಿದಾಗಿ ಬೇರೇನು ಮಾಡಲು ಸಾಧ್ಯ"? ಎಂದುತ್ತರಿಸಿದರು.

ನಂತರದ ತಮ್ಮೊಂದು ಭಾಷಣದಲ್ಲಿ ಯಡಿಯೂರಪ್ಪ ಭಯೋತ್ಪಾದನೆ ಮತ್ತು ಮತಾಂತರ ಇವರೆಡನ್ನೂ ಒಂದೇ ತಕ್ಕಡಿಯಲ್ಲಿಡುತ್ತಾ, ಭಯೋತ್ಪಾದನೆ ಮತ್ತು ಮತಾಂತರ ಇವೆರಡೂ ರಾಜ್ಯದ ಮುಂದಿರುವ ಅತಿ ಗಂಭೀರ ಸವಾಲುಗಳು ಎಂದು ಅಭಿಪ್ರಾಯಪಟ್ಟರು. ದುರಾದೃಷ್ಟವಶಾತ್ ಅಲ್ಪ ಸಂಖ್ಯಾತ ವರ್ಗದಿಂದ ಬಂದ ಅವರ ಸಂಪುಟದ ಮಂತ್ರಿಯೊಬ್ಬರು ಕನ್ನಡ ದಿನಪತ್ರಿಕೆಯೊಂದಕ್ಕೆ ಬರೆಯುತ್ತಾ "ಒಬ್ಬ ಮತಾಂತರ ಬಯಸುವವನು ತನ್ನ ಸ್ವಇಚ್ಛೆಯ ಮೇರೆಗೆ ಪಾಸ್ಟರನಲ್ಲಿ ಹೋಗಿ ಮತಾಂತರಗೊಳ್ಳಲು ಅವನ ಸ್ವಚ್ಛೆಯಿಂದ ಕೇಳಿಕೊಂಡಲ್ಲಿ ಪಾಸ್ಟರನು ಅದನ್ನು ತಿರಸ್ಕರಿಸಬೇಕು. ಒಂದು ವರ್ಷದ ನಂತರ ಮತ್ತೊಮ್ಮೆ ಅವನು ಪಾಸ್ಟರನಲ್ಲಿ ಹೋಗಿ ಅದೇ ಕೋರಿಕೆಯನ್ನು ಮುಂದಿಟ್ಟಾಗಲೂ ಪಾಸ್ಟರನು ಅದನ್ನು ತಿರಸ್ಕರಿಸಬೇಕು' ಎಂಬ ಪ್ರಬುದ್ಧ ತೀರ್ಮಾನವನ್ನು ನೀಡಿದರು. ಈ ಮಧ್ಯೆ ಹಿಂದೂ ಧರ್ಮ ಗುರುಗಳ ಒಂದು ಗುಂಪು ರಾಜ್ಯಪಾಲರನ್ನು ಬೇಟಿ ಮಾಡಿ ಮತಾಂತರ ತಡೆಗಟ್ಟಲು ಒಂದು ಕಾನೂನು ತರುವಂತೆ ಒತ್ತಾಯಿಸಿದರು. ನಂತರ ಮಾಧ್ಯಮದವರೊಡನೆ ಮಾತನಾಡಿದ ಅವರ ನಾಯಕರ ಅವರ ಒಪ್ಪಿಗೆ ಇಲ್ಲದ ಮತಾಂತರ ಅಪ್ರಯೋಜಕ ಎಂಬಂತೆ ನಾವು ಈ ಮತಾಂತರಗಳನ್ನು ಒಪ್ಪುವುದಿಲ್ಲ ಎಂಬ ಹೇಳಿಕೆ ನೀಡಿದರು. ಇವರಲ್ಲಿ ಯಾರು ಈ ವಿಷಯದಲ್ಲಿ ರಾಜ್ಯಾಂಗ ಏನು ಹೇಳುತ್ತದೆ ಎಂದು ತಿಳಿದುಕೊಳ್ಳುವ ಗೋಜಿಗೆ ಹೋಗಿರಲಿಕ್ಕಿಲ್ಲ.

ರಾಜ್ಯಾಂಗದ ವಿಧಿಗಳನ್ನು ಸದ್ಯಕ್ಕೆ ಪಕ್ಕಕ್ಕಿಟ್ಟು ಒಂದು ಪ್ರಶ್ನೆ ಕೇಳೋಣ. ನಮ್ಮಲ್ಲಿನ ಧರ್ಮಗಳ ಈ ಮತಗಳ ಸಂಸ್ಥಾಪಕರು, ತಾವು ಕಂಡುಕೊಂಡ ಸತ್ಯಗಳು ಯಾರನ್ನು ತಲುಪಬೇಕೆಂದು ಬಯಸಿದ್ದರು? ಯಾರಿಗಾಗಿ ಅವರು ಈ ಸತ್ಯಗಳನ್ನು ಭೋಧಿಸಿದರು? ಕೇವಲ ಕೆಲವೇ ಕೆಲವರಿಗಾಗಿ ಅವರು ಭೋಧಿಸಿದರೆ? ಬುದ್ಧ, ಕ್ರೈಸ್ತ, ಮಹಮ್ಮದ್ ಪೈಗಂಬರ್ ಅಥವಾ ವೇದ, ಉಪನಿಷತ್ತುಗಳನ್ನು ಬರೆದ ಋಷಿಗಳಾಗಲಿ ತಮ್ಮ ಭೋಧನೆ ಒಂದು ಸಣ್ಣ ಗುಂಪಿಗೆ ಸೀಮಿತಗೊಳ್ಳಬೇಕು ಎಂದು ಬಯಸಿರಲಿಲ್ಲ. ಅವರು ತಾವು ಕಂಡುಕೊಂಡ ಸತ್ಯಗಳನ್ನು ಕಿವಿಯಿದ್ದು ಕೇಳುವ, ಮನಸಾಕ್ಷಿಯಿದ್ದು ಸಂವೇದನೆಗೊಳಪಡುವ ಎಲ್ಲ ಜನರಿಗೆ, ಇಡೀ ಪ್ರಪಂಚಕ್ಕೆ ಅವರು ಘೋಷಿಸಿದರು. ಅಷ್ಟಾದರೂ ಅವರು ಏನನ್ನು ಭೋಧಿಸಿದರು? ಅವರು ಈ ಜೀವನದಲ್ಲಿ ಸನ್ನಡತೆ, ಶಾಂತಿ, ಸುಖ ಮತ್ತು ನಂತರದಲ್ಲಿ ಮುಕ್ತಿ ಇವುಗಳ ಬಗ್ಗೆ ಭೋಧಿಸಿದರು. ಅವರು ಎಲ್ಲಾ ಜೀವಿಗಳಿಗೆ ಕರುಣೆತೋರಿಸುವುದರ ಬಗ್ಗೆ, ಒಡಗೂಡಿ ಬಾಳುವುದರ ಬಗ್ಗೆ ಹೇಳಿದರು. ಅವರು ಎಲ್ಲರಿಗೆ ಸಾಮಾಜಿಕ ನ್ಯಾಯ ದೊರೆಯುವುದರ ಬಗ್ಗೆ, ಅಶಕ್ತರ ರಕ್ಷಣೆಯ ಬಗ್ಗೆ ಒತ್ತಿ ಹೇಳಿದರು. ಅವರ ಭೋಧನೆಯ ಗುರಿ ಜನರನ್ನು ಸನ್ನಡತೆಯ ಮಾರ್ಗದಲ್ಲಿ

ಎಲ್ಲ ಧರ್ಮಗಳ ಹುಟ್ಟು ಐದು ಸಾವಿರ ವರ್ಷಗಳಿಂದೀಚೆಗೆ ಆದದ್ದು. ಮನುಷ್ಯನ ಉದಯ ಎಲ್ಲಾ ಧರ್ಮಗಳ ಹುಟ್ಟಿಗಿಂತ ಮುಂಚಿನದು. ಮನುಷ್ಯ ತನಗೆ ಸಹಾಯಕ ಎಂದು ಕಂಡ, ತನಗೆ ಹೆದರಿಕೆ ಉಂಟು ಮಾಡಿದ ಎಲ್ಲಾ ನೈಸರ್ಗಿಕ ಶಕ್ತಿಗಳನ್ನು, ಪ್ರಾಕೃತಿಕ ಸ್ವರೂಪಗಳನ್ನು ಪೂಜಿಸುತ್ತಾ ಬಂದ, ತನ್ನ ತಿಳುವಳಿಕೆಗೆ ಗೋಚರವಾದಂತೆ ಆಗಾಗ್ಗೆ ಬದಲಯಿಸುತ್ತಲೂ ಬಂದ. ಪ್ರಾಣ ಪಕ್ಷಿಗಳ ಪೂಜೆಯಿಂದ ಇಡಿದು ಹಲವು ದೇವತೆಗಳ, ಏಕದೇವತೆಯ ಇಲ್ಲವೆ ಕೇವಲ ಸನ್ನಡತೆಯ ಆರಾದಕನಾಗಿ ಸತತವಾಗಿ ಬದಲಗುತ್ತ ಬಂದ. ಇಂದು ನಾವು ಒಂದು ಧರ್ಮದವರಾಗಿರಬಹುದು, ಹಿಂದೆ ನಾವು ಬದಲಾಗಿಲ್ಲ. ಮುಂದೆ ಬದಲಾಗುವುದಿಲ್ಲ ಎನ್ನುವುದೇನು ಇಲ್ಲ. ಎಲ್ಲಾ ಪ್ರಾಜ್ಞರೂ ಕೆಡಕೆನಿಸಿದ ಹಳೆಯದನ್ನು ಬಿಡುತ್ತಾ, ಸರಿಯೆನಿಸಿದ ಹೊಸತನ್ನು ಒಪ್ಪುತ್ತಾ ಬಂದರು. ನಾವೆಲ್ಲರೂ ಒಂದಲ್ಲಾ ಒಂದು ಕಾಲದಲ್ಲಿ ಮತಾಂತರಿಗಳೆ. ಆದ್ದರಿಂದ ಯಾವುದೇ ಧರ್ಮಕ್ಕಾಗಿ ಹೊಡೆದಾಡುವುದು ತಪ್ಪು

ನಡೆಸುವುದಾಗಿತ್ತು. ಅವರ ಭೋಧನೆ ಪ್ರಪಂಚದ ಎಲ್ಲ ಜನರನ್ನು ಉದ್ದೇಶಿಸಿದುದಾಗಿತ್ತು. ಆ ಭೋಧನೆಯನ್ನು ಯಾವುದೇ ವ್ಯಕ್ತಿ ತನ್ನಲ್ಲಿ ಗೌಪ್ಯವ್ಯಾಗಿಟ್ಟುಕೊಂಡರೆ ನೊಂದವರಿಗೆ ಅದನ್ನ ತಿಳಿಸಿ ಧೈರ್ಯಸ್ಥೈರ್ಯ ತುಂಬದಿದ್ದರೆ ಅವನು ಮಾನವ ವಿರೋಧಿ ಎಂದೇ ಪರಿಗಣಿಸಬೇಕಾಗುತ್ತದೆ. ಈ ದೃಷ್ಟಿಯಲ್ಲಿ ಎಲ್ಲಾ ಧರ್ಮಗಳಲ್ಲಿಯೂ ಆಚರಣೆ ಮತ್ತು ಪ್ರಚಾರ ಒಟ್ಟಾಗಿ ನಡೆಯಬೇಕಾಗಿರುತ್ತವೆ.

ಈ ವಿವಾದವನ್ನು ಇನ್ನೊಂದು ದೃಷ್ಟಿಯಿಂದ ನೋಡೋಣ. ಗಲಭೆಯ ಸಂದರ್ಭದಲ್ಲಿ, ಮತಾಂತರದ ಬಗೆಗಿನ ಚರ್ಚೆ ಹಿಂದೂ ಮೂಲಭೂತವಾದಿಗಳು ಮತ್ತು ಕ್ರೈಸ್ತ ಪಾದ್ರಿಗಳಿಗೆ ಸೀಮಿತಗೊಂಡಿದೆ. ನೀವು ಬಲಾತ್ಕಾರದಿಂದ ಮತ್ತು ಆಶೇ ಆಮಿಷಗಳನ್ನು ಒಡ್ಡುವುದರ ಮೂಲಕ ಮತಾಂತರ ಮಾಡುತ್ತಿದ್ದೀರೆಂದು ಮೊದಲನೆಯ ಗುಂಪೂ, ನಾವು ಹಾಗೆ ಮಾಡುತ್ತಿಲ್ಲವೆಂದು ಎರಡನೆಯ ಗುಂಪೂ ಆರೋಪ ಮಾಡುವ ಮತ್ತು ಅದನ್ನ ಅಲ್ಲಗಳೆಯುವ ಕಾರ್ಯದಲ್ಲಿ ತೊಡಗಿವೆ. ಈ ಚರ್ಚೆ ಮತಾಂತರ ಗೊಳ್ಳಲು ಇಚ್ಛಿಸುವವರ ಭಾವನೆಗಳು, ಅವಶ್ಯಕತೆಗಳು ಮತ್ತು ನೈಜ ಇಚ್ಛೆಗಳನ್ನು ಸಂಪೂರ್ಣವಾಗಿ ಕಡೆಗಣಿಸಿದೆ, ಈಗ ನಡೆದಿರುವ ಹಿಂಸೆಗೆ ಅವರೇ ಗುರಿಯಾಗಿರುವುದು. ಅವರ ಮನೆಗಳೆ ಬೆಂಕಿಗಾಹುತಿಯಾಗಿರುವುದು ಮತ್ತು ಅವರೆ ಬೀದಿಪಾಲಾಗಿರುವವರು. ಅವರ ಹೆಣ್ಣು ಮಕ್ಕಳೆ ಬಲಾತ್ಕಾರಕ್ಕೊಳಗಾಗಿರುವವರು. ಅವರಿಂದಲೇ ಹಿಂದೂ ಮೂಲಭೂತವಾದಿಗಳು ಅವರ ಸ್ವಂತ ಮನೆಯೊಳಗೆ ಜಿಡಲು, ಹಿಂದೂ ಧರ್ಮದೊಳಗೆ ಉಳಿಯುವ ಪ್ರಮಾಣ ಪತ್ರ ಪಡೆಯುತ್ತಿರುವುದು. ಈ ವರ್ಗವೆ ರಾಜ್ಯಾಂಗ ದತ್ತವಾದ ಮನಸ್ಸಾಕ್ಷಿಯಂತೆ ಧರ್ಮವನ್ನು ಪಾಲಿಸುವ, ಆಚರಿಸುವ, ಪ್ರಚಾರಿಸುವ ಹಕ್ಕಿನಿಂದ ವಂಚಿತರಾಗಿರುವುದು, ಇತರ ಗುಂಪುಗಳಿಗಿಂತ ಈ ಗುಂಪೇ ಮತಾಂತರ ಬೇಕೇ, ಬೇಡವೇ ಎನ್ನುವ ವಿಚಾರದಲ್ಲಿ ಸಂಬಂಧ ಹೊಂದಿರುವುದು, ಹೆಚ್ಚು ಆಸ್ಥೆ ಹೊಂದಿರುವುದು. ಈಗ ನಾವು ಹೊಸದಾಗಿ ಅವರನ್ನು ಯಾವುದೇ ಬಲಾತ್ಕಾರವಿಲ್ಲದೆ ನೀವು ಮತಾಂತರ ಹೊಂದಲು ಸಿದ್ಧರಾಗಿದ್ದೀರಾ ಎಂದು ಕೇಳಬೇಕಾಗುತ್ತದೆ. ಚರ್ಚೆ ಇಲ್ಲಿಂದ ಮರು ಪ್ರಾರಂಭಗೊಳ್ಳಬೇಕಾಗುತ್ತದೆ.

ಗಾಂಧೀಜಿಯವರು ಹೇಳಿದರು "ಧರ್ಮಕ್ಕೆ ರಾಜಕೀಯದ ಜತೆ ಯಾವುದೇ ಸಂಬಂಧವಿಲ್ಲ ಎನ್ನುವವರಿಗೆ, ಧರ್ಮ ಎಂದರೆ ಏನು ಎನ್ನುವುದು ಗೊತ್ತಿಲ್ಲ" ಎಂದು. ರಾಜಕೀಯದಲ್ಲಿ ಧರ್ಮವನ್ನು ಎಥೇಚ್ಛವಾಗಿ ಬಳಸಿದ ಅವರಿಗೆ ಇದು ಗೊತ್ತಿರಲೇಬೇಕು. ಈವತ್ತಿನ ಈ ಕೆಟ್ಟ ಸಂದರ್ಭದಲ್ಲಿಯೂ ಯಾವುದೇ ಒಂದು ಧರ್ಮ ಒಳಿತೇ, ಕೆಟ್ಟದ್ದೇ ಎಂಬುದು ಪ್ರಶ್ನೆಯಾಗಿ ಉಳಿದಿಲ್ಲ. ಪ್ರಶ್ನೆಯಾಗುಳಿದಿರುವುದು ಮತಾಂತರದಿಂದ ಉಂಟಾಗಬಹುದಾದ ರಾಜಕೀಯ ಏರುಪೇರುಗಳು. ಒಂದು ಮತವನ್ನು ಬಿಟ್ಟು ಮತ್ತೊಂದು ಮತಕ್ಕೆ ಹೋಗುವವರನ್ನು ತನ್ನಲೇ ಉಳಿಸಿಕೊಳ್ಳುವುದು ಮುಖ್ಯವಾಗಿದ್ದರೆ, ಆ ಧರ್ಮ ಅಂತಹವರಿಗೆ ತಮ್ಮ ಧರ್ಮದ ಪಾರಮಾರ್ಥಿಕ ದರ್ಶನ, ಜೀವನದೃಷ್ಟಿ, ಬದುಕಿನಾಚೆಗಿನ ನೋಟ ಮುಂತಾದವುಗಳ ಶ್ರೇಷ್ಠತೆಯನ್ನು ಮನದಟ್ಟು ಮಾಡಬಹುದಾಗಿತ್ತು. ತಮ್ಮ ಧರ್ಮದಲ್ಲಿನ ಮಾನವೀಯತೆ, ಸಮಭಾವ, ಭ್ರಾತೃತ್ವಗಳನ್ನು ತಿಳಿಸಿಹೇಳಬಹುದಿತ್ತು. ಇದು ಅವರ ಮನಃ ಪರಿವರ್ತನೆ ಮಾಡಿ ಅವರು ಅಲ್ಲಿಯೆ ಉಳಿಯುವಂತೆ ಮಾಡುತ್ತಿತ್ತು. ವಿಷಯ ಆಮಿಷಗಳನ್ನೊಡ್ಡಿ ಮತಾಂತರ ಮಾಡಿಸುವುದಿದ್ದಲ್ಲಿ, ಆಗ ಸಹ ತಮ್ಮದೆ ಧರ್ಮದಲ್ಲಿ ಅವರನ್ನು ಉಳಿಸಿಕೊಳ್ಳಲಿಚ್ಛಿಸುವವರು ತಾವೆ ಮುಂದೆ ಬಂದು ತಮಗೆ ಸಾಧ್ಯವಾದ ಅವಕಾಶಗಳನ್ನು ಅವರಿಗೆ ಒದಗಿಸಬಹುದಿತ್ತು. ಹೀಗೆ ಮಾಡಿದ್ದಿದ್ದರೆ ಈ ಬಡ ಜನತೆ ಮತಾಂತರ ಮಾಡಲು ಎಂದೂ ಮನಸ್ಸು ಮಾಡುತ್ತಿರಲಿಲ್ಲ.

ಆದರೆ ಇಂತಹ ಕ್ರಮಗಳು ಇಂದು ಹಿಂಸಾಚಾರದಲ್ಲಿ ತೊಡಗಿರುವವರಿಂದ ಅಪೇಕ್ಷಿಸಬಹುದಾದ ಕ್ರಮಗಳಲ್ಲ. ಮತಾಂತರಗೊಳ್ಳುತ್ತಿರುವ ಈ ಜನರಿಗೆ ಅವರು ತಮ್ಮದೆ ರೀತಿಯಲ್ಲಿ ಪಾಠಕಲಿಸುತ್ತಾರೆ. ಈ ಅಸಹಾಯಕರನ್ನು ತಮ್ಮ ಕಾಲಬುಡದಲ್ಲಿಡಲು ಅವರು ಕೊಲೆ ಮಾಡುತ್ತಾರೆ. ಮನೆ ಮಠಗಳನ್ನು ಸುಡುತ್ತಾರೆ. ಮಹಿಳೆಯರ ಮಾನಹರಣಗೈಯುತ್ತಾರೆ ಮತ್ತು ಲೂಟಿ ಮಾಡುತ್ತಾರೆ. ಇದನ್ನೇ ಅವರು ಸಾವಿರಾರು ವರ್ಷ ಮಾಡುತ್ತಾ ಬಂದದ್ದು. ರಾಜ್ಯಾಂಗ ಅದರಲ್ಲಿ ಕೊಡಮಾಡಿರುವ ಮೂಲಭೂತ ಹಕ್ಕುಗಳು ಮತ್ತು ಸ್ವಾತಂತ್ರಗಳಿಗೆ ಅವರು ಕವಡೆಯಷ್ಟೂ ಬೆಲೆ ನೀಡುವುದಿಲ್ಲ. ರಾಜ್ಯಗಳಲ್ಲಿ ಅವರದೇ ಆದ ಸರ್ಕಾರಗಳಿಲ್ಲವೆ?

ಕೆಲ ವರ್ಷಗಳ ಹಿಂದೆ ನಾನು ಎಲ್ಲಾ ಧರ್ಮಗಳ ಒಂದು ಸಭೆಯಲ್ಲಿ ಮಾತನಾಡುತ್ತಿದ್ದೆ. ಈ ಸಭೆಯನ್ನು ಸೂಕ್ಷ್ಮವಾದ ಹಬ್ಬ ಒಂದರ ಮುನ್ನಾದಿನ, ಹಬ್ಬದ ಸಂದರ್ಭದಲ್ಲಿ ಕೋಮುಸೌಹಾರ್ದ ಕಾಪಾಡುವಂತೆ ಕೋರಲು ಕರೆಯಲಾಗಿತ್ತು. ಧರ್ಮ ಮನುಷ್ಯನಿಗಾಗಿ, ಮನುಷ್ಯ ಧರ್ಮಕ್ಕಾಗಿಯಲ್ಲ ಎಂಬ ಅಂಶವನ್ನು ಮನನಾಟುವಂತೆ ಹೇಳಲು ನಾನು ಅಲ್ಲಿದ್ದವರನ್ನು "ನಿಮ್ಮಲ್ಲಿ ಯಾರಾದರೂ ಮತಾಂತರಿಗಳಲ್ಲದವರು ಇದ್ದಾರೆಯೆ" ಎಂದು ಕೇಳಿದೆ. ಅವರು ಒಬ್ಬರ ಮುಖ ಮತ್ತೊಬ್ಬರು ನೋಡಿಕೊಂಡರು. ಅವರಿಗೆ ಇದರರ್ಥವಾಗಲಿಲ್ಲ. ಎಲ್ಲ ಧರ್ಮಗಳ ಹುಟ್ಟು ಐದು ಸಾವಿರ ವರ್ಷಗಳಿಂದೀಚೆಗೆ ಆದದ್ದು. ಮನುಷ್ಯನ ಉದಯ ಎಲ್ಲಾ ಧರ್ಮಗಳ ಹುಟ್ಟಿಗಿಂತ ಮುಂಚಿನದು. ಮನುಷ್ಯ ತನಗೆ ಸಹಾಯಕ ಎಂದು ಕಂಡ, ತನಗೆ ಹೆದರಿಕೆ ಉಂಟು ಮಾಡಿದ ಎಲ್ಲಾ ನೈಸರ್ಗಿಕ ಶಕ್ತಿಗಳನ್ನು, ಪ್ರಾಕೃತಿಕ ಸ್ವರೂಪಗಳನ್ನು ಪೂಜಿಸುತ್ತಾ ಬಂದ, ತನ್ನ ತಿಳುವಳಿಕೆಗೆ ಗೋಚರವಾದಂತೆ ಆಗಾಗ್ಗೆ ಬದಲಾಯಿಸುತ್ತಲೂ ಬಂದ. ಪ್ರಾಣ ಪಕ್ಷಿಗಳ ಪೂಜೆಯಿಂದ ಇಡಿದು ಹಲವು ದೇವತೆಗಳ, ಏಕದೇವತೆಯ ಇಲ್ಲವೆ ಕೇವಲ ಸನ್ನಡತೆಯ ಆರಾಧಕನಾಗಿ ಸತತವಾಗಿ ಬದಲಾಗುತ್ತಾ ಬಂದ. ಇಂದು ನಾವು ಒಂದು ಧರ್ಮದವರಾಗಿರಬಹುದು, ಹಿಂದೆ ನಾವು ಬದಲಾಗಿಲ್ಲ. ಮುಂದೆ ಬದಲಾಗುವುದಿಲ್ಲ ಎನ್ನುವುದೇನು ಇಲ್ಲ. ಎಲ್ಲಾ ಪ್ರಾಜ್ಞರೂ ಕೆಡಕೆನಿಸಿದ ಹಳೆಯದನ್ನು ಬಿಡುತ್ತಾ, ಸರಿಯೆನಿಸಿದ ಹೊಸತನ್ನು ಒಪ್ಪುತ್ತಾ ಬಂದರು. ನಾವೆಲ್ಲರೂ ಒಂದಲ್ಲಾ ಒಂದು ಕಾಲದಲ್ಲಿ ಮತಾಂತರಿಗಳೆ. ಆದ್ದರಿಂದ ಯಾವುದೇ ಧರ್ಮಕ್ಕಾಗಿ ಹೊಡೆದಾಡುವುದು ತಪ್ಪು ಎಂದು ಹೇಳಿದೆ ಅವರಿಗೆ ಖುಷಿಯಾಯಿತು, ಅವರೆಲ್ಲಾ ಒಪ್ಪಿದರು. ಕೋಮು ಸೌಹಾರ್ದ ಕಾಪಾಡುವುದಾಗಿ ಭರವಸೆ ನೀಡಿದರು. ಇದನ್ನೆಲ್ಲಾ ಇಲ್ಲಿ ಹೇಳುವ ಉದ್ದೇಶವೇನೆಂದರೆ ಧರ್ಮದ ಉನ್ನತಿಯನ್ನು ತೋರಿಸುವ ಮಾರ್ಗ ಹಿಂಸಾಚಾರವಲ್ಲ. ಹಿಂಸಾಚಾರದಲ್ಲಿ ಒಂದು ಮತೀಯರು ತೊಡಗಿದ್ದಾರೆ ಎಂದರೆ ಅದರ ಉದ್ದೇಶ ರಾಜಕೀಯವೇ ವಿನಃ ಧರ್ಮವಲ್ಲ.

ಭಾರತದ ರಾಜ್ಯಾಂಗ ತನ್ನ ೨೫ನೇ ವಿಧಿಯಲ್ಲಿ ಪ್ರತಿ ವ್ಯಕ್ತಿಗೂ ತನ್ನ ಮನಸ್ಸಾಕ್ಷಿಯಲ್ಲಿ ಯಾವುದೇ ಧರ್ಮವನ್ನು ಅನುಸರಿಸುವ, ಆಚರಿಸುವ ಮತ್ತು ಪ್ರಚಾರ ಮಾಡುವ ಮೂಲಭೂತ ಹಕ್ಕನ್ನು ಕರುಣಿಸಿದೆ. ಇಂತಹ ಒಂದು ಅನುಸರಣೆ, ಆಚಾರಣೆ, ಮತ್ತು ಪ್ರಚಾರ ಸಾಮಾಜಿಕ ಶಾಂತಿ, ಸುವ್ಯವಸ್ಥೆ, ನೀತಿ ಮತ್ತು ಆರೋಗ್ಯಕ್ಕೆ ಹೊಂದಿಕೊಂಡಂತಿರಬೇಕು. ಸಾಮಾಜಿಕ, ಶಾಂತಿ ಮತ್ತು ಸುವ್ಯಸ್ಥೆ ಎಂದರೇನು? ಯಾವುದೇ ಧಾರ್ಮಿಕ ಗುಂಪು ಮತ ಪ್ರಚಾರದಲ್ಲಿ ತೊಡಗಿದ್ದಾಗ, ಮತ್ತೊಂದು ಗುಂಪು ಅದನ್ನು ಹತ್ತಿಕ್ಕಲು ಹಿಂಸಾಚಾರ ನಡೆಸಿದರೆ ಅಂತಹ ಪ್ರಚಾರವನ್ನು ಎಂದೆಂದಿಗೂ ಕೈಬಿಡಬೇಕು ಎಂದೇ? ಹಾಗಿದ್ದಲ್ಲಿ ಆಚರಣೆ, ಪ್ರಚಾರ ಮಾಡಬಹುದಾದ ಧಾರ್ಮಿಕ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ. ಆದುದರಿಂದ ಹಿಂಸಾಚರದ ಬೆದರಿಕೆಯಿದ್ದ ಅಥವಾ ಹಿಂಸಾಚಾರ ನಡೆಯುತ್ತಿರುವ ಆ ಸಂದರ್ಭದಲ್ಲಿ ಅಂತಹ ಪ್ರಚಾರವನ್ನು ನಿಲ್ಲಿಸಬೇಕೆಂದಷ್ಟೆ ಇದನ್ನು ಅರ್ಥಮಾಡಿಕೊಳ್ಳಬಹುದು. ಅಂತಹ ಸಂದರ್ಭದಲ್ಲಿ ಇಂತಹ ಹಿಂಸಾಚಾರವನ್ನು ಹತ್ತಿಕ್ಕುವಕ್ರಮಗಳನ್ನು ಸರ್ಕಾರ ಕೈಗೊಂಡು ಈ ಧಾರ್ಮಿಕ ಹಕ್ಕನ್ನು ಸರಿಯಾಗಿ ಚಲಾಯಿಸುವ ಪರಿಸರ ನಿರ್ಮಾಣ

(೨೧ನೇ ಪುಟಕ್ಕೆ)

ಕೊಳೆವ ಹೊಂಡಗಳೇ ಹಿಂಡನಾಗಲದಿರಿ ಪುಟ್ಟ ಪುಟ್ಟ ತೊರೆಗಳೇ ನದಿಯ ಸೇರದಿರಿ

ಡಾ. ಮೂಡ್ನಾಕೂಡು ಚಿನ್ನಸ್ವಾಮಿ

ಇತ್ತೀಚೆಗೆ ಹಿಂದೂ ಧರ್ಮದ ಸ್ವಾಮೀಜಿಗಳ ನಿಯೋಗ ಪೇಜಾವರ ಶ್ರೀಗಳ ನೇತೃತ್ವದಲ್ಲಿ ರಾಜ್ಯಪಾಲರನ್ನು ಭೇಟಿ ಮಾಡಿ ಮತಾಂತರದ ಬಗ್ಗೆ ಆತಂಕ ವ್ಯಕ್ತ ಪಡಿಸಿದೆ. ಅದನ್ನು ನಿಷೇಧಿಸಿ ಎಂಬ ಬೇಡಿಕೆಯನ್ನು ಕೆಲವರು ಮುಂದಿಡುತ್ತಿದ್ದಾರೆ. ಈ ಬೇಡಿಕೆ ಸಂವಿಧಾನ ಬಾಹಿರ ಎಂದು ಅವರಿಗೆ ತಿಳಿದಿರ ಲಿಲ್ಲವೆಂದಲ್ಲ. ಸಂವಿಧಾನ ಪರಿಚ್ಛೇದ ೨೫ ಕಲಂ ೧ರ ಪ್ರಕಾರ ಯಾರು ಯಾವ ಧರ್ಮವನ್ನಾದರೂ ಸ್ವಯಿಚ್ಛೆಯಿಂದ ಆಚರಿಸಬಹುದು ೩ 'ಪಿ' ಗಳಿರುವ ಈ ಶಬ್ದಗಳು profess, practice ಮತ್ತು propagate. Propagate (ಪ್ರಚಾರ ಮಾಡು) ಎನ್ನುವ ಪದವನ್ನು ಸಾಕಷ್ಟು ಚರ್ಚೆಯ ನಂತರವೇ ಸೇರಿಸಲಾಯಿತು. ಆದರೂ ಈ ಧರ್ಮಪಾಲಕರು ಪ್ರಚಾರ ಮಾಡುವವರನ್ನು ಹಿಡಿದು ಥಳಿಸಿ ಪೋಲೀಸು ಠಾಣೆಗೂ ಕರೆದೊಯ್ಯುತ್ತಾರೆ! ಠಾಣೆಗಳಲ್ಲಿ ಪ್ರಚಾರಕನನ್ನು ತಪ್ಪಿತಸ್ಥನೆಂದೇ ಪರಿಗಣಿಸಿ ಗಂಟೆಗಟ್ಟಲೆ ಕೂರಿಸಿರುತ್ತಾರೆ!

ಕೊಳೆವ ಹೊಂಡಗಳೂ, ಪುಟ್ಟ ಪುಟ್ಟ ತೊರೆಗಳೂ

ಹಿಂದೆ 'ಕೋಮು ಗಲಭೆ' ಎಂದು ಪತ್ರಿಕೆಗಳಲ್ಲಿ ವರದಿ ನೋಡಿದರೆ ಅದು ನಿಸ್ಸಂದೇಹವಾಗಿ ಹಿಂದೂ – ಮುಸ್ಲಿಂ ಗಲಭೆಯೆಂದು ತಿಳಿಯುತ್ತಿತ್ತು. ಅದೂ ವಿಶೇಷವಾಗಿ ಮಂದಿರ – ಮಸೀದಿಗಳಲ್ಲಿ ಹಂದಿ–ಹಸುಗಳ ಸಂಬಂಧವಾಗೇ ಇರುತ್ತಿತ್ತು. ಅಲ್ಲೊಮ್ಮೆ ಇಲ್ಲೊಮ್ಮೆ ಟಾಕೀಸಿನಲ್ಲಿ, ಕಾಲೇಜಿನಲ್ಲಿ ಹಿಂದೂ ಹುಡುಗಿಯನ್ನು ಮುಸಲ್ಮಾನ ಕೆಣಕಿದ ಅಥವಾ ಅದರ ತದ್ವಿರುದ್ಧ ಘಟನೆಗಳು ಕೋಮುಗಲಭೆಗೆ ಇಂಬು ನೀಡುತ್ತಿದ್ದವು. ಈಗ ಭಾರತದಲ್ಲಿ ಮತ್ತೊಂದು ಅನ್ಯ ಧರ್ಮವಾಗಿರುವ ಕ್ರೈಸ್ತ ಮತದ ಮೇಲೆಯೂ ಕೋಮು ದಳ್ಳುರಿ ಬುಗಿಲೆದ್ದಿದೆ. ಚರ್ಚುಗಳ ಮೇಲೆ, ಪಾದ್ರಿ- ನನ್‌ಗಳ ಮೇಲೆ ಹಲ್ಲೆಗಳು ನಡೆಯುತ್ತಿವೆ. ಈ ಲಕ್ಷಣ ಭಾರತಾದ್ಯಂತ ಕಂಡುಬಂದಿಲ್ಲ. ಬರುವುದೂ ಇಲ್ಲ. ಇದು ಹಿಂದೂ ಮೂಲ ಭೂತವಾದವನ್ನು ಬೆಂಬಲಿಸುವ ರಾಜ್ಯಗಳಲ್ಲಿ ಹೆಚ್ಚು ನಡೆಯುತ್ತದೆ. ಕಾರಣ ಸ್ಪಷ್ಟವಾಗಿದೆ. ಸಂಘ ಪರಿವಾರದ ಮೂಲ ಹಾಗೂ ಮೊದಲ ಅಜೆಂಡಾ ಭಾರತವನ್ನು ಹಿಂದೂರಾಷ್ಟ್ರವಾಗಿಸುವುದು. ಅದು ಅಸಾಧ್ಯವೆನ್ನುವುದು ಬೇರೆ ಮಾತು. ಜಗಳ ತೆಗೆಯಲು ಒಂದು ಕಾರಣ ಬೇಕು ಅದಕ್ಕೆ 'ಮತಾಂತರ' ಎನ್ನುವ ಕಾರಣ ಸಾಕು. ಅದಕ್ಕೆ ಪುರಾವೆ ಒದಗಿಸಬೇಕು ಸಂಬಂಧಪಟ್ಟವರಿಂದ ದೂರು ದಾಖಲಿಸಿರಬೇಕು ಎಂದೇನೂ ಇಲ್ಲ. ಎಲ್ಲ ಮತಾಂತರಗಳೂ ಬಲವಂತ ಮತಾಂತರಗಳೇ ಎಂದು ಬಿಂಬಿಸಿದರೆ ಸಾಕು. ಕೆಲವು ಸ್ವಯಂ ಘೋಷಿತ ಧರ್ಮಪಾಲಕರು ಇದೇ ಕೆಲಸಕ್ಕಾಗಿ ನೇಮಕಗೊಂಡವರಂತೆ ಸದಾ ಬಡವರನ್ನು, ದಲಿತರನ್ನು, ಗಿರಿಜನರನ್ನು, ಅಮಾಯಕರನ್ನು ಕಣ್ಗಾವಲಿನಲ್ಲಿ ಕಾಯುತ್ತಾರೆ. ಧರ್ಮ ಪ್ರಚಾರಕರನ್ನು ಹಿಡಿದು ಥಳಿಸುತ್ತಾರೆ. ಮತಾಂತರಿಗಳಿಗೆ ಧಮಕಿ ನೀಡಿ ಇದ್ದಲ್ಲೇ ತೆಪ್ಪಗಿರಿ ಎನ್ನುತ್ತಾರೆ. ಇದರರ್ಥ ಹಿಂದೂ ಧರ್ಮ ಉಳಿಯಬೇ ಕಾದರೆ ಬಡವರು, ದಲಿತರು, ಅಸ್ಪೃಶ್ಯರು ಕೆಳಜಾತಿಗಳು ಗಿರಿಜನರು ಹೇಗಿದ್ದಾರೋ ಹಾಗೆ ಇರಬೇಕು! ಹುಟ್ಟಿನಿಂದಲೇ ಬರುವ ಈ ಕಳಂಕಗಳನ್ನು (stigma) ಯಾರೊಬ್ಬರೂ ತೊರೆಯುವ ಮನಸ್ಸು ಮಾಡಬಾರದು. ಅವರಿಗೆ ಸ್ವಾಭಿಮಾನ (dignity) ದ ಅವಶ್ಯಕತೆ ಇಲ್ಲ. ಆತ್ಮ ಗೌರವ ಬೇಕಾಗಿಲ್ಲ. ಹೊಂಡದ ನೀರು ಕೊಳೆತು ಪಾಚಿ ಕಟ್ಟಿ ನಾರುವಂತೆ ಅಸ್ಪೃಶ್ಯರು. ದಿಕ್ಕು ಕಾಣದೆ ಮಾಯವಾಗುವ ಪುಟ್ಟ ತೊರೆಗಳಂತೆ ಕೆಳಜಾತಿ ಶೂದ್ರರು ಬಳಲುತ್ತಿದ್ದಾರೆ.

ಪ್ರಬಲವಾಗುತ್ತಿರುವ ಜಾತೀವಾದ

ನಿತ್ಯಜೀವನದಲ್ಲಿ ಕೆಳಜಾತಿಗಳು ಅನುಭವಿಸುವ ಮೂದಲಿಕೆಗಳಿಂದ ಹೊರಬರಬೇಕಾದ ದಾರಿಯೆಂದರೆ ಮತಾಂತರವೊಂದೆ. ಈ ಅಭಿಪ್ರಾಯ ಅಂಬೇಡ್ಕರ್ ಒಬ್ಬರದೇ ಅಲ್ಲ. ಭಾರತದ ಜಾತಿ ಪದ್ಧತಿಯನ್ನು ಅಭ್ಯಾಸ ಮಾಡಿದ ಅನೇಕ ಸಮಾಜ ವಿಜ್ಞಾನಿಗಳ ಅಭಿಪ್ರಾಯವೂ ಅದೇ ಆಗಿದೆ. ಇರುವ ಅದೊಂದೇ ದ್ವಾರವನ್ನು ಸಹ ಮುಚ್ಚಿಬಿಟ್ಟರೆ ಶಾಶ್ವತ ಗುಲಾಮಗಿರಿಗೆ ದೇವರು ಸೃಷ್ಟಿಸಿದ ಒಂದು ವರ್ಗ ಭಾರತದಲ್ಲಿ ಅಸ್ತಿತ್ವದಲ್ಲಿರುತ್ತದೆ. ಈ ಜನ ಸರ್ಕಾರ ನೀಡುವ ಮೀಸಲಾತಿ ಎಂಬ ಭಿಕ್ಷೆಗಾಗಿ ಕಾಯುತ್ತ ಬಡತನದ ರೇಖೆಯ ಆಚೀಚೆ ಲೆಕ್ಕಕ್ಕೆ ಸಿಕ್ಕುವ ವರ್ಗವಾಗಿದ್ದರಷ್ಟೆ ಸಾಕು. ಅವರ ಉದ್ಧಾರವೂ ನಡೆಯುತ್ತಿದೆಯಲ್ಲ ಎಂದುಬಿಡಬಹುದು. ಇತ್ತೀಚೆಗೆ ಹಿಂದೂ ಧರ್ಮದ ಸ್ವಾಮೀಜಿಗಳ ನಿಯೋಗ ಪೇಜಾವರ ಶ್ರೀಗಳ ನೇತೃತ್ವದಲ್ಲಿ ರಾಜ್ಯಪಾಲರನ್ನು ಭೇಟಿ ಮಾಡಿ ಮತಾಂತರದ ಬಗ್ಗೆ ಆತಂಕ ವ್ಯಕ್ತ ಪಡಿಸಿದೆ. ಅದನ್ನು ನಿಷೇಧಿಸಿ ಎಂಬ ಬೇಡಿಕೆಯನ್ನು ಕೆಲವರು ಮುಂದಿಡುತ್ತಿದ್ದಾರೆ. ಈ ಬೇಡಿಕೆ ಸಂವಿಧಾನ ಬಾಹಿರ ಎಂದು ಅವರಿಗೆ ತಿಳಿದಿರಲಿಲ್ಲವೆಂದಲ್ಲ. ಸಂವಿಧಾನ ಪರಿಚ್ಛೇದ ೨೫ ಕಲಂ ೧ರ ಪ್ರಕಾರ ಯಾರು ಯಾವ ಧರ್ಮವನ್ನಾದರೂ ಸ್ವಯಿಚ್ಛೆಯಿಂದ ಆಚರಿಸಬಹುದು ೩ 'ಪಿ' ಗಳಿರುವ ಈ ಶಬ್ದಗಳು profess, practice ಮತ್ತು propagate. Propagate (ಪ್ರಚಾರ ಮಾಡು) ಎನ್ನುವ ಪದವನ್ನು ಸಾಕಷ್ಟು ಚರ್ಚೆಯ ನಂತರವೇ ಸೇರಿಸಲಾಯಿತು. ಆದರೂ ಈ ಧರ್ಮಪಾಲಕರು ಪ್ರಚಾರ ಮಾಡುವವರನ್ನು ಹಿಡಿದು ಥಳಿಸಿ ಪೊಲೀಸು ಠಾಣೆಗೂ ಕರೆದೊಯ್ಯುತ್ತಾರೆ! ಅವರ ಧೈರ್ಯವನ್ನು ಮೆಚ್ಚಲೇಬೇಕು. ಠಾಣೆಗಳಲ್ಲಿ ಏನುಮಾಡುತ್ತಾರೆ? ಪ್ರಚಾರಕನನ್ನು ತಪ್ಪಿತಸ್ಥನೆಂದೇ ಪರಿಗಣಿಸಿ ಗಂಟೆಗಟ್ಟಲೆ ಅಲ್ಲಿ ಕೂರಿಸಿರುತ್ತಾರೆ. ವಿರೋಧಿಗಳ ದೂರುಗಳನ್ನು ಕಡೆಗಣಿಸುವಂತಿ ಲ್ಲವಲ್ಲ. ಅಷ್ಟರಲ್ಲಿ ದೃಶ್ಯ ಮಾಧ್ಯಮದವರು ಆ ಪ್ರಚಾರಕನ ಪೆಚ್ಚುಮೋರೆಯನ್ನು ಕ್ಯಾಮೆರಾದಲ್ಲಿ ಸೆರೆಹಿಡಿದು ಇಡೀ ದೇಶದಾದ್ಯಂತ ತೋರಿಸಿಬಿಟ್ಟಿರುತ್ತಾರೆ. ಆದರೆ ಮತಾಂತರವಾಗಬಯಸಿದವರ ಫೋಟೋ ವಾಗಲಿ ಅಥವಾ ಅವರ ಹೇಳಿಕೆಗಳಾಗಲೀ (ಬಲವಂತವಾಗಿದ್ದರೆ) ಅವರಿಂದ ಯಾಕೆ ಸಾರ್ವಜನಿಕವಾಗಿ ಹೇಳಿಕೆ ಪಡೆಯಬಾರದು? ಮತ ಪ್ರಚಾರಕರು ಯಾವ ಆಮಿಷ ಒಡ್ಡಿದ್ದಾರೆ. ಎಷ್ಟನ್ನು ಮುಂಗಡ ವಾಗಿನೀಡಿದ್ದಾರೆ ಎನ್ನುವುದಾದರೂ ತಿಳಿಯುತ್ತದಲ್ಲ) ದೃಶ್ಯ ಮಾಧ್ಯ ಮದಲ್ಲಿ ಬಿತ್ತರಗೊಳ್ಳುವುದಿಲ್ಲ. ನಮ್ಮ ದೇಶದಲ್ಲಿ ಸಂವಿಧಾನಾತ್ಮಕ ಹಕ್ಕೊಂದು ಹೇಗೆ ಬಳಕೆಯಾಗುತ್ತದೆ ನೋಡಿ. ಹೀಗಾಗಿಯೆ ಕಾನೂನು ಬಾಹಿರವಾದ ಅಧಿಕೃತ ಚರ್ಚೆಗೊಳಗಾಗದ ಅಸ್ಪೃಶ್ಯತೆ ದೇಶದ ಪ್ರತಿ ಹಳ್ಳಿ/ಪಟ್ಟಣಗಳಲ್ಲಿ ಶುದ್ಧಾಂಗ ಆಚರಣೆಯಲ್ಲಿದೆ. ಜಾತಿಪದ್ಧತಿ ಬೇರೆಬೇರೆ ಆಯಾ... ಮಗಳಲ್ಲಿ ತನ್ನ ವಿಕಲ ನೀತಿಯನ್ನು ಹೆಚ್ಚಿಸಿಕೊಳ್ಳುತ್ತಾ ಕುರೂ... ನರ್ತನಗೈಯುತ್ತಿದೆ. ಇದಕ್ಕೆ ಜಾತಿ ಆಧಾರಿತ ಮತಗಳ ಆಧಾರದ ಮೇಲೆ ಚುನಾವಣೆಗಳಲ್ಲಿ ಟಿಕೇಟು ಪಡೆಯುವ ಮತ್ತು ಆಯ್ಕೆಯಾಗುವ ನಮ್ಮ ರಾಜಕೀಯ ಪ್ರತಿನಿಧಿ ಗಳೇ ಸಾಕ್ಷಿ.

ಸಂಘ ಪರಿವಾರದವರಾಗಲಿ ಅಥವಾ ಹಿಂದೂ ಧರ್ಮದ ಸ್ವಾಮೀಜಿಗಳಾಗಲಿ ಈ propogate, ಪ್ರಚಾರಮಾಡು ಎನ್ನುವ ಪದವನ್ನು ಯಾಕೆ ಸದ್ಬಳಕೆ ಮಾಡಿಕೊಳ್ಳಬಾರದು, ತಾವು ಯಾಕೆ ಹಿಂದೂ ಧರ್ಮಕ್ಕೆ ಎಲ್ಲರೂ ಬನ್ನಿ ಎಂದು ಕರೆಕೊಡಬಾರದು ಅಥವಾ ಇಲ್ಲಿಯೇ ಇರಿ, ಅಸ್ಪೃಶ್ಯತೆ ಇತ್ಯಾದಿ ಇಲ್ಲಿನ ಕೊಳಕುಗಳನ್ನು ಹೋಗಲಾಡಿಸುತ್ತೇವೆ ಎಂದು ಭರವಸೆ ನೀಡಿ ಆ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಬಾರದು. ಇದು ಅವರಿಗೆ ಅಸಾಧ್ಯವೆನ್ನಿಸಿ ಬಿಟ್ಟಿದೆಯೆ?

ಮತಾಂತರವನ್ನು ಅತ್ಯುಗ್ರವಾಗಿ ವಿರೋಧಿಸುವ ಅದನ್ನು ತಡೆಯಲು ಮುಂದಾಗುವ ಮತ್ತು ಅದಕ್ಕಾಗಿ ಹಿಂಸಾತ್ಮಕ ಮಾರ್ಗಗಳನ್ನು ಅನುಸರಿಸುವ ಸಂಘಪರಿವಾರದ ಅಂಗ ಸಂಘಟನೆಯೊಂದಿದೆ. ಅದೇ 'ಭಜರಂಗ ದಳ'. ಈ ಸಂಘಟನೆಗೆ ಸ್ಪಷ್ಟ ಉದ್ದೇಶಗಳೇ ಇಲ್ಲ ಎಂದು ಟೈಮ್ಸ್ ಆಫ್ ಇಂಡಿಯಾ (೧೭-೯-೨೦೦೮) ವರದಿಯೊಂದು ಹೇಳುತ್ತದೆ. ಕಸಾಯಿಖಾನೆಗೆ ಹೋಗುವ ಗೋವುಗಳನ್ನು ತಡೆಯುವುದು. ವ್ಯಾಲೆಂಟೈನ್ಸ್ ದಿನಾಚರಣೆಗೆ ನಿಷೇಧ ಹೇರುವುದು

ಮತ್ತು ಆ ದಿನ ಅಂಗಡಿ ಮುಂಗಟ್ಟುಗಳಲ್ಲಿ ಕಾರ್ಡ್‌ಗಳನ್ನು ಜಪ್ತಿಮಾಡುವುದು. ಯುವಕರನ್ನು ಯುವತಿಯರನ್ನು ಹಿಂಸಿಸುವುದು ಇತ್ಯಾದಿ. ಈ ಭಜರಂಗದಳದ ಸದಸ್ಯರೆಲ್ಲರೂ ಶೂದ್ರರು, ಅತಿಶೂದ್ರರೇ ಹೆಚ್ಚು. ದಲಿತರೂ ನಿಚ್ಚಳ ಸಂಖ್ಯೆಯಲ್ಲಿದ್ದಾರೆ, ಯಾಕೆಂದರೆ ಇವರು ಶಸ್ತ್ರ ಹಿಡಿಯಬೇಕು ರಕ್ತ ಹರಿಸಬೇಕು. ಅಮಾಯಕರನ್ನು ಮಕ್ಕಳನ್ನು ಕೊಲ್ಲಬೇಕು (ಸ್ಟೇನ್ಸ್ ಮಕ್ಕಳನ್ನು ಕೊಂದ ಹಾಗೆ). ಇವರನ್ನೆಲ್ಲ ಯಾರು ದಾರಿ ತಪ್ಪಿಸಿದರು. ಇವರೇನು ಹಿಂದೂ ಧರ್ಮದ ಅತ್ಯುಚ್ಚ ಮಾನ ಸನ್ಮಾನಗಳನ್ನು ಪಡೆಯುತ್ತಿರುವವರೆ ? ಅವರ ವಂಶಸ್ಥರು ಬೇಡ ಈ ಕಾಲಮಾನದ ಅವರ ತಂದೆತಾಯಿಗಳನ್ನು ದೇವಸ್ಥಾನದೊಳಕ್ಕೆ ಬಿಟ್ಟುಕೊಳ್ಳುತ್ತಿರುವರೆ? ಈ ತಾರ ತಮ್ಯವನ್ನು ನೇರ ಶ್ರೇಣೀಕರಣವನ್ನು ಯಾಕೆ ಒಪ್ಪಿ ಕೊಂಡು ಬ್ರಾಹ್ಮಣ್ಯದ ಔನ್ನತ್ಯವನ್ನು ಕಾಪಾಡಲು ಇವರು ಹೆಣಗುತ್ತಿದ್ದಾರೆ? ಇವೆಲ್ಲ ಪ್ರಶ್ನಾರ್ಹ ಸಂಗತಿಗಳು. ಇವರೊಡನೆ ಅಂದರೆ ಭಜರಂಗಿಗಳೊಡನೆ ಕಮ್ಯುನಿಸ್ಟರಿರಲಿ, ಪ್ರಗತಿಪರರೂ ಮಾನವ ಹಕ್ಕುಗಳ ವಕ್ತಾರರೂ ವಾಗ್ವಾದ ನಡೆಸಲು ಸಾಧ್ಯವಾಗುವುದಿಲ್ಲ.

ಅಂಬೇಡ್ಕರ್ ವಿರೋಧೀ ನಿಲುವು

ಮತಾಂತರ ವಿರೋಧಿ ನಿಲುವು ಸಂವಿಧಾನದತ್ತವಾದ ಧಾರ್ಮಿಕ ಸ್ವಾತಂತ್ರ್ಯಕ್ಕೆ ಅಡಚಣೆಯನ್ನುಂಟು ಮಾಡುತ್ತದೆಯೆಂದು ಮೇಲೆ ಹೇಳಿದೆ. ಅದು ಇಂಡಿಯಾದ ಜಾತ್ಯತೀತ ರಚನೆಯನ್ನು ವಿರೋಧಿಸುತ್ತದೆ. ಹೆಚ್ಚುತ್ತಿರುವ ಬಡತನದಲ್ಲೂ, ಅನಕ್ಷರತೆಯಲ್ಲೂ ಬಹಳ ಜಾಗರೂಕತೆಯಿಂದ ಕಾಪಿಟ್ಟುಕೊಂಡು ಬಂದಿರುವ ಪ್ರಜಾಪ್ರಭುತ್ವವನ್ನು ವಿರೋಧಿಸುತ್ತದೆ. ಅಷ್ಟೆ ಅಲ್ಲ. ಅದು ಅಂಬೇಡ್ಕರ್‌ವಾದವನ್ನು ಅಂಬೇಡ್ಕರ್‌ರನ್ನೂ ವಿರೋಧಿಸುತ್ತದೆ. ಅಕ್ಟೋಬರ್ ೧೪, ೧೯೫೬ ರಂದು ಬಾಬಾ ಸಾಹೇಬ ಅಂಬೇಡ್ಕರರು ತಮ್ಮ ೫ ಲಕ್ಷ ಅನುಯಾಯಿಗಳೊಡನೆ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಆ ೫ ಲಕ್ಷ ಜನರನ್ನು ಯಾರೂ ಬಲವಂತ ಮಾಡಲಿಲ್ಲ. ಈಗಲೂ ಸಾಕ್ಷರ ದಲಿತರು ಲಕ್ಷ ಸಂಖ್ಯೆಯಲ್ಲಿ ಬೌದ್ಧಧರ್ಮವನ್ನು ಒಪ್ಪಿಕೊಳ್ಳುತ್ತಿದ್ದಾರೆ.

ಅವರ ಉದ್ದೇಶ ಒಂದೇ. ನಮ್ಮನ್ನು ಅವಮಾನಕ್ಕೀಡು ಮಾಡುವ ಧಾರ್ಮಿಕ ವ್ಯವಸ್ಥೆಯಲ್ಲಿ ಯಾಕಿರಬೇಕು? ನಮ್ಮ ಕೀಳುತನವನ್ನು ನಾವೂ ಜೀವನಪರ್ಯಂತ ಅನುಭವಿಸಿ ನಮ್ಮ ಮುಂದಿನ ಪೀಳಿಗೆಗೂ ಕೀಳುತನವನ್ನೆ ಯಾಕೆ ಬಳುವಳಿಯಾಗಿ ನೀಡಬೇಕು? ನಮ್ಮ ಮಕ್ಕಳು ಮರಿಗಳಾದರೂ ಸಾಮಾನ್ಯರಂತೆ ಸಮಾನತೆಯನ್ನು ಕಂಡುಕೊಳ್ಳಲಿ. ಒಳಗಿನವರಾಗಿ ಹೊರ ಹಾಕಲ್ಪಟ್ಟವರಿಗಿಂತ ಹೊರಗಿನವರಾಗಿ ನಿರ್ಲಕ್ಷಿಸಲ್ಪಡುವುದುಲೇಸಲ್ಲವೆ? ಅಸಂಖ್ಯ ದೇವಾನುದೇವತೆಗಳ ಅಸಂಖ್ಯ ಕಟ್ಟುಕಟ್ಟಳೆಗಳನ್ನು ಬಡತನದಲ್ಲೂ ಆಚರಿಸಿಕೊಂಡು ಮೌಢ್ಯದಲ್ಲಿ ಮುಳುಗಿರುವುದಕ್ಕಿಂತ ಅಪಮಾನದ ಬದುಕಿನಿಂದ ಹೊರಗಿರುವುದು ಗುಣವಲ್ಲವೆ? ಈ ಪ್ರಶ್ನೆಗಳನ್ನು ಹಿಂದೂ ಧರ್ಮದೊಳಗಿನ ಕಳಂಕಿತರು ಮಾತ್ರ ಹಾಕಿಕೊಳ್ಳಲು ಸಾಧ್ಯ. ಮೇಲ್ಜಾತಿಯ ಜನರ ಅಥವಾ ಸ್ವಾಮೀಜಿಗಳ ಮತಾಂತರ ವಿರೋಧ ಏನನ್ನು ಹೇಳುತ್ತದೆ. ನೀವು ಕಳಂಕಿತರಾಗಿಯೇ ಬದುಕಿ, ನಾವು ಆಗಾಗ ಸಾಂತ್ವನ ಹೇಳುತ್ತೇವೆ ಎಂದಂತಾಯಿತಲ್ಲವೆ.

ಇಷ್ಟಕ್ಕೂ ಇವರು ಆತಂಕಪಡಬೇಕಾಗಿರುವುದು ಬ್ರಾಹ್ಮಣರು ಅಥವಾ ಮೇಲ್ಜಾತಿಯ ಜನರು ಮತಾಂತರಗೊಂಡಾಗ ಮಾತ್ರ. ಹಾಗೆ ಆಗುವುದು ಕಷ್ಟಸಾಧ್ಯ. ಲಕ್ಷಕ್ಕೊಬ್ಬ ಅಂಥವ ಸಿಕ್ಕರೂ ಅವನು ಸಾಮಾನ್ಯ ಗಣಕ್ಕೆ ಸೇರಿದವನಾಗಿರುವುದಿಲ್ಲ. ಇಂದು ಅತ್ಯಂತ ಉಗ್ರ ಪ್ರಗತಿಪರತೆಯನ್ನು ತೋರಿಸುವ ಯಾವ ಬ್ರಾಹ್ಮಣನೂ ಮತಾಂತರವಾಗಿಲ್ಲ. ಆತ ನನಗೆ ಜಾತಿಯಿಲ್ಲ ಅಥವಾ ಜಾತಿಯಲ್ಲಿ ನಂಬಿಕೆಯಿಲ್ಲ ಎಂದು ಹೇಳಿಕೊಳ್ಳಬಲ್ಲನಷ್ಟೆ. ಹಿಂದೆ ಒಮ್ಮೆ ವಾರ ಪತ್ರಿಕೆಯೊಂದರ ಸಂಪಾದಕರು ತಮ್ಮ ತಂಡದೊಂದಿಗೆ ಬೌದ್ಧಧರ್ಮವನ್ನು ಸ್ವೀಕರಿಸಲು ತುದಿಗಾಲಲ್ಲಿದ್ದರು. ಅದನ್ನು ತಡೆದವರು ಬಂಡಾಯದ ಮುಂಚೂಣಿ ಪ್ರಗತಿಪರ ಲೇಖಕರೊಬ್ಬರು. ಅವರ ಜಂಗಮ ಸ್ಥಿತಿ ನರಳಿ ಸ್ಥಾವರವಾಗಿದ್ದಕ್ಕೆ ಸಂಪಾದಕರು ಶಪಿಸಿಕೊಂಡು ಸುಮ್ಮನಾದರು. ಒಳಗಿರುವವರಿಗೆ ಮಾತ್ರ ಯಾಕೆ ಹೊರ ಹೋಗಬೇಕೆಂದು ಅರಿವಾಗುತ್ತದೆ. ಅಸ್ಪೃಶ್ಯನಿಗೂ, ಕೆಳಜಾತಿಯವನಿಗೂ ಹಾಗಿರಬೇಕಾದ ನೋವು ತಿಳಿದಿರುತ್ತದೆ. ಉಸಿರುಕಟ್ಟುವಿಕೆ (suffocation) ಯ ಅನುಭವವಾಗಿರುತ್ತದೆ. ಹೊರಗೆನಿಂತ ಧರ್ಮಪಾಲಕರಿಗೆ ಅದು ತಿಳಿದಿರುವುದಿಲ್ಲ ತಿಳಿಯುವುದೂ ಇಲ್ಲ. ಮತಾಂತರದ ಅಂತರಂಗವನ್ನು ತಿಳಿದುಕೊಳ್ಳದೆ ವಿರೋಧಿಸುವುದು ಧಾರ್ಮಿಕ ಸ್ವಾತಂತ್ರ್ಯದ ಹರಣವಷ್ಟೆ ಅಲ್ಲ ಮತ್ತೊಬ್ಬನ ಸ್ವಾಭಿಮಾನದ ಮೇಲೆ ನಡೆಸುವ ಹಲ್ಲೆ.

> **ಮತಾಂತರವನ್ನು ಅತ್ಯುಗ್ರವಾಗಿ ವಿರೋಧಿಸುವ ಅದನ್ನು ತಡೆಯಲು ಮುಂದಾಗುವ ಮತ್ತು ಅದಕ್ಕಾಗಿ ಹಿಂಸಾತ್ಮಕ ಮಾರ್ಗಗಳನ್ನು ಅನುಸರಿಸುವ ಸಂಘಪರಿವಾರದ ಅಂಗ ಸಂಘಟನೆಯೊಂದಿದೆ. ಅದೇ 'ಭಜರಂಗ ದಳ'. ಈ ಸಂಘಟನೆಗೆ ಸ್ಪಷ್ಟ ಉದ್ದೇಶಗಳೇ ಇಲ್ಲ ಎಂದು ಟೈಮ್ಸ್ ಆಫ್ ಇಂಡಿಯಾ (೧೭-೯-೨೦೦೮) ವರದಿಯೊಂದು ಹೇಳುತ್ತದೆ. ಕಸಾಯಿಖಾನೆಗೆ ಹೋಗುವ ಗೋವುಗಳನ್ನು ತಡೆಯುವುದು. ವ್ಯಾಲೆಂಟೈನ್ಸ್ ದಿನಾಚರಣೆಗೆ ನಿಷೇಧ ಹೇರುವುದು ಮತ್ತು ಆ ದಿನ ಅಂಗಡಿ ಮುಂಗಟ್ಟುಗಳಲ್ಲಿ ಕಾರ್ಡ್‌ಗಳನ್ನು ಜಪ್ತಿಮಾಡುವುದು. ಯುವಕರನ್ನು ಯುವತಿಯರನ್ನು ಹಿಂಸಿಸುವುದು. ಈ ಭಜರಂಗದಳದ ಸದಸ್ಯರೆಲ್ಲರೂ ಶೂದ್ರರು, ಅತಿಶೂದ್ರರೇ ಹೆಚ್ಚು. ದಲಿತರೂ ನಿಚ್ಚಳ ಸಂಖ್ಯೆಯಲ್ಲಿದ್ದಾರೆ, ಯಾಕೆಂದರೆ ಇವರು ಶಸ್ತ್ರ ಹಿಡಿಯಬೇಕು ರಕ್ತ ಹರಿಸಬೇಕು. ಅಮಾಯಕರನ್ನು ಮಕ್ಕಳನ್ನು ಕೊಲ್ಲಬೇಕು ಇವರನ್ನೆಲ್ಲ ಯಾರು ದಾರಿ ತಪ್ಪಿಸಿದರು.**

ಅಸ್ಪೃಶ್ಯತೆಯ ನಿವಾರಣೆಯಲ್ಲಿ ಗಾಂಧೀಜಿಯೂ ಸೋತರು. ವಿವೇಕಾನಂದರೂ ಗೆಲ್ಲಲಿಲ್ಲ. ಹಾಗಾದರೆ ಅಂಬೇಡ್ಕರ್ ನೀಡಿದ ಉಪಾಯ ಅಥವಾ ಪರಿಹಾರ ಪ್ರಸ್ತುತವೆನಿಸುವುದಿಲ್ಲವೆ? ಗಾಂಧೀಜಿಯವರ 'ಹರಿಜನ' ಪತ್ರಿಕೆಯ ಲೇಖನಕ್ಕೆ ನೀಡಿದ ಉತ್ತರವಾಗಿ ಅಂಬೇಡ್ಕರರ ಹೇಳಿಕೆ ಹೀಗಿದೆ "ಹಿಂದುವು ತನ್ನ ಜಾತಿಗೆ ಸೇರದೆ ಇರುವವರೆಲ್ಲರನ್ನೂ 'ಅನ್ಯ' ರೆನ್ನುವಂತೆಯೇ ನೋಡುತ್ತಾನೆ. ಅವನಿಗೆ ಅವರನ್ನು ಭೇದಬುದ್ಧಿಯಿಂದ ನೋಡುವುದು ಕಷ್ಟವೆನಿಸುವುದಿಲ್ಲ ಮತ್ತು ಅವನ ಮೇಲೆ ಯಾವುದೇ ವಂಚನೆ ತಂತ್ರಗಳನ್ನು ನಡೆಸಲಿಕ್ಕೆ ನಾಚಿಕೆ ಯೆನಿಸುವುದಿಲ್ಲ ಇದಕ್ಕೆ ಕಾರಣ ಆತನ ವೈಯಕ್ತಿಕ ಗುಣದಲ್ಲಿ ಏನೋ ದೋಷವಿದೆ ಎನ್ನುವುದಲ್ಲ; ಸಹಜೀವಿಗಳ ಜೊತೆಗೆ ಸಂಬಂಧ ಕಲ್ಪಿಸುವ ಆತನ ಧರ್ಮದ ಇಡೀ ಅಸ್ತಿವಾರದಲ್ಲೇ ದೋಷವಿದೆ" (ಮಾರ್ಕ್ ಲಿಂಡ್‌ಲೆ, ಅನು- ಕೆ.ವಿ.ಸುಬ್ಬಣ್ಣ, ಅಂತರ್ಜಾತಿ ವಿವಾಹದಿಂದ ಜಾತಿ ವಿನಾಶ, ಮಾನವ ಮಂಟಪ ಪ್ರಕಾಶನ-೧೯೯೮).

ಆರೋಪಗಳು ಮತ್ತು ವಾಸ್ತವ

ಮತಾಂತರ ಎನ್ನುವುದು ಒಂದು ಭಯಾನಕ ಪಿಡುಗು ಅದರಿಂದ ಹಿಂದೂ ಧರ್ಮ ವಿನಾಶದ ಅಂಚಿನಲ್ಲಿದೆ ಎನ್ನುವಂತೆ ವರದಿಗಳು ಬಿಂಬಿಸುತ್ತವೆ. ಅದು ಎಷ್ಟು ಹುಸಿ ಎಂಬುದಕ್ಕೆ ಅಂಕಿ ಅಂಶಗಳು ಸಾಕ್ಷ್ಯ ನೀಡುತ್ತವೆ. ೨೦೦೦ ವರ್ಷಗಳು ಹಳೆಯದಾದ ಕ್ರೈಸ್ತ ಧರ್ಮದ ಸಂತ ಥಾಮಸ್ ಏಸುಕ್ರಿಸ್ತನ ೧೨ ಜನ ಶಿಷ್ಯರಲ್ಲಿ ಒಬ್ಬ. ಆತ ಮೊದಲ ಶತಮಾನದಲ್ಲಿಯೆ ಭಾರತದ ಕೊಚ್ಚಿನ್ ತೀರಕ್ಕೆ ಬಂದಿದ್ದ ಎಂಬುದನ್ನು ಇತಿಹಾಸ ಹೇಳುತ್ತದೆ. ಅದಿರಲಿ ಸುಮಾರು ೨ ಶತಮಾನಗಳ ಕಾಲ ಬ್ರಿಟಿಷರು ಈ ದೇಶವನ್ನು ಆಳಿದರು. ಆದರೆ ಈ ದೇಶದಲ್ಲಿರುವ ಕ್ರೈಸ್ತರ ಸಂಖ್ಯೆ ಕೇವಲ ಶೇ.೨.೩ ರಷ್ಟು, ೧೯೭೦ ರಲ್ಲಿ ಇವರ ಸಂಖ್ಯೆ ಶೇ.೨.೮ ರಷ್ಟಿತ್ತು. ೨೦೦೧ ರ ಜನಗಣತಿಯಲ್ಲಿ ೨.೩ ರಷ್ಟಾಗಿದೆ. ಅಂದರೆ ಇಳಿಮುಖವಾಗುತ್ತಿದೆ.

ಅದಕ್ಕೆ ಕಾರಣಗಳು ಅವರ ಶಿಸ್ತುಬದ್ಧ ಜೀವನ, ಕುಟುಂಬ ಯೋಜನೆಯ ಆಯ್ಕೆ ಮುಂತಾದವಿರಬಹುದು. ಆದರೂ ಈ ಬಗೆಯ ಹುಯಿಲು ಯಾಕೆ? ಅವರ ಜನಸಂಖ್ಯೆಯ ಮಿತಿಯನ್ನು ಮೀರಿ ಅವರ ವಿದ್ಯಾಕೇಂದ್ರಗಳು, ಆಸ್ಪತ್ರೆಗಳು ಇತರ ಸೇವಾಕೇಂದ್ರಗಳು ಇಂದಿಗೂ ಹಿಂದೂ ಮುಸಲ್ಮಾನ ಕ್ರೈಸ್ತನೆನ್ನದೆ ಸೇವೆಗೈಯುತ್ತಿವೆ. ಅದ್ವಾನಿಯವರೂ ಸೇರಿದಂತೆ ಬಹುತೇಕ ಸಂಘ ಪರಿವಾರದ ಬುದ್ಧಿಜೀವಿಗಳು ಕ್ರೈಸ್ತ ವಿದ್ಯಾಕೇಂದ್ರಗಳಲ್ಲಿ ಕಲಿತವರೆ ಆಗಿರುತ್ತಾರೆ. ಬ್ರಿಟಿಷರು ಭಾರತಕ್ಕೆ ಬರದಿದ್ದರೆ ಇವರೆಲ್ಲ ಏನಾಗಿರುತ್ತಿದ್ದರು.

ಕುವೆಂಪು ಅವರ ಹೇಳಿಕೆಯನ್ನು ನೆನಪಿಸಿಕೊಂಡರೆ ಭಯವಾಗುತ್ತದೆ. "ಬ್ರಿಟಿಷರು ಭಾರತಕ್ಕೆ ಬರದಿದ್ದರೆ ನಾನು ಹಾರುವರ ಮನೆಯಲ್ಲಿ ಸಗಣಿ ಬಳಿಯಬೇಕಾಗಿತ್ತು" ಎಂದರು. ಇದು ಅವರು ತಮ್ಮ ೮೨ ನೇ ವಯಸ್ಸಿನಲ್ಲಿ ಮಾಗಿದ ಪ್ರಜ್ಞೆಯಲ್ಲಿ ಹೇಳಿದ ಮಾತು. ಒಬ್ಬ ಮೇಲ್ಜಾತಿ ಶೂದ್ರನಾಗಿ ಹೇಳಿದ ಮಾತು. ಇನ್ನು ದಲಿತ ಹಿಂದುಳಿದ ಜಾತಿಗಳ ಕಥೆಯೇ ನಾಗಿರುತ್ತಿತ್ತು ?

ಹಿಂದೂ ಜಾತಿವ್ಯವಸ್ಥೆಯಲ್ಲಿ ಕಡೆಗಣಿಸಲ್ಪಟ್ಟ ಸಮುದಾಯವನ್ನು ಹತ್ತಿರ ಕರೆದು ವಿದ್ಯೆ, ಆರೋಗ್ಯ, ಶುಶ್ರೂಷೆ ಇತ್ಯಾದಿ ಸೇವೆಗಳನ್ನು ನೀಡಿದ್ದು ಕ್ರೈಸ್ತರ ನೇರ ಕೊಡುಗೆ. ಭಾಷೆ ಮತ್ತು ಸಂಸ್ಕೃತಿಗೆ ಅವರು ನೀಡಿರುವ ಕೊಡುಗೆಯೂ ಅಪಾರವಾದದ್ದು. ಅದು ಬೇರೆಯೆ ಆದ ಚರ್ಚೆಯಾಗುತ್ತದೆ. ಕ್ರೈಸ್ತರ ಪರೋಕ್ಷ ಕೊಡುಗೆ ಈ ದೇಶಕ್ಕೆ ಅನನ್ಯವಾಗಿದೆ. ಇದಕ್ಕೆ ದೃಷ್ಟಾಂತವಾಗಿ ಸ್ವಾಮಿ ಚಿನ್ಮಯಾನಂದರ ಬದುಕಿನ ಬಹುಮುಖ್ಯ ಘಟನೆಯೊಂದನ್ನು

[illegible] ಒಮ್ಮೆ ಅರೆಪ್ರಜ್ಞಾವಸ್ಥೆಯಲ್ಲಿ [illegible] ಬಿದ್ದಿದ್ದರು. ಕ್ರೈಸ್ತನಾಗಿಯೊಬ್ಬರು ಆ ದಾರಿಯಲ್ಲಿ ನಡೆದು ಹೋಗುವಾಗ ಅವರ ಕಣ್ಣಿಗೆ ಬಿದ್ದರು. ತಕ್ಷಣವೇ ಪಾದ್ರಿ ಚಿನ್ಮಯಾನಂದರನ್ನು ಎತ್ತಿಕೊಂಡು ತಮ್ಮ ಆಶ್ರಮಕ್ಕೆ ನಡೆದರು. ಶುಶ್ರೂಷೆ ನೀಡಿ ಚಂದಮಾಡಿದರು. ಅದನ್ನು ನೋಡಿ ಕರಗಿದ ಚಿನ್ಮಯಾನಂದರು ಹಿಂದೂ ಧರ್ಮದಲ್ಲಿಯೂ ಈ ರೀತಿಯ ಸೇವೆ ಲಭ್ಯವಾಗಬೇಕು ಎಂದು ಚಿನ್ಮಯ ಮಿಷನ್ ಸ್ಥಾಪಿಸಿದರು. ಅದು ಬೃಹತ್ತಾಗಿ ಬೆಳೆದು ಈಗ ಆಧ್ಯಾತ್ಮಿಕ ಸೇವೆಯಷ್ಟೆ ಅಲ್ಲದೆ ಸಾಮಾಜಿಕ ಸೇವೆಯಲ್ಲಿಯೂ ತನ್ನನ್ನು ತೊಡಗಿಸಿಕೊಂಡಿದೆ. ಮಿಷನರಿ ಎಂದರೆ ಇದು. ಇನ್ನೊಬ್ಬರನ್ನು ಸತ್ಕೆರ್ಮಕ್ಕೆ ಪ್ರಚೋದಿಸುವುದು. ಇದು ಕ್ರೈಸ್ತ ಧರ್ಮ ಈ ದೇಶಕ್ಕೆ ನೀಡಿದ ಪರೋಕ್ಷ ಕೊಡುಗೆ. ಗಮನಕ್ಕೆ ಬಾರದ ಇಂಥ ಅನೇಕ ನೈಜ ಕಥಾನಕಗಳು ಇರಲಿಕ್ಕೆ ಸಾಧ್ಯ.

ಕುತೂಹಲಕ್ಕೆಂದು ಈ ಘಟನೆಯ ಪಾತ್ರಗಳನ್ನು ಅದಲು ಬದಲು ಮಾಡಿಕೊಂಡು ನೋಡಿ. ರಸ್ತೆ ಬದಿಯಲ್ಲಿ ಬಿದ್ದಿರುವವನು ಒಬ್ಬ ಕ್ರೈಸ್ತ, ಮುಸ್ಲಿಮ ಅಥವಾ ದಲಿತ. ಒಬ್ಬ ಹಿಂದೂ ಸನ್ಯಾಸಿ ನಡೆದು ಹೋಗುತ್ತಾ ಬಿದ್ದಿರುವ ವ್ಯಕ್ತಿಯನ್ನು ನೋಡಿದ? ಆಗ ಏನು ಮಾಡುತ್ತಿದ್ದ!! ತನ್ನ ಕಾಷಾಯ ವಸ್ತ್ರವನ್ನು ಮೇಲೆತ್ತಿ ಕೊಂಡು ಮೈಲಿಗೆಯಾದೀತೆಂದು ದೌಡಾಯಿಸುತ್ತಿದ್ದ. ಅಲ್ಲಿ ಮತ್ತೊಂದು ಚೋಮನ ಮಗನ ಕಥೆ ಮರುಕಳಿಸುತ್ತಿತ್ತು.

ಭಾರತದಲ್ಲಿ ಮತಾಂತರ ಯಾಕಾಗುತ್ತಿದೆ ಎಂಬುದು ಸುಸ್ಪಷ್ಟವಾಗಿದೆ. ಜಾತಿಭೇದ ಮತ್ತು ಅಸ್ಪೃಶ್ಯತೆ ಹಿಂದೂ ಧರ್ಮದ ಅಂಗರಚನೆಯಲ್ಲಿದೆ. ಈ ಅಸಮಾನತೆಯ ಜೀವನ ಕೆಳಜಾತಿಗಳನ್ನು ಹಿಂಸಿಸುತ್ತದೆ. ಅಸ್ಪೃಶ್ಯರನ್ನು ಅವಮಾನದ ಕೂಪದಲ್ಲಿ ನೂಕಿ ನರಳುವಂತೆ ಮಾಡಿದೆ. ಈ ಇಬ್ಬರನ್ನೂ ಬಡತನ ಬಂಧಿಸಿದೆ. ಕಾರಣ, ಸಾರ್ವಜನಿಕ ಜೀವನದಲ್ಲಿ ಈ ಇಬ್ಬರಿಗೂ ಒಂದು ರೀತಿಯ ಅಲಿಖಿತ ಬಹಿಷ್ಕಾರವಿದೆ. ಇವರಿಬ್ಬರಲ್ಲಿ ಯಾರೂ ಒಂದು ಕಿರಾಣಿ ಅಂಗಡಿ ಇಟ್ಟುಕೊಂಡು ಬದುಕಲಾರರು. ವ್ಯಾಪಾರ ವಹಿವಾಟುಗಳಲ್ಲಿ ಪಾಲ್ಗೊಂಡರೆ ಸವರ್ಣೀಯರ ಸಹಕಾರವಿರುವುದಿಲ್ಲ. ಜಾತ್ಯಾಧಾರಿತ ಸಣ್ಣ ಉದ್ಯೋಗಗಳನ್ನವಲಂಬಿಸಬೇಕು.

ಉದಾ: ಚಪ್ಪಲಿ ಹೊಲೆಯುವುದು, ಕ್ಷೌರ ಮಾಡುವುದು. ಇದೇ ವೃತ್ತಿಗಳನ್ನು ದೊಡ್ಡ ಬಂಡವಾಳದಲ್ಲಿ ನಡೆಸುವುದಾದರೆ ಮೇಲ್ಜಾತಿಗಳೇ ಮುಗಿಬೀಳುತ್ತಾರೆ. ಉದಾ: ಶೂ ಕಂಪೆನಿಗಳು ಬ್ಯೂಟಿ ಪಾರ್ಲರುಗಳು. ಅಲ್ಲಿಲ್ಲೊಂದು ಅಪವಾದಗಳು ಇಲ್ಲವೆಂದಲ್ಲ. ಈ ವರ್ಗಗಳಲ್ಲಿ ಶ್ರೀಮಂತ ಬಂಡವಾಳಶಾಹಿಗಳು ಬೆಳೆಯಲು ಹಿಂದೂ ಸಮಾಜ ಒಪ್ಪುವುದಿಲ್ಲ. ಆರ್ಥಿಕ ಕ್ಷೇತ್ರದಲ್ಲಿ ಅನ್ಯಧರ್ಮೀಯರ ಬೆಳವಣಿಗೆಯನ್ನು ಸಹಿಸಿ ಕೊಳ್ಳುವುದಷ್ಟೆ ಅಲ್ಲ ಪ್ರೋತ್ಸಾಹಿಸುತ್ತದೆ ಕೂಡ. ಈ ಕಾರಣದಿಂದಲೇ ಒಬ್ಬ ಅಮೀರ್ ಖಾನ್, ಸಾನಿಯ ಮಿರ್ಜಾ ಅಥವಾ ಲಿಯಾಂಡರ್ ಪೇಸ್, ಸ್ಯಾಮ್ ಪಿಟ್ರೋಡಾರಂಥ ಪ್ರತಿಭೆಗಳು ಬೆಳಕಿಗೆ ಬರಲು ಸಾಧ್ಯವಾಯಿತು. ಕೆಳಜಾತಿ ಮತ್ತು ಅಸ್ಪೃಶ್ಯರ ಏಳ್ಗೆ ಕೇವಲ ಸರ್ಕಾರಿ ಕೃಪೆಯಲ್ಲಿ ನಡೆಯುತ್ತಿರಬೇಕು. ಅವರು ಮಧ್ಯಮವರ್ಗದಲ್ಲಿ ಸ್ಥಗಿತಗೊಳ್ಳಬೇಕು. ಹಿಂದೂ ಮೇಲ್ಜಾತಿಗಳ ಈ ಮನಸ್ಥಿತಿ ಬದಲಾಗುವವರೆಗೂ ಈ ವರ್ಗದ ಜನ ಹಿಂದೂ ಧರ್ಮವನ್ನು ಪ್ರೀತಿಸುವುದಾದರೂ ಹೇಗೆ?

ಬ್ರಿಟಿಷರು ಭಾರತಕ್ಕೆ ಬರುವ ಮೊದಲು ಈ ಧರ್ಮದ ಆಚರಣೆ ಇನ್ನೂ ವಿಕೃತವಾಗಿತ್ತು. ಶೂದ್ರರು, ಮಹಿಳೆಯರು ಮತ್ತು ದಲಿತರಿಗೆ ಶಾಲೆಗಳಲ್ಲಿ ಪ್ರವೇಶವಿರಲಿಲ್ಲ. ಇಂಥ ನೀಚ ಜಾತಿ ಪದ್ಧತಿ ಎಲ್ಲೆಲ್ಲಿ ಕ್ರೂರವಾಗಿತ್ತೋ ಅಲ್ಲೆಲ್ಲ ಹೆಚ್ಚು ಮತಾಂ ತರವಾಗಿರುವುದಕ್ಕೆ ಪುರಾವೆಗಳಿವೆ. ಉದಾಹರಣೆಗೆ ಕೇರಳದಲ್ಲಿ ಶೂದ್ರಾತಿಶೂದ್ರ ಹೆಂಗಸರು ಎದೆಯ ಮೇಲೆ ಬಟ್ಟೆ ಧರಿಸುವಂತಿರಲಿಲ್ಲ. (ಎಂಥ ವಿಕೃತ ಧಾರ್ಮಿಕ ಕಟ್ಟಳೆ !) ಅಲ್ಲಿ ಕ್ರೈಸ್ತರು ಶೇ.೨೦ ಮತ್ತು ಮುಸ್ಲಿಮರು ಶೇ.೨೩ ರಷ್ಟಿದ್ದಾರೆ. ಗೋವಾ ರಾಜ್ಯ ನಾಲ್ಕೂವರೆ ಶತಮಾನಗಳ ಕಾಲ ಕ್ರೈಸ್ತಮತೀಯ ಪೋರ್ಚುಗೀಸರ ಆಳ್ವಿಕೆಯಲ್ಲಿತ್ತು. ಆ ಕಾಲಮಾನದಲ್ಲಿ ಅಲ್ಲಿ ಸರ್ಕಾರಿ ಹುದ್ದೆ ಗಳು ಕ್ರೈಸ್ತರಿಗೆ ಮಾತ್ರ ಮೀಸಲಾಗಿದ್ದವು. ಹಾಗಿದ್ದೂ ಅಲ್ಲಿ ಮತಾಂತರಗೊಂಡವರ ಸಂಖ್ಯೆ ಶೇ.೪೦ ಮಾತ್ರ.

ಈಗ ಒರಿಸ್ಸಾದ ಕಂದಮಾಲ್‌ನಲ್ಲಿ ನಡೆಯುತ್ತಿರುವುದು ಅದೇ. ನಿಸರ್ಗ ಸಹಜ ಜೀವನ ನಡೆಸುವ ಬುಡಕಟ್ಟು ಜನಾಂಗಕ್ಕೆ ಏಸುಕ್ರಿಸ್ತ ಎಷ್ಟು ಪರಕೀಯನೋ ಗಣಪತಿಯೂ ಅಷ್ಟೇ ಪರಕೀಯ. ಮೇರಿ ಎಷ್ಟು ಅಪರಿಚಿತಳೋ ಗೌರಿಯೂ ಅಷ್ಟೇ ಅಪರಿಚಿತಳು. ಅವರಿಗೆ ಬೇಕಾಗಿರುವುದು ನಾಗರಿಕ ಜೀವನ ಮತ್ತು ಸಮಾನತೆಯ ಬದುಕು. ಅದನ್ನು ಕೊಡಲು ವಿಶ್ವಹಿಂದೂ ಪರಿಷತ್ ಮನಸ್ಸು ಮಾಡಿದ್ದರೆ ಅವರು ಉತ್ತಮ ಹಿಂದೂಗಳಾಗುತ್ತಿದ್ದರು. ಅದನ್ನು ಮಿಷನರಿಗಳು ಮಾಡುತ್ತಿದ್ದಾರೆ. ಆದ್ದರಿಂದ ಕ್ರೈಸ್ತರಾಗುತ್ತಿದ್ದಾರೆ. ಅದನ್ನು ಬಿಟ್ಟು ಮಿಷನರಿಗಳನ್ನು, ಮಕ್ಕಳನ್ನು ಸುಟ್ಟರೆ ನನ್‌ಗಳನ್ನು ಅತ್ಯಾಚಾರ ಕ್ಕೊಳಪಡಿಸಿದರೆ ಹಿಂದೂ ಧರ್ಮ ಬೆಳೆಯುವುದಿಲ್ಲ. ಒಳ್ಳೆಯ ಹೆಸರನ್ನೂ ಪಡೆಯುವುದಿಲ್ಲ. ಈ ಸತ್ಯವನ್ನು ಹಿಂದೂ ಸಂತರು, ಸ್ವಾಮೀಜಿಗಳು ಮನಗಾಣಬೇಕಾಗಿದೆ.

ನೆರೆ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ಮತಾಂತರ ಕಡಿಮೆಯೆಂದೇ ಹೇಳಬೇಕು. ಮಲೇಷ್ಯಾ ಮತ್ತು ಇಂಡೊನೇಷಿಯ ದೇಶಗಳಲ್ಲಿ ಅರಬ್ ವ್ಯಾಪಾರಿಗಳ ಪ್ರಭಾವದಿಂದ ಇಸ್ಲಾಂ ಧರ್ಮ ನೆಲೆಗೊಂಡಿದೆ. ಫಿಲಿಫೇನ್ಸ್ ದ್ವೀಪಸಮೂಹಗಳಲ್ಲಿ ನೂರಕ್ಕೆ ನೂರು ಕ್ರೈಸ್ತರಾಗಿದ್ದಾರೆ. ಅಲ್ಲಿದ್ದವರೆಲ್ಲ ನಿಸರ್ಗದ ಮಡಿಲಿನಲ್ಲಿ ಸಮಾನತೆಯ ಬದುಕು ನಡೆಸುತ್ತಿದ್ದ ಗುಡ್ಡಗಾಡು ಜನರೆ. ಆದರೆ ಇಂಡಿಯಾದಲ್ಲಿ ಊರ್ಜಿತವಾಗಿರುವ ಮೇಲುಕೀಳಿನ ಅಸಮಾನತೆಯ, ಅಸ್ಪೃಶ್ಯತೆಯನ್ನು ಒಳಗೊಂಡಿರುವ ಧರ್ಮವೊಂದು ತನ್ನನ್ನು ತಾನು ರಕ್ಷಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಅದು ತನ್ನನ್ನು ತಾನು ರಕ್ಷಿಸಿಕೊಳ್ಳುವುದಕ್ಕೆ ಜಾತಿ ಪದ್ಧತಿಯೇ, ಮೇಲು ಕೀಳು ಅಸಮಾನತೆಗಳೇ ಕಾರಣ.

ದುರ್ಬಲರ ಗುಲಾಮೀತನದ ಅನಿವಾರ್ಯತೆ ಇರುವುದರಿಂದಲೇ ಬಲಾಢ್ಯ ಸಮೂಹವೊಂದು ಅಸಮಾನತೆಯ ಸಮಾಜ ಛಿದ್ರವಾಗದಂತೆ ಹಿಂಸೆಯ ಪ್ರಯೋಗದಿಂದಲಾದರೂ ಸರಿ ಕಾಯ್ದುಕೊಂಡು ಬಂದಿದೆ. ಬುದ್ಧನನ್ನು ಓಡಿಸುವಲ್ಲಿ, ಬಸವನನ್ನು ಜಾತಿಯನ್ನಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾಗಿದೆ. ಜಾತಿನಿಷ್ಠ ಸಮಾಜದಲ್ಲಿ ಅಸ್ಪೃಶ್ಯರೂ ಸೇರಿದಂತೆ ಕೆಳಜಾತಿಗಳು ತಮ್ಮ ಅವಮಾನಗಳನ್ನು ಬದಿಗಿಟ್ಟು ತಮ್ಮ ಸಮುದಾಯದ ರೀತಿ ರಿವಾಜುಗಳನ್ನು ದೇವರು ದಿಂಡರುಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವುದರಲ್ಲಿ ನಿರತವಾಗಿವೆ. ಮತಾಂತರದಿಂದ ಹಿಂದೂಧರ್ಮ ನಶಿಸುವುದಿಲ್ಲ. ಜಾತಿಪದ್ಧತಿ, ಅಸ್ಪೃಶ್ಯತೆಗಳಿರುವವರೆಗೂ ವಿಶ್ವದ ಪ್ರಜ್ಞಾವಂತರ ಬೌದ್ಧಿಕ ದಾಳಿಯನ್ನು ತಪ್ಪಿಸಿಕೊಳ್ಳಲಾಗುವುದಿಲ್ಲ. □

ಭಾರತದಲ್ಲಿ ಮತಾಂತರ ಯಾಕಾಗುತ್ತಿದೆ ಎಂಬುದು ಸುಸ್ಪಷ್ಟವಾಗಿದೆ. ಜಾತಿಭೇದ ಮತ್ತು ಅಸ್ಪೃಶ್ಯತೆ ಹಿಂದೂ ಧರ್ಮದ ಅಂಗರಚನೆಯಲ್ಲಿದೆ. ಈ ಅಸಮಾನತೆಯ ಜೀವನ ಕೆಳಜಾತಿಗಳನ್ನು ಹಿಂಸಿಸುತ್ತದೆ. ಅಸ್ಪೃಶ್ಯರನ್ನು ಅವಮಾನದ ಕೂಪದಲ್ಲಿ ನೂಕಿ ನರಳುವಂತೆ ಮಾಡಿದೆ. ಈ ಇಬ್ಬರನ್ನೂ ಬಡತನ ಬಂಧಿಸಿದೆ. ಕಾರಣ, ಸಾರ್ವಜನಿಕ ಜೀವನದಲ್ಲಿ ಈ ಇಬ್ಬರಿಗೂ ಒಂದು ರೀತಿಯ ಅಲಿಖಿತ ಬಹಿಷ್ಕಾರ ಏದೆ. ಇವರಿಬ್ಬರಲ್ಲಿ ಯಾರೂ ಒಂದು ಕಿರಾಣಿ ಅಂಗಡಿ ಇಟ್ಟುಕೊಂಡು ಬದುಕಲಾರರು. ವ್ಯಾಪಾರ ವಹಿವಾಟುಗಳಲ್ಲಿ ಪಾಲ್ಗೊಂಡರೆ ಸವರ್ಣೀಯರ ಸಹಕಾರ ವಿರುವುದಿಲ್ಲ. ಜಾತ್ಯಾಧಾರಿತ ಸಣ್ಣ ಉದ್ಯೋಗಗಳನ್ನವಲಂಬಿಸಬೇಕು. ಉದಾ: ಚಪ್ಪಲಿ ಹೊಲೆಯುವುದು, ಕ್ಷೌರ ಮಾಡುವುದು. ಇದೇ ವೃತ್ತಿಗಳನ್ನು ದೊಡ್ಡ ಬಂಡವಾಳದಲ್ಲಿ ನಡೆಸುವುದಾದರೆ ಮೇಲ್ಜಾತಿಗಳೇ ಮುಗಿಬೀಳುತ್ತಾರೆ.

ಪು(ಪ)ಣ್ಯಕೋಟಿ

ಬಹಳಷ್ಟು ಮಹಿಳೆಯರು
ಇತಿಹಾಸದುದ್ದಕ್ಕೂ
'ಖಂಡವಿದೆಕೋ,
ಮಾಂಸವಿದೆಕೋ'!
ಎಂದು ಅರ್ಪಿಸಿಕೊಂಡು
ಬದುಕಿದ ಪು(ಪ)ಣ್ಯ ಕೋಟಿಗಳು

ಹೊಗೆ

ಬೀಡಿ ಕಟ್ಟುವ
ಬಹುಮಂದಿ ಹೆಂಗಸರ ಬದುಕು
ಹೊಗೆಯಾಗಿ ಹೋಗುತ್ತದೆ!
ಗಂಧದ ಕಡ್ಡಿ ಹೊಸೆಯುವವರ
ಬದುಕೇನೂ ಭಿನ್ನವಲ್ಲ!

ಡಾ. ಸಿ.ಪಿ ಕೃಷ್ಣ ಕುಮಾರ್

ಮತಾಂತರ ಮತ್ತು ಮೂಲಭೂತ ಸ್ವಾತಂತ್ರ್ಯಗಳು

(೧೭ನೇ ಪುಟದಿಂದ)

ಮಾಡಬೇಕು. ಸರ್ಕಾರ ಶಾಂತಿ ಭಂಗವಾಗುತ್ತದೆ ಎಂಬ ಕಾರಣ ನೀಡಿ ಈ ಹಕ್ಕು ಚಲಾಯಿಸಲಾಗದು ಎಂದು ಹೇಳುವುದು ಸರಿಯಾದ ಮಾರ್ಗವಲ್ಲ. ಜತೆಗೆ ಧಾರ್ಮಿಕ ಹಕ್ಕಿನ ಚಲಾವಣೆಗೆ ಭಂಗವುಂಟಾದರೆ ಅದು ಇತರ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳಿಗೆ ಕುಂದು ತರುತ್ತದೆ. ಧರ್ಮ, ವಂಶ , ಜಾತಿ ಆದಾರದ ಮೇಲೆ ತಾರತಮ್ಯ ತಡೆಯುವ, ಮತ್ತು ವಾಕ್ ಸ್ವಾತಂತ್ರ್ಯ ನೀಡುವ ಹಕ್ಕುಗಳು ಸಂಪೂರ್ಣವಾಗಿ ತಮ್ಮ ಸತ್ವ ಕಳೆದುಕೊಳ್ಳುತ್ತವೆ. ಇಂತಹ ಒಂದು ಪರಿಸ್ಥಿತಿ ಬಹುಸಂಖ್ಯಾತರು, ಅಲ್ಪಸಂಖ್ಯಾತರ ಮೇಲೆ ದಬ್ಬಾಳಿಕೆ ನಡೆಸುವಂತ ಒಂದು ಪರಿಸರ ನಿರ್ಮಾಣಕ್ಕೆ ಕಾರಣವಾಗಬಹುದು.

ಮತಾಂತರದ ಮೇಲಿನ ಇಂದಿನ ಚರ್ಚೆ ಮುಖ್ಯವಾಗಿ ಮತಾಂತರ ಮಾಡುತ್ತಿದ್ದಾರೆ ಎನ್ನುವವರ ಮತ್ತು ಮತಾಂತರ ಆಗಬಾರದು ಎನ್ನುವವರ ಮಧ್ಯೆ ನಡೆಯುತ್ತಿದೆ ಎಂಬುದನ್ನು ನಾನು ಆಗಲೆ ಹೇಳಿದ್ದೇನೆ. ಮತಾಂತರಗೊಳ್ಳುತ್ತಿರುವವರ ಧ್ವನಿಯನ್ನ ಯಾರೂ ಕೇಳಿದಂತೆ ಕಾಣುವುದಿಲ್ಲ. ಕೊಲೆ, ಹಲ್ಲೆ ಮುಂತಾದವುಗಳನ್ನು ನಡೆಸುವವರು ಬಲಾತ್ಕರದಿಂದ ಮತಾಂತರವಾಗುತ್ತಿದೆ ಎಂದು ಎಲ್ಲರನ್ನು ನಂಬಿಸಲು ಯತ್ನಿಸುತ್ತಿದ್ದರೂ ಮತಾಂತರಗೊಂಡಿರುವವರಿಂದ ಅಂತಹ ಫಿರ್ಯಾದುಗಳಿಲ್ಲ. ಆಗಾದಲ್ಲಿ ಸ್ವಇಚ್ಛೆಯಿಂದಲೆ ಅವರು ಮತಾಂತರಗೊಳ್ಳುತ್ತಿದ್ದರೆ ಎಂದಂತಾಯಿತು. ಮತಾಂತರ ಅವರಿಗೆ ಆಧ್ಯಾತ್ಮಿಕ ಉನ್ನತಿಯನ್ನು ತರುವುದಾದರೆ ಅಂತಹ ಆಧ್ಯಾತ್ಮಿಕ ಉನ್ನತಿಗೆ ಅವರು ಅರ್ಹರಲ್ಲವೇ? ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಅಂತಹ ಮತಾಂತರದ ಜತೆಗೆ ಕೆಲ ಸೌಲತ್ತುಗಳು ಸಹ ದೊರೆಯುವುದಾದರೆ ಅದನ್ನು ಪಡೆಯುವುದರಲ್ಲಿ ತಪ್ಪೇನಿದೆ? ಮತಾಂತರದಿಂದ ಇವರ ಮಕ್ಕಳಿಗೆ ಉತ್ತಮ ಶಿಕ್ಷಣ ಪಡೆಯುವ ಅವಕಾಶ ದೊರೆತಲ್ಲಿ ಅದು ಬೇಡ ಎಂದು ತಿರಸ್ಕರಿಸಬೇಕು ಎಂದು ಹೇಳುವ ಹಕ್ಕು ಯಾರಿಗಿದೆ?

ಇಷ್ಟನ್ನು ನೆನಪಿನಲ್ಲಿಡೋಣ. ಇವರೆಲ್ಲರೂ ಹಿಂದೂ ಧರ್ಮವನ್ನ ಬಿಡುತ್ತಿದ್ದಾರೆ. ಹಿಂದು ಧರ್ಮದಲ್ಲಿರುವುದರಿಂದ ಅವರಿಗೆ ಮತ್ತು ಅವರ ಮಕ್ಕಳಿಗೆ ಮೀಸಲಾತಿಯ ಸೌಲಭ್ಯ ದೊರೆಯುತ್ತದೆ. ಇದೊಂದು ದುರ್ಭಲವಾದ ಸೌಲಭ್ಯ ಆಗಿದ್ದೂ, ಒಬ್ಬ ವ್ಯಕ್ತಿ ಹಿಂದೂ ಧರ್ಮವನ್ನು ಬಿಟ್ಟು ಬೇರೊಂದು ಧರ್ಮವನ್ನು ಸ್ವೀಕರಿಸುತ್ತಿದ್ದಾನೆ ಎಂದರೆ ಅವನ ಆದ್ಯಾತ್ಮಿಕ ಪಾರಮಾರ್ಥಿಕ ಅನ್ವೇಷಣೆಯನ್ನು ಅಷ್ಟು ಹಗುರವಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲ. ಅವನು ಬಡವ ಎಂದ ಮಾತ್ರಕ್ಕೆ ಅವನು ಕೇವಲ ಆಮಿಷಕ್ಕೊಳಗಾಗಿ ಮತಾಂತರಗೊಳ್ಳುತ್ತಿದ್ದಾನೆ ಎಂದು ಹೇಳುವುದು ಘೋರ ತಪ್ಪು, ಅವನಿಗೆ ಮಾಡುತ್ತಿರುವ ಅವಮಾನ.

ಈಗ ನಡೆಯುತ್ತಿರುವ ನೀಚ ಕೃತ್ಯಗಳಿಗೆ ಇನ್ನೊಂದು ಮುಖವಿದೆ. ಈಗ ಹೆಚ್ಚಾಗಿ ಮತಾಂತರಗೊಳ್ಳುತ್ತಿರುವವರು ಯಾರು? ಕೆಳವರ್ಗದವರಲ್ಲವೇ? ಹಿಂದೂ ಧರ್ಮದ ಸಮಭಾಗವಾಗಿ ಉಳಿಯಲು ಅವರು ಸತತವಾಗಿ ಮಾಡಿದ ಹೋರಾಟವನ್ನು ಇಲ್ಲಿ ವಿವರಿಸುವ ಅವಶ್ಯಕತೆ ಇಲ್ಲ. ಅದು ಎಲ್ಲರಿಗೂ ತಿಳಿದಿರುವಂತಹುದೆ. ರಾಜ್ಯಾಂಗದ ಕರ್ತೃ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ತಮ್ಮ ಜೀವನದುದ್ದಕ್ಕೂ ಹಿಂದೂ ಸಮಾಜವನ್ನು ಸುಧಾರಿಸಲು ಹೋರಾಟ ಮಾಡಿ, ಕಡೆಗೆ ಸೋತು- ಕೆಳವರ್ಗದವರಿಗೆ ಹಿಂದೂ ಧರ್ಮವನ್ನು ತ್ಯಜಿಸಿ ಬೌದ್ಧ ಧರ್ಮವನ್ನು ಸ್ವೀಕರಿಸುವಂತೆ ಕರೆನೀಡಿದರು. ಹಿಂದೂ ಧರ್ಮ ಮೇಲುಕೀಳಿನ, ಅಸಮಾನತೆಯ, ಶೋಷಣೆಯ ಕೂಪವಾಗಿ ಉಳಿದುಬಿಟ್ಟಿತು. ಕೆಳವರ್ಗದವರು ಮೇಲ್ವರ್ಗಳ ಸೇವೆಗಾಗಿ ಅಲ್ಲೇ ಉಳಿಯಬೇಕೆಂಬುದು ಅವರ ಆದೇಶ. ಇದನ್ನು ಒಪ್ಪದಿದ್ದಲ್ಲಿ ಅವರು ಬಲಪ್ರಯೋಗ ಮಾಡಿ ಅದನ್ನು ಜಾರಿಗೊಳಿಸಬಲ್ಲರು. ಉಳಿದ ವಿವರಣೆ ಕೊಡುವ ಗೋಜಿಗೆ ಅವರು ಹೋಗುವುದಿಲ್ಲ. ಅವರಿಗೆ ಶಕ್ತಿ ಇದೆ. ಅವರ ಪರವಾಗಿ ಸರ್ಕಾರಗಳಿವೆ. ಅಂದ ಮೇಲೆ ಬೇರೆ ಯಾವ ಚಿಂತೆ ಮಾಡಬೇಕು?

ಸಮಾನತೆ, ಸೋದರತೆ ಮತ್ತು ಸಾಮಾಜಿಕ ನ್ಯಾಯದ ಕಾಳಜಿಯುಳ್ಳ ಎಲ್ಲರೂ ಯೋಚಿಸಬೇಕಾದ, ಕ್ರಿಯಾಶೀಲರಾಗಬೇಕಾದ ಕಾಲ ಈಗ ಬಂದಿದೆ. ವಿಷಯ ಕೆಲ ಜನರನ್ನು ಮತಾಂತರಗೊಳ್ಳದಿರುವಂತೆ ತಡೆಯುವುದಲ್ಲ. ಇದು ರಾಜ್ಯಾಂಗದತ್ತಾವಾದ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳನ್ನು ಉಳಿಸಿಕೊಳ್ಳುವ ಜವಾಬ್ದಾರಿಯದು. ಮತಾಂತರ ತಡೆಯುವಷ್ಟರಲ್ಲಿಯೆ ಇದು ನಿಲ್ಲುವುದಿಲ್ಲ. ಪೇಜಾವರ ಸ್ವಾಮೀಜಿಯವರು ಹೇಳುತ್ತಿದ್ದಾರೆ ನಾವು ಮತಾಂತರವನ್ನು ಒಪ್ಪುವುದಿಲ್ಲ ಎಂದು. ನಾಳೆ ಅವರು ಅಸ್ಪೃಶ್ಯತೆಯನ್ನು ರದ್ದುಪಡಿಸಿರುವುದನ್ನು ಒಪ್ಪುವುದಿಲ್ಲ ಎಂದು ಹೇಳಬಹುದು. ಈಗಾಗಲೇ ರಾಜ್ಯಾಂಗವನ್ನು ತಿದ್ದುವ ಒಂದು ಪ್ರಯತ್ನ ನಡೆಯಿತು ಎಂಬುದರ ನೆನಪಿರಲಿ. ರಾಜ್ಯಾಂಗದತ್ತ ಎಲ್ಲಾ ಹಕ್ಕುಗಳಿರುವಾಗಲೂ ಕೆಲ ಜನರು ತಮ್ಮ ಪರವಾಗಿರುವ ಸರ್ಕಾರಗಳ ದೆಸೆಯಿಂದ ಅದನ್ನು ಕಡೆಗಣಿಸುತ್ತಿದ್ದಾರೆ ಎಂಬುದೂ ನೆನಪಿರಲಿ. ನಾನು ಅತಿಶಯ ಮಾಡುತ್ತಿಲ್ಲ. ಅಸಾದ್ಯವೆಂಬುದು ಯಾವುದೂ ಇಲ್ಲ. ಅರವತ್ತು ಲಕ್ಷ ಯಹೂದಿಗಳನ್ನು ಹೊಗೆ ಕೋಣೆಗಳಿಗೆ ಕಳಿಸಿದ ಹಿಟ್ಲರನ ನೆನಪು ಇನ್ನೂ ಮಾಸಿಲ್ಲ. ನಡೆಯಬೇಕೆಂದು ಒತ್ತಾಯಿಸುವುದು. ಇದು ನಮ್ಮಿಂದ ಸಾಧ್ಯವೇ?

ಅವರ ಆದೇಶ ನೀವು ಪಾಲಿಸದಿದ್ದರೆ ಅವರು ನಿಮ್ಮನ್ನು ಕೊಲೆ ಮಾಡುತ್ತಾರೆ, ಸುಡುತ್ತಾರೆ, ನಿಮ್ಮ ಹೆಣ್ಣುಮಕ್ಕಳ ಮಾನ ಹರಣಮಾಡುತ್ತಾರೆ. ನೀವು ನಿಮ್ಮ ಸ್ವಂತ ಮನೆಯಲ್ಲಿ, ಹಳ್ಳಿಯಲ್ಲಿ ಜೀವಿಸಬೇಕಾದರೆ ಅವರಿಗೊಂದು ಒಪ್ಪಿಗೆ ಪತ್ರ ನೀಡಿ ಅವರ ಕಾಲಬುಡದಲ್ಲೆ, ಅವರು ಹೇಳಿದಂತೆ ಮಾತ್ರ ಜೀವಿಸಬಹುದು. ಎಂತಹ ವಿಪರ್ಯಾಸ. ಆದರೂ ಆಳುವವರಿಗೆ ಈ ಅಮಾನವೀಯತೆಯ, ಹಕ್ಕುಗಳ ಮೇಲಿನ ಹಲ್ಲೆಯ ಅಘಾಥತೆಯ ಅರಿವಾಗುತ್ತಿಲ್ಲ. "ರೋಮ್ ಸುಡುತ್ತಿದ್ದಾಗ ನೀರೊ ವೀಣೆಯ ನುಡಿಸುತ್ತಿದ್ದ" ಎಂಬಂತೆ ಅವರಿದ್ದಾರೆ. ಭಾರತದ ಪ್ರಜಾಪ್ರಭುತ್ವದಲ್ಲಿ, ಕಾನೂನು ಯಾವಗಲೂ ಮುಖ ನೋಡಿ ಜಾರಿಯಾಗುತ್ತದೆ.

ಆದುದರಿಂದ ಸಮಾನತೆ, ಸೋದರತೆ ಮತ್ತು ಸಾಮಾಜಿಕ ನ್ಯಾಯದ ಕಾಳಜಿಯುಳ್ಳ ಎಲ್ಲರೂ ಯೋಚಿಸಬೇಕಾದ, ಕ್ರಿಯಾಶೀಲರಾಗಬೇಕಾದ ಕಾಲ ಈಗ ಬಂದಿದೆ. ವಿಷಯ ಕೆಲ ಜನರನ್ನು ಮತಾಂತರಗೊಳ್ಳದಿರುವಂತೆ ತಡೆಯುವುದಲ್ಲ. ಇದು ರಾಜ್ಯಾಂಗ ದತ್ತಾವಾದ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳನ್ನು ಉಳಿಸಿಕೊಳ್ಳುವ ಜವಾಬ್ದಾರಿಯದು. ಮತಾಂತರ ತಡೆಯುವಷ್ಟರಲ್ಲಿಯೆ ಇದು ನಿಲ್ಲುವುದಿಲ್ಲ. ಪೇಜಾವರ ಸ್ವಾಮೀಜಿಯವರು ಹೇಳುತ್ತಿದ್ದಾರೆ ನಾವು ಮತಾಂತರವನ್ನು ಒಪ್ಪುವುದಿಲ್ಲ ಎಂದು. ನಾಳೆ ಅವರು ಅಸ್ಪೃಶ್ಯತೆಯನ್ನು ರದ್ದುಪಡಿಸಿರುವು ದನ್ನು ಒಪ್ಪುವುದಿಲ್ಲ ಎಂದು ಹೇಳಬಹುದು. ಈಗಾಗಲೇ ರಾಜ್ಯಾಂಗವನ್ನು ತಿದ್ದುವ ಒಂದು ಪ್ರಯತ್ನ ನಡೆಯಿತು ಎಂಬುದರ ನೆನಪಿರಲಿ. ರಾಜ್ಯಾಂಗದತ್ತ ಎಲ್ಲಾ ಹಕ್ಕುಗಳಿರುವಾಗಲೂ ಕೆಲ ಜನರು ತಮ್ಮ ಪರವಾಗಿರುವ ಸರ್ಕಾರಗಳ ದೆಸೆಯಿಂದ ಅದನ್ನು ಕಡೆಗಣಿಸುತ್ತಿದ್ದಾರೆ ಎಂಬುದೂ ನೆನಪಿರಲಿ.

ನಾನು ಅತಿಶಯ ಮಾಡುತ್ತಿಲ್ಲ. ಅಸಾದ್ಯವೆಂಬುದು ಯಾವುದೂ ಇಲ್ಲ. ಅರವತ್ತು ಲಕ್ಷ ಯಹೂದಿಗಳನ್ನು ಹೊಗೆ ಕೋಣೆಗಳಿಗೆ ಕಳಿಸಿದ ಹಿಟ್ಲರನ ನೆನಪು ಇನ್ನೂ ಮಾಸಿಲ್ಲ. ಆಳುವವರು ಬೇಕೆಂದ ಹಾಗೆ ಆಡಳಿತ ನಡೆಸುತ್ತಿದ್ದಾರೆ. ಜನರಿಗೆ ನೀಡಿದ್ದ ಓಟು ನಗಣ್ಯವಾಗಿದೆ. ಹಣ ಇದ್ದವರು ಅದನ್ನು ಕೊಳ್ಳುವ ಮಟ್ಟ ಬಂದಿದೆ. ತಮ್ಮ ಸ್ವಂತ ಹಿತಕ್ಕಾಗಿ ಅಧಿಕಾರಸ್ಥರು ಸಾರ್ವಜನಿಕ ಸ್ವತ್ತಿನ ದುರುಪಯೋಗ ನಡೆದಿದೆ. ದುರಾದೃಷ್ಟವೆಂದರೆ ಇವೆಲ್ಲವೂ ಸಾಮಾನ್ಯ ಎಂಬ ಮನಸ್ಥಿತಿಗೆ ನಾವೆಲ್ಲರೂ ಬರುತ್ತಿದ್ದೇವೆ. ಇಂತಹುದನ್ನು ತಡೆಯಲು ಇರುವ ಒಂದೇ ಒಂದು ಮಾರ್ಗ ಕಾನೂನು ಕಟ್ಟಳೆಯ ಪರಿಮಿತಿಯಲ್ಲಿ ಎಲ್ಲಾ ಸಾರ್ವಜನಿಕ ಕ್ರಿಯೆಗಳೂ ನಡೆಯಬೇಕೆಂದು ಒತ್ತಾಯಿಸುವುದು. ಇದು ನಮ್ಮಿಂದ ಸಾಧ್ಯವೇ?

□

ಒಂದು ಸಾಹಿತ್ಯ ಕಮ್ಮಟದ ಆಶಯ!

ಉತ್ತಮ ಮನುಷ್ಯನ ಸೃಷ್ಟಿಯೇ ಇಂದಿನ ತುರ್ತು

ಕನ್ನಡ ಸಾಹಿತ್ಯದ ಈ ಮಹತ್ವದ ಪ್ರಶ್ನೆಗಳ ಬಗ್ಗೆ ಇದೇ ನವಂಬರ್ ೭ ಮತ್ತು ೮ರಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ಕ್ರೈಸ್ಟ್ ಯೂನಿವರ್ಸಿಟಿ ಮತ್ತು ಕ್ರೈಸ್ತ ಪದವಿ ಪೂರ್ವ ಕಾಲೇಜುಗಳು ಎರಡು ದಿನಗಳ ವಿಚಾರ ಸಂಕಿರಣ/ಕಮ್ಮಟವನ್ನು ಏರ್ಪಡಿಸಿದ್ದವು. ಇಂಥ ಒಂದು ಕಮ್ಮಟವನ್ನು ನಡೆಸುವುದು ಅದೇ ಕಾಲೇಜಿನ ಪ್ರೋಫೆಸರ್ ಆಗಿದ್ದ ಮತ್ತು ತಾನು ಎಲೆಮರೆಯ ಕಾಯಿಯಾಗಿಯೇ ಉಳಿದುಕೊಂಡು ಈ ತಲೆಮಾರಿನ ಹಲವಾರು ಪ್ರತಿಭೆಗಳನ್ನು ಬೆಳಕಿಗೆ ತಂದ ಪ್ರೊ. ಶ್ರೀನಿವಾಸರಾಜು ಹೆಸರಲ್ಲಿ ನಡೆದದ್ದು ಸಹ ಅಷ್ಟೇ ಅರ್ಥ ಪೂರ್ಣವಾಗಿತ್ತು. ಎರಡು ದಿನಗಳ ಈ ವಿಚಾರಸಂಕಿರಣದಲ್ಲಿ ಸಾಹಿತ್ಯ ಪರಂಪರೆ ಇಂದಿನ ಜಾಗತಿಕ ಸನ್ನಿವೇಶದಲ್ಲಿ ಎದಿರಿಸುತ್ತಿರುವ ಹಲವಾರು ಪ್ರಶ್ನೆಗಳು ಮತ್ತು ಕನ್ನಡದ ಸಾಂಸ್ಕೃತಿಕ ಸಂದರ್ಭದಲ್ಲಿ ಅದು ಪ್ರಕಟಗೊಳ್ಳುತ್ತಿರುವ ರೀತಿಯ ಬಗ್ಗೆ ಅರ್ಥ ಪೂರ್ಣ ವಾಗ್ವಾದಗಳು ನಡೆದದ್ದು ವಿಶೇಷವಾಗಿತ್ತು.

ಶಿವ ಸುಂದರ್

ಕನ್ನಡ ಸಾಹಿತ್ಯದ ಇತ್ತೀಚಿನ ಒಲವುಗಳು ಏನು? ಕನ್ನಡ [illegible]ದಲ್ಲಿ ಇಂದು [illegible]ವಾಗಿ ಬರುತ್ತಿರುವ ಸಾಹಿತ್ಯ [illegible] [illegible]ಗಳು ಮತ್ತು [illegible]? ಇಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭವನ್ನು ಹೊಸ ತಲೆಮಾರು ಹೇಗೆ ಮುಖಾಮುಖಿಯಾಗುತ್ತಿದೆ? ಇಂದು ಹೊಸ ತಲೆಮಾರು ವಿವಿಧ ಪ್ರಾಕಾರಗಳಲ್ಲಿ ಮಾಡುತ್ತಿರುವ ಕೃಷಿಯಲ್ಲಿ ಎದುರಿಸುತ್ತಿರುವ ಸವಾಲೇನು? ಮತ್ತು ಅದರ ಜೊತೆಗೆ ಮಾಡಿಕೊಂಡಿರುವ ಅನುಸಂಧಾನಗಳೇನು? ಎಲ್ಲಕಿಂತ ಹೆಚ್ಚಾಗಿ ಹೊಸ ತಲೆಮಾರು ಆತುಕೊಳ್ಳುತ್ತಿರುವ ಸಮಾಜ ದರ್ಶನ ಮತ್ತು ಜೀವನ ದರ್ಶನಗಳೇನು?

ಕನ್ನಡ ಸಾಹಿತ್ಯದ ಈ ಮಹತ್ವದ ಪ್ರಶ್ನೆಗಳ ಬಗ್ಗೆ ಇದೇ ನವಂಬರ್ 7 ಮತ್ತು 8ರಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ಕ್ರೈಸ್ಟ್ ಯೂನಿವರ್ಸಿಟಿ ಮತ್ತು ಕ್ರೈಸ್ತ ಫದವಿ ಪೂರ್ವ ಕಾಲೇಜುಗಳು ಎರಡು ದಿನಗಳ ವಿಚಾರ ಸಂಕಿರಣ/ಕಮ್ಮಟವನ್ನು ಏರ್ಪಡಿಸಿತ್ತು. ಇಂಥ ಒಂದು ಕಮ್ಮಟವನ್ನು ನಡೆಸುವುದು ಅದೇ ಕಾಲೇಜಿನ ಪ್ರೋಫೆಸರ್ ಆಗಿದ್ದ ಮತ್ತು ತಾನು ಎಲೆಮರೆಯ ಕಾಯಿಯಾಗಿಯೇ ಉಳಿದುಕೊಂಡು ಈ ತಲೆಮಾರಿನ ಹಲವಾರು ಪ್ರತಿಭೆಗಳನ್ನು ಬೆಳಕಿಗೆ ತಂದ ಪ್ರೊ. ಶ್ರೀನಿವಾಸರಾಜು ಹೆಸರಲ್ಲಿ ನಡೆ ದದ್ದು ಸಹ ಅಷ್ಟೇ ಅರ್ಥ ಪೂರ್ಣವಾಗಿತ್ತು.

ಎರಡು ದಿನಗಳ ಈ ವಿಚಾರಸಂಕಿರಣದಲ್ಲಿ ಸಾಹಿತ್ಯ ಪರಂಪರೆ ಇಂದಿನ ಜಾಗತಿಕ ಸನ್ನಿವೇಶದಲ್ಲಿ ಎದಿರಿಸುತ್ತಿರುವ ಹಲವಾರು ಪ್ರಶ್ನೆಗಳು ಮತ್ತು ಕನ್ನಡದ ಸಾಂಸ್ಕೃತಿಕ ಸಂದರ್ಭದಲ್ಲಿ ಅದು ಪ್ರಕಟಗೊಳ್ಳುತ್ತಿರುವ ರೀತಿಯ ಬಗ್ಗೆ ಅರ್ಥಪೂರ್ಣ ವಾಗ್ವಾದಗಳು ನಡೆದದ್ದು ಅತ್ಯಂತ ವಿಶೇಷವಾಗಿತ್ತು.

ತಮ್ಮ ಉದ್ಘಾಟನಾ ಭಾಷಣದ ಮೂಲಕ ಸಂಕಿರಣಕ್ಕೆ ಚಾಲನೆ ಕೊಟ್ಟ ಕನ್ನಡದ ಹಿರಿಯ ಸಾಹಿತಿ ಮತ್ತು ಮಾಗಿದ ಮನವಾದ ಪ್ರೊ.ಕಿ.ರಂ.ನಾಗರಾಜ ಅವರು ಇಂದಿನ ತಲೆಮಾರು ಹಲವು ಬಗೆಯ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಸಹನೆಗಳ ಮಧ್ಯೆ ತನ್ನ ಕೃಷಿಯನ್ನು ನಡೆಸಬೇಕಿದೆ. ಬರಯಬೇಕಾದ ತುರ್ತುಗಳು ಬದಲಾಗುತ್ತಿವೆ ಎಂದರು. "ಸಾಹಿತ್ಯದ ರೂಪಕಗಳು ಜನಸಮುದಾಯದಿಂದ ನಿರ್ಮಿತಿಗೊಂಡವೇ ವಿನಃ ವ್ಯಕ್ತಿ ನಿರ್ಮಿತವಲ್ಲ. ಹಾಗಿಲ್ಲದಿದ್ದಾಗ ಅದು ಭೈರಪ್ಪನವರ ಕೃತಿಯಾಗಿಬಿಡುತ್ತದೆ" ಎಂದು ಅಭಿಪ್ರಾಯಪಟ್ಟರು. ಇಂದು ಯಾರು ಶ್ರೇಷ್ಠ ಸಾಹಿತಿ ಎಂಬ ಕಾಲ ಹೋಯಿತು. ಈಗ ಸಮುದಾಯವನ್ನು ಒಳಗೊಳ್ಳಬೇಕಾದ ಲೇಖಕ ವರ್ಗ ಬರಬೇಕಿವೆ ಎಂದು ಕರೆ ನೀಡಿದರು. ಅಲ್ಲದೆ ಇಂದಿನ ತಲೆಮಾರು ಭಾಷಾ ಸೂಕ್ಷ್ಮತೆ ಇಲ್ಲದ ಒಂದು ರೂಪಕ ಮತ್ತು ಸಾಂಕೇತಿಕ ಶಕ್ತಿಯನ್ನು ಕಳೆದುಕೊಂಡ ಮೆಕನೈಸ್ಡ್ ಕನ್ನಡ ಬಳಸುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದರು.

ನಂತರ ನಡೆದ ಎರಡು ದಿನಗಳ ಚರ್ಚೆ ಕೇವಲ ಶುದ್ಧ ಸಾಹಿತ್ಯಕ್ಕೆ ಸೀಮಿತವಾಗದೆ ಬರಹ ಮಾಡಬೇಕಾದ ಸಾಮಾಜಿಕ ಸಂದರ್ಭದ ಗೊಂದಲಗಳ ಬಗೆಗೂ ವಿಸ್ತರಿಸಿದ್ದು ಅಪರೂಪವು ಮತ್ತು ಅರ್ಥಪೂರ್ಣವೂ ಆಗಿತ್ತು.

ಕನ್ನಡ ಸಾಹಿತ್ಯದ ಹಳೆಯ ಚರ್ಚೆಗಳೇ ಆದ ಸಾಹಿತ್ಯದಲ್ಲಿ ಬದ್ಧತೆ ಮತ್ತು ಮುಕ್ತತೆ, ಸಾಮಾಜಿಕ ಕ್ರಿಯಾಶೀಲತೆ ಮತ್ತು ಸಾಹಿತ್ಯಿಕ ಸೃಜನಶೀಲತೆ, ಸಾಹಿತಿಯ ಜೀವನ ಮೌಲ್ಯ ಮತ್ತು ಸಾಹಿತಿಯ ಕೃತಿಯ ಜೀವನ ಮೌಲ್ಯ ಈ ಎಲ್ಲಾ ಪ್ರಶ್ನೆಗಳನ್ನು ಹೊಸ ತಲೆಮಾರಿನ ಈ ಸಾಹಿತಿಗಳು ಎದುರುಗೊಂಡ ರೀತಿ ಅನನ್ಯವಾಗಿತ್ತು. ಉದಾಹರಣೆಗೆ ಕೆ.ವಿ. ರಂಗನಾಥ್ ಸಮಕಾಲೀನ ಸಾಂಸ್ಕೃತಿಕ ಸವಾಲುಗಳು ಎಂಬ ಪ್ರಶ್ನೆಯನ್ನು ನಿಭಾಯಿಸುತ್ತಾ ಈ ಸಮಕಾಲೀನ ಎನ್ನುವುದು ಕೇವಲ ವಯಸ್ಸಿನ ಅಂತರಕ್ಕೆ ಮಾತ್ರ ಸೀಮಿತಗೊಳಿಸಲು ಸಾಧ್ಯವೇ ಎಂಬ ಪ್ರಶ್ನೆಯನ್ನು ಕೇಳಿದರೆ, ಹೊಸತಲೆಮಾರಿನ ಸಂಶೋಧನೆಯ ಬಗ್ಗೆ ಕೆಲವು ಭಿನ್ನಮತಗಳನ್ನು ದಾಖಲಿಸಿದ ಡಾ.ಬಿ.ಎಂ. ಪುಟ್ಟಯ್ಯನವರು ಸಾಹಿತ್ಯವನ್ನು ಮೌಲ್ಯಗಳ ನೆಲೆಯಲ್ಲಿ ಪ್ರಶ್ನೆಯನ್ನು ಕೇಳಿಕೊಳ್ಳದೆ ಹೊಸ ಮತ್ತು ಹಳೆ ಎಂಬ ಕಾಲಮಾನವನ್ನು ಪ್ರಶ್ನೆಯಾಗಿಸಿಕೊಳ್ಳುವ ಔಚಿತ್ಯವನ್ನು ಪ್ರಶ್ನಿಸಿದರು. ಸಂಶೋಧನೆಗೆ ಮೂಲ ಆಕರವಾದ ಮಾಹಿತಿ ಪೂರೈಕೆಯೇ ಸೈದ್ಧಾಂತಿಕ ನಿಯಂತ್ರಣಕ್ಕೆ ಒಳ ಪಟ್ಟಿರುವಾಗ ಅದನ್ನು ಆಧಾರಿಸಿದ ಸಂಶೋಧನೆ ಹೇಗೆ ಸತ್ಯವಾಗುತ್ತದೆ ಎಂಬ ಮಹತ್ವದ ಪ್ರಶ್ನೆಯನ್ನು ಎತ್ತಿದರು.

ಹೊಸಕಾವ್ಯದಲ್ಲಿ ಹೊರಗಣ ಎಂಬ ಸಮಾಜ ಒಳಗಾಗುತ್ತಿರುವ ಬಗೆಯನ್ನು ವಿಶ್ಲೇಶಿಸಿದ ಯುವಕವಿ ಪೀರ್‌ಭಾಷಾ ಇಂದಿನ ಸಾಮಾಜಿಕ ಸಂದರ್ಭವು ನವೋದಯ ಪೂರ್ವದ ಸಾಮಾಜಿಕ ಸಂದರ್ಭದೊಡನೆ ಸಾಮ್ಯತೆಯನ್ನು ಹೊಂದಿದೆ ಎಂದರು. ಕವಿಗಳ ಸರಾಸರಿ ಗ್ರಹಿಕೆ "ಉದಾರವಾದಿ ಮಾನವತಾವಾದ"ಕೆ ಬದ್ಧವಾಗಿದೆ. ಇಂದಿನ ತುರ್ತು ಅದಕ್ಕಿಂತ ಹೆಚ್ಚಿನದನ್ನು ಬೇಡುತ್ತಿದ್ದರೂ ಅದರ ಸೀಮಿತತೆಯಲ್ಲಿ ಕನ್ನಡದ ಯುವಕವಿಗಳು ಗಟ್ಟಿ ಕಾವ್ಯವನ್ನು ಸೃಷ್ಟಿಸುತ್ತಿದ್ದಾರೆ ಎಂದು ಉದಾಹರಣೆಗಳ ಸಮೇತ ಸಾಬೀತು ಪಡಿಸಿದರೆ ಕವಿ ಎನ್.ಕೆ.ಹನುಮಂತಯ್ಯ ಈ ತಲೆಮಾರಿನ ಕವಿ ಕಾಯ ಮತ್ತು ಕಾವ್ಯ ವಿಭಜನೆಗೊಂದಿರುವ ಸಂಕಟ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾನೆ ಎನ್ನುತ್ತಲೇ ಕವಿ ಕುಲವಿರೋಧಿ ಪ್ರಜ್ಞೆಯಿಂದ ಕುಲದೊಳಗಿನ ಶತೃವನ್ನು ಭಗ್ನ ಮಾಡಬೇಕು. ಆದರೆ ನಿರ್ನಾಮ ನಡೆಯುತ್ತಿದೆ ಆದರೆ ನಿರ್ಮಾಣ ನಡೆಯುತ್ತಿಲ್ಲ ಎಂದು ವಿಷಾದಿಸಿದರು. ಹೊಸ ತಲೆಮಾರಿನ ಕಥೆಗಳ ಜಾಡನ್ನು ಅನ್ವೇಷಿಸಿದ ಕಥೆಗಾರರಾದ ಕಲಿ



ದಿವಂಗತ ಪ್ರೊ. ಶ್ರೀನಿವಾಸ ರಾಜು

> ಸಮಕಾಲಿನ ಸಾಹಿತ್ಯ ಸೃಷ್ಟಿಯ ಅಂತರಿಕ ನೆಲೆಗಳನ್ನು ಕುರಿತು ಪ್ರೊ. ಹೆಚ್.ಎಸ್. ರಾಘವೇಂದ್ರರಾವ್ ಮಂಡಿಸಿದ ಅಭಿ ಪ್ರಾಯಗಳು ಮಾರ್ಗ ದರ್ಶಿಯೂ ಹೃದಯಸ್ಪರ್ಶಿಯು ಆಗಿದ್ದವು. ಲಂಡ ನ್ನಿನ 'ಹೈಡ್ ಪಾರ್ಕ್' ಸಂಸ್ಕೃತಿಯಂತೆ ಯಾರೂ ಬೇಕಾದರೂ ತಮಗನ್ನಿಸಿದ್ದನ್ನು ಮಾತನಾಡಿಕೊಂಡು ಹೋಗುವ ಆದರೆ ಯಾವುದೇ ಸಾಮಾಜಿಕ ಪ್ರತಿಸ್ಪಂದನೆ ಇಲ್ಲದ ಅರಣ್ಯ ರೋದನವಾಗುವಂತ ಸಂದರ್ಭದಲ್ಲಿ ನಾವಿದ್ದೇವೆ ಎಂದು ವಿಷಾದಿಸುತ್ತಲೇ ಬರಹ ನಡೆಯುವ ಸಾಮಾಜಿಕ ಸಂದರ್ಭವನ್ನು ಹೃದಯ ವಂತಗೊಳಿಸುವ ಚಳವಳಿಯ ಜೊತೆ ಸಂಬಂಧಹೊಂದಿರದೆ ಸಾಂಸ್ಕೃತಿಕ ಕ್ರಿಯಾಶೀಲತೆ ಸಾಧ್ಯವಿಲ್ಲ ಎಂದು ಘೋಷಿಸಿದರು. ಇಂದಿನ ತುರ್ತು ಉತ್ತಮ ಕೃತಿಯ ಸೃಷ್ಟಿಗಿಂತ ಉತ್ತಮ ಮನುಷ್ಯನ ಸೃಷ್ಟಿಯಾಗಿದೆ ಎಂದು ಕರೆ ನೀಡಿದರು.

ಗಣನಾಥ ಗುಡದೂರು ಮತ್ತು ಮಂಜುನಾಥ ಲತಾರವರು ಕಥೆಗಳಲ್ಲಿನ ಶಿಲ್ಪದ ಜೊತೆಗೆ ಕಥೆಯಲ್ಲಿ ಕಾಣಸಿಗುವ ಜೀವನ ದೃಷ್ಟಿಯ ವಿಶ್ಲೇಷಣೆಯನ್ನು ಮಾಡಿದರು. ವೃತ್ತಪತ್ರಿಕೆಗಳ ಪದಮಿತಿಗಳು ಸೃಷ್ಟಿಸುತ್ತಿರುವ ಬಂಧನ ಕಥಾ ಬಂಧದ ಮೇಲೆ ಮಾಡುತ್ತಿರುವ ಪರಿಣಾಮವನ್ನು ಚರ್ಚಿಸಿದರು.

ಈ ಸಂದರ್ಭದಲ್ಲಿ ಸಾಹಿತಿಯ ನೈತಿಕತೆ ಮತ್ತು ಅವರು ಸೃಷ್ಟಿಸುವ ಸಾಹಿತ್ಯದ ಮೌಲಿಕತೆಯ ಪ್ರಶ್ನೆ ಮತ್ತೆ ಎದುರಾಯಿತು. ಈ ಪ್ರಶ್ನೆಯ ಬಗ್ಗೆ ಇರುವ ಎರಡು ವಿಭಿನ್ನ ನೆಲೆಗಳ ಉತ್ತರ ಇಲ್ಲಿಯೂ ಎದುರಾಯಿತಾದರೂ ಒಟ್ಟಾರೆ ಚರ್ಚೆಯ ಧ್ವನಿ ಬದುಕಿನಲ್ಲಿ ಮೌಲ್ಯಗಳ ಪತನವಾಗಿರುವ ಸಾಹಿತಿಯ ಸೃಷ್ಟಿಯ ಮೌಲಿಕತೆಯೂ ಪ್ರಶ್ನಾರ್ಹವೇ ಎಂಬ ಪ್ರಬಲ ಧ್ವನಿ ಇತ್ತು. ಇದು ಎಲ್ಲಾ ಕಲಾವಿದರಿಗೂ ಅನ್ವಯಿಸುತ್ತದಾದರೂ ಸಾಹಿತ್ಯದ ಸಂವಹನಾ ಸಾಧ್ಯತೆಯೇ ನಿರೀಕ್ಷೆಯನ್ನು ಹೆಚ್ಚಿಸುತ್ತದೆ ಎಂಬ ಅಬಿಪ್ರಾಯವೂ ವ್ಯಕ್ತವಾಯಿತು. ಇದರ ಬಗ್ಗೆ ಚರ್ಚೆ ಅಪೂರ್ಣಗೊಂಡರೂ ನಡೆದಷ್ಟು ಆರೋಗ್ಯಕರವಾಗಿತ್ತು. ಹೊಸ ತಲೆಮಾರು ನಾಟಕರಂಗದಲ್ಲಿ ನಡೆಸುತ್ತಿರುವ ಹುಡುಕಾಟದಲ್ಲಿ ಹೊಸ ರೂಪಕಗಳನ್ನು ಕಂಡುಕೊಳ್ಳುವುದರಲ್ಲಿ ...ವಾಗುತ್ತಿರುವ ಬಗ್ಗೆ ಡಾ.ಕೆ.ವೈ.ನಾರಯಣಸ್ವಾಮಿ ಮತ್ತು ಸಮಕಾಲಿನ ಕಾದಂಬರಿಯ ಹೊಸ ನಿರ್ವಚನದ ಬಗ್ಗೆ ಡಾ. ಕವಿತಾ ರೈ ಮಾತನಾಡಿದರು.

ಈ ಕಮ್ಮಟದಲ್ಲಿ ನಡೆದ ಮತ್ತೊಂದು ಪ್ರಮುಖ ಚರ್ಚೆ ಪ್ರಾಕಾರ ನಿಷ್ಠೆ ಇರಬೇಕೆ ಬೇಡವೇ ಎಂಬುದು. ಇದನ್ನು ಪತ್ರಕರ್ತ ದೇವೂ ಪತ್ತಾರ ತಮ್ಮ ಮಂಡನೆಯಲ್ಲಿ ಪ್ರಾರಂಭಿಸಿ ಈ ಕಾಲಘಟ್ಟದಲ್ಲಿ ಹೊಸ ತಲೆಮಾರು ತನ್ನ ಅಭಿವ್ಯಕ್ತಿಗೆ ಸೂಕ್ತವಾದ ಹೊಸ ಪ್ರಾಕಾರಗಳನ್ನು ಕಟ್ಟಿಕೊಳ್ಳುತ್ತಿದೆಯಾದ್ದರಿಂದ ಏಕೆ ಕೆಲವು ನಿರ್ದಿಷ್ಟ ಬಗೆಯ ಸಾಹಿತ್ಯ ಬರುತ್ತಿಲ್ಲ ಎನ್ನುವುದೇ ಅರ್ಥಹೀನ ಪ್ರಶ್ನೆ ಎಂದರು. ಇದನ್ನೆ ಹೊಸ ತಲೆಮಾರಿನ ಹೊಸ ಪ್ರಬಂಧಗಳು ಎಂಬ ತಮ್ಮ ಚರ್ಚೆಯಲ್ಲಿ ಮುಂದುವರೆಸಿದ ಕೃಷ್ಣಮೂರ್ತಿ ಬೆಳೆಗೆರೆಯವರು ಇಂದು ಹಳೆಯ ಕಾಲದ ಲಲಿತ ಪ್ರಬಂಧದ ಚೌಕಟ್ಟು ಮುರಿದಿದೆ. ಏಕೆಂದರೆ ಅದು ಸಮಾಜದ ಮೇಲ್ಜಾತಿ ಮತ್ತು ಮೇಲ್ವರ್ಗದ ವಿರಾಮದ ಅಭಿವ್ಯಕ್ತಿ ಆಗಿತ್ತು. ಆದರೆ ಇಂದು ಪ್ರಬಂಧ ರಚನೆಯಲ್ಲಿ ಸಮಾಜದ ಅಲಕ್ಷಿತ ಸಮುದಾಯಗಳು ದೊಡ್ಡ ಸಂಖ್ಯೆಯಲ್ಲಿ ತೊಡಗಿಸಿಕೊಂಡಿವೆ. ಅವರ ಬದುಕು ಮತ್ತು ಸಂಕಟಗಳು ಅನಾವರಣಗೊಳ್ಳುತ್ತಿವೆ. ಪ್ರಕಾರಗಳು ಕೆಡವಿ ಕಟ್ಟಲ್ಪಡುತ್ತಿವೆ ಎಂದರು.

ಎಲ್ಲಕ್ಕಿಂತ ಮುಖ್ಯವಾಗಿ ಸಮಕಾಲಿನ ಸಾಹಿತ್ಯ ಸೃಷ್ಟಿಯ ಅಂತರಿಕ ನೆಲೆಗಳನ್ನು ಕುರಿತು ಪ್ರೊ. ಹೆಚ್.ಎಸ್. ರಾಘವೇಂದ್ರರಾವ್ ಮಂಡಿಸಿದ ಅಭಿಪ್ರಾಯಗಳು ಮಾರ್ಗ ದರ್ಶಿಯೂ ಹೃದಯಸ್ಪರ್ಶಿಯು ಆಗಿದ್ದವು. ಲಂಡನ್ನಿನ 'ಹೈಡ್ ಪಾರ್ಕ್' ಸಂಸ್ಕೃತಿಯಂತೆ ಯಾರೂ ಬೇಕಾದರೂ ತಮಗನ್ನಿಸಿದ್ದನ್ನು ಮಾತನಾಡಿಕೊಂಡು ಹೋಗುವ ಆದರೆ ಯಾವುದೇ ಸಾಮಾಜಿಕ ಪ್ರತಿಸ್ಪಂದನೆ ಇಲ್ಲದ ಅರಣ್ಯ ರೋದನವಾಗುವಂತ ಸಂದರ್ಭದಲ್ಲಿ ನಾವಿದ್ದೇವೆ ಎಂದು ವಿಷಾದಿಸುತ್ತಲೇ ಬರಹ ನಡೆಯುವ ಸಾಮಾಜಿಕ ಸಂದರ್ಭವನ್ನು ಹೃದಯವಂತಗೊಳಿಸುವ ಚಳವಳಿಯ ಜೊತೆ ಸಂಬಂಧಹೊಂದಿರದೆ ಸಾಂಸ್ಕೃತಿಕ ಕ್ರಿಯಾಶೀಲತೆ ಸಾಧ್ಯವಿಲ್ಲ ಎಂದು ಘೋಷಿಸಿದರು. ಇಂದಿನ ತುರ್ತು ಉತ್ತಮ ಕೃತಿಯ ಸೃಷ್ಟಿಗಿಂತ ಉತ್ತಮ ಮನುಷ್ಯನ ಸೃಷ್ಟಿಯಾಗಿದೆ ಎಂದು ಕರೆ ನೀಡಿದರು. ಸಾಹಿತಿಯ ಸಮಾಜ ದರ್ಶನ ಮತ್ತು ಜೀವನ ದರ್ಶನವೇ ಅವನ ಸಾಹಿತ್ಯದಲ್ಲಿ ಅಭಿವ್ಯಕ್ತಗೊಳ್ಳುವುದರಿಂದ ಅದರ ಬಗ್ಗೆ ಚರ್ಚಿಸುವುದು ತುಂಬಾ ಅಗತ್ಯವೆಂದದ್ದನ್ನು ಇಡೀ ಸಭೆ ಒಕ್ಕೊರಲಿನಿಂದ ಸ್ವಾಗತಿಸಿತು. ಅಷ್ಟು ಮಾತ್ರವಲ್ಲದೆ ಮುಕ್ತತೆ ಮತ್ತು ಬದ್ಧತೆಗೆ ಇರುವ ವ್ಯಾಪ್ತಿ ಹಾಗೂ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಬರುತ್ತಿರುವ ಗೊಂದಲಗಳನ್ನು ಸಹ ಅವರು ವಿವರವಾಗಿ ವಿಶ್ಲೇಷಿಸಿದರು.

ಸಭೆಯ ಸಮಾರೋಪದಲೂ ಸಹ ಹಿರಿಯ ಚಿಂತಕ ಡಾ.ರಹಮತ್ ತರೀಕೆರೆಯವರು ಎರಡು ದಿನಗಳ ಈ ಕಮ್ಮಟ ಸಾಹಿತ್ಯಕ್ಕಿಂತ ಹೆಚ್ಚಾಗಿ ಒಂದು ಹೃದಯವಂತ ಸಮಾಜದ ಸೃಷ್ಟಿಯ ಬಗ್ಗೆಯೇ ಚರ್ಚಿಸಿದೆ ಎಂದರೂ ತಪ್ಪಾಗಲಿಕ್ಕಿಲ್ಲ ಎಂದು ಹೆಮ್ಮೆ ಪಟ್ಟರು. ಇದು ಕವಿರಾಜಮಾರ್ಗದಿಂದಲೂ ಕನ್ನಡ ಸಾಹಿತ್ಯ ಮಾನವೀಯ ಸಮಾಜ ಸೃಷ್ಟಿಗೆ ಒತ್ತು ಕೊಟ್ಟಿರುವುದರ ಮುಂದುವರಿಕೆಯಾಗಿದೆ ಎನ್ನುತ್ತಲೇ ಇಂದಿನ ತುರ್ತು ಉತ್ತಮ ಮನುಷ್ಯನ ಸೃಷ್ಟಿಯೇ ಆಗಿದೆ ಎಂದು ಎರಡು ದಿನಗಳ ಚರ್ಚೆಗೆ ಒಂದು ಅರ್ಥ ಪೂರ್ಣ ಮುಕ್ತಾಯ ಹಾಡಿದರು.

ಕನ್ನಡ ಸಾಹಿತ್ಯವನ್ನು ಮುನಡೆಸತ್ತಿರುವ 40ಕ್ಕೂ ಹೆಚ್ಚು ಯುವ ತಲೆಮಾರಿನ ಬರಹಗಾರರು ಸಾಹಿತ್ಯದ ಈ ಮಾನವೀಯ ಹೊಣೆಗಾರಿಕೆಯನ್ನು ಹೊತ್ತಂತೆ ಪ್ರತಿಕ್ರಿಯಿಸಿದ್ದು ಆಶಾದಾಯಕವಾಗಿತ್ತು ಮಾತ್ರವಲ್ಲ ಮಾನವೀಯ ಸಂವೇದನೆಯ ಚಿ. ಶ್ರೀನಿವಾಸರಾಜುರವರಿಗೆ ನೀಡಿದ ಗೌರವವೂ ಆಗಿತ್ತು. □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಅಳಿದ ಕತ್ತಲೆ ರಾಜ್ಯ: ಶ್ವೇತ ಭವನದಲ್ಲಿ ಒಬಾಮ

ಡಾ. ಸುಮಾ ಬಿ ಯು

ಎರಡು ವರ್ಷಗಳಿಂದ ಜಗತ್ತಿನ ಗಮನವನ್ನು ತನ್ನೆಡೆಗೆ ಹಿಡಿದಿಟ್ಟುಕೊಂಡಿದ್ದ ಅಮೆರಿಕಾದ ೪೪ನೆಯ ಅಧ್ಯಕ್ಷೀಯ ಚುನಾವಣೆ, ಈ ಶತಮಾನದ ಒಂದು ಅಸಂಗತ, ಆದರೂ ಅಭೂತಪೂರ್ವ ಅನುಭವದೊಂದಿಗೆ ಅಂತ್ಯಗೊಂಡಾಗ, ಜಾಗತಿಕ ಸಂರಚನೆಗಳು ನಿರಚನೆಗೊಂಡು, ಯಾಜಮಾನೀಯವಾದ ಎಲ್ಲಾ ಸ್ಥಾಪಿತಗಳು ಕುಸಿದು ಬೀಳುವುದರೊಂದಿಗೆ, ಆಧುನಿಕ ಮೌಲ್ಯಗಳು ಪ್ರಾಯೋಗಿಕ ವಾಸ್ತವವಾಗುವ ಒಂದು ಹೊಸ ಅಧ್ಯಾಯ ಪ್ರಾರಂಭವಾಯಿತು. ಅಮೆರಿಕಾ, ಯಾವ ಅನುಮಾನವೂ ಇಲ್ಲದೆ, ಒಬಾಮರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ. ಇನ್ನು, ಮಾರ್ಟಿನ್‌ಲೂಥರ್ ಕಿಂಗ್‌ನ ಆತ್ಮ ಶಾಂತಿಯ ಚಿರನಿದ್ರೆಗೆ ಸಲ್ಲುತದೆ ಎನ್ನುವುದರಲ್ಲಿ ಅನುಮಾನವಿಲ್ಲ. "ಯಸ್, ವಿ ಕ್ಯಾನ್"- ಒಬಾಮರ ಈ ಉಕ್ತಿ ಆದಿಮ ಜನಾಂಗಗಳ ಸಾಧನೆಗೆ ಹಿಡಿದ ಕನ್ನಡಿ.

"ಯಸ್, ವಿ ಕ್ಯಾನ್" – ಇಂದು ಅಮೆರಿಕಾದ ಸಮಸ್ತ ಜನಸ್ತೋಮ ಅಪಾರವಾದ ಆಪ್ಯಾಯತೆಯಿಂದ ಈ ಮಾತುಗಳನ್ನು ಹೇಳುತ್ತಿದೆ. ಇದು, ಏಕೈಕ ಶಕ್ತರಾಷ್ಟ್ರದ, ಅತ್ಯಂತ ಶಕ್ತಿಯುತವಾದ ಮೂರು ಪದಗಳಾಗಿವೆ. ಈ ಮೋಡಿಯ ಮಾತನ್ನು ಆಡಿದ ಒಬಾಮರ ಚಿತ್ರವಿರುವ ಟೀ ಶರ್ಟ್‌ಗಳು ಅಮೆರಿಕಾದಲ್ಲಿ ಎಲ್ಲೆಡೆ ಮಾರಾಟವಾಗುತ್ತಿವೆ. ಅವರ ಚಿತ್ರ ಮತ್ತು ಕಟೌಟ್‌ಗಳು ವಿಶ್ವದ ಇತರ ರಾಷ್ಟ್ರಗಳಲ್ಲೂ ರಾರಾಜಿಸುತ್ತಿದೆ. ಅನಾಗರಿಕವಾದ ಜನಾಂಗೀಯ ಹಿಂಸೆ ಮತ್ತು ಅಮಾನವೀಯಾವಾದ ಗುಲಾಮಿತನದ ಅವಮಾನಕರ ಚರಿತ್ರೆಯಿರುವ ಅಮೆರಿಕಾದ ಅತ್ಯುನ್ನತ ಹುದ್ದೆಯಾದ ಅಧ್ಯಕ್ಷರ ಸ್ಥಾನಕ್ಕೆ ಮೊಟ್ಟ ಮೊದಲ ಆಫ್ರೋ- ಅಮೆರಿಕನ್ ಆದ ಬರಾಕ್ ಹುಸೇನ್ ಒಬಾಮ ಚುನಾಯಿತರಾಗಿದ್ದಾರೆ, ಇವರೀಗ ವಿಶ್ವದ ಶಕ್ತ ರಾಷ್ಟ್ರದ ಮೊದಲ ಪ್ರಜೆ. ನನಗೆ, ವೋಲೆ ಶೋಯಿಂಕಾನ 'ಟೆಲಿಫೋನ್ ಕಾನ್‌ವರ್ಸೇಶನ್' ಕವಿತೆಯ ಬಾಡಿಗೆ ಮನೆ ಸಿಗದೆ ರೋಸಿ ರೊಚ್ಚಿಗೇಳುವ ನಾಯಕನ ನೆನಪಾಗುತ್ತಿದೆ.

ಎರಡು ವರ್ಷಗಳಿಂದ ಜಗತ್ತಿನ ಗಮನವನ್ನು ತನ್ನೆಡೆಗೆ ಹಿಡಿದಿಟ್ಟುಕೊಂಡಿದ್ದ ಅಮೆರಿಕಾದ ೪೪ನೆಯ ಅಧ್ಯಕ್ಷೀಯ ಚುನಾವಣೆ, ಈ ಶತಮಾನದ ಒಂದು ಅಸಂಗತ, ಆದರೂ ಅಭೂತಪೂರ್ವ ಅನುಭವದೊಂದಿಗೆ ಅಂತ್ಯಗೊಂಡಾಗ, ಜಾಗತಿಕ ಸಂರಚನೆಗಳು ನಿರಚನೆಗೊಂಡು, ಯಾಜಮಾನೀಯವಾದ ಎಲ್ಲಾ ಸ್ಥಾಪಿತಗಳು ಕುಸಿದು ಬೀಳುವುದರೊಂದಿಗೆ, ಆಧುನಿಕ ಮೌಲ್ಯಗಳು ಪ್ರಾಯೋಗಿಕ ವಾಸ್ತವವಾಗುವ ಒಂದು ಹೊಸ ಅಧ್ಯಾಯ ಪ್ರಾರಂಭವಾಯಿತು. ಆಮೆರಿಕಾ, ಯಾವ ಅನುಮಾನವೂ ಇಲ್ಲದೆ, ಒಬಾಮರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ. ಇನ್ನು, ಮಾರ್ಟಿನ್ ಲೂಥರ್ ಕಿಂಗ್‌ನ ಆತ್ಮ ಶಾಂತಿಯ ಚಿರನಿದ್ರೆಗೆ ಸಲ್ಲುತದೆ ಎನ್ನುವುದರಲ್ಲಿ ಅನುಮಾನವಿಲ್ಲ.



❋

ಒಬಾಮ ಸಾಮಾನ್ಯರಲ್ಲಿ ಸಾಮಾನ್ಯ. ಕೆನಡಿ ಮತ್ತು ಜಾರ್ಜ್‌ಬುಷ್‌ರಿಗೆ ಇದ್ದಂತೆ ಯಾವ ಪ್ರತಿಷ್ಠಿತ ವರ್ಗದ ಅಥವಾ ರಾಜಕೀಯ ಹಿನ್ನೆಲೆಯೂ ಇವರಿಗಿಲ್ಲ. ಇನ್ನೊಂದು ದೃಷ್ಟಿಯಿಂದ ಅವರು ಬಹಿಷ್ಕೃತರೂ ಹೌದು. ಕೀನ್ಯಾದ ಕರಿಯ ತಂದೆ, ಹವಾಯಿಯ ಬಿಳಿಯ ತಾಯಿಗೆ ೧೯೬೧ ಆಗಸ್ಟ್ ೪ ರಂದು ಹುಟ್ಟಿದ ಒಬಾಮ, ಕೆಲವು ಕಾಲ ಆತನ ತಾಯಿಯ ಜೊತೆ ಆಕೆಯ ಎರಡನೆ ಕುಟುಂಬದಲ್ಲಿದ್ದರೂ, ನಂತರ ಆತ ಬೆಳದದ್ದು ಹೊನಲುಲುನಲ್ಲಿದ್ದ ತನ್ನ ಬಿಳಿಯ ಅಜ್ಜಿ–ತಾತನ ಜೊತೆಗೆ. ಕೊಲಂಬೊ ವಿಶ್ವವಿದ್ಯಾಲಯದಲ್ಲಿ ರಾಜ್ಯಶಾಸ್ತ್ರ ಪದವಿ ಪಡೆದ ನಂತರ, ಕಾನೂನಿನ ಉನ್ನತಾಭ್ಯಾಸಕ್ಕಾಗಿ 'ಹಾರ್ವರ್ಡ್ ಲಾ ಸ್ಕೂಲ್' ಗೆ ತೆರಳಿದರು. ಒಬಾಮಾ ತಮ್ಮ ಭಾವಿ ಪತ್ನಿ ಮಿಶೆಲ್ ಒಬಾಮರನ್ನು ಭೇಟಿಯಾಗಿದ್ದು ಇಲ್ಲೇ. ಹನ್ನೆರಡು ವರ್ಷಗಳ ಕಾಲ 'ಯುನಿವರ್ಸಿಟಿ ಆಫ್ ಚಿಕ್ಯಾಗೂ ಲಾ ಸ್ಕೂಲ್'ನಲ್ಲಿ ಬೋಧಿಸುತ್ತಾ, ಸಮುದಾಯ ಸಂಘಟನಕಾರರಾಗಿಯೂ ಕೆಲಸ ಮಾಡಿದ ಒಬಾಮ, ಉತ್ತಮ ಬರಹಗಾರರೂ ಹೌದು. ಅವರ 'ಡ್ರೀಮ್ಸ್ ಫ್ರಂ ಮೈ ಫಾದರ್' ಗೆ ೨೦೦೫ ರಲ್ಲಿ ಮತ್ತು 'ದ ಅಡಾಸಿಟಿ ಆಫ್ ಹೋಪ್' ಗೆ ೨೦೦೮ ರಲ್ಲಿ ಪ್ರತಿಷ್ಠಿತ ಗ್ರ್ಯಾಮಿ ಪ್ರಶಸ್ತಿ ದಕ್ಕಿದೆ. ಪ್ರೀತಿಯ ಪತ್ನಿ ಮತ್ತು ಎರಡು ಹೆಣ್ಣು ಮಕ್ಕಳ ಜೊತೆ ಸಂತೃಪ್ತ ಜೀವನ ಸಾಗಿಸುತ್ತಿರುವ ಒಬಾಮ, ಈಗ ಮತ್ತೊಂದು ಮಹಾಯಾನಕ್ಕೆ ಸನ್ನದ್ಧರಾಗುತ್ತಿದ್ದಾರೆ.

ಈಗ ಎರಡು ವರ್ಷಗಳ ಹಿಂದೆ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗಿ ಒಬಾಮ ಚುನಾವಣೆಯ ಕಣಕ್ಕಿಳಿದಾಗ, ಇದೊಂದು ಮಹೋನ್ನತ ಹಂತಕ್ಕೆ ಬಂದು ನಿಲ್ಲುತ್ತದೆಂದು ಯಾರೂ ಎಣಿಸಿರಲಿಲ್ಲ ಆದರೆ, ಈ ಗೆಲುವು ಅತ್ಯಂತ ಆಕಸ್ಮಿಕವಾದದ್ದೇನೂ ಆಗಿರಲಿಲ್ಲ. ಏಕೆಂದರೆ, ಒಬಾಮಾರ ಟ್ರ್ಯಾಜೆಕ್ಟರಿ (Trajectory) ಇಂಥದ್ದೊಂದು ಸಾಧನೆಯ ಸಾಮೀಪ್ಯತೆಯತ್ತ ಸಾಗುತ್ತಿದ್ದುದ್ದನ್ನಂತು ಸೂಚಿಸುತ್ತದೆ. ವಿದ್ಯಾರ್ಥಿ ದಿನಗಳಿಂದಲೇ ಅವರ ಆಯ್ಕೆಗಳು ಒಂದು ನಿರ್ದಿಷ್ಟತೆಯತ್ತ ಕೇಂದ್ರೀಕೃತವಾಗಿದ್ದನ್ನು ಗುರುತಿಸಬಹುದು. ಒಬಾಮ ಪದವಿ ಪಡೆದದ್ದು ಅಂತರರಾಷ್ಟ್ರೀಯ ಸಂಬಂಧಗಳಲ್ಲಿ. ಕಾನೂನನ್ನು ಅಭ್ಯಾಸ ಮಾಡುತ್ತಿದ್ದಾಗಲೂ ಅಲ್ಲಿನ 'ಹಾರ್ವರ್ಡ್ ಲಾ ರಿವ್ಯೂ' ನ ಮೊದಲ ಕರಿಯ ಅಧ್ಯಕ್ಷರಾಗಿ ಅವರು ಆಯ್ಕೆಯಾದವರು. ಈ ವಿಶ್ವಾವಿದ್ಯಾಲಯದಿಂದ ಹೊರಬಂದ ನಂತರ, ಪ್ರತಿಷ್ಠಿತ 'ಫೆಡರಲ್ ಅಪೀಲೆಟ್ ಕೋರ್ಟ್' ಕ್ಲರ್ಕ್‌ಶಿಪ್‌ಗೆ ನೀಡಿದ ಆಹ್ವಾನವನ್ನು ತಿರಸ್ಕರಿಸಿ, ಕಾರ್ಮಿಕ ಸಮುದಾಯಗಳ ಸಂಘಟನಕಾರರಾಗಿ ಕೆಲಸ ಮಾಡುವುದನ್ನು ಆಯ್ಕೆ ಮಾಡಿಕೊಂಡರು. ನಂತರ, ಹನ್ನೆರಡು ವರ್ಷಗಳ ಕಾಲ 'ಯುನಿವರ್ಸಿಟಿ ಆಫ್ ಚಿಕ್ಯಾಗೊ ಲಾ ಸ್ಕೂಲ್' ನಲ್ಲಿ ಒಬಾಮಾ ಅರೆಕಾಲಿಕ ಉಪನ್ಯಾಸಕರಾಗಿದ್ದರು. ಇಲ್ಲಿ ಅರ್ಥಶಾಸ್ತ್ರ ಜನಪ್ರಿಯವಾದ ವಿಷಯವಾಗಿದ್ದರೂ, ಒಬಾಮ ಬೋಧಿಸಲು ಇಚ್ಚಿಸುತ್ತಿದ್ದುದು ಮಾನವ ಹಕ್ಕು, ಜನಾಂಗೀಯ ಹಕ್ಕು

ಮತ್ತು ಲಿಂಗೀಯ ಹಕ್ಕುಗಳನ್ನು, ಈ ಆಯ್ಕೆಯೇ ಅವರು ನಂಬಿದ ಸಾಮಾಜಿಕ ನ್ಯಾಯದ ತತ್ವಗಳನ್ನು ಸೂಚಿಸುತ್ತದೆ.

ಇದರ ಜೊತೆಗೆ, ವಿಶ್ವವಿದ್ಯಾಲಯದ ವಲಯಗಳಲ್ಲಿ ಮತ್ತು ವಿದ್ಯಾರ್ಥಿ ಸಮುದಾಯದಲ್ಲಿ ತಮ್ಮ ತೀಕ್ಷ್ಣ ಬುದ್ಧಿಮತ್ತೆಗೆ, ನಿಖರವಾದ ನಿಲುವುಗಳಿಗೆ ಮತ್ತು ತಮ್ಮ ಚಿಂತನೆಗಳನ್ನು ತಾರ್ಕಿಕವಾಗಿ ಸಮರ್ಥಿಸಿಕೊಳ್ಳಬಲ್ಲ ಉತ್ತಮ ವಾಗ್ಮಿಯತೆಗೆ ಒಬಾಮ ಖ್ಯಾತರಾಗಿದ್ದರು. ಸದಾ ಅವರ ತರಗತಿಗಳು ತುಂಬಿ ತುಳುಕುತ್ತಿದ್ದವು. ಅಮೆರಿಕಾದ ರಾಜಕೀಯ ನೀತಿಗಳನ್ನು ನಿಷ್ಠುರವಾಗಿ ವಿಶ್ಲೇಷಿಸುತ್ತಿದ್ದ ಅವರ ಮಾತುಗಳನ್ನು ಕೇಳಲು ಕ್ಯಾಂಟೀನ್‌ನಲ್ಲಿ, ಕ್ಯಾಂಪಸ್ ಆವರಣದಲ್ಲಿ ವಿದ್ಯಾರ್ಥಿಗಳು ಅವರ ಸುತ್ತ ನೆರೆಯುತ್ತಿದ್ದರು. ಸಹೋದ್ಯೋಗಿಗಳ ಅಭಿಮಾನಕ್ಕೂ ಪಾತ್ರರಾಗಿದ್ದ ಒಬಾಮ, ವಿಶ್ವವಿದ್ಯಾಲಯದಲ್ಲಿದ್ದಾಗಲೇ, ಮುಂದಿನ ತಮ್ಮ ರಾಜಕೀಯ ಯೋಜನೆಗಳಿಗೆ ನೆರವಾಗಬಲ್ಲ ಕೆಲವು ಸ್ನೇಹಿತರೊಡನೆ ತಮ್ಮನ್ನು ಗುರುತಿಸಿಕೊಂಡಿದ್ದರು. ಈ ಬಾರಿಯ ಅಧ್ಯಕ್ಷೀಯ ಚುನಾವಣೆಯಲ್ಲಿ ಒಬಾಮರ ರಾಜನೀತಿಯ ತಂತ್ರಜ್ಞಾರಾಗಿದ್ದ (Stratigist) ಡೇವಿಡ್ ಆ್ಯಕ್ಸೆಲ್‌ರಾಡ್, ಇದೇ ವಿ.ವಿ.ಯ ರಾಜ್ಯಶಾಸ್ತ್ರ ವಿಭಾಗದವರು. ಇಲ್ಲಿನ ಆರ್ಥಿಕ ವ್ಯವಹಾರ ವಿಭಾಗದ ಪ್ರೊಫೆಸರ್, ಆಸ್ಟೆನ್‌ಗೂಲ್ಸ್‌ಬಿ ಒಬಾಮರ ಚುನಾವಣಾ ತಂಡದ ಆರ್ಥಿಕ ಸಲಹೆಗಾರರು ಹಾಗೂ ಚುನಾವಣೆಯ ಸಲಹಾ ಸಮಿತಿಯಲ್ಲಿದ್ದ ವೆಲೆರಿ ಜಾರೆಟ್ ಈ ವಿ.ವಿ.ಯ ಟ್ರಸ್ಟಿಗಳಲ್ಲೊಬ್ಬರು.

ಬೋಧಕ ವೃತ್ತಿಗೆ ವಿದಾಯ ಹೇಳಿದ ನಂತರ, ಒಬಾಮ ಆಯ್ಕೆ ಮಾಡಿಕೊಂಡಿದ್ದು ರಾಜಕೀಯವನ್ನು. ಅವರು ಮೂರು ಬಾರಿ ಇಲಿನಾಯಿಸ್ ರಾಜ್ಯದ ಸೆನೆಟರ್ (೧೯೯೬, ೧೯೯೮, ೨೦೦೨) ಆಗಿ ಆಯ್ಕೆಯಾದವರು. ಅಮೆರಿಕಾದ ಈ ಶಾಸನ ಸಭೆಯಲ್ಲಿ ಒಬಾಮ ಗಮನಾರ್ಹವಾದ ಕೆಲಸವನ್ನು ಮಾಡಿದ್ದಾರೆ. ವಾಷಿಂಗ್‌ಟನ್ ರಾಜ್ಯಕ್ಕಾಗಿ ಒಟ್ಟು ೫೭೦ ಬಿಲ್‌ಗಳನ್ನು ತಮ್ಮ ಸಹೋದ್ಯೋಗಿಯ ಸಹಯೋಗದಲ್ಲಿ ಮಂಡಿಸಿ, ಇಲಿನಾಯಿಸ್‌ನ ಕಾನೂನಿಗೆ ಸಂಬಂಧಪಟ್ಟಂತೆ ೮೨೦ ಬಿಲ್‌ಗಳನ್ನು ಸ್ವತಂತ್ರವಾಗಿ ಮಂಡಿಸಿದ್ದಾರೆ. ಡೆಮಾಕ್ರೆಟಿಕ್ ಪಕ್ಷದಲ್ಲಿ ಅಧ್ಯಕ್ಷೀಯ ಅಭ್ಯರ್ಥಿಯಾಗಲು ಆಶಿಸುತ್ತಿದ್ದರೆ. ಜೆಸ್ಸಿ ಜಾಕ್ಸನ್, ಸೆನೆಟರ್ ಆಗಿದ್ದ ಕಾಲದಿಂದಲೇ ಒಬಾಮ ಕಾರ್ಯನಿರ್ವಹಣಾ ವಿಧಾನದಲ್ಲಿ ಅನೇಕ ವಿಶೇಷತೆಗಳಿದ್ದುವನ್ನು ಗುರುತಿಸುತ್ತಾರೆ.

ಇದರ ಜೊತೆಗೆ ಒಬ್ಬ ಒಳ್ಳೆಯ ನಾಯಕನಿಗಿರಬೇಕಾದ ಗುಣಗಳೂ ಒಬಾಮರಲ್ಲವೆ. ಎಂಥ ಬಿಕ್ಕಟ್ಟಿನಲ್ಲೂ ಒಬಾಮಾ ಅತಂಕಕ್ಕೊಳಗಾಗುವುದಿಲ್ಲ. ದೀರ್ಘಾವಧಿಯ ಸಭೆಯಲ್ಲಿ ಗಂಟೆಗಟ್ಟಳೆ ಸಮಾಧಾನದಿಂದ ಕುಳಿತುಕೊಂಡು, ಪ್ರತಿಯೊಬ್ಬರ ಅಭಿಪ್ರಾಯಕ್ಕೂ ಗಮನ ನೀಡುವ ತಾಳ್ಮೆ ಇರುವ ಮತ್ತು ಅಹಂನ ಸಮಸ್ಯೆ ಇಲ್ಲದವರು ಎಂಬ ಹೆಸರು ಅವರಿಗಿದೆ. ಸಣ್ಣ ಸಣ್ಣ ವಿವರಗಳಿಗೂ ಪ್ರಾಮುಖ್ಯತೆಯನ್ನು ನೀಡುವ 'ಪರ್‌ಫೆಕ್ಷನಿಸ್ಟ್' ಎಂಬ ಅಭಿಪ್ರಾಯ ಅವರ ಬಗ್ಗೆ ಇದೆ. ಯಾವುದೇ ವಿಷಯ, ಅವರ ತಲೆಗೆ ಹೊಕ್ಕಿತೆಂದರೆ, ಅದರ ಎಲ್ಲಾ ಆಯಾಮಗಳನ್ನು ತಿಳಿದುಕೊಂಡು, ನಂತರ ಕಾರ್ಯ ಪ್ರವೃತ್ತರಾಗುತ್ತಾರೆ. ಮಾತಿಗಿಂತ ಕೆಲಸಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡುವ ಒಬಾಮರಿಗೆ, ತಮ್ಮ ತಂಡವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಂದುವರೆಯುವುದರಲ್ಲಿ ಹೆಚ್ಚು ಆಸಕ್ತಿ.

ಎಂಥ ಬಿಕ್ಕಟ್ಟಿನಲ್ಲೂ ಒಬಾಮಾ ಅತಂಕಕ್ಕೊಳಗಾಗುವುದಿಲ್ಲ. ದೀರ್ಘಾವಧಿಯ ಸಭೆಯಲ್ಲಿ ಗಂಟೆಗಟ್ಟಳೆ ಸಮಾಧಾನದಿಂದ ಕುಳಿತುಕೊಂಡು, ಪ್ರತಿಯೊಬ್ಬರ ಅಭಿಪ್ರಾಯಕ್ಕೂ ಗಮನ ನೀಡುವ ತಾಳ್ಮೆ ಇರುವ ಮತ್ತು ಅಹಂನ ಸಮಸ್ಯೆ ಇಲ್ಲದವರು ಎಂಬ ಹೆಸರು ಅವರಿಗಿದೆ. ಸಣ್ಣ ಸಣ್ಣ ವಿವರಗಳಿಗೂ ಪ್ರಾಮುಖ್ಯತೆಯನ್ನು ನೀಡುವ 'ಪರ್‌ಫೆಕ್ಷನಿಸ್ಟ್' ಎಂಬ ಅಭಿಪ್ರಾಯ ಅವರ ಬಗ್ಗೆ ಇದೆ. ಯಾವುದೇ ವಿಷಯ, ಅವರ ತಲೆಗೆ ಹೊಕ್ಕಿತೆಂದರೆ, ಅದರ ಎಲ್ಲಾ ಆಯಾಮಗಳನ್ನು ತಿಳಿದು ಕೊಂಡು, ನಂತರ ಕಾರ್ಯ ಪ್ರವೃತ್ತರಾಗುತ್ತಾರೆ.

ಗಂಭೀರ ಸ್ವಭಾವದ, ಆಗಾಗ ತಮಾಷೆ ಮಾಡುವ ಒಬಾಮ, ತಮ್ಮನ್ನು ತಾವು ಪ್ರೊಜೆಕ್ಟ್ ಮಾಡಿಕೊಳ್ಳುವುದಕ್ಕೆ ಹಿಂಜರಿಯುತ್ತಾರಂತೆ.

*

ಒಬಾಮರ ಎರಡು ವರ್ಷದ ಸ್ಪರ್ಧೆಯ ಹಾದಿ ಒಂದು ರೋಮಾಂಚಕ ಪಯಣವಾಗಿತ್ತು. ಚುನಾವಣಾ ಪ್ರಚಾರದ ಚರ್ಚೆ ಜಕಾರ್ತದಿಂದ ಆರಂಭವಾದಾಗ, ಡೋಲಾಯಮಾನ ಸ್ಥಿತಿಯಲ್ಲಿದ್ದ ಒಬಾಮರ ಸ್ಥಾನಸ್ಥಿತಿ ನಿಧಾನವಾಗಿ ಸ್ಥಿರವಾಗುವುದರೊಂದಿಗೆ, ಕೇವಲ ೩-೪ ತಿಂಗಳು ಕಳೆಯುವಷ್ಟರಲ್ಲಿಯೇ ಅವರು 'ಗೆಲ್ಲುವ ಅಚ್ಚುಮೆಚ್ಚಿನ ಕಪ್ಪು ಕುದುರೆ' ಯಾಗಲಾರಂಭಿಸಿದರು. ಒಬಾಮರ ಗೆಲುವಿಗೆ ಹಲವಾರು ಕಾರಣಗಳು ಒಟ್ಟೊಟ್ಟಿಗೆ ಕೆಲಸ ಮಾಡಲಾರಂಬಿಸಿದವು. ಒಂದು ಜಾರ್ಜ್ ಬುಷರ್ ಆಳ್ವಿಕೆಯ ನೇತ್ಯಾತ್ಮಕ ಪರಿಣಾಮ. ಎರಡು, ಒಬಾಮರ ಎದುರಾಳಿ ಜಾನ್ ಮೆಕೇನ್ ಪ್ರತಿನಿಧಿಸುತ್ತಿದ್ದ ರಿಪಬ್ಲಿಕನ್ ಐಡಿಯಾಲಜಿಯ ದುರ್ಬಲತೆ. ಮೂರು, ಒಬಾಮರ ವರ್ಚಸ್ಸಿಗೆ ಸರಿಸಾಟಿಯಾಗುವಂಥ ಮತ್ತೊಬ್ಬ ಅಭ್ಯರ್ಥಿ ಇಲ್ಲದ್ದಿದ್ದುದ್ದು. ಕೊನೆಯದಾಗಿ ಸ್ವತಃ ಒಬಾಮರ ತತ್ವ ಮತ್ತು ವ್ಯಕ್ತಿತ್ವದ ಗುಣಾತ್ಮಕತೆಗಳು ಕಾಕತಾಳೀಯವೆಂಬಂತೆ, ಇವೆಲ್ಲಾ ಪರಸ್ಪರ ಪೂರಕವಾಗಿ ಹೋಗುವಂಥ ಚಾರಿತ್ರಿಕ ಅವಕಾಶವೂ ಒದಗಿ ಬಂದಿತು.

ನೊಬಲ್ ಪ್ರಶಸ್ತಿ ಪಡೆದ ಪ್ರೊ. ಪೌಲ್ ಎ. ಸ್ಯಾಮ್ಯುಲ್‌ಸನ್ ಪ್ರಕಾರ 'ಕಳೆದ ೨೦೦ ವರ್ಷಗಳಲ್ಲಿ ಜಾರ್ಜ್ ಬುಷರಂಥ ಕೆಟ್ಟ ಅಧ್ಯಕ್ಷರನ್ನು ಯುಎಸ್ ಕಂಡಿರಲಿಲ್ಲ' ಇವರ ಆಳ್ವಿಕೆಯ ಅವಧಿಯ ಉದ್ದಕ್ಕೂ ಅಮೆರಿಕಾದ ಆರ್ಥಿಕ ಸ್ಥಿತಿ ಹದಗೆಟ್ಟು ಹೋಗಿ, ಆತಂಕಕಾರಿಯಾದ ಕುಸಿತವನ್ನು ಅನುಭವಿಸುತ್ತಿತ್ತು.

ನ್ಯೂಯಾರ್ಕ್‌ನ ಪೆಂಟಗನ್ ಮೇಲೆ ನಡೆದ ತಾಲಿಬಾನ್‌ನ ಆಕ್ರಮಣದಿಂದಾಗಿ, ಬುಷ್ ಮುಸ್ಲಿಂ ರಾಷ್ಟ್ರಗಳ ವಿರುದ್ಧ ವೈರತ್ವ ಸಾಧಿಸಲಾರಂಭಿಸಿದರು. ಪರಿಣಾಮವಾಗಿ ಇರಾಕ್ ಮತ್ತು ಆಫ್ಘಾನಿಸ್ತಾನದ ಮೇಲೆ ಸಮರ ಹೂಡುವುದರ ಜೊತೆಗೆ ಇರಾನ್‌ನ್ನು ತಮ್ಮ ಮುಂದಿನ ಗುರಿಯಾಗಿಸಿಕೊಂಡಿದ್ದರು. ಬಿಲ್ ಕ್ಲಿಂಟನ್ ಅಧಿಕಾರಾವಧಿಯಲ್ಲಿದ್ದ ೨೩೬ ಮಿಲಿಯನ್ ಡಾಲರ್‌ಗಳ ಉಳಿತಾಯ, ಬುಷ್ ಬಂದ ಮೊದಲ ವರ್ಷಕ್ಕೆ ೫೦೦ ಮಿಲಿಯನ್ ಡಾಲರ್‌ಗಳ ಕೊರತೆ ಉಂಟಾಯಿತು. ಸಾಲದ್ದಕ್ಕೆ ಎರಡು ಯುದ್ಧಗಳ ಸೈನ್ಯದ ವೆಚ್ಚಕ್ಕಾಗಿ ೩ ಟ್ರಿಲಿಯನ್ ಡಾಲರ್‌ಗಳು, ಹಾಗೂ ಆಂತರಿಕ ಆರ್ಥಿಕ ಸಮಸ್ಯೆಯನ್ನು ಸರಿದೂಗಿಸಲು ೧೦ ಟ್ರಿಲಿಯನ್ ಡಾಲರ್‌ಗಳ ಸಾಲದ ಹೊರೆಯನ್ನು ಬುಷ್ ಅಮೆರಿಕಾದ ಮೇಲೆ ಹೊರಿಸಿದ್ದಾರೆ. ಹಿಂದೆಂದು ಕಾಣದ ಇಂಥ ಅರ್ಥಿಕ ಹಿನ್ನೆಡೆಯಿಂದಾಗಿ ಅಮೆರಿಕಾದ ಸಾಮಾಜಿಕ ಸ್ಥಿತಿ ಕೂಡ ದುರ್ಬಲವಾಗಿ ಹೋಗಿದೆ. ಹೆಚ್ಚು ಕಡಿಮೆ ೨ ಮಿಲಿಯನ್ ಜನರು ವಸತಿ ರಹಿತರಾಗಿದ್ದಾರೆ. ನಿರುದ್ಯೋಗದ ಸಮಸ್ಯೆ ತೀವ್ರವಾಗಿ ಉಲ್ಬಣಗೊಂಡಿದೆ (ಸಧ್ಯದ ಅಂದಾಜಿನ ಪ್ರಕಾರ ೬.೫% ನಿರುದ್ಯೋಗಿಗಳಿದ್ದಾರೆ) ಇದು ನೇರವಾಗಿ ಬಳಕೆದಾರರ ವೆಚ್ಚ ಮತ್ತು ಬಂಡವಾಳ ಹೂಡಿಕೆಯ ಯೋಜನೆಗಳಿಗೆ ದೊಡ್ಡ ಪೆಟ್ಟನ್ನು ನೀಡುತ್ತದೆ ಇದರಿಂದಾಗಿ ಮತ್ತಷ್ಟು ನಿರುದ್ಯೋಗ, ಜೀವನ ಶೈಲಿಯ ಪ್ರಮಾಣದಲ್ಲಿ ಹಿನ್ನೆಡೆಗೆ ದಾರಿ ಮಾಡಿಕೊಡುತ್ತಾ, ಗಂಭೀರವಾದ ಸಮಾಜೋ-ಆರ್ಥಿಕ ಅಸಮತೋಲನವನ್ನು ಉಂಟುಮಾಡುತ್ತದೆ. ಇದರಿಂದಾಗಿ ಅಮೆರಿಕಾದ ಜನತೆಯಲ್ಲಿ ಬುಷ್‌ರ

...ಗೆ ಅಸಮಾದಾನ ಹೊಗೆಯಾಡುತ್ತಿತ್ತು.

...ಕನ್ ಪಕ್ಷದ ಅಭ್ಯರ್ಥಿಯಾಗಿದ್ದ ಜಾನ್ ಮೆಕೇನ್ ಈ ಪಕ್ಷದ ಚುಕ್ಕಾಣಿಯನ್ನು ...ಡಿಯುವ ಹೊತ್ತಿಗಾಗಲೇ, ಇದು ಮುಳುಗುವ ಹಡಗಾಗಿತ್ತು. ಅಮೆರಿಕದ ರಿಪಬ್ಲಿಕನ್ ಪಕ್ಷದ ಅಧ್ಯಕ್ಷರಾಗಿ ಆಳಿದ ಲಿಂಡನ್ ಜಾನ್‌ಸ್‌ನ್, ರಿಚರ್ಡ್ ನಿಕ್ಸನ್, ರೊನಾಲ್ಡ್ ರೇಗನ್, ಜಾರ್ಜ್ ಬುಷ್ ತಮ್ಮ ಸಮಸ್ಮಾತ್ಮಕ ರಾಜಕೀಯ ತತ್ವ ಮತ್ತು ವಿದೇಶಾಂಗ ನೀತಿಯಿಂದಾಗಿ ಪಕ್ಷದ ವರ್ಚಸ್ಸಿಗೆ ಸಾಕಷ್ಟು ಧಕ್ಕೆಯನ್ನುಂಟು ಮಾಡಿದ್ದರು. ಅವರ ಕಲ್ಪನೆಯ ರಾಷ್ಟ್ರ, ಮತ್ತು ಆರ್ಥಿಕತೆ ಎರಡೂ ಅಮೆರಿಕಾದ ಹಿತವನ್ನು ರಕ್ಷಿಸುವಲ್ಲಿ ಸೋತಿದ್ದವು. ಇಂಥ ಪರಿಸ್ಥಿತಿಯಲ್ಲಿ ಈ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿಯಾದ ಜಾನ್ ಮೆಕೇನ್, ಚುನಾವಣಾ ಪ್ರಚಾರದುದ್ದಕ್ಕೂ ಮತ್ತೆ ಮತ್ತೆ ಎಡವುತ್ತಿದ್ದರು. ತಮ್ಮ ಆದರ್ಶ ನಾಯಕ ಎಂದು ಮೆಕೇನ್ ಹೇಳುತ್ತಿದ್ದ ಥಿಯೋಡರ್ ರೂಸ್‌ವೆಲ್ಟ್, ಅಮೆರಿಕಾದ ಜನತೆ ಗೌರವಿಸುವಂಥ ನಾಯಕನೂ ಆಗಿರಲಿಲ್ಲ. ಚುನಾವಣೆಯ ಪ್ರಚಾರದಲ್ಲಿ ಅಮೆರಿಕಾದ ಜನರ ಮೇಲೆ ಪ್ರಭಾವ ಬೀರುವುದರಲ್ಲಿ ಹಾಗೂ ತಮ್ಮ ಪಕ್ಷ ಅಮೆರಿಕಾದ ಅಭಿವೃದ್ಧಿಗೆ ಯಾವ ಯೋಜನೆಗಳನ್ನು ಹಾಕಿಕೊಂಡಿದೆ ಎಂದು ಮನದಟ್ಟು ಮಾಡುವಲ್ಲಿ ಅವರು ಸೋಲುತ್ತಿದ್ದರು. ಉಪಾಧ್ಯಕ್ಷರ ಸ್ಥಾನಕ್ಕೆ ಮೆಕೇನ್ ಆಯ್ಕೆ ಮಾಡಿಕೊಂಡ ಅಲಾಸ್ಕಾದ ಗವರ್ನರ್ ಸಾರಾ ಪಾಲಿನ್, ಆರಂಭದಲ್ಲಿ ಪಕ್ಷಕ್ಕೆ ಸ್ವಲ್ಪ ಚೈತನ್ಯವನ್ನು ತುಂಬಬಹುದೆಂದು ಅನ್ನಿಸಿದರೂ, ಅವರು ಸಾಂಪ್ರಾದಾಯಿಕ ನಿಲುವುಗಳು ಹಾಗೂ ಅವರಿಗೆ ಕಸಿವಿಸಿ ಉಂಟುಮಾಡುವಂತೆ ಜರುಗಿದ ಒಂದು ಕೌಟುಂಬಿಕ ಘಟನೆ, ನವ ಆಧುನಿಕ ದೋರಮೆಯ ಯುವಜನಾಂಗವನ್ನು ಆಕರ್ಷಿಸಲೇ ಇಲ್ಲ. ಚುನಾವಣಾ ಪ್ರಚಾರದ ಕೊನೆಯ ಹಂತಕ್ಕೆ ಬರುವಷ್ಟರಲ್ಲಿ ಮೆಕೇನ್ – ಪಾಲಿನ್ ಜೋಡಿ, ಕಿರಿಕಿರಿ, ಆತಂಕವನ್ನು ಅನುಭವಿಸುತ್ತಿದ್ದುದು ಸ್ಪಷ್ಟವಾಗಿ ವ್ಯಕ್ತವಾಗುತ್ತಿತ್ತು.

ಇನ್ನು ಡೆಮಾಕ್ರೆಟಿಕ್ ಪಕ್ಷದ ಅಭ್ಯರ್ಥಿಯಾಗಿ ಒಬಾಮರಿಗೆ ಸವಾಲೊಡ್ಡಿದ ಹಿಲರಿ ಕ್ಲಿಂಟನ್ ನಿಸ್ಸಂದೇಹವಾಗಿ ಪ್ರತಿಭಾವಂತ ಅಭ್ಯರ್ಥಿಯಾಗಿದ್ದರೂ, ಅಮೆರಿಕಾದ ವರ್ತಮಾನದ ಅಗತ್ಯಕ್ಕೆ ಒದಗುವ ಒಂದು ಆಮೂಲಾಗ್ರ ಬದಲಾವಣೆಯ ಅಜೆಂಡಾ ಇಡುವಲ್ಲಿ ಅವರು ಒಬಾಮರ ಸಮಕ್ಕೆ ನಿಲ್ಲಲಾಗದೆ ಹೋದರು. ಅವರು ಮುಂದಿಡುತ್ತಿದ್ದ ರಾಜಕೀಯ ಆಕೃತಿಗಳೆಲ್ಲವೂ, ಈಗಾಗಲೇ ಸ್ಥಾಪಿತವಾಗಿದ್ದ ಪುರುಷ ಪ್ರಧಾನ ಸಂರಚನೆಯ ಮುಂದುವರೆದ ಮಾದರಿಗಳೇ ಆಗಿದ್ದವು. ಇವು ಈ ದೇಶದ ಯುವಜನತೆ ಆಶಿಸುತ್ತಿದ್ದ ಹೊಸತನದ ಚೌಕಟ್ಟಿನಿಂದಾಚೆಗೇ ಉಳಿದವು

ಹೀಗೆ, ಒಬಾಮ ಇಡುತ್ತಿದ್ದ ಚಾರಿತ್ರಿಕ ಹೆಜ್ಜೆಗೆ ನೆರವಾಗುವಂಥ ನಕಾಶೆಯನ್ನು ಚರಿತ್ರೆ ಕೂಡ ರೂಪಿಸುತ್ತಿತ್ತು.

ಈ ಹಿನ್ನೆಲೆಯಲ್ಲಿ ಒಬಾಮ ತಮ್ಮ ತಾತ್ವಿಕತೆಯ ಕಟ್ಟಿಗೆ ನೀಡಿದ "Change we can believe in" ಎನ್ನುವ ಸಾರಂಶ ರೂಪದ ಸ್ಲೋಗನ್ ಅಮೆರಿಕಾದ ಅತಂತ್ರತೆಯ ದಿಕ್ಕನ್ನು ಬದಲಾಯಿಸುವ ದಿಕ್ಸೂಚಿಯಾಗಿ ಗೋಚರಿಸಲಾರಂಭಿಸಿತು.

ಅಮೆರಿಕಾ ಸಮಾಜವಾದಿಗಳನ್ನು ಮತ್ತು ಎಡಪಂಥೀಯರನ್ನು ಗುಮಾನಿಯಿಂದ ನೋಡುತ್ತದೆ. ಒಬಾಮರ ಸಮಾಜೋ–ರಾಜಕೀಯ ನಿಲುವುಗಳಲ್ಲಿ ಈ ನೆರಳು ಸುಳಿದಾಡಿದರೂ, ಇದರಿಂದ ಉಂಟಾಗಬಹುದಾದ ಅಪಾಯವನ್ನು ಮನಗೊಂಡ ಒಬಾಮ ಲಿಬರಲ್ ಧೋರಣೆಯನ್ನು ಮುಂದಿಡಲಾರಂಭಿಸಿದರು. ಜೊತೆಗೆ ಬುಷರ ಅಧಿಕಾರಾವಧಿಯಲ್ಲಿ ಪ್ರಯೋಗಿತವಾದ ವಿದೇಶಾಂಗ ನೀತಿಯಿಂದಾಗಿ, ಅಮೆರಿಕಾದ ಯಾರೇ ಆಗಲಿ, ಮುಸ್ಲಿಂರ ಬಗ್ಗೆ ಎರಡು ಬಾರಿ ಯೋಚಿಸುವಂತೆ ಮಾಡಿತ್ತು. ಆದರೆ, ಒಬಾಮ ಅನುಸರಿಸುತ್ತಿದ್ದ ಕ್ರೈಸ್ತ ಧರ್ಮ ಇಲ್ಲಿ ನೆರವಿಗೆ ಬಂದಿತು. ಅವರು ಬಹುಜನಾಂಗೀಯ ಐಡೆಂಟಿಟಿ ಕೂಡ 'ಕಪ್ಪು' ಜನಾಂಗದ ಪರಿಧಿಯಾಚೆಗೆ ಅವರನ್ನು ತಂದು ನಿಲ್ಲಿಸಿತ್ತು.

ಸ್ಪರ್ಧಾಕಣದಿಂದ ಹಿಂದೆ ಸರಿದ ಹಿಲರಿ ಕ್ಲಿಂಟನ್ ಜತೆಯಲ್ಲಿ ಒಬಾಮ

ಅಮೆರಿಕಾ ಸಮಾಜವಾದಿಗಳನ್ನು ಮತ್ತು ಎಡಪಂಥೀಯರನ್ನು ಗುಮಾನಿಯಿಂದ ನೋಡುತ್ತದೆ. ಒಬಾಮರ ಸಮಾಜೋ–ರಾಜಕೀಯ ನಿಲುವುಗಳಲ್ಲಿ ಈ ನೆರಳು ಸುಳಿದಾಡಿದರೂ, ಇದರಿಂದ ಉಂಟಾಗ ಬಹುದಾದ ಅಪಾಯವನ್ನು ಮನಗೊಂಡ ಒಬಾಮ ಲಿಬರಲ್ ಧೋರಣೆಯನ್ನು ಮುಂದಿಡಲಾರಂಭಿಸಿದರು. ಜೊತೆಗೆ ಬುಷ್‌ರ ಅಧಿಕಾರಾವಧಿಯಲ್ಲಿ ಪ್ರಯೋಗಿತವಾದ ವಿದೇಶಾಂಗ ನೀತಿಯಿಂದಾಗಿ, ಅಮೆರಿಕಾದ ಯಾರೇ ಆಗಲಿ, ಮುಸ್ಲಿಂರ ಬಗ್ಗೆ ಎರಡು ಬಾರಿ ಯೋಚಿಸುವಂತೆ ಮಾಡಿತ್ತು. ಆದರೆ, ಒಬಾಮ ಅನುಸರಿಸುತ್ತಿದ್ದ ಕ್ರೈಸ್ತ ಧರ್ಮ ಇಲ್ಲಿ ನೆರವಿಗೆ ಬಂದಿತು. ಅವರ ಬಹುಜನಾಂಗೀಯ ಐಡೆಂಟಿಟಿ ಕೂಡ 'ಕಪ್ಪು' ಜನಾಂಗದ ಪರಿಧಿಯಾಚೆಗೆ ಅವರನ್ನು ತಂದು ನಿಲ್ಲಿಸಿತ್ತು.

ತಮಗೆ ಧಕ್ಕೆಯುಂಟುಮಾಡಬಹುದಾದ ವೈಯಕ್ತಿಕ ತೊಡಕುಗಳನ್ನು ಆರಂಭದಲ್ಲಿಯೇ ಸಮಾಧಾನಕರವಾಗಿ ನಿರ್ವಹಿಸಿಕೊಂಡ ಒಬಾಮ, ನಂತರ ಅಮೆರಿಕಾದ ಬದಲಾವಣೆಗೆ ಅಗತ್ಯವಾಗಿದ್ದು ಒಂದು ದೊಡ್ಡ ಪ್ಯಾಕೇಜನ್ನು ಮುಂದಿಡಲಾರಂಭಿಸಿದರು. ಅಂತರರಾಷ್ಟ್ರೀಯ ಕಾನೂನಿಗೆ ಮಸಿ ಬಳಿದು, ಸಾವಿರಾರು ಅಮೆರಿಕಾದ ಯೋಧರನ್ನು ಸಾವಿನ ದವಡೆಗೆ ತಳ್ಳುವ ಮೂಲಕ ಜಾಗತಿಕ ನೆಲೆಯಲ್ಲಿ ತನ್ನ ಘನ... ಯನ್ನು ಕಳೆದುಕೊಳ್ಳುತ್ತಿದ್ದ ಅಮೆರಿಕಾದ ಗ...ವನ್ನು ಪುನರ್‌ಸ್ಥಾಪಿಸುವ ಜರೂರನ್ನು ಕುರಿತು ಪ್ರಚಾರ ಆರಂಭಿಸಿದ ಒಬಾಮ ನಂತರ, ಬುಷ್‌ರ ಆರ್ಥಿಕ ಮತ್ತು ವಿದೇಶಾಂಗ ನೀತಿಯನ್ನು ನಿಷ್ಠುರವಾಗಿ ವಿಮರ್ಶಿಸಲಾರಂಭಿಸಿದರು. ಒಬಾಮ ಕೊನೆಯ ತನಕ ಆರ್ಥಿಕ ವ್ಯವಸ್ಥೆಯನ್ನು ಹದಕ್ಕೆ ತರುವ ಹಾಗೂ ಅದಕ್ಕೆ ಕಾರಣವಾದ ಯುದ್ಧಗಳನ್ನು ಕೊನೆಗಾಣಿಸುವ ವಾಗ್ದಾನಕ್ಕೆ ಅಂಟಿಕೊಂಡರು. ಒಬಾಮರ ಆರ್ಥಿಕ ಯೋಜನೆಯಲ್ಲಿ ಆದಾಯ ತೆರಿಗೆಯಲ್ಲಿ ಶೇಕಡ ೯೫% ರಷ್ಟು ವಿನಾಯತಿಯನ್ನು ಒದಗಿಸುವ, ಬಡತನದ ರೇಖೆಯ ಕೆಳಗೆ ಮಧ್ಯಮ ವರ್ಗಕ್ಕೆ ಇರುವವರಿಗೆ ವಿವಿಧ ರೀತಿಯ ಸೌಲಭ್ಯವನ್ನು ಒದಗಿಸುವ, ಔದ್ಯೋಗಿಕ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳ ಹೆಚ್ಚಳವನ್ನು ಸೃಷ್ಟಿಸುವ ಅಂಶಗಳು ಹೆಚ್ಚು ಪ್ರಾಶಸ್ತ್ಯವನ್ನು ಪಡೆದುಕೊಂಡವು. ಇದರ ಜೊತೆಗೆ ಶಿಕ್ಷಣಕ್ಕಾಗಿ ವಿದ್ಯಾರ್ಥಿ ವೇತನ, ಎಲ್ಲರ ಕೈಗೆಟುಕುವಂಥ ವೈದ್ಯಕೀಯ ಸೌಲಭ್ಯಕ್ಕೆ ಕೂಡ ಆದ್ಯತೆ ದಕ್ಕಿತು.

ಒಬಾಮ, ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ಮಾತನಾಡುವಾಗ ಎದ್ದು ಕಾಣುತ್ತಿದ್ದ ವಿಷಯವೆಂದರೆ, ಅವರ ಒಳಗೊಳ್ಳುವಿಕೆಯ ನೀತಿ. ಚಿಕ್ಕಾಗೋದಲ್ಲಿನ ಚುನಾವಣಾ ಪ್ರಚಾರದಲ್ಲಿ ಮಾತನಾಡುತ್ತಾ "೨೧ ನೇ ಶತಮಾನದ ಆರಂಭದಲ್ಲಿ ನಾವು ಎದುರಿಸುತ್ತಿರುವ ಬಿಕ್ಕಟ್ಟುಗಳನ್ನು ಕೇವಲ ಒಂದು ರಾಷ್ಟ್ರದ ಸರಹದ್ದುಗಳ ಒಳಗಿನ ಸಮಸ್ಯೆ ಎಂದು ಗ್ರಹಿಸಲಾಗುವುದಿಲ್ಲ. ಇದು ಎಲ್ಲಾ ರೀತಿಯ ಗಡಿಗಳ ಗೆರೆಗಳು ಅಳಿಸಿಹೋಗುವ ಕಾಲ" ಎಂದು ಹೇಳಿದರು. ಎಲೈಟ್ ರಾಜಕಾರಣದ ಆಚೆಗೆ, ಅಮೆರಿಕಾದ ಪ್ರತಿಯೊಂದು ಸಮುದಾಯ, ವರ್ಗ, ವಿಭಾಗಗಳ ಬಗ್ಗೆ ಒಬಾಮ ಗಂಭೀರವಾದ ಕಾಳಜಿಯನ್ನು ವ್ಯಕ್ತ ಪಡಿಸುತ್ತಿದ್ದರು. ಈ ಎಲ್ಲಾ ಕಾರಣಗಳಿಂದಾಗಿ, ಒಬಾಮರ ರಾಜಕಾರಣ 'ವೈಯಕ್ತಿಕ ಏಕಸ್ವಾಮ್ಯತೆ' (Individual Monopoly) ಯಿಂದ 'ಸಮಷ್ಠಿಯ ಭಾಗವಹಿಸುವಿಕೆ' ಯತ್ತ (Collective Participation) ಸರಿಯುತ್ತಿತ್ತು.

ಲಿಂಗೀಯ ಹಕ್ಕುಗಳನ್ನು ಬಲವಾಗಿ ಪ್ರತಿಪಾದಿಸುವ ಒಬಾಮ, ಅಸ್ತಿತ್ವದಲ್ಲಿ ತಾರತಮ್ಯಗಳನ್ನು ನಿರ್ವಹಿಸುವ ವಿಧಾನಗಳ ಬಗ್ಗೆ ಗಂಭೀರವಾದ ಚಿಂತನೆಗಳನ್ನು ಮುಂದಿಡುತ್ತಿದ್ದರು. ಇದರ ಜೊತೆಗೆ ೨೧ನೇ ಶತಮಾನದ ಭೌಗೋಳಿಕ ಸಮಸ್ಯೆಯಾದ 'ಗ್ಲೋಬಲ್ ವಾರ್ಮಿಂಗ್' ಅನ್ನು ನಿಯಂತ್ರಿಸಲೇಬೇಕಾದ ಅನಿವಾರ್ಯತೆ ಅವರ ತತ್ವದ ಮುಖ್ಯ ಅಂಶವಾಗಿತು.

ಅದ್ಭುತವಾದ ಭಾಷಣದ ಕಲೆಯನ್ನು ರೂಢಿಸಿಕೊಂಡಿರುವ ಒಬಾಮ, ಕೇಳುಗರಿಗೆ ತಮ್ಮ ತತ್ವಗಳು ಮನದಟ್ಟು ಆಗುವ ಹಾಗೆ ಮಂಡಿಸಬಲ್ಲ ಸಾಮರ್ಥ್ಯ ಉಳ್ಳವರು. ಎಂದೂ ಭಾವೋದ್ವೇಗಕ್ಕೆ ಒಳಗಾಗದೆ, ತಣ್ಣಗೆ ತಮ್ಮ ನಂಬಿಕೆಗಳನ್ನು ಹಂತ ಹಂತವಾಗಿ ಮುಂದಿಡುತ್ತಾರೆ. ಯಾವುದೇ ವಿಷಯವನ್ನು ಕುರಿತು ಅವರು ಮಾತನಾಡಿದರೂ ಅದಕ್ಕೊಂದು ಮಾನವೀಯ ಮತ್ತು ಆತ್ಮೀಯತೆಯ ಸ್ಪರ್ಶವಿರುತ್ತಿತ್ತು. ಒಬಾಮ ಎಂದೂ ಉದ್ರೇಕಕಾರಿಯಾದ ಭಾಷಣಗಳನ್ನು ಮಾಡಲಿಲ್ಲ, ಎದುರಾಳಿಗಳ ಮೇಲೆ ವಾಗ್ದಾಳಿಯನ್ನೂ ಪ್ರಯೋಗಿಸಲಿಲ್ಲ. ಯಾವುದೇ

ರೀತಿಯ ವ್ಯಂಗ್ಯ, ವಿಡಂಬನೆ ಅಸಹನೆಗಳು ತಮ್ಮ ಮಾತಿನಲ್ಲಿ ಸುಳಿದು ಹೋಗದಂತೆ ಎಚ್ಚರ ವಹಿಸುತ್ತಿದ್ದರು. ತಮ್ಮ ವಿರೋಧಿಗಳ ಬಗ್ಗೆ ಗೌರವವನ್ನು ಪ್ರದರ್ಶಿಸುತ್ತಲೇ, ಅಪಾರವಾದ ಆತ್ಮವಿಶ್ವಾಸದಿಂದ ಅವರ ಚಿಂತನೆಗಳನ್ನು ಪ್ರಶ್ನಿಸುತ್ತಿದ್ದರು. ಅದಕ್ಕೆ ಹೊಂದುವಂಥ ಸಭ್ಯ, ದೈಹಿಕ ಭಾಷೆ ಒಬಾಮರ ಜನಪ್ರಿಯತೆಯನ್ನು ಹೆಚ್ಚಿಸಲಾರಂಭಿಸಿತು. ವೈಯಕ್ತಿಕ ಮಹತ್ವಾಕಾಂಕ್ಷೆ ಮತ್ತು ಸಾರ್ವಜನಿಕ ಘನತೆಗಳ ನಡುವಿನ ಸಮತೋಲನ ಕಾಯ್ದುಕೊಂಡ ಒಬಾಮರ ಮಾತುಗಳು ಅಕ್ಷರಶಃ ಮಾಂತ್ರಿಕವಾಗಿದ್ದವು.

ಇದರಿಂದಾಗಿ ಇಡೀ ಜಗತ್ತು ಒಬಾಮರತ್ತ ತಿರುಗಿ ನೋಡಲಾರಂಭಿಸಿತು. ಅವರು ಮುಸ್ಲಿಂ ಮೂಲದವರು ಎನ್ನುವ ಕಾರಣಕ್ಕೆ ಪಶ್ಚಿಮ ಏಷ್ಯದ ರಾಷ್ಟ್ರಗಳು, ಕರಿಯರು ಎನ್ನುವ ಕಾರಣಕ್ಕೆ ಎತ್ನಿಕ್ ಸಮುದಾಯಗಳು, ಕಾರ್ಮಿಕ ಸಂಘಟನೆಕಾರರಾದ್ದರಿಂದ ತೃತೀಯ ರಾಷ್ಟ್ರಗಳು, ಅನೇಕ ಕಾರಣಗಳಿಗಾಗಿ ಅಮೆರಿಕಾವನ್ನು ಅವಲಂಬಿಸಿರುವ ಅಭಿವೃದ್ಧಿಶೀಲ ರಾಷ್ಟ್ರಗಳೂ–ಎಲ್ಲವೂ ಒಬಾಮರತ್ತ ಕುತೂಹಲದ ಕಣ್ಣನ್ನು ತಿರುಗಿಸಿದ್ದವು.

ಒಬಾಮರ ಗೆಲುವಿಗೆ ಅವರು ಅಪಾರವಾದ ಭರವಸೆಯನ್ನಿಟ್ಟುಕೊಂಡಿದ್ದ ಅವರ ಸಹೋದ್ಯೋಗಿ/ ಬುದ್ಧಿಜೀವಿಗಳ ಒಂದು ತಂಡ ಅವಿರತವಾಗಿ ಶ್ರಮಿಸಿತ್ತು. ಅವರು ಸುಮಾರು ೬೫೦ ಮಿಲಿಯನ್ ಡಾಲರ್‌ಗಳನ್ನು ಕೇವಲ ಪ್ರಚಾರದ ಮೂಲಕ ಸಂಗ್ರಹಿಸಿದರು. ತಳಸಮುದಾಯದವರಿಗೆ ತಮ್ಮನ್ನು ತಳುಕು ಹಾಕಬಲ್ಲಂಥ ನೆಟ್‌ವರ್ಕ್‌ಅನ್ನು ಸೃಷ್ಟಿಸಿ, ಆಧುನಿಕ ತಂತ್ರಜ್ಞಾನದ ಎಲ್ಲಾ ಸೌಲಭ್ಯಗಳನ್ನು ಬಳಸಿಕೊಂಡು, ಇಂಟರ್‌ನೆಟ್ ಮೂಲಕವೂ ಪ್ರಚಾರ ಮಾಡಿದರು. ಪ್ರಚಾರದ ಮ್ಯಾನೇಜರ್ ಆಗಿದ್ದ ಡೇವಿಡ್ ಪ್ಲಾಫ್‌ಗೆ ಒಬಾಮ ತನ್ನ ವಿಜಯದ ಭಾಷಣದಲ್ಲಿ ಕೃತಜ್ಞತೆ ಸಲ್ಲಿಸಿದರು.

ಇಷ್ಟೆಲಾ ಇತ್ಯಾತ್ಮಕ ಅಂಶಗಳು, ಪೂರ್ವಭಾವಿ ಸಿದ್ಧತೆ ಇದ್ದರೂ, ಇನ್ನೂ ಜನಾಂಗೀಯ ದ್ವೇಷ ಅಮೆರಿಕಾದ ಸಾಂಸ್ಕೃತಿಕ ಸುಪ್ತಪ್ರಜ್ಞೆಯಲ್ಲಿ ಎಚ್ಚರವಾಗಿರುವಂಥ ಹಾಗೂ ಆಚರಣೆಯಲ್ಲಿಯೂ ಉಳಿದಿರುವಂಥ ರಾಷ್ಟ್ರದಲ್ಲಿ ಒಬಾಮ ಬಿಳಿಯರ ಮನಸ್ಸನ್ನು ಗೆದ್ದದ್ದಾದರೂ ಹೇಗೆ ? ಒಬಾಮರ ಬಹುಜನಾಂಗೀಯ ಅಸ್ಮಿತೆ ಅವರನ್ನು ಗ್ಲೋಬಲ್ ವ್ಯಕ್ತಿಯಾಗಿ ಗ್ರಹಿಸುವಲ್ಲಿ ನೆರವಾಯಿತು. ಓರ್ವ ಬುದ್ಧಿಜೀವಿಯಾಗಿ, ಶಿಸ್ತಿನ ರಾಜಕಾರಣಿಯಾಗಿ, ಪ್ರತಿಯೊಂದು ವಿಷಯಕ್ಕೂ ಸಮರ್ಪಕವಾದ ಸಿದ್ಧತೆಯನ್ನು ಮಾಡಿಕೊಳ್ಳುವ ಅವರ ಕಾರ್ಯವೈಖರಿ, ವಿವಿಧ ವಿಷಯಗಳ ಬಗ್ಗೆ ಅವರಿಗಿದ್ದ ಸ್ಪಷ್ಟತೆ, ಎಲ್ಲರನ್ನೂ ಹಿಡಿದಿಡುವ ಮಾತಿನ ಕಲೆ– ಬಿಳಿಯರಿಗೆ ಅರ್ಹತೆಗಳಾಗಿ ಕಾಣಲಾರಂಭಿಸಿದವು. ಒಬಾಮ ಎಂದೂ ತಮ್ಮ ರಾಜಕಾರಣವನ್ನು ಬಣ್ಣ ಮತ್ತು ಜನಾಂಗಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳಲಿಲ್ಲ. ಜನಾಂಗದ ಬಗೆಗಿನ ಅವರ ನಿಲುವು ಬಲಿಪಶುತ್ವವನ್ನು ಮುಂದಿಡದ ಸೂಕ್ಷ್ಮವಾದ ಆಯಾಮಗಳನ್ನು ಅನಾವರಣಗೊಳಿಸುವ ಸಂಕಥನಗಳಾಗಿದ್ದವು. ಅವರು ಮತ್ತೆ ಮತ್ತೆ ಒಳಗೊಳ್ಳುವಿಕೆಯ ಸಂದೇಶವನ್ನು ಕಳಿಸುತ್ತಿದ್ದರು "ಒಂದೇ ಚುನಾವಣೆಯಲ್ಲಿ ನಾವು ನಮ್ಮ ಜನಾಂಗೀಯ ವಿಭಜನೆಯಾಚೆಗೆ ಸರಿಯುತ್ತೇವೆಂದು ನಾನೇನೂ ಭಾವಿಸಿಲ್ಲ. ಆದರೆ, ಅಮೆರಿಕಾ ನಾವೆಲ್ಲಾ ಒಟ್ಟಿಗೆ ಕೆಲಸ ಮಾಡುವ ಮೂಲಕ ನಮ್ಮ ಜನಾಂಗೀಯ ಪಕ್ಷಪಾತದಂಥ ನಮ್ಮ ಹಳೆಯ ಹೊರೆಯನ್ನು ಇಳಿಸಿಕೊಳ್ಳಬಹುದು. ಆ ಗಾಯಗಳನ್ನು ಮರೆಯದೆ, ಅದನ್ನು ಅಳಿಸುವಂಥ ಅವಕಾಶ ಮತ್ತು ನ್ಯಾಯವನ್ನು ಒದಗಿಸುವುದರ ಮೂಲಕ ಮತ್ತೆ ಅಮೆರಿಕಾದ ಘನತೆಯನ್ನು ನಾವು ಎತ್ತಿ ಹಿಡಿಯಬಹುದು" ಎಂದು ಚಿಕ್ಯಾಗೊದಲ್ಲಿನ ಭಾಷಣದಲ್ಲಿ ಹೇಳಿದರು.

ಒಬಾಮ ಎಂದೂ ತಮ್ಮ ರಾಜಕಾರಣವನ್ನು ಬಣ್ಣ ಮತ್ತು ಜನಾಂಗಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳಲಿಲ್ಲ. ಜನಾಂಗದ ಬಗೆಗಿನ ಅವರ ನಿಲುವು ಬಲಿಪಶುತ್ವವನ್ನು ಮುಂದಿಡದ ಸೂಕ್ಷ್ಮವಾದ ಆಯಾಮಗಳನ್ನು ಅನಾವರಣಗೊಳಿಸುವ ಸಂಕಥನಗಳಾಗಿದ್ದವು. ಅವರು ಮತ್ತೆ ಮತ್ತೆ ಒಳಗೊಳ್ಳುವಿಕೆಯ ಸಂದೇಶವನ್ನು ಕಳಿಸುತ್ತಿದ್ದರು "ಒಂದೇ ಚುನಾವಣೆಯಲ್ಲಿ ನಾವು ನಮ್ಮ ಜನಾಂಗೀಯ ವಿಭಜನೆಯಾಚೆಗೆ ಸರಿಯುತ್ತೇವೆಂದು ನಾನೇನೂ ಭಾವಿಸಿಲ್ಲ. ಆದರೆ, ಅಮೆರಿಕಾ ನಾವೆಲ್ಲಾ ಒಟ್ಟಿಗೆ ಕೆಲಸ ಮಾಡುವ ಮೂಲಕ ನಮ್ಮ ಜನಾಂಗೀಯ ಪಕ್ಷಪಾತದಂಥ ನಮ್ಮ ಹಳೆಯ ಹೊರೆಯನ್ನು ಇಳಿಸಿಕೊಳ್ಳಬಹುದು. ಆ ಗಾಯಗಳನ್ನು ಮರೆಯದೆ, ಅದನ್ನು ಅಳಿಸುವಂಥ ಅವಕಾಶ ಮತ್ತು ನ್ಯಾಯವನ್ನು ಒದಗಿಸುವುದರ ಮೂಲಕ ಮತ್ತೆ ಅಮೆರಿಕಾದ ಘನತೆಯನ್ನು ನಾವು ಎತ್ತಿ ಹಿಡಿಯಬಹುದು" ಎಂದು ಚಿಕ್ಯಾಗೊದಲ್ಲಿನ ಭಾಷಣದಲ್ಲಿ ಹೇಳಿದರು.

ಅಲ್ಲದೆ, ಅಮೆರಿಕಾದ ಯುವಜನಾಂಗ, ಬದಲಾಗುತ್ತಿರುವ ಆಧುನಿಕ ಮೌಲ್ಯಗಳಲ್ಲಿ ನಂಬಿಕೆ ಉಳ್ಳವರಾಗಿದ್ದರು. ಅವರು ಬೆಳೆದದ್ದೇ ಶಾಲಾ–ಕಾಲೇಜುಗಳಲ್ಲಿ ಕರಿಯರೊಂದಿಗೆ ಕ್ರೀಡೆಗಳಲ್ಲಿ ಭಾಗವಹಿಸುತ್ತಾ. ಒಬಾಮ ಓರ್ವ ಉತ್ತಮ ಬಾಸ್ಕೆಟ್‌ಬಾಲ್ ಆಟಗಾರರು; ಭಾರತಕ್ಕೆ ಕ್ರಿಕೆಟ್ ಇದ್ದಂತೆ, ಅಮೆರಿಕಾಗೆ ಫುಟ್‌ಬಾಲ್, ಬಾಸ್ಕೆಟ್‌ಬಾಲ್. ಇದರಿಂದಾಗಿ ಅವರು ಯುವ ಐಕಾನ್ ಆಗಲಾರಂಭಿಸಿದರು. ಒಬಾಮರ ಬೇರು ಏನೇ ಆಗಿದ್ದರೂ, ಅವರು ಹರಡಿಕೊಂಡಿದ್ದ ರೀತಿ ಅವಲಂಬನೆಗೆ ಅರ್ಹವಾಗಿತ್ತು.

ಪ್ರಜಾಭಿಪ್ರಾಯ, ರಾಜಕೀಯ ತತ್ವಕಿಂತ ಪ್ರಗತಿಶೀಲ ತತ್ವಕ್ಕೆ ತಲೆಬಾಗಿತ್ತು. ಪರಿಣಾಮ, ನವೆಂಬರ್ ೪ರಂದು ನಡೆದ ಚುನಾವಣೆಯಲ್ಲಿ ಈಗ ಹಲವಾರು ದಶಕಗಳಿಂದ ಕಾಣದಷ್ಟು ಮತದಾರರು ಮತಗಟ್ಟೆಗೆ ಬಂದು ಮತ ಚಲಾಯಿಸಿದರು. ಅದರಲ್ಲಿ ಶೇಕಡ ೭೧% ರಷ್ಟು ಜನ, ಮೊದಲ ಬಾರಿಗೆ ಮತ ಚಲಾಯಿಸುವ ಹಕ್ಕು ಪಡೆದ ಯುವಜನತೆ ಒಬಾಮರಿಗೆ ಮತ ಹಾಕಿದ್ದರು.

ಒಬಾಮ ಅಪ್ಪ, ಅಮ್ಮ

೯೫% ಕರಿಯರು ೪೩% ಬಿಳಿಯರು ೬೭% ಹಿಸ್ಪಾನಿಯೋಗಳು, ೫೬% ಮಹಿಳೆಯರು ೫೦% ಪುರುಷರು, ೬೬% ಮಧ್ಯಮ ವಯಸ್ಕರು ೩೩% ಇವಾಂಜಲಿಕಲ್ ಕ್ರೈಸ್ತರು– ಎಲ್ಲರಿಗೂ ಒಬಾಮಾ ಬೇಕಿತ್ತು.

ಮಂಗಳವಾರ ರಾತ್ರಿ ಚಿಕ್ಯಾಗೊದ ಗ್ರ್ಯಾಂಟ್ ಪಾರ್ಕ್‌ನಲ್ಲಿ ಒಬಾಮರ ವಿಜಯದ ಭಾಷಣ ಕೇಳಲು ೨ ಲಕ್ಷಕ್ಕೂ ಹೆಚ್ಚು ಜನ ಸೇರಿದ್ದರು. ಅವರ ಇಡೀ ಭಾಷಣದಲ್ಲಿ ಎದ್ದು ಕಂಡ ಅಂಶವೆಂದರೆ, ಮತ್ತೊಮ್ಮೆ ಇಡೀ ರಾಷ್ಟ್ರದ psychiಯನ್ನು ಒಂದು ಮಾಡುವ ಆಶಯ. ತನ್ನನ್ನು ತಾನು ಸಂಪೂರ್ಣವಾಗಿ ಹಿಂದಿಟ್ಟುಕೊಂಡು, ತನ್ನ ಎದುರಾಳಿಗಳಿಂದ ಹಿಡಿದು, ತನಗೆ ಮತ ನೀಡದವರ ವಿಶ್ವಾಸವನ್ನು ಪಡೆದುಕೊಳ್ಳುವ ನಂಬಿಕೆ. ೧೦೬ ವರ್ಷದ ಕರಿಯ ಹೆಣ್ಣು ಮಗಳು, ನಿಕ್ಸನ್ ಕೂಪರ್‌ಳ ಉದಾಹರಣೆಯ ಮೂಲಕ ಶೋಷಿತ ಸಮುದಾಯ, ಲಿಂಗಗಳಿಗೆ ಅರ್ಹವಾಗಿ ದಕ್ಕಬೇಕಾದ ಹಕ್ಕನ್ನು ದೊರಕಿಸಿಕೊಡುವ ಧ್ಯೇಯ; ತೀರಾ ವಾಸ್ತವಿಕವಾಗಿ, ತಮ್ಮ ಮುಂದಿರುವ ಸಮಸ್ಯೆ, ಸವಾಲುಗಳು, ತಾವು ಕ್ರಮಿಸಬೇಕಾದ ದುರ್ಗಮವಾದ ಹಾದಿಯಲ್ಲಿ ಎಲ್ಲರೂ ಒಟ್ಟಾಗಿ ನಡೆಯಬೇಕಾದ ಅನಿವಾರ್ಯತೆಯುತ ಎಲ್ಲರ ಗಮನಸೆಳೆದರು. ಯಾವುದೇ ಕ್ಷಣದಲ್ಲೂ ಒಬಾಮ ತಮ್ಮ ವಿಜಯವನ್ನು ವೈಭವೀಕರಿಸಿಕೊಳ್ಳಲಿಲ್ಲ ಅದು ಪಾರಂಪರಿಕವಾದ ಎಲ್ಲಾ ನಂಬಿಕೆ ಮತ್ತು ಮಿಥ್‌ಗಳನ್ನು ಛಿದ್ರ ಮಾಡಿದ ರಾಷ್ಟ್ರದ ವಿಜಯ ಎಂದರು. ಇಲ್ಲಿಯೂ ಅವರ ಒಳಗೊಳ್ಳುವಿಕೆಯ ಪ್ರಜ್ಞೆ ಜಾಗ್ರತವಾಗಿತ್ತು "Change we can believe in" "Yes, We can" ಆಗಿ ಬದಲಾಯಿತು.

ಅದು ಆನಂದಭಾಷ್ಪ, ಉದ್ಗಾರ, ಉತ್ಸಾಹ, ಹುಮ್ಮಸ್ಸು, ಸಂಭ್ರಮ ಸಂತೋಷಗಳ ರಾತ್ರಿಯಾಗಿತ್ತು. ನೆರೆದ ಜನಸ್ತೋಮದ ನಡುವೆ ಶತಮಾನಗಳ ಶೋಷಣೆಯಿಂದ ಘನೀಕೃತವಾದ ನೋವು ಕರಿಯರಲ್ಲಿ ಕಣ್ಣೀರಾಗಿ ಹರಿಯುತ್ತಿತ್ತು.

*

ಒಬಾಮಾರಿಂದ ಜನತೆ ಬಹಳಷ್ಟನ್ನು ನಿರೀಕ್ಷಿಸುತ್ತಿದೆ. ಆದರೆ ಅವರು ಎದುರಿಸಬೇಕಾಗಿರುವ ಸವಾಲುಗಳು ಅತ್ಯಂತ ಜಟಿಲವಾದವು. ಅವರು ಆಶಿಸಿದ ಬದಲಾವಣೆಯನ್ನು ವಾಸ್ತವವಾಗಿಸುವುದಕ್ಕೆ ಸಾಧ್ಯವೇ ಎನ್ನುವುದು ಈಗಿನ ಮುಖ್ಯ ಪ್ರಶ್ನೆಯಾಗಿದೆ.

ಆರ್ಥಿಕ ಕುಸಿತವನ್ನು ಹದಕ್ಕೆ ತರುವ ವಾಗ್ದಾನದಿಂದಲೇ ಗೆದ್ದು ಬಂದಿರುವ ಒಬಾಮ. ಅದನ್ನು ಸಾಧ್ಯವಾಗಿಸುವ ಸಾಧ್ಯತೆಗಳ ಬಗ್ಗೆ ಈಗ ಯೋಚಿಸಬೇಕಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಅಭಿಪ್ರಾಯಗಳು ರೂಪುಗೊಂಡಿವೆ. ಒಂದು, ಫಲಿತಾಂಶ ಏನೇ ಇರಲಿ, ಒಬಾಮ ಪ್ರಾಮಾಣಿಕ ಪ್ರಯತ್ನವನ್ನಂತು ಮಾಡುತ್ತಾರೆ ಎನ್ನುವುದು. ಎರಡು, ಒಬಾಮರ ಪ್ರಗತಿಶೀಲ ಅಜೆಂಡಾವನ್ನು ದ್ರವೀಕರಿಸುವಂಥ ಆರ್ಥಿಕ ಬಿಕ್ಕಟ್ಟು ಇದಕ್ಕೆ ತೊಡಕಾಗಬಹುದು ಎನ್ನುವುದು.

ವಿದೇಶಾಂಗ ನೀತಿಯಲ್ಲಿ ಬದಲಾವಣೆಯನ್ನು ಮಾಡಿಕೊಳ್ಳದೆ, ಆರ್ಥಿಕ ವ್ಯವಸ್ಥೆಯನ್ನು ಹತೋಟಿಗೆ ತರುವುದು ಸಾಧ್ಯವಿಲ್ಲ ಎನ್ನುವುದು ಒಬಾಮರಿಗೆ ಚೆನ್ನಾಗಿಗೊತ್ತಿದೆ. ಆದ್ದರಿಂದ, ಮೊದಲು ಇರಾಕ್ ಮತ್ತು ಆಫ್ಘಾನಿಸ್ತಾನದಲ್ಲಿರುವ ಸೈನ್ಯವನ್ನು ಹಿಂದೆಗೆದುಕೊಂಡು, ಅದರ ಪುನರ್‌ವಸತಿಗೆ ತಕ್ಕ ವ್ಯವಸ್ಥೆಯನ್ನು ಕಲ್ಪಿಸುವ ಕೆಲಸಕ್ಕೆ ಒಬಾಮ ಆದ್ಯತೆಯನ್ನು ನೀಡುತ್ತಾರೆ. ಪಾಕಿಸ್ತಾನದ ಜೊತೆಗೆ ಮಾತುಕತೆ ಇಲ್ಲದೆ ಮುಸ್ಲಿಂ ರಾಷ್ಟ್ರಗಳ ಸ್ಥಿತಿ

(೩೩ನೇ ಪುಟಕ್ಕೆ)

"ನಾವು ಎದುರಿಸಬೇಕಾಗಿರುವ ಸವಾಲುಗಳ ಬಗ್ಗೆ ನಾನೆಂದೂ ನಿಷ್ಠೆಯಿಂದಿರುತ್ತೇನೆ. ಭಿನ್ನಾಭಿಪ್ರಾಯಗಳಿದ್ದಾಗ ನಿಮ್ಮ ಅಭಿಪ್ರಾಯಕ್ಕೂ ಮನ್ನಣೆ ನೀಡುತ್ತೇನೆ. ಅದೆಲ್ಲಕ್ಕಿಂತ ಹೆಚ್ಚಾಗಿ ಕಳೆದ ೨೨೧ ವರ್ಷಗಳಲ್ಲಿ ನಡೆದಿರುವಂತೆ ಮುಂದೆಯೂ ಅಮೆರಿಕಾ ದೇಶವನ್ನು ಒಂದೊಂದೇ ಇಟ್ಟಿಗೆಗಳನ್ನು ಜೋಡಿಸಿ ಕಟ್ಟುವ ಕೆಲಸಕ್ಕೆ ನೀವೆಲ್ಲರೂ ನನ್ನೊಂದಿಗೆ ಬನ್ನಿ. ೨೧ ತಿಂಗಳ ಹಿಂದೆ ಚಳಿಗಾಲದಲ್ಲಿ ಆರಂಭವಾದ ಪ್ರಕ್ರಿಯೆ ಈ ರಾತ್ರಿಗೇ ಕೊನೆಯಾಗುವುದಿಲ್ಲ. ಈ ಗೆಲುವೊಂದೇ ನಾವು ಬಯಸುವ ಪರಿವರ್ತನೆಯಲ್ಲ. ಈ ಗೆಲುವು ಪರಿವರ್ತನೆಯನ್ನು ತರಲು ನಮಗೆ ಸಿಕ್ಕಿರುವ ಅವಕಾಶ ಮಾತ್ರ. ಈ ಹಿಂದಿನ ಪರಿಸ್ಥಿತಿಗೆ ಜೋತು ಬಿದ್ದರೆ ಪರಿವರ್ತನೆ ಸಾಧ್ಯವಿಲ್ಲ. ದೇಶಪ್ರೇಮದ, ಜವಾಬ್ದಾರಿಯ ಹೊಸ ಚೈತನ್ಯವನ್ನು ಮೂಡಿಸಿಕೊಳ್ಳೋಣ."

ಒಬಾಮಾರ ಈ ಸ್ಫೂರ್ತಿದಾಯಕ ಭಾಷಣ ಮಾರ್ಟಿನ್ ಲೂಥರ್ ಕಿಂಗ್‌ರನ್ನು ನೆನಪಿಸುವಂತಿತ್ತು.

ಅನುವಾದ:
ಸತ್ಯಪ್ರಕಾಶ್ ಎಂ.ಆರ್

"ಹಲೋ ಷಿಕಾಗೋ.

"ಅಮೆರಿಕಾದ ನೆಲದಲ್ಲಿ ಎಲ್ಲ ಕನಸುಗಳು ನನಸಾಗುವ ಸಾಧ್ಯತೆಯ ಬಗ್ಗೆ ಇಲ್ಲಿ ಯಾರಿಗಾದರೂ ಅನುಮಾನವಿದ್ದರೆ, ನಮ್ಮ ರಾಷ್ಟ್ರ ನಿರ್ಮಾತೃಗಳ ಕನಸುಗಳು ಈಗಲೂ ಜೀವಂತವಾಗಿರುವ ಬಗ್ಗೆ ಅನುಮಾನಗಳಿದ್ದರೆ, ನಮ್ಮ ಪ್ರಜಾತಂತ್ರ ವ್ಯವಸ್ಥೆಯ ಶಕ್ತಿಯ ಬಗ್ಗೆ ಇನ್ನೂ ಯಾರಲ್ಲಾದರೂ ಪ್ರಶ್ನೆಗಳು ಉಳಿದಿದ್ದರೆ, ಈ ರಾತ್ರಿ ನೀವು ಅದಕ್ಕೆಲ್ಲ ಉತ್ತರ ನೀಡಿದ್ದೀರಿ.

"ಈ ರಾಷ್ಟ್ರದಲ್ಲಿ ಹಿಂದೆಂದೂ ಕಾಣದಷ್ಟು ಬೃಹತ್ ಸಂಖ್ಯೆಯಲ್ಲಿ, ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಂತು ಶಾಲೆಗಳಲ್ಲಿ, ಚರ್ಚುಗಳಲ್ಲಿ ಮತ ಚಲಾಯಿಸಿದ ನೀವು ನೀಡಿದ ಉತ್ತರವಿದು. ನಿಮ್ಮ ಧ್ವನಿಯಿಂದಾಗಿ ಪರಿವರ್ತನೆಯಾಗಲಿದೆ ಎಂಬ ವಿಶ್ವಾಸದಿಂದ ಜೀವಮಾನದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಮತ ಹಾಕಿದ ಅಸಂಖ್ಯಾತ ಮಂದಿ ನೀಡಿದ ಉತ್ತರವಿದು.

"ಯುವಕರು ಮತ್ತು ವಯೋವೃದ್ಧರು, ಬಡವ-ಶ್ರೀಮಂತರು, ಡೆಮೋಕ್ರಾಟ್ ಮತ್ತು ರಿಪಬ್ಲಿಕನ್ನರು, ಕರಿಯ ಮತ್ತು ಬಿಳಿಯರು, ಹಿಸ್ಪಾನಿಕ್ ಮತ್ತು ಏಷಿಯನ್ನರು, ಸ್ಥಳೀಯ ಅಮೆರಿಕನ್ನರು, ಸಲಿಂಗಕಾಮಿಗಳು, ನೇರಕಾಮಿಗಳು, ವಿಕಲಚೇತನರು ಮತ್ತು ವಿಕಲತೆ ಇಲ್ಲದವರು, ಎಲ್ಲರೂ ನೀಡಿದ ಉತ್ತರವಿದು. ನಮ್ಮದು ಕೇವಲ ವಿವಿಧ ಜನರನ್ನೊಳಗೊಂಡ ಗುಂಪುಗಳಲ್ಲ, ಕೆಂಪು ಮತ್ತು ನೀಲಿ ರಾಜ್ಯಗಳ ಗುಂಪುಗಳಲ್ಲ ಎಂಬ ಸಂದೇಶವನ್ನು ಸ್ಪಷ್ಟವಾಗಿ ಅಮೆರಿಕನ್ನರು ವಿಶ್ವಕ್ಕೆ ನೀಡಿದ್ದಾರೆ.

"ಅಮೆರಿಕ ಇಂದು, ಮುಂದು, ಎಂದೆಂದೂ ಎಲ್ಲ ಸಂಸ್ಥಾನಗಳ ಒಕ್ಕೂಟವೇ. ಇತಿಹಾಸದ ಈ ನಿರ್ಣಾಯಕ ಕಾಲಘಟ್ಟದಲ್ಲಿ ಆಶಾವಾದದ ಕಡೆಗೆ ಮುನ್ನಡೆಯುವ ಬದಲು ಸಿನಿಕತನ ಮತ್ತು ಭಯ ಮತ್ತು ಸಂಶಯದ ಬೀಜ ಬಿತ್ತುತ್ತಿದ್ದವರಿಗೆ ನೀಡಿದ ಉತ್ತರವಿದು

"ಬಹಳ ವರ್ಷಗಳ ನಿರಂತರ ನಿರೀಕ್ಷೆಯ ನಂತರ ಈ ದಿನ ಬಂದಿದೆ. ಈ ದಿನ, ಈ ಚುನಾವಣೆಯ ಮೂಲಕ ಹೊಸದನ್ನು ಸಾಧಿಸಿದ ಈ ನಿರ್ಣಾಯಕ ದಿನ, ಅಮೆರಿಕಾದಲ್ಲಿ ಪರಿವರ್ತನೆಯ ಗಾಳಿ ಬೀಸಿದೆ.

"ಕೆಲವೇ ನಿಮಿಷಗಳ ಹಿಂದೆ ಸೆನೆಟ್ ಸದಸ್ಯ ಮ್ಯಾಕ್‌ಕೇನ್ ಅವರಿಂದ ಅಸಾಧಾರಣವಾದ ಸ್ನೇಹಪೂರ್ವಕ ದೂರವಾಣಿ ಕರೆ ಬಂತು. ಮ್ಯಾಕ್‌ಕೇನ್ ಬಹಳ ಕಷ್ಟಪಟ್ಟು ಚುನಾವಣಾ ಪ್ರಚಾರ ಕೈಗೊಂಡಿದ್ದರು. ತಾವು ಪ್ರೀತಿಸುವ ದೇಶಕ್ಕಾಗಿ ಅದಕ್ಕಿಂತಲೂ ಹೆಚ್ಚು ಕಷ್ಟಪಟ್ಟು ದುಡಿದಿದ್ದಾರೆ. ನಾವು ಬಹಳಷ್ಟು ಮಂದಿ ಊಹಿಸಲೂ ಆಗದಷ್ಟು ತ್ಯಾಗವನ್ನು ಅಮೆರಿಕಾದ ಏಳ್ಗೆಗಾಗಿ ಅವರು ಮಾಡಿದ್ದಾರೆ. ಈ ನಿಸ್ವಾರ್ಥ ನಾಯಕ ಮಾಡಿದ ಸೇವೆಯಿಂದಾಗಿ ನಾವೆಲ್ಲರೂ ಇಂದು ಉತ್ತಮ ಜೀವನ ನಡೆ ಸುವಂತಾಗಿದೆ.

"ಮ್ಯಾಕ್‌ಕೇನ್‌ಗೆ ನನ್ನ ಅಭಿನಂದನೆಗಳು. ಗವರ್ನರ್ (ಸಾರಾ) ಪಾಲಿನ್ ಅವರಿಗೂ ತಮ್ಮೆಲ್ಲ ಸಾಧನೆಗಳಿಗಾಗಿ ನನ್ನ ಅಭಿನಂದನೆಗಳು. ಮುಂಬರುವ ದಿನಗಳಲ್ಲಿ ದೇಶದ ಭವಿಷ್ಯದ ಭರವಸೆಗಳ ಈಡೇರಿಕೆಗಾಗಿ ಇವರ ಜೊತೆಗೆ ಕೆಲಸ ಮಾಡಲು ನಾನು ಎದುರು ನೋಡುತ್ತಿದ್ದೇನೆ.

"ಹಾಗೆಯೇ ಈ ಪಯಣದಲ್ಲಿ ನನ್ನ ಜೊತೆಗಾರನಾಗಿ, ಹೃದಯಾಂತರಾಳದಿಂದ ತಾನು ಆಡಿ ಬೆಳೆದ ಸ್ಕ್ರಾಂಟನ್‌ನ ಬೀದಿಗಳಲ್ಲಿ ಮಹಿಳೆಯರು ಮತ್ತು ಪುರುಷರೊಂದಿಗೆ ಒಡನಾಡಿ, ಅವರೊಂದಿಗೆ ಡೆಲಾವೇರ್‌ವರೆಗೆ ರೈಲಿನಲ್ಲಿ ಪ್ರಯಾಣ ಮಾಡಿದ ಉಪ-ರಾಷ್ಟ್ರಾಧ್ಯಕರಾಗಿ ಆಯ್ಕೆಯಾಗಿರುವ ಜೋ ಬಿಡೆನ್ ಅವರಿಗೂ ನನ್ನ ಅಭಿನಂದನೆಗಳು.

"ಕಳೆದ ೧೬ ವರ್ಷಗಳಿಂದ ನನ್ನ ಜೀವದ ಗೆಳತಿಯಾಗಿ ಯಾವುದೇ ಪ್ರತಿಫಲವನ್ನು ಬಯಸದೆ ಬೆಂಬಲ ನೀಡಿದ ನನ್ನ ಕುಟುಂಬದ ಆಧಾರಸ್ಥಂಬ, ನನ್ನ ಪ್ರಿಯ ಮಡದಿ, ಈ ರಾಷ್ಟ್ರದ ಮುಂದಿನ ಮೊದಲ ಮಹಿಳೆ ಮಿಷೆಲ್ ಒಬಾಮಾ ಇಲ್ಲದೆ ಹೋಗಿದ್ದರೆ ಇಂದು ನಾನು ಈ ವೇದಿಕೆಯ ಮೇಲಿರುತ್ತಿರಲಿಲ್ಲ. ಸಾಷಾ ಮತ್ತು ಮಲಿಯಾ, ನೀವಿಬ್ಬರೂ ಊಹಿಸಲಾಗದಷ್ಟು ನಿಮ್ಮನ್ನು ಪ್ರೀತಿಸುವೆ. ಹೊಸ ಶ್ವೇತಭವನಕ್ಕೆ ನಿಮ್ಮೊಡನೆ ಹೊಸ ನಾಯಿಮರಿಯೊಂದು ಕೂಡ ಬರಲಿದೆ.

"ನನ್ನ ಅಜ್ಜಿ ಈಗ ಬದುಕಿಲ್ಲ. ಆದರೂ ನನ್ನ ವ್ಯಕ್ತಿತ್ವವನ್ನು ರೂಪಿಸಿದ ನನ್ನ ಅಜ್ಜಿ ಇರುವಲ್ಲಿಂದಲೇ ಈ ದೃಶ್ಯಗಳನ್ನು ನೋಡುತ್ತಿರಬಹುದು. ಆದರೆ ನನ್ನ ಕುಟುಂಬದವರು ಖಂಡಿತ ಈ ದೃಶ್ಯಗಳನ್ನು ನೋಡುತ್ತಿರುತ್ತಾರೆ. ಅವರ ಋಣದ ಭಾರ ಎಂದೂ ಇಳಿಯುವುದಿಲ್ಲ. ನನ್ನ ಸಹೋದರಿಯರಾದ ಮಾಯಾ, ಆಲ್ಮಾ, ನನ್ನೆಲ್ಲ ಸಹೋದರ ಮತ್ತು ಸಹೋದರಿಯರು, ನನಗೆ ಎಲ್ಲ ರೀತಿಯ ಬೆಂಬಲ ನೀಡಿದ ಎಲ್ಲರಿಗೂ ನನ್ನ ವಂದನೆಗಳು. ಅವರಿಗೆ ಎಂದೆಂದೂ ನಾನು ಆಭಾರಿ.

"ಅಮೆರಿಕಾದ ಇತಿಹಾಸದಲ್ಲಿಯೇ ಅತ್ಯುತ್ತಮವಾದ ರಾಜಕೀಯ ಪ್ರಚಾರತಂತ್ರ ರೂಪಿಸಿದ ತೆರೆಮರೆಯ ನಾಯಕ, ನನ್ನ ಪ್ರಚಾರ ವ್ಯವಸ್ಥಾಪಕ ಡೇವಿಡ್ ಪ್ಲೋಫ್ ಅವರಿಗೂ ವಂದನೆಗಳು.

"ನನ್ನ ಪ್ರತಿ ಹೆಜ್ಜೆಯಲ್ಲಿ ಜೊತೆಯಾಗಿದ್ದ ಮುಖ್ಯ ತಂತ್ರವ್ಯ ವಸ್ಥಾಪಕ ಡೇವಿಡ್ ಆಕ್ಸೆಲ್‌ರಾಡ್ ಅವರಿಗೂ ವಂದನೆಗಳು. ಅಮೆರಿಕಾದ ಇತಿಹಾಸದಲ್ಲಿಯೇ ಅತ್ಯದ್ಭುತವಾದ ಪ್ರಚಾರ ತಂಡವನ್ನು ರೂಪಿಸಿ, ಪ್ರಚಾರಕ್ಕಾಗಿ ಹಲವಾರು ತ್ಯಾಗಗಳನ್ನು ಮಾಡಿದ ಎಲ್ಲರಿಗೂ ನಾನು ಎಂದೆಂದೂ ಆಭಾರಿ.

"ಆದರೆ ಅದೆಲ್ಲಕ್ಕಿಂತ ಮುಖ್ಯವಾಗಿ ಈ ಗೆಲುವು ಯಾರಿಗೆ ಸಲ್ಲಬೇಕೋ ಅವರನ್ನು ನಾನು

'ಹೌದು ನಮ್ಮಿಂದ ಸಾಧ್ಯ'

ಎಂದೂ ಮರೆಯುವುದಿಲ್ಲ. ಹೌದು ಈ ಗೆಲುವು ನಿಮ್ಮದು.

"ನಾನೆಂದೂ ಈ ಹುದ್ದೆಗೆ ಏರಬಹುದಾದ ಅಭ್ಯರ್ಥಿಯೇ ಆಗಿರಲಿಲ್ಲ. ಹೆಚ್ಚು ಹಣ ಮತ್ತು ಜಾಹೀರಾತುಗಳ ಮೂಲಕ ನಾವು ಚುನಾವಣಾ ಪ್ರಚಾರವನ್ನು ಆರಂಭಿಸಲಿಲ್ಲ. ವಾಷಿಂಗ್ಟನ್‌ನ ದೊಡ್ಡ ಕೊಠಡಿಗಳಲ್ಲಿ ನಾವು ಪ್ರಚಾರ ತಂತ್ರ ರೂಪಿಸಲಿಲ್ಲ. ಡೆಸ್ ಮೋಯಿನ್ಸ್‌ನ ಹಿತ್ತಲಲ್ಲಿ, ಕಾಂಕರ್ಡ್‌ನ ಮನೆಗಳಲ್ಲಿ ಮತ್ತು ಚಾರ್ಲ್ಸ್‌ಟನ್‌ನ ಅಂಗಳದಲ್ಲಿ ನಮ್ಮ ಪ್ರಚಾರ ಆರಂಭವಾಯಿತು.

"ತಮ್ಮ ಸಣ್ಣ ಉಳಿತಾಯ ದಿಂದ ೫ ಮತ್ತು ೧೦ ಮತ್ತು ೨೦ ಡಾಲರ್‌ಗಳನ್ನು ನೀಡಿದ ಪುರುಷ ಮತ್ತು ಮಹಿಳಾ ಕಾರ್ಮಿಕರ ಹಣದ ತಳಪಾಯ ನಮ್ಮ ಪ್ರಚಾರಕ್ಕೆ ದೊರೆಯಿತು. ತಮ್ಮ ಪೀಳಿ ಗೆಯ ಅಸಡ್ಡೆಯ ಭ್ರಮೆಯನ್ನು ತಿರಸ್ಕರಿಸಿ ಕಡಿಮೆ ಸಂಬಳ ಮತ್ತು ಕಡಿಮೆ ನಿದ್ದೆಗೆ ಅವಕಾಶವಿರುವ ಕೆಲಸ ಗಳಿಗಾಗಿ ಮನೆಗಳನ್ನು ಬಿಟ್ಟು ಬಂದ ಯುವ ಪೀಳಿಗೆ ಯಿಂದ ಶಕ್ತಿ ಪಡೆದುಕೊಂಡಿತು.

"ನಡುಕಹುಟ್ಟಿಸುವ ಚಳಿ ಮತ್ತು ಸುಡುವ ಬಿಸಿಲನ್ನು ಲೆಕ್ಕಿಸದೆ ಅಪರಿಚಿತರ ಬಾಗಿಲು ತಟ್ಟಿದ ಅಸಂಖ್ಯಾತ ಹಿರಿಯರಿಂದ ಶಕ್ತಿ ಪಡೆದುಕೊಂಡಿತು. ಎರಡು ಶತಮಾನಗಳ ಬಳಿಕ ಲಕ್ಷ ಲಕ್ಷ ಅಮೆರಿಕನ್ನರು ಸ್ವಯಂಪ್ರೇರಣೆಯಿಂದ ಸಂಘಟಿತರಾಗಿ ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳೇ ಆಯ್ಕೆ ಮಾಡುವ ಸರ್ಕಾರ ಈ ಭೂಮಿಯ ಮೇಲೆ ಇನ್ನೂ ಅಸ್ತಿತ್ವದಲ್ಲಿದೆ ಎಂಬುದನ್ನು ಸಾಬೀತು ಮಾಡಿದ್ದಾರೆ.

"ಇದು ನಿಮ್ಮ ಗೆಲುವು.

"ಚುನಾವಣೆಯಲ್ಲಿ ಗೆಲ್ಲಲು ನಾನು ಈ ಕೆಲಸ ಮಾಡಿಲ್ಲವೆಂದು ನನಗೆ ಗೊತ್ತು. ನೀವು ಕೂಡ ನನಗಾಗಿ ಈ ಕೆಲಸ ಮಾಡಿಲ್ಲ ಎಂದೂ ಗೊತ್ತು. ನಮ್ಮ ಕಣ್ಣೆದುರಿಗಿರುವ ಬಹುದೊಡ್ಡ ಪ್ರಶ್ನೆಗಳನ್ನು ನಿವಾರಿಸಲು ನೀವು ಈ ಗೆಲುವು ನೀಡಿದ್ದೀರ. ಈ ರಾತ್ರಿ ನಾವು ಸಂಭ್ರಮಿಸಿದರೂ, ನಮಗೆ ಮುಂದಿನ ಕಠಿಣ ಸವಾಲುಗಳ ಬಗ್ಗೆ ಅರಿವಿದೆ– ಎರಡು ಸಮರಗಳು, ಅಳಿವಿನ ಅಂಚಿನಲ್ಲಿರುವ ಜಗತ್ತು ಮತ್ತು ಶತಮಾನದ ಭೀಕರ ಆರ್ಥಿಕ ಬಿಕ್ಕಟ್ಟು,

"ಈ ರಾತ್ರಿ ನಾವಿಲ್ಲಿ ಜೀವಂತವಾಗಿ ನಿಂತಿರಬಹುದು, ಆದರೆ ಇರಾಕಿನ ಮರುಭೂಮಿಗಳಲ್ಲಿ ಮತ್ತು ಅಫ್ಘನಿಸ್ಥಾನದ ಗುಡ್ಡಗಳಲ್ಲಿ ಬಹಳಷ್ಟು ಅಮೆರಿಕನ್ನರು ತಮ್ಮ ಜೀವಗಳನ್ನೇ ಪಣವಾಗಿಟ್ಟು ದಿನಕಳೆಯುತ್ತಿದ್ದಾರೆ. ಮಕ್ಕಳು ಮಲಗಿದ ನಂತರ, ತಾವು ಮಾಡಿದ ಸಾಲ ತೀರಿಸುವ ಬಗ್ಗೆ, ವೈದ್ಯರ ಬಿಲ್‌ಗಳನ್ನು ಪಾವತಿಸುವ ಬಗ್ಗೆ, ಮಕ್ಕಳ ಶಿಕ್ಷಣದ ಬಗ್ಗೆ ಚಿಂತಿಸುತ್ತಾ ನಿದ್ದೆಗೆಡುವ ಹಲವಾರು ತಂದೆ ತಾಯಿಯರಿದ್ದಾರೆ.

"ಹೊಸ ಹುರುಪನ್ನು ತುಂಬುವ, ಹೊಸ ಉದ್ಯೋಗಗಳನ್ನು ಸೃಷ್ಟಿಸುವ, ಹೊಸ ಶಾಲೆಗಳನ್ನು ಕಟ್ಟುವ, ಬೆದರಿಕೆಗಳನ್ನು ಎದುರಿಸುವ, ಹೊಸ ಸ್ನೇಹವನ್ನು ಮಾಡುವ ಕೆಲಸ ನಮ್ಮ ಮುಂದಿದೆ. ದೂರ ದಾರಿಯನ್ನು ನಾವು ಕ್ರಮಿಸಬೇಕಿದೆ. ಎತ್ತರದ ಗುರಿಯನ್ನು ತಲುಪಬೇಕಿದೆ. ಒಂದು ವರ್ಷದಲ್ಲಿ ಅಥವಾ ಒಂದು ಅವಧಿಯಲ್ಲಿ ನಾವು ಗುರಿ ತಲುಪದಿರಬಹುದು. ಆದರೆ, ಆ ಗುರಿಯನ್ನು ತಲುಪುತ್ತೇವೆಂಬ ಈ ರಾತ್ರಿಯ ಆಶಾವಾದ ಹಿಂದೆಂದೂ ನನಗಿರಲಿಲ್ಲ.

"ನಾವೆಲ್ಲರೂ ಸೇರಿ ಆ ಗುರಿಯನ್ನು ತಲುಪುತ್ತೇವೆ ಎಂದು ನಾನು ಭರವಸೆ ನೀಡುತ್ತೇನೆ.

"ಗುರಿಯ ದಾರಿಯಲ್ಲಿ ತೊಡಕುಗಳಿರಬಹುದು, ತಪ್ಪು ಹೆಜ್ಜೆಗಳನಿಡಬಹುದು. ಅಧ್ಯಕ್ಷನಾಗಿ ನಾನು ತೆಗೆದುಕೊಳ್ಳುವ ನಿರ್ಧಾರಗಳು ಮತ್ತು ರೂಪಿಸುವ ನೀತಿಯನ್ನು ಅನೇಕರು ಬೆಂಬಲಿಸದಿರಬಹುದು. ಸರ್ಕಾರ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಿಲ್ಲ ಎಂದು ನಮಗೆಲ್ಲರಿಗೂ ಗೊತ್ತು.

"ನಾವು ಎದುರಿಸಬೇಕಾಗಿರುವ ಸವಾಲುಗಳ ಬಗ್ಗೆ ನಾನೆಂದೂ ನಿಷ್ಠೆಯಿಂದಿರುತ್ತೇನೆ. ಭಿನ್ನಾಭಿಪ್ರಾಯಗಳಿದ್ದಾಗ ನಿಮ್ಮ ಅಭಿಪ್ರಾಯಕ್ಕೂ ಮನ್ನಣೆ ನೀಡುತ್ತೇನೆ. ಅದೆಲ್ಲಕ್ಕಿಂತ ಹೆಚ್ಚಾಗಿ ಕಳೆದ ೨೨೧ ವರ್ಷಗಳಲ್ಲಿ ನಡೆದಿರುವಂತೆ ಇನ್ನು ಮುಂದೆಯೂ ಅಮೆರಿಕಾ ದೇಶವನ್ನು ಒಂದೊಂದೇ ಇಟ್ಟಿಗೆಗಳನ್ನು ಜೋಡಿಸಿ ಕಟ್ಟುವ ಕೆಲಸಕ್ಕೆ ನೀವೆಲ್ಲರೂ ನನ್ನೊಂದಿಗೆ ಬನ್ನಿ. ೨೧ ತಿಂಗಳ ಹಿಂದೆ ಚಳಿಗಾಲದಲ್ಲಿ ಆರಂಭವಾದ ಪ್ರಕ್ರಿಯೆ ಈ ರಾತ್ರಿಗೇ ಕೊನೆಯಾಗುವುದಿಲ್ಲ.

"ಈ ಗೆಲುವೊಂದೇ ನಾವು ಬಯಸುವ ಪರಿವರ್ತನೆಯಲ್ಲ. ಈ ಗೆಲುವು ಪರಿವರ್ತನೆಯನ್ನು ತರಲು ನಮಗೆ ಸಿಕ್ಕಿರುವ ಅವಕಾಶ ಮಾತ್ರ. ಈ ಹಿಂದಿನ ಪರಿಸ್ಥಿತಿಗೆ ಜೋತು ಬಿದ್ದರೆ ಪರಿವರ್ತನೆ ಸಾಧ್ಯವಿಲ್ಲ. ನೀವಿಲ್ಲದೆ ಪರಿವರ್ತನೆ ಸಾಧ್ಯವಿಲ್ಲ, ಸೇವೆಯ ಹೊಸ ಹುರುಪು, ಬಲಿದಾನದ ಹೊಸ ಕಿಡಿಯಿಲ್ಲದೆ ಪರಿವರ್ತನೆ ಸಾಧ್ಯವಿಲ್ಲ. ದೇಶಪ್ರೇಮದ, ಜವಾಬ್ದಾರಿಯ ಹೊಸ ಚೈತನ್ಯವನ್ನು ಮೂಡಿಸಿಕೊಳ್ಳೋಣ. ಆ ಮೂಲಕ ಕಷ್ಟ ಪಟ್ಟು ದುಡಿಯೋಣ. ನಮ್ಮ ಬಗ್ಗೆ ಮತ್ತು ಪರಸ್ಪರರ ಬಗ್ಗೆ ಕಾಳಜಿ ವಹಿಸೋಣ.

"ಮುಖ್ಯ ದಾರಿಯಲ್ಲಿ ಸಂಕಷ್ಟಗಳಿದ್ದಾಗ ವಾಲ್ ಸ್ಟ್ರೀಟ್ ಮಾತ್ರ ಉಚ್ಛ್ರಾಯಸ್ಥಿತಿಯಲ್ಲಿರುವುದು ತರವಲ್ಲ ಎಂಬ ಪಾಠವನ್ನು ಈ ಆರ್ಥಿಕ ಬಿಕ್ಕಟ್ಟು ನಮಗೆ ಕಲಿಸಿದೆ.

"ಈ ರಾತ್ರಿ ನಾವಿಲ್ಲಿ ಜೀವಂತವಾಗಿ ನಿಂತಿರಬಹುದು, ಆದರೆ ಇರಾಕಿನ ಮರುಭೂಮಿಗಳಲ್ಲಿ ಮತ್ತು ಅಫ್ಘನಿಸ್ಥಾನದ ಗುಡ್ಡಗಳಲ್ಲಿ ಬಹಳಷ್ಟು ಅಮೆರಿಕನ್ನರು ತಮ್ಮ ಜೀವಗಳನ್ನೇ ಪಣವಾಗಿಟ್ಟು ದಿನಕಳೆಯುತ್ತಿದ್ದಾರೆ. ಮಕ್ಕಳು ಮಲಗಿದ ನಂತರ, ತಾವು ಮಾಡಿದ ಸಾಲ ತೀರಿಸುವ ಬಗ್ಗೆ, ವೈದ್ಯರ ಬಿಲ್‌ಗಳನ್ನು ಪಾವತಿಸುವ ಬಗ್ಗೆ, ಮಕ್ಕಳ ಶಿಕ್ಷಣದ ಬಗ್ಗೆ ಚಿಂತಿಸುತ್ತಾ ನಿದ್ದೆಗೆಡುವ ಹಲವಾರು ತಂದೆ ತಾಯಿಯರಿದ್ದಾರೆ. ಹೊಸ ಹುರುಪನ್ನು ತುಂಬುವ, ಹೊಸ ಉದ್ಯೋಗಗಳನ್ನು ಸೃಷ್ಟಿಸುವ, ಹೊಸ ಶಾಲೆಗಳನ್ನು ಕಟ್ಟುವ, ಬೆದರಿಕೆಗಳನ್ನು ಎದುರಿಸುವ, ಹೊಸ ಸ್ನೇಹವನ್ನು ಮಾಡುವ ಕೆಲಸ ನಮ್ಮ ಮುಂದಿದೆ. ದೂರ ದಾರಿಯನ್ನು ನಾವು ಕ್ರಮಿಸಬೇಕಿದೆ. ಎತ್ತರದ ಗುರಿಯನ್ನು ತಲುಪಬೇಕಿದೆ. ಒಂದು ಅವಧಿಯಲ್ಲಿ ನಾವು ಗುರಿ ತಲುಪದಿರಬಹುದು. ಆದರೆ, ಆ ಗುರಿಯನ್ನು ತಲುಪುತ್ತೇವೆಂಬ ಈ ರಾತ್ರಿಯ ಆಶಾವಾದ ಹಿಂದೆಂದೂ ನನಗಿರಲಿಲ್ಲ.'

ಇಲ್ಲಿ ನಾವೆಲ್ಲರೂ ಒಂದು ರಾಷ್ಟ್ರವಾಗಿ ಏಳು ಬೀಳುಗಳನ್ನು ಎದುರಿಸೋಣ. ನಮ್ಮ ರಾಜಕಾರಣದಲ್ಲಿ ವಿಷಪೂರಿತವಾಗಿ ಹಬ್ಬಿರುವ ಪಕ್ಷಪಾತ ಮತ್ತು ಸಣ್ಣತನವನ್ನು ಮೀರುವ ಪ್ರಯತ್ನ ಮಾಡೋಣ.

"ವೈಯಕ್ತಿಕ ಸ್ವಾತಂತ್ರ್ಯ ಮತ್ತು ರಾಷ್ಟ್ರೀಯ ಐಕ್ಯತೆಯ ಮೌಲ್ಯಗಳ ತಳಹದಿಯ ಮೇಲೆ ಆರಂಭವಾದ ರಿಪಬ್ಲಿಕನ್ ಪಕ್ಷದಿಂದ ಓರ್ವ ನಾಯಕ ಮೊಟ್ಟಮೊದಲ ಬಾರಿಗೆ ಶ್ವೇತಭವನಕ್ಕೆ ಪ್ರವೇಶ ಮಾಡಿದ್ದು ಇದೇ ರಾಜ್ಯದಿಂದ ಎಂಬುದನ್ನು ನೆನಪಿನಲ್ಲಿಡಬೇಕು.

"ಆ ಮೌಲ್ಯಗಳನ್ನು ನಾವು ಕೂಡ ಒಪ್ಪುತ್ತೇವೆ. ಡೆಮಾಕ್ರಟಿಕ್ ಪಕ್ಷ ಅದ್ಭುತವಾದ ಗೆಲುವನ್ನು ಸಾಧಿಸಿದ್ದರೂ, ಬೆಳವಣಿಗೆಗೆ ಮಾರಕವಾಗಿರುವ ತೊಡಕುಗಳನ್ನು ಸರಿಪಡಿಸುವ ವಿನಯ ಮತ್ತು ಭರವಸೆ ನಮಗಿದೆ.

"ಈಗಿನ ಅಮೆರಿಕಾಗಿಂತ ಹೆಚ್ಚು ಒಡಕುಗಳಿದ್ದ ರಾಷ್ಟ್ರವನ್ನುದ್ದೇಶಿಸಿ ಲಿಂಕನ್ ಹೇಳಿದ ಹಾಗೆ 'ನಾವೆಲ್ಲರೂ ಸ್ನೇಹಿತರು, ಶತ್ರುಗಳಲ್ಲ.' ಭಾವೋದ್ರೇಕಗಳೇನಿದ್ದರೂ ಅದು ನಮ್ಮ ಬಾಂಧವ್ಯವನ್ನು ಕಡಿದುಹಾಕುವಂತಾಗಬಾರದು.

"ಈ ರಾತ್ರಿ ನನಗೆ ಬೆಂಬಲ ನೀಡದ ಅಮೆರಿಕನ್ನರ ಧ್ವನಿ ಕೂಡ ನನಗೆ ಕೇಳಿಸುತ್ತದೆ. ನನಗೆ ನಿಮ್ಮ ಸಹಾಯ ಹಸ್ತ ಕೂಡಬೇಕು. ನಾನು ನಿಮ್ಮ ಅಧ್ಯಕ್ಷನೂ ಹೌದು. ಈ ರಾತ್ರಿಯ ದೃಶ್ಯಗಳನ್ನು ಈ ತೀರದಾಚೆಯ ಸದನಗಳಲ್ಲಿ ಮತ್ತು ಅರಮನೆಗಳಲ್ಲಿ ನೋಡುತ್ತಿರುವ, ಜಗತ್ತಿನ ಸ್ಮೃತಿಗೆ ಸಿಲುಕದ ಮೂಲೆಗಳಲ್ಲಿ ರೇಡಿಯೋಗಳಲ್ಲಿ ಕೇಳುತ್ತಿರುವ ನಿಮ್ಮ ಮತ್ತು ನಮ್ಮೆಲ್ಲರ ಕಥೆಗಳು ಬೇರೆ ಬೇರೆ ಆದರೂ, ನಮ್ಮೆಲ್ಲರ ಭವಿಷ್ಯ ಒಂದೇ. ಅಮೆರಿಕಾದ ನೆಲದಲ್ಲಿ ಈಗ ಹೊಸ ನಾಯಕತ್ವದ ಶಕೆ ಆರಂಭವಾಗಿದೆ.

"ವಿಶ್ವವನ್ನು ಛಿದ್ರಗೊಳಿಸಬೇಕೆಂದಿರುವ ಜನರನ್ನು ನಾವು ಪರಾಭವಗೊಳಿಸುತ್ತೇವೆ. ಶಾಂತಿ ಮತ್ತು ಸುರಕ್ಷತೆಯನ್ನು ಬಯಸುವವರಿಗೆ ನಾವು ಬೆಂಬಲ ನೀಡುತ್ತೇವೆ. ಅಮೆರಿಕಾದ ದೀವಿಗೆ ಈಗಲೂ ಉಜ್ವಲವಾಗಿ ಬೆಳಗುವ ಬಗ್ಗೆ ಅನುಮಾನ ವ್ಯಕ್ತಪಡಿಸುವವರು ಅಮೆರಿಕಾದ ನಿಜವಾದ ಶಕ್ತಿ ನಮ್ಮ ಶಸ್ತ್ರಾಸ್ತ್ರಗಳು ಮತ್ತು ಹಣದಲ್ಲಿಲ್ಲ, ಬದಲಿಗೆ ಪ್ರಜಾತಂತ್ರ, ಮುಕ್ತಸ್ವಾತಂತ್ರ್ಯ, ಅವಕಾಶ ಮತ್ತು ಅಸಾಧಾರಣ ಆಶಾವಾದ, ಈ ಮೌಲ್ಯಗಳಲ್ಲಿದೆ ಎಂಬುದನ್ನು ಅರ್ಥೈಸಿಕೊಳ್ಳಬೇಕಿದೆ.

"ಅಮೆರಿಕಾಗೆ ಪರಿವರ್ತನೆಗೊಳ್ಳಲು ಸಾಧ್ಯವಿದೆ: ಇದು ಅಮೆರಿಕಾದ ನಿಜವಾದ ಶಕ್ತಿ. ನಮ್ಮ ಐಕ್ಯತೆಯನ್ನು ಇನ್ನೂ ಬಲಪಡಿಸಬಹುದು. ನಮ್ಮ ಈವರೆಗಿನ ಸಾಧನೆ ಮುಂದಿನ ಸಾಧನೆಯ ಆಶಾವಾದವನ್ನು ಇನ್ನೂ ಜೀವಂತವಾಗಿರಿಸಿದೆ.

"ಮುಂಬರುವ ಪೀಳಿಗೆಗೆ ಹೇಳಬೇಕಾದ ಹಲವಾರು ಕಥೆಗಳು ಮತ್ತು ವಿಚಾರಗಳು ಈ ಚುನಾವಣೆಯ ಅವಧಿಯಲ್ಲಿ ನಡೆದಿದೆ. ಆದರೆ ಅಟ್ಲಾಂಟಾದಲ್ಲಿ ಮತ ಚಲಾಯಿಸಿದ ಓರ್ವ ಮಹಿಳೆ ಈ ರಾತ್ರಿ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನೆಲೆಸಿಬಿಟ್ಟಿದ್ದಾಳೆ. ಈ ಚುನಾವಣೆಯಲ್ಲಿ ತಮ್ಮ ಧ್ವನಿಗೆ ಬೆಲೆ ಸಿಗಬೇಕೆಂದು ಸಾಲಿನಲ್ಲಿ ನಿಂತು ಮತಹಾಕಿದ ಇತರ ಲಕ್ಷಾಂತರ ಮಂದಿಯಲ್ಲಿ ಈ ಮಹಿಳೆ ಕೂಡ ಒಬ್ಬಳು: ಒಂದೇ ವ್ಯತ್ಯಾಸವೆಂದರೆ, ಆನ್ ನಿಕ್ಸನ್ ಕೂಪರ್‌ಗೆ ಈಗ ೧೦೬ ವರ್ಷ ವಯಸ್ಸು.

"ಜೀತಪದ್ಧತಿ ಅಂತ್ಯವಾದ ನಂತರ ಆಕೆ ಹುಟ್ಟಿದಳು; ಆಗ ರಸ್ತೆಯಲ್ಲಿ ಕಾರುಗಳು ಓಡಾಡುತ್ತಿರಲಿಲ್ಲ, ಆಕಾಶದಲ್ಲಿ ವಿಮಾನಗಳು ಹಾರಾಡುತ್ತಿರಲಿಲ್ಲ; ಆಗ ಮಹಿಳೆ ಎಂಬ ಕಾರಣದಿಂದ, ತಮ್ಮ ವರ್ಣದ ಕಾರಣದಿಂದ ಆಕೆಯಂತಹವರು ಮತ ಚಲಾಯಿಸುವಂತಿರಲಿಲ್ಲ. ಆದರೆ ಈ ರಾತ್ರಿ, ಅಮೆರಿಕಾದಲ್ಲಿ ಆಕೆ ಈ ಶತಮಾನದುದ್ದಕ್ಕೂ ಎದುರುಗೊಂಡಿರಬಹುದಾದ ಹತಾಶೆ ಮತ್ತು

ಭರವಸೆ; ಹೋರಾಟ ಮತ್ತು ಪ್ರಗತಿಯನ್ನು ನಾ[illegible] ಪಿಸಿಕೊಳ್ಳಲು ಬಯಸುತ್ತೇನೆ. ನಮ್ಮಿಂದ ಸಾಧ್ಯವಿಲ್ಲ ಎಂಬ ಕಾಲದಲ್ಲಿ ಅಮೆರಿಕನ್ನರಿಂದ ಸಾಧ್ಯವೆಂದು ಒತ್ತಡ ತಂದ ಜನ ನಮಗೆ ಕಲಿಸಿದ ಪಾಠ: ಹೌದು ನಮ್ಮಿಂದ ಸಾಧ್ಯ.

"ಮಹಿಳೆಯರ ಧ್ವನಿಗಳನ್ನು ಹತ್ತಿಕ್ಕಿ, ಅವರ ಕನಸುಗಳನ್ನು ತಿರಸ್ಕರಿಸಿದ ಸಂದರ್ಭದಲ್ಲಿ ಅದೆಲ್ಲವನ್ನು ಸಹಿಸಿಕೊಂಡು, ಈಗ ಮತ ಚಲಾಯಿಸುವ ಮೂಲಕ ಆಕೆ ತನ್ನ ಹಕ್ಕು ಮಂಡಿಸಿದ್ದಾಳೆ. ಹೌದು ನಮ್ಮಿಂದ ಸಾಧ್ಯ.

"ದೇಶಾದ್ಯಂತ ಎಲ್ಲೆಲ್ಲೂ ನಿರಾಶೆಯ ಕಾರ್ಮೋಡ ಮೂಡಿದ್ದಾಗ, 'ನ್ಯೂ ಡೀಲ್' ಮೂಲಕ ಉದ್ಯೋಗ ಸೃಷ್ಟಿ ಸಮುದಾಯದ ಪ್ರಜ್ಞೆಯ ಉದಯವನ್ನು ಆಕೆ ನೋಡಿದ್ದಾಳೆ. ಹೌದು ನಮ್ಮಿಂದ ಸಾಧ್ಯ.

"ಪರ್ಲ್ ಹಾರ್ಬರ್‌ನ ಮೇಲೆ ಬಾಂಬ್ ದಾಳಿಯಾಗಿ ವಿಶ್ವದಲ್ಲಿ ಅರಾಜಕತೆ ಮೂಡುವ ಸಂದರ್ಭದಲ್ಲಿ, ಒಂದು ಪೀಳಿಗೆ ಮಹತ್ತರ ಸ್ಥಿತಿ ತಲುಪಿ ಪ್ರಜಾತಂತ್ರವನ್ನು ಉಳಿಸಿಕೊಂಡದ್ದನ್ನು ಆಕೆ ನೋಡಿದ್ದಳು. ಹೌದು ನಮ್ಮಿಂದ ಸಾಧ್ಯ.

"ಮಾಂಟ್ಗೋಮೆರಿ ಬಸ್‌ಗಳು, ಬರ್ಮಿಂಗ್ಹ್ಯಾಮ್‌ನ ಮನೆಗಳು, ಸೆಲ್ಮಾದ ಸೇತುವೆ ಎಲ್ಲವನ್ನೂ ಆಕೆ ನೋಡಿದ್ದಳು. ಅಮೆರಿಕಾದ ಜನರನ್ನುದ್ದೇಶಿಸಿ ಅಟ್ಲಾಂಟಾದ ಪಾದ್ರಿಯೊಬ್ಬ "ನಾವೆಲ್ಲರೂ ಈ ತೊಡಕನ್ನು ಮೀರಬೇಕು" ಎಂದಾಗ ಆಕೆ ಇದ್ದಳು. ಹೌದು ನಮ್ಮಿಂದ ಸಾಧ್ಯ.

"ಮನುಷ್ಯ ಚಂದ್ರನ ಮೇಲೆ ಕಾಲಿರಿಸಿದ, ಬರ್ಲಿನ್‌ನ ಗೋಡೆ ಉರುಳಿದವು, ವಿಜ್ಞಾನ ಮತ್ತು ಕಲ್ಪನೆಗಳ ಮೂಲಕ ಜಗತ್ತಿನಲ್ಲಿ ಸಂಪರ್ಕ ಕ್ರಾಂತಿಯಾಯಿತು.

"ಮತ್ತೀಗ, ಈ ಚುನಾವಣೆಯಲ್ಲಿ ಪರದೆಯ ಮೇಲೆ ಬೆರಳಿಟ್ಟು ಆಕೆ ಮತ ಚಲಾಯಿಸಿದಳು. ಯಾಕೆಂದರೆ ೧೦೬ ವರ್ಷಗಳ ಕಾಲ ಅಮೆರಿಕಾದ ಅದ್ಭುತ ಕ್ಷಣಗಳನ್ನು ಮತ್ತು ಕರಾಳ ದಿನಗಳನ್ನು ನೋಡಿದ ಮೇಲೆ ಅಮೆರಿಕಾ ಹೇಗೆ ಬದಲಾಗಬೇಕೆಂದು ಅವಳಿಗೆ ಗೊತ್ತಿದೆ.

"ಹೌದು ನಮ್ಮಿಂದ ಸಾಧ್ಯ.

"ನಾವು ಬಹುದೂರ ಸಾಗಿ ಬಂದಿದ್ದೇವೆ. ಬಹಳಷ್ಟು ಪ್ರಗತಿ ಸಾಧಿಸಿದ್ದೇವೆ. ಆದರೆ ಸಾಧಿಸಬೇಕಾದ್ದು ಇನ್ನೂ ಇದೆ. ಹಾಗಾಗಿ, ನಮ್ಮ ಮಕ್ಕಳು ಮುಂದಿನ ಶತಮಾನವನ್ನು ನೋಡಬೇಕೆ, ಬೇಡವೇ ಎಂದು ನಮ್ಮನ್ನೇ ನಾವು ಪ್ರಶ್ನಿಸಿಕೊಳ್ಳೋಣ; ನನ್ನ ಮಕ್ಕಳು ಆನ್ ನಿಕ್ಸನ್ ಕೂಪರ್‌ಳಂತೆ ೧೦೬ ವಸಂತಗಳನ್ನು ಕಂಡು ಯಾವ ಬದಲಾವಣೆಯನ್ನು ನೋಡಬೇಕಿದೆ? ಯಾವ ರೀತಿ ನಾವು ಪ್ರಗತಿ ಸಾಧಿಸುತ್ತೇವೆ? ಎಂದು ಪ್ರಶ್ನಿಸಿಕೊಳ್ಳೋಣ. ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ನೀಡುವ ಅವಕಾಶವಿದು. ಅದಕ್ಕೆ ಸಕಾಲವಿದು.

"ಇದು ನಮ್ಮ ಕಾಲ. ಜನರಿಗೆ ಉದ್ಯೋಗ ಒದಗಿಸಿ, ಮಕ್ಕಳಿಗೆ ಅವಕಾಶಗಳ ಬಾಗಿಲನ್ನು ತೆರೆಯಬೇಕಾದ ಕಾಲ; ಪ್ರಗತಿ ಸಾಧಿಸಿ, ಶಾಂತಿಯನ್ನು ಸ್ಥಾಪಿಸಬೇಕಾದ ಕಾಲ. ಅಸಂಖ್ಯಾತ ಜನರಿದ್ದರೂ, ನಾವೆಲ್ಲರೂ ಒಂದೇ ಎಂಬ ಮೂಲಭೂತ ಸತ್ಯವನ್ನು ಪುನರಾವರ್ತಿಸುವ ಮತ್ತು ಅಮೆರಿಕಾದ ಕನಸುಗಳನ್ನು ನನಸು ಮಾಡುವ ಕಾಲ; ನಮ್ಮ ಉಸಿರಾಟದಲ್ಲಿ ಆಶಾಭಾವನೆಯಿದೆ. ನಮ್ಮಿಂದ ಇದು ಸಾಧ್ಯವಿಲ್ಲವೆಂದು ಸಿನಿಕತನ ಮತ್ತು ಅನುಮಾನಗಳು ಮೂಡಿದಾಗೆಲ್ಲ ಕಾಲಾತೀತವಾಗಿ ನಮ್ಮ ಸಮುದಾಯಗಳಲ್ಲಿ ಹರಿದು ಬಂದಿರುವ ಪ್ರಜ್ಞೆಯ ಮೂಲಕ ಸಿನಿಕರಿಗೆ ಉತ್ತರ ನೀಡೋಣ: ಹೌದು ನಮ್ಮಿಂದ ಸಾಧ್ಯ.

"ಧನ್ಯವಾದಗಳು. ದೇವರು ನಿಮಗೆ ಒಳ್ಳೆಯದು ಮಾಡಲಿ. ಮತ್ತು ಅಮೆರಿಕಾ ದೇಶಕ್ಕೆ ಶುಭ ತರುವಂತಾಗಲಿ."

ಕೃಪೆ: www.independent.co.uk □

ಅಮೆರಿಕದಂತಹ ದೊಡ್ಡ ರಾಷ್ಟ್ರದಲ್ಲಿಯೂ ಕಲ್ಪನೆಗೂ ಮೀರಿದ ಅಸಾಧ್ಯ ಅಂಶಗಳೂ ಸಾಧ್ಯವಾಗಿಬಿಡಬಹುದು ಎಂಬುದನ್ನು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗುವುದರ ಮೂಲಕ ನಿರೂಪಿಸಿರುವ ಬರಾಕ್ ಹುಸೇನ್ ಒಬಾಮಾ ಅವರ ಯಶೋಗಾಥೆ ಪ್ರಜಾಪ್ರಭುತ್ವದ ವಿಭಿನ್ನ ಸಾಧ್ಯತೆಗಳೆಡೆಗೆ ಬೆಳಕು ಚೆಲ್ಲುತ್ತದೆ. ಹೊನಲುಲುವಿನ ಹವಾಯಿಯಲ್ಲಿ 1961ರ ಆಗಸ್ಟ್ 4ರಂದು ಒಬಾಮಾ ಜನಿಸಿದಾಗ ಮುಂದೊಂದು ದಿನ ಜಗತ್ತಿನ ದೊಡ್ಡ ರಾಷ್ಟ್ರದ ಅತ್ಯುನ್ನತ ಪದವಿಯನ್ನು ಅಲಂಕರಿಸುತ್ತಾನೆ ಎಂದು ಯಾರೂ ಊಹಿಸಿರಲಿಲ್ಲ. ಬ್ರಿಟಿಷರ ಮನೆಯಾಳಾಗಿ ದುಡಿಯುತ್ತಿದ್ದ ಅಪ್ಪಟ ನಾಸ್ತಿಕವಾದಿಯಾಗಿದ್ದ ತಂದೆ ಮುಂದೊಂದು ದಿನ ತನ್ನ ಮಗ ಜಗತ್ತಿನಾದ್ಯಂತ ತಾನು ಅಲಂಕರಿಸಿದ ಹುದ್ದೆಯ ಕಾರಣಕ್ಕಾಗಿ ಸುದ್ದಿಯಾಗಿ ಮನೆಮಾತಾಗುತ್ತಾನೆ ಎಂದು ಅಂದುಕೊಂಡಿರಲೇ ಇಲ್ಲ. ಏಕೆಂದರೆ, ವರ್ಣಬೇಧ ಸೇರಿದಂತೆ ಅವಮಾನಗಳ ನಿರಂತರ ತಿವಿತಗಳ ನಡುವೆ ಎಲ್ಲರಂತೆ ಬದುಕುವುದೇ ದುಸ್ತರವಾಗಿದ್ದಾಗ ಅತ್ಯುನ್ನತ ಹುದ್ದೆಯ ಕನಸುಗಳಿಗೆ ಅಲ್ಲಿ ಜಾಗವೇ ಇರುವುದಿಲ್ಲ.

ಒಬಾಮಾ ತಾಯಿ ಆನ್ ಡನ್ಹ್ಯಾಂಗೂ ಕೂಡಾ ಮಗನನ್ನು ಈ ಮಟ್ಟಿಗೆ ಬೆಳೆದು ನಿಲ್ಲಿಸುವಂತಹ ತಾಕತ್ತಿನ ಹಿನ್ನೆಲೆಯೇನೂ ಇರಲಿಲ್ಲ. ಆಕೆ ಅಮೆರಿಕಾದ ಕಾನ್ಸಾಸ್‌ನ ವಿಶಿಟಾ ಎಂಬಲ್ಲಿ ಬೆಳೆದರು. ಡನ್ಹ್ಯಾಂ ತಂದೆ ತೈಲ ಪೂರೈಕೆ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದ. ಪರ್ಲ್ ಹರ್ಬರ್ ಮೇಲಿನ ಜಪಾನ್ ಆಕ್ರಮಣದ ನಂತರ ಆತ ಎರಡನೇ ಮಹಾಯುದ್ಧದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಯುರೋಪಿನೆಡೆಗೆ ತೆರಳಿದ್ದ. ತಾಯಿ ಬಾಂಬರ್ ಕೇಂದ್ರಗಳಲ್ಲಿ ಕೆಲಸಕ್ಕಿದ್ದಳು. ಮಹಾಯುದ್ಧದ ನಂತರ ಅವರಿಬ್ಬರೂ ಹವಾಯಿಯಲ್ಲಿ ನೆಲೆಗೊಂಡರು. ಇದೇ ವೇಳೆ ಒಬಾಮಾ ತಂದೆ ಹೆಚ್ಚುವರಿ ವ್ಯಾಸಂಗಕ್ಕಾಗಿ ಶಿಷ್ಯವೇತನ ಪಡೆದದ್ದು ಅವರೊಳಗಿನ ಮಹತ್ವಾಕಾಂಕ್ಷಿ ಕನಸುಗಳು ಚಿಗುರೊಡೆಯಲು ಸಹಾಯಕವಾಯಿತು.ಈ ಕಾರಣಕ್ಕಾಗಿಯೇ ಅವರು ಕೆನ್ಯಾ ಬಿಟ್ಟು ಹವಾಯಿಯಲ್ಲಿ ನೆಲೆಸಲಾರಂಭಿಸಿದರು. ಬರಾಕ್ ಹುಸೇನ್ ಒಬಾಮಾ ಜನ್ಮದ ವೇಳೆ ಅವರ ತಂದೆ ತಾಯಿ ಇಬ್ಬರೂ ಮನೋವಾದಲ್ಲಿಯ ಹವಾಯಿ ವಿಶ್ವವಿದ್ಯಾನಿಲಯದ ಈಸ್ಟ್‌ವೆಸ್ಟ್ ಅಧ್ಯಯನ ಕೇಂದ್ರದಲ್ಲಿ ವಿದ್ಯಾರ್ಥಿಗಳಾಗಿದ್ದರು. ಅವರ ತಂದೆ ತಾಯಿ ಒಬಾಮಾ ಎರಡು ವರ್ಷ ದವನಿದ್ದಾಗ ಪ್ರತ್ಯೇಕಗೊಂಡರು. ನಂತರ ವಿಚ್ಛೇದನ ಪಡೆದರು. ತಂದೆ ಪಿಎಚ್‌ಡಿ ಸಂಶೋಧನೆಯ ಉದ್ದೇಶ ದೊಂದಿಗೆ ಹಾರ್ವರ್ಡ್‌ಗೆ ತೆರಳಿ ನಂತರ ಕೆನ್ಯಾಕ್ಕೆ ಮರಳಿದರು.

ನಂತರ ಒಬಾಮಾ ತಾಯಿ ಇಂಡೋನೇಷಿಯಾ ಮೂಲದ ಲೋಲೋ ಸೊಯ್‌ಟೊರೋ ಎಂಬ ಈಸ್ಟ್‌ವೆಸ್ಟ್ ಅಧ್ಯಯನ ಕೇಂದ್ರದ ವಿದ್ಯಾರ್ಥಿಯೊಂದಿಗೆ ಮದುವೆಯಾದರು. 1967ರಲ್ಲಿ ಈ ಕುಟುಂಬ ಜಕಾರ್ತಾಕ್ಕೆ ತೆರಳಿತು. ಅಲ್ಲಿ ಒಬಾಮಾಳ ತಂಗಿಯ ಜನನವಾಯಿತು. ಒಬಾಮಾ ಜಕಾರ್ತಾದ ಶಾಲೆಗಳಲ್ಲಿ ಇಂಡೋನೇಷಿಯಾ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದರು. ಆಡಿ ನಲಿಯುವ ಕಾಲಕ್ಕೆ 'ಬಾರಿ' ಎಂದೇ ಗುರುತಿಸಲ್ಪಡುತ್ತಿದ್ದ ಬರಾಕ್ ಒಬಾಮಾ ಅಜ್ಜ ಅಜ್ಜಿಯೊಂದಿಗೆ ಇರಲು ಹವಾಯಿಗೆ ಬಂದರು. 1979ರಲ್ಲಿ ಪ್ರತಿಷ್ಠಿತ ಪುನಾಹೌ ಅಕಾಡೆಮಿಯಲ್ಲಿ ವ್ಯಾಸಂಗ ಪೂರೈಸಿದರು. ಆ ದಿನಗಳಲ್ಲಿಯೇ ವರ್ಣಬೇಧದ ಕರಾಳ ಅನುಭವ ಬರಾಕ್ ಒಬಾಮಾ ಗಮನಕ್ಕೆ ಬಂದಿದ್ದು, ಅಲ್ಲಿ ಅಭ್ಯಸಿಸುತ್ತಿದ್ದ ಕೇವಲ ಮೂರೇ ಮೂರು ಕಪ್ಪು ವಿದ್ಯಾರ್ಥಿಗಳಲ್ಲಿ ಒಬಾಮಾ ಒಬ್ಬರಾಗಿದ್ದರು. ಈ ಕಾರಣಕ್ಕಾಗಿಯೇ ಆಫ್ರಿಕಾ ಮೂಲದ ಅಮೆರಿಕನ್ನರನ್ನು ನೋಡುವ ಜನಾಂಗೀಯ ವರ್ಣಬೇಧದ ದೃಷ್ಟಿಕೋನದ ಕರಾಳ ಮುಖವನ್ನು ಪರಿಚಯಿಸಿಕೊಂಡರು.

ತಮ್ಮ ಆತ್ಮಕಥೆಯಲ್ಲಿ ಒಬಾಮಾ ಅವರು ತಮ್ಮ ಬಹುಜನಾಂಗೀಯ ಹಿನ್ನೆಲೆಯ ಸಾಮಾಜಿಕ ಆಯಾಮಗಳನ್ನು ಗುರುತಿಸಿ ಹೊಸ ಹಾದಿಗಳನ್ನು ಕಂಡುಕೊಂಡ ವಿವರಗಳನ್ನು ಕಟ್ಟಿಕೊಟ್ಟಿದ್ದಾರೆ. 1982ರಲ್ಲಿ ಕಾರು ಅಪಘಾತ ತನ್ನ ತಂದೆಯನ್ನು ಬಲಿ ತೆಗೆದುಕೊಳ್ಳುವ ಮುನ್ನ ವಿಚ್ಛೇದನದ ನಂತರ ಕೇವಲ ಒಮ್ಮೆ ಮಾತ್ರ ನೋಡಿರುವುದಾಗಿ ತಿಳಿಸಿದ್ದಾರೆ. ಯೌವ್ವನದ ದಿನಗಳಲ್ಲಿ ಮದ್ಯ ಸೇರಿದಂತೆ ಮತ್ತಿತರ ಮಾದಕ ವಸ್ತುಗಳನ್ನು ಬಳಸುತ್ತಿದ್ದುದರ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ.

ಪ್ರೌಢಶಾಲೆ ಶಿಕ್ಷಣ ಪಡೆದ ನಂತರ ಅವರು ಲಾಸ್ ಏಂಜಲೀಸ್‌ನ ಓಕ್ಸಿಡೆಂಟಲ್ ಕಾಲೇಜಿನಲ್ಲಿ ಎರಡು ವರ್ಷ ಅಧ್ಯಯನ ನಡೆಸಿದರು. ನಂತರ ನ್ಯೂಯಾರ್ಕ್‌ನ ಕೊಲಂಬಿಯಾ ಯುನಿವರ್ಸಿಟಿಯಲ್ಲಿ ಅಧ್ಯಯನ ಪೂರ್ಣಗೊಳಿಸಿ 1983ರಲ್ಲಿ ರಾಜ್ಯಶಾಸ್ತ್ರ ಪದವೀಧರರಾದರು. ಬ್ಯುಜಿನೆಸ್ ಇಂಟರ್‌ನ್ಯಾಷನಲ್ ಕಾರ್ಪೋರೇಷನ್ ಎಂಬ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿದ ನಂತರ ಒಬಾಮ 1985ರಲ್ಲಿ ಶಿಕಾಗೋಗೆ ತೆರಳಿದರು. ಅಲ್ಲಿ ಅವರು ಸಮುದಾಯ ಸಂಘಟನೆಯ ಕೆಲಸ ನಿರ್ವಹಿಸಿದರು. ಅಲ್ಲಿಯ ರೋಸ್‌ಲ್ಯಾಂಡ್ ಸಮುದಾಯದ ಕಡಿಮೆ ಆದಾಯ ಹಿನ್ನೆಲೆಯ ನಿವಾಸಿಗಳೊಂದಿಗೆ ಕಾರ್ಯನಿರ್ವಹಿಸಿದರು. ಇದೇ ಸಂದರ್ಭದಲ್ಲಿ ಟ್ರಿನಿಟಿ ಯುನೈಟೆಡ್ ಚರ್ಚ್‌ನೊಂದಿಗೆ ಗುರುತಿಸಿಕೊಂಡರು. ನಂತರ ಕೆನ್ಯಾದ ತಮ್ಮ ಸಂಬಂಧಿಗಳನ್ನು ಭೇಟಿ ಮಾಡಿದರು. ತನ್ನ ತಂದೆ ಮತ್ತು ಅಜ್ಜನ ಸಮಾಧಿಗಳ ದರ್ಶನ ಪಡೆದದ್ದು ಇದೇ ಸಂದರ್ಭದಲ್ಲಿಯೇ.

1988ರಲ್ಲಿ ಅವರು ಹಾರ್ವರ್ಡ್‌ನ ಲಾ ಸ್ಕೂಲ್ ಸೇರಿದರು. 1990ರಲ್ಲಿ 'ಹಾರ್ವರ್ಡ್ ಲಾ ರಿವ್ಯೂವ್'ನ ಮೊದಲ ಆಫ್ರಿಕನ್ ಮೂಲದ ಅಮೆರಿಕನ್ ಸಂಪಾದಕ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಲಾ ಸ್ಕೂಲ್ ಕಾರ್ಯನಿರ್ವಹಣೆಯ ನಂತರ ಒಬಾಮಾ ಶಿಕಾಗೋಕ್ಕೆ ತೆರಳಿದರು. ಅಲ್ಲಿ ಮಾನವ ಹಕ್ಕು ವಕೀಲರಾಗಿ ವೃತ್ತಿಯನ್ನು ಆರಂಭಿಸಿದರು. ಈ ಕಾರಣಕ್ಕಾಗಿಯೇ ಮೈನರ್, ಬಾರ್ನ್‌ಹಿಲ್ ಮತ್ತು ಗಾಲ್ಯಾಂಡ್ ಸಂಸ್ಥೆ ಸೇರಿದರು. ಯುನಿವರ್ಸಿಟಿ ಆಫ್ ಶಿಕಾಗೋ ಲಾ ಸ್ಕೂಲ್‌ನಲ್ಲಿ ಬೋಧನಾ ವೃತ್ತಿಯನ್ನು ನಿರ್ವಹಿಸಿದರು. 1992ರಲ್ಲಿ ಬಿಲ್ ಕ್ಲಿಂಟನ್ ಅಮೆರಿಕ ಅಧ್ಯಕ್ಷೀಯ ಸ್ಥಾನಕ್ಕೆ ಸ್ಪರ್ಧಿಸಿದಾಗ ಅವರ ಪರ ಭಾರೀ ಸಂಖ್ಯೆಯ ಮತದಾರ ನೋಂದಣಿ ಆಂದೋಲನವನ್ನು ಸಂಘಟಿಸಿದರು.

ಒಬಾಮಾ 1995ರಲ್ಲಿ "ಡ್ರೀಮ್ಸ್ ಫ್ರಮ್ ಮೈ ಫಾದರ್: ಎ ಸ್ಟೋರಿ ಆಫ್ ರೇಸ್ ಆಂಡ್ ಇನ್‌ಹೆರಿಟೆನ್ಸ್" ಎಂಬ ತಮ್ಮ ಜೀವನ ಚರಿತ್ರೆಯ ಕೃತಿಯನ್ನು ಹೊರತಂದರು. ಈ ಕೃತಿಯ ಆಡಿಯೋ ಆವೃತ್ತಿಗಾಗಿಯೇ ಗ್ರಾಮ್ಮಿ ಗರಿಯೂ ಪ್ರಾಪ್ತವಾಯಿತು. ವಕೀಲಿ ಅನುಭವ ಒಬಾಮಾ ಇಲಿನಾಯ್ಸ್ ರಾಜ್ಯ ಸೆನೆಟ್

ವಿನೂತನ ಸಾಧ್ಯತೆಗಳ ಒಬಾಮಾ

ಪತ್ನಿ ಮಿಶಲ್ ಮತ್ತು ಮಕ್ಕಳೊಂದಿಗೆ ಒಬಾಮಾ

ಪ್ರವೇಶಿಸಲು ನೆರವಾಯಿತು. 1996ರಲ್ಲಿ ಡೆಮಾಕ್ರೆಟಿಕ್ ಪಕ್ಷದಿಂದ ಅವರು ಆಯ್ಕೆಯಾದರು. ಆ ದಿನಗಳಲ್ಲಿ ಡೆಮಾಕ್ರೆಟಿಕ್ ಮತ್ತು ರಿಪಬ್ಲಿಕನ್ ಪಕ್ಷದವರ ಜೊತೆ ನೀತಿ ನಿಯಮಾವಳಿ, ಆರೋಗ್ಯ, ಬಡ ಮಕ್ಕಳ ಶಿಕ್ಷಣ ಸೇರಿದಂತೆ ಹತ್ತು ಹಲವು ವಿಷಯಗಳ ಕುರಿತು ಶಾಸನಗಳ ಕರಡು ರೂಪಿಸುವ ಹೊಣೆಗಾರಿಕೆಯನ್ನು ಒಬಾಮಾ ನಿಭಾಯಿಸಿದರು. ಅಲ್ಲದೇ ಅವರು ಕಾನೂನು ಅಧಿಕಾರಿಗಳೊಂದಿಗೆ ವಿವಿಧ ಪ್ರಕರಣಗಳ ತನಿಖಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. 2000ನೇ ವರ್ಷದಲ್ಲಿ ಅಮೆರಿಕ ಜನಪ್ರತಿನಿಧಿ ಸಭೆಗೆ ಆಯ್ಕೆಯಾಗುವ ವಿಫಲ ಯತ್ನ ನಡೆಸಿದರು.

9/11 ದಾಳಿಯ ಹಿನ್ನೆಲೆಯಲ್ಲಿ ಒಬಾಮಾ ಇರಾಕ್‌ನೊಂದಿಗೆ ಯುದ್ಧಸಂಘರ್ಷಕ್ಕಿಳಿದಿದ್ದ ಅಧ್ಯಕ್ಷ ಜಾರ್ಜ್ ಡಬ್ಲ್ಯೂ ಬುಷ್ ಅವರನ್ನು ವಿರೋಧಿಸಿದ ಮೊದಲ ವ್ಯಕ್ತಿಯಾಗಿ ಗಮನ ಸೆಳೆದರು. 2002ರ ಅಕ್ಟೋಬರ್ ತಿಂಗಳಲ್ಲಿ ಶಿಕಾಗೋದ ಸಮಾವೇಶವೊಂದರಲ್ಲಿ ಮಾತನಾಡಿದ ಒಬಾಮಾ ಇರಾಕ್ ವಿರುದ್ಧದ ಯುದ್ಧಕ್ಕೆ ಹಸಿರು ನಿಶಾನೆ ತೋರಿಸುವ ಶಾಸನವನ್ನು ವಿರೋಧಿಸಿದ್ದರು. ಆಗ ಅವರು ಸೆನೆಟರ್ ಆಗಿದ್ದರು. "ನಾನು ಎಲ್ಲ ಯುದ್ಧಗಳನ್ನೂ ವಿರೋಧಿಸುವುದಿಲ್ಲ. ಮೌನವಾಗಿ ಗೊತ್ತಾಗದ ಹಾಗೆ ಆವರಿಸಿಕೊಂಡು ಅಪಾಯಕ್ಕೀಡುಮಾಡುವ ಗುಮ್ಮನಗುಸುಗ ಯುದ್ಧಗಳಿಗೆ ನನ್ನ ಧಿಕ್ಕಾರದ ವಿರೋಧವಿರುತ್ತದೆ. ನಮ್ಮನ್ನು ಸಂಕಷ್ಟಕ್ಕೀಡುಮಾಡಿ ತಮ್ಮ ಹಠಮಾರಿ ವಿಚಾರಧಾರೆಗಳನ್ನು ನೆಲೆಗೊಳಿಸುವ ಆಡಳಿತಾತ್ಮಕ ಕಾರ್ಯತಂತ್ರಗಳು ನನ್ನೊಳಗೆ ವಿರೋಧದ ದನಿ ಎತ್ತುವಂತೆ ಮಾಡುತ್ತವೆ" ಎಂಬುದು ಒಬಾಮಾ ಅಭಿಪ್ರಾಯವಾಗಿತ್ತು.

"ನನಗೆ ಗೊತ್ತು; ಇರಾಕ್ ವಿರುದ್ಧದ 'ಯಶಸ್ವಿ' ಯುದ್ಧದ ಹಿಂದೆ ಒಂದು ಬಗೆಯ ಅನಿಶ್ಚಿತ ಬಗೆಯ ವ್ಯಾಪ್ತಿಯನ್ನು ಹಿಡಿತಕ್ಕೆ ತಂದುಕೊಳ್ಳುವ ಹುಚ್ಚು ಉದ್ದೇಶವಿತ್ತು. ಅದಕ್ಕಾಗಿ ಎಂಥದ್ದೇ ಬೆಲೆ ತೆರಲು ಸನ್ನದ್ಧವಾಗಿದ್ದ ಗೊತ್ತುಗುರಿಯಿಲ್ಲದ ಆವೇಶವಿತ್ತು. ಅಲ್ಲದೇ ಯುದ್ಧಾನಂತರದ ವ್ಯತಿರಿಕ್ತ ಫಲಿತಾಂಶಗಳಿಗೆ ತಣ್ಣಗೆ ಪ್ರತಿಕ್ರಿಯಿಸುವ ವಿಚಿತ್ರ ಉಮೇದಿಯಿತ್ತು. ಅಲ್ಲದೇ ನನಗೆ ಮತ್ತೊಂದು ಸತ್ಯವೂ ಗೊತ್ತು. ಒಂದು ನಿಶ್ಚಿತ ಉದ್ದೇಶ, ಗಮ್ಯ ಮತ್ತು ಅಂತರರಾಷ್ಟ್ರೀಯ ಬೆಂಬಲವಿಲ್ಲದ ಇರಾಕ್ ಮೇಲಿನ ದಾಳಿಯು ವಿಶ್ವದಲ್ಲಿ ಅಸಮಾಧಾನದ ಹೊಗೆಯನ್ನು ಹೆಚ್ಚಿಸುತ್ತದೆ. ಅಲ್ಲದೇ ಅರಬ್ ಜಗತ್ತನ್ನು ತಲ್ಲಣಗೊಳಿಸುತ್ತದೆ. ಆ ಮೂಲಕ ಆಲ್ ಖೈದಾದ ಪ್ರಾಬಲ್ಯ ಹೆಚ್ಚಿಸಲು ಬಲವಾದ ಕಾರಣವಾಗುತ್ತದೆ" ಒಬಾಮಾ ಮಾತಿನ ಧಾಟಿ ಹೀಗೆ ಮುಂದುವರೆದಿತ್ತು.

ಇರಾಕ್ ವಿರುದ್ಧದ ಅಮೆರಿಕಾ ಯುದ್ಧ ಆರಂಭವಾಗಿದ್ದು 2003ರಲ್ಲಿ. ರಿಪಬ್ಲಿಕನ್ ಪಕ್ಷದ ಪೀಟರ್ [illegible] ತನ್ನ ಹುದ್ದೆಯಿಂದ ಕೆಳಗಿಳಿದಾಗ ಒಬಾಮಾ ಅಮೆರಿಕಾ ಸೆನೆಟ್‌ನೆಡೆಗೆ ಮುಖ ಮಾಡಿದ್ದರು. 2004ರಲ್ಲಿ [illegible] ಒಬಾಮಾ [illegible]

"[illegible] ಕಟ್ಟುವ ಕಲೆಯೂ ಗೊತ್ತು. ಎಲ್ಲರೊಳಗೊಂದಾಗುವ ಗುಣ ನಮ್ಮದು. ಇಲ್ಲಿ ಇರಾಕ್‌ನಲ್ಲಿ ನಡೆದ ಯುದ್ಧ ವಿರೋಧಿಸಿದ ದೇಶಪ್ರೇಮಿಗಳಿದ್ದಾರೆ. ಇರಾಕ್ ಯುದ್ಧ ಬೆಂಬಲಿಸಿದ ದೇಶಪ್ರೇಮಿಗಳಾಗಿದ್ದಾರೆ. ನಾವೆಲ್ಲರೂ ಒಂದೇ. [illegible] ನಾವೆಲ್ಲರೂ ಅಮೆರಿಕವನ್ನು [illegible]" ಎಂದು ಹೇಳಿದ್ದರು ಒಬಾಮಾ.

ಸಮಾವೇಶದ ನಂತರ ಒಬಾಮಾ ಇಲಿಯಾನ್ಸ್‌ಗೆ ಮರಳಿದ್ದರು. ಚುನಾವಣೆಯಲ್ಲಿ ಇವರ ಪ್ರತಿಸ್ಪರ್ಧಿಯಾಗಿದ್ದ ಜಾಕ್ ರ್‍ಯಾನ್ ಲೈಂಗಿಕ ಕಿರುಕುಳದ ಆರೋಪದ ಹಿನ್ನೆಲೆಯಲ್ಲಿ 2004ರ ಜೂನ್‌ನಲ್ಲಿ ಸ್ಪರ್ಧೆಯಿಂದ ಹಿಂದೆ ಸರಿದರು. 2004ರ ಆಗಸ್ಟ್ ತಿಂಗಳಲ್ಲಿ ರ್‍ಯಾನ್ ಬದಲಿಗೆ ಆಫ್ರಿಕಾ ಮೂಲದ ಅಮೆರಿಕನ್ ಅಲಾನ್ ಕೆಯಸ್ ಹೆಸರು ಕೇಳಿಬಂತು. ಒಬಾಮಾ ಮತ್ತು ಕೆಯಸ್ ಇಬ್ಬರೂ ಭ್ರೂಣಹತ್ಯೆ ಸೇರಿದಂತೆ ವಿವಿಧ ವಿಷಯಗಳೆಡೆಗೆ ಬೆಳಕು ಚೆಲ್ಲಿ ತಮ್ಮ ವಿರೋಧದ ಧ್ವನಿಗಳನ್ನು ಸ್ಪಷ್ಟಪಡಿಸಿದ್ದರು. 2004ರ ನವೆಂಬರ್ ತಿಂಗಳಲ್ಲಿ ನಡೆದ ಚುನಾವಣೆಯಲ್ಲಿ ಒಬಾಮಾಗೆ ಐತಿಹಾಸಿಕ ವಿಜಯ ಪ್ರಾಪ್ತಿಯಾಯಿತು. ಅಮೆರಿಕಾ ಸೆನೆಟ್‌ಗೆ ಆಯ್ಕೆಯಾದ ಆಫ್ರಿಕಾ ಮೂಲದ ಅಮೆರಿಕಾ ನಿವಾಸಿ ಎಂಬ ಕಾರಣಕ್ಕೆ ಒಬಾಮಾ ಗೆಲುವು ವಿಶೇಷ ಗಮನ ಸೆಳೆದಿತ್ತು.

ಒಬಾಮಾ ಅವರ ಎರಡನೇ ಕೃತಿ " ದಿ ಅಡಾಸಿಟಿ ಆಫ್ ಹೋಪ್; ಥಾಟ್ಸ್ ಆನ್ ದಿ ಅಮೆರಿಕನ್ ಡ್ರೀಮ್'. ಇದು 2006 ಅಕ್ಟೋಬರ್ ತಿಂಗಳಿನಲ್ಲಿ ಪ್ರಕಟವಾಯಿತು. 2007ರ ಫೆಬ್ರವರಿ ತಿಂಗಳಲ್ಲಿ ಡೆಮಾಕ್ರೆಟಿಕ್ ಪಕ್ಷದವತಿಯಿಂದ ಅಧ್ಯಕ್ಷೀಯ ಅಭ್ಯರ್ಥಿಯಾಗಿ ಗುರುತಿಸಿಕೊಂಡಾಗ ಒಬಾಮಾ ಸುದ್ದಿಯಾಗಲಾರಂಭಿಸಿದರು. ಅಮೆರಿಕಾದ ಸೆನೆಟರ್ ಹಿಲರಿ ಕ್ಲಿಂಟನ್ ಒಡ್ಡಿದ್ದ ಪೈಪೋಟಿಯನ್ನು ಸಮರ್ಥವಾಗಿ ಎದುರಿಸಿ ಗೆಲುವು ಸಾಧಿಸಿದರು. ಅಂಥ ದ್ದೊಂದು ಗೆಲುವಿನೊಂದಿಗೆ ವಿಶ್ವದಲ್ಲಿ ಮುಂಬಾಗುವ ಹೊಸ ಸಾಧ್ಯತೆಗಳಿಗೆ ಮುನ್ನುಡಿಯಾದರು.

○ ಎನ್. ಕೆ ಪದ್ಮನಾಭ್

'ಮತಾಂತರ'ದಲ್ಲಿ ತಲೆ ಹಾಕಲು ಇವರ್ಯಾರು?

(೫ನೇ ಪುಟದಿಂದ)

'ಹಿಂದೂ'ಗಳಲ್ಲ. ಅವರು ತಮಗಾಗಿ ಧರ್ಮವೊಂದನ್ನು ಆಯ್ಕೆ ಮಾಡಿ ಕೊಂಡರೆ ಅದು ಧರ್ಮ ಸ್ವೀಕಾರವಾಗುವುದೇ ಹೊರತು ಮತಾಂತರವಾಗುವುದಿಲ್ಲ.

ಇನ್ನೂ ಮುಖ್ಯವಾದ ವಿಚಾರವೆಂದರೆ ಬ್ರಾಹ್ಮಣೇತರ ಜಾತಿಗಳ ಆಚರಣೆ, ಆಹಾರ ಪದ್ಧತಿ ಹಾಗೂ ಸಾಂಸ್ಕೃತಿಕ ವಿಧಿ ವಿಧಾನಗಳಲ್ಲಿ ಸಾಮ್ಯತೆ ಇರುವುದು. ಇದನ್ನು ವೈದಿಕರು ಸುಲಭವಾಗಿ 'ಹಿಂದೂ ಧರ್ಮಾಚರಣೆ' ಎಂದು ಕರೆದುಬಿಡುತ್ತಾರೆ. ಆದರೆ ಏಕಧರ್ಮ ಮತ್ತು ಏಕ ಸಂಸ್ಕೃತಿ ಇಲ್ಲದ ಭಾರತದಲ್ಲಿ ಭೌಗೋಳಿಕವಾಗಿ ಒಂದೇ ಪರಿಸರದಲ್ಲಿ ಬದುಕುವ ಜನರ ಆಚಾರ ವಿಚಾರಗಳಲ್ಲಿ ಸಾಮ್ಯತೆ ಇರುವುದು ಅತ್ಯಂತ ಸಹಜವಾದುದು. ನನಗೆ ತಿಳಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ಯಾವುದೇ ಮದುವೆ-ತಿಥಿ ಮುಂತಾದ ಕಾರ್ಯಕ್ರಮಗಳಿಗಾಗಲಿ ಇತರೆ ಆಚರಣೆಗಳಿಗಾಗಲಿ ವೈದಿಕ ಪುರೋಹಿತರನ್ನು ಕರೆಸುವ ಪರಿಪಾಠ ಇಲ್ಲ. ಎಲ್ಲಾ ಜಾತಿಗಳಲ್ಲೂ ಈ ಪದ್ದತಿ ಜಾರಿಯಲ್ಲಿದೆ ಅಲ್ಲದೆ ಬ್ರಾಹ್ಮಣೇತರರ ದೇವಸ್ಥಾನಗಳಲ್ಲಿ ವೈದಿಕ ಪೂಜಾರಿಗಳೂ ಇರುವುದಿಲ್ಲ. ವೈದಿಕ ಪರಂಪರೆಯ ಯಾವ ಪೂಜೆಗಳೂ ಅಲ್ಲಿ ನಡೆಯುವುದಿಲ್ಲ.

ಆದರೆ 'ಹಿಂದುತ್ವ'ದ ರಾಜಕಾರಣ ಬೆಳೆ ದಂತೆ ಬ್ರಾಹ್ಮಣೇತರ ಜಾತಿಗಳಲ್ಲೂ ಪುರೋಹಿತರ ಮೂಗುತೂರಿಸುವಿಕೆ ಹೆಚ್ಚಾಗುತ್ತಿದೆ. ಅಂದರೆ ಸಾಮಾಜಿಕ ಜೀವನ ಕ್ರಮದಲ್ಲಿ ಇಲ್ಲದ ಆಚರಣಾ ಪದ್ದತಿಗಳನ್ನು ಬ್ರಾಹ್ಮಣೇತರ ಸಮಾಜದ ಮೇಲೆ ಹೇರುವ ಮೂಲಕ ಅವರನ್ನೆಲ್ಲಾ ವೈದಿಕ ಹಿಂದೂ ತೆಕ್ಕೆಯಲ್ಲಿ ಬಂದಿಸಿಡುವ ಪ್ರಯತ್ನ ಯಾವ ಎಗ್ಗೂ ಇಲ್ಲದೆ ಮುಂದುವರಿಯುತ್ತಿದೆ. ಇದು ಭಾರತದ ಬಹುಸಂಸ್ಕೃತಿಯ ಬೇರುಗಳನ್ನು ನಾಶಮಾಡುವ ವೈದಿಕ ಸಂಚಿನ ಭಾಗವಾಗಿ ನಡೆಯುತ್ತಿರುವ ಕೃತ್ಯವೇ ಆಗಿದೆ. ಈ ಎಲ್ಲವನ್ನೂ ಮುಚ್ಚಿಟ್ಟುಕೊಂಡು ಭೈರಪ್ಪ ಮತ್ತು ಇತರರು ಬಹಳ ಬುದ್ಧಿವಂತಿಕೆಯಿಂದ ದಾರಿತಪ್ಪಿಸುವ ಪ್ರಯತ್ನವನ್ನು ತಮ್ಮ ಲೇಖನಗಳ ಉದ್ದಕ್ಕೂ ಮಾಡಿದ್ದಾರೆ.

ಮೆಕಾಲೆ ಶಿಕ್ಷಣ ರೀತಿಯನ್ನು ವಿರೋಧಿ ಸುವ ಭೈರಪ್ಪನವರು ಆ ಮೂಲಕ ಬ್ರಾಹ್ಮಣೇತರ ರಿಗೆ ಶಿಕ್ಷಣ ನೀಡುವುದನ್ನು ವಿರೋಧಿಸುತ್ತಿ ದ್ದಾರೆ. ಮೆಕಾಲೆಗೆ ಮೊದಲು ಭಾರತದ ಶಿಕ್ಷಣ ವ್ಯವಸ್ಥೆ ಕೇವಲ ಯಜ್ಞೋಪವೀತಕ್ಕೆ ನೇಣು ಬಿಗಿದುಕೊಂಡಿತ್ತು ಎನ್ನುವ ಸತ್ಯವನ್ನು ಬಹಳ ಬುದ್ಧಿವಂತಿಕೆಯಿಂದ ಮರೆಮಾಚುತ್ತಿದ್ದಾರೆ. ಮಧ್ಯಯುಗೀನ ಮೃಗೀಯ ಸಂಸ್ಕೃತಿ ಗಿಂತಲೂ ಹೀನಾಯವಾಗಿದ್ದ ವೈದಿಕರ ಕಪಿಮುಷ್ಟಿಯಲ್ಲಿ ಸಿಲುಕಿದ್ದ ಭಾರತದ ತಳಸಮುದಾಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿಗೆ ಸ್ವಲ್ಪವಾದರೂ ಮಾನವೀಯ ಅಂತ ಕರಣ ಮೂಡಿದ್ದೇ ವಿದೇಶಿಯರ ಆಗಮನದ ನಂತರ. ವೈದಿಕರ ಅನಾಗರೀಕ ಧಾರ್ಮಿಕ ಹಿಂಸೆಗಳಿಂದ ತಳಸಮು ದಾಯದ ಜನ ಬಿಡುಗಡೆಯ ನಿಟ್ಟುಸಿರು ಬಿಟ್ಟಿದ್ದೂ ಆಗಿನಿಂದಲೇ. ಇತಿಹಾಸದ ಬಗ್ಗೆ ಅಷ್ಟೆಲ್ಲಾ ತಿಣುಕಾಡುವ ಭೈರಪ್ಪ ನವರಿಗೆ ಇಷ್ಟೂ ಗೊತ್ತಿಲ್ಲದಿರುವುದು ಚೋದ್ಯವೇ ಸರಿ!

'ಮತ ಪರಿವರ್ತನೆಯನ್ನು ಕಾನೂನಿನಲ್ಲಿ ನಿಷೇದಿಸಬೇಕೆಂಬ ಬೇಡಿಕೆಯನ್ನು ದಲಿತ ಬುದ್ಧಿಜೀವಿಗಳು ವಿರೋಧಿಸುತ್ತಾರೆ. ತಾವೆಲ್ಲಾ ಒಟ್ಟಿಗೆ ಕ್ರೈಸ್ತ ಅಥವಾ ಮುಸಲ್ಮಾನರಾಗುತ್ತೇವೆಂಬ ಬೆದರಿಕೆಯ ಅಸ್ತ್ರ ಕಳೆದುಹೋಗುತ್ತದೆಂಬ ಕಾರಣ ಅವರದು' ಎಂದೂ ಭೈರಪ್ಪ ವ್ಯಂಗ್ಯವಾಡಿದ್ದಾರೆ. ಆ ವ್ಯಂಗ್ಯದ ಹಿಂದಿನ ಕ್ರೌರ್ಯ ಅರ್ಥವಾಗದ್ದೇನಲ್ಲ. ಆದರೆ ಭೈರಪ್ಪನವರಿಗೆ ಒಂದು ವಿಚಾರ ಗೊತ್ತಿರಬೇಕು. ಧರ್ಮಾಂತರದ ವಿಚಾರ ಬಂದಾಗ ಅಂಬೇಡ್ಕರ್ ಅವರು ಸತತವಾಗಿ ೨೧ ವರ್ಷ ಅಧ್ಯಯನ ನಡೆಸಿದರು. ಪ್ರಪಂಚದ ಎಲ್ಲಾ ಧರ್ಮಗಳನ್ನು ನಿಕಷಕ್ಕೆ ಒಡ್ಡಿದ್ದರು. ೧೯೩೫ ರಲ್ಲಿ 'ನಾನು ಹಿಂದೂವಾಗಿ ಸಾಯಲಾರೆ' ಎಂದು ಸಾರಿದ ಅಂಬೇಡ್ಕರ್ ಬೌದ್ಧ ಧರ್ಮ ಸ್ವೀಕರಿಸಿದ್ದು ೧೯೫೬ ರಲ್ಲಿ. ಈ ೨೧ ವರ್ಷಗಳಲ್ಲಿ ಅವರಿಗೆ ಜಗತ್ತಿನ ಅತಿ ದೊಡ್ಡ ಧರ್ಮಗಳಾದ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಿಂದ ತಮ್ಮ ಧರ್ಮ ಸ್ವೀಕರಿಸುವಂತೆ ಆಹ್ವಾನ ಕೂಡ ಬಂದಿತ್ತು. ಅಂಬೇಡ್ಕರ್ ಈ ಎರಡರಲ್ಲಿ ಯಾವುದಾದರೂ ಒಂದು ಧರ್ಮವನ್ನು ಸ್ವೀಕರಿಸಿದ್ದರೂ ಇಂದು ದಲಿತರು ಭಾರತ ದೇಶವನ್ನು ಆಳುತ್ತಿದ್ದರು. ಆದರೆ ಅಂಬೇಡ್ಕರ್ ಅವರ ಭಾರತದ ಬಗೆಗಿನ ಕಾಳಜಿ, ಸಹನೆ ಮತ್ತು ದೂರದರ್ಶಿತ್ವ ಅವರನ್ನು ಬೌದ್ಧ ಧರ್ಮದತ್ತ ತಂದು ನಿಲ್ಲಿಸಿತ್ತು. ಅದಕ್ಕಾಗಿ ವೈದಿಕ ಸಮುದಾಯ ದಲಿತರಿಗೆ ಕೃತಜ್ಞರಾಗಿರಬೇಕು.

ಭೈರಪ್ಪನವರು ಇನ್ನೊಂದು ಸಂಗತಿಯನ್ನೂ ಅರ್ಥ ಮಾಡಿಕೊಳ್ಳಬೇಕು. ವೈದಿಕ ಸಮುದಾಯ ಸಾವಿರಾರು ವರ್ಷಗಳ ಕಾಲ ನಡೆಸಿದ ಅಮಾನವೀಯ ಕಿರುಕುಳ, ಶೋಷಣೆ, ಅನ್ಯಾಯ, ಅವಮಾನಗಳ ವಿರುದ್ಧ ದಲಿತರು ಸಿಡಿದು ನಿಂತಿದ್ದರೆ ಭಾರತದ ಸ್ಥಿತಿ ಏನಾಗುತ್ತಿತ್ತು? ಅಸ್ಪೃಶ್ಯತೆ, ಅತ್ಯಚಾರ, ಅವಮಾನಗಳ ಭೀಭತ್ಸ್ಯ ಜ್ವಾಲಮುಖಿಗಳನ್ನು ಎದೆಗಳಲ್ಲಿ ಬಚ್ಚಿಟ್ಟುಕೊಂಡು, ಸಹನೆ ಮತ್ತು ಮಾನವೀಯತೆಯನ್ನು ಮೆರೆದ ದಲಿತರು ತಿರುಗಿ ಬಿದ್ದಿದ್ದರೆ ಭೈರಪ್ಪ ಮತ್ತು ಅವರ ಬಳಗ ಇಂದು ಎಲ್ಲಿ ಇರುತ್ತಿದ್ದರು? ಇಂದು ವೈದಿಕ ಸಮುದಾಯ ಬದುಕಿರುವುದೇ ದಲಿತರ ಔದಾರ್ಯ ಮತ್ತು ಸಹಿಷ್ಣತೆಯಿಂದ. ಅದನ್ನು ಕೆಣಕದಿರುವ ವಿವೇಕ ಅವರಿಗೆ ಬಂದರೆ ಒಳ್ಳೆಯದು.

'ಮತಾಂತರ'ದ ವಿರುದ್ಧ ಪುಂಡಾಟಕ್ಕೆ ಇಳಿದಿರುವ ವೈದಿಕರ ಕಾಲಾಳುಗಳ ಹಿಂಸೆಯನ್ನು ಪರೋಕ್ಷವಾಗಿ ಬೆಂಬಲಿಸುವ ಹಾಗೂ ಅವರನ್ನು ಕೆರಳಿಸುವ ಮಾತುಗಳನ್ನು ಭೈರಪ್ಪ ಆಡಿದ್ದಾರೆ. ಹಿಂಸೆ ವೈದಿಕ ಧರ್ಮದ ಅಂತರ್ವಾಹಿನಿ. ಬೌದ್ಧ ಧರ್ಮ ಪ್ರಾಬಲ್ಯಕ್ಕೆ ಬರುವವರೆಗೂ ಹಿಂಸೆಯೇ ವೈದಿಕ ಧರ್ಮದ ನೀತಿಯಾಗಿತ್ತು.

ಅ. ೧೬ ರಂದು 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟವಾದ ಎಸ್. ಎಲ್ ಭೈರಪ್ಪ ಅವರ ಲೇಖನಕ್ಕೆ ಬರೆದ ಉತ್ತರ ರೂಪದ ಲೇಖನ ಇದು. 'ವಿ.ಕ'ದಲ್ಲಿ ಲೇಖನದ ಕೆಲವು ಸಾಲುಗಳನ್ನು ಕತ್ತರಿಸಿ ಪ್ರಕಟಿಸಿದ್ದರಿಂದ ಪೂರ್ಣ ಲೇಖನವನ್ನು ಇಲ್ಲಿ ಪುನರ್ ಮುದ್ರಿಸಿದ್ದೇವೆ)

ಅದನ್ನೇ ಭೈರಪ್ಪ ಇನ್ನೊಂದು ರೀತಿಯಲ್ಲಿ ಈಗ ವ್ಯಕ್ತ ಪಡಿಸಿದ್ದಾರೆ. ಭಯೋತ್ಪಾದನೆಯ ಬಗ್ಗೆ ಬರೆಯುತ್ತಾ 'ಸತತ ಭಯೋತ್ಪಾದನೆಯಿಂದ ದೇಶದ ಧೃತಿಯನ್ನು ಉಡುಗಿಸಿ ಆನಂತರ ಎಲ್ಲಾ ಕಡೆಗಳಲ್ಲೂ ಏಕ ಕಾಲಕ್ಕೆ ಬೆಂಕಿ ಹಚ್ಚಿ ಅಧಿಕಾರ ಹಿಡಿಯುವ ತಂತ್ರ ಭಯೋತ್ಪಾದಕರದು. ಲೆನಿನ್ ಮಾಡಿದ್ದೂ ಇದೇ ತಂತ್ರವನ್ನು. ಮಾವೋ ಮಾಡಿದ್ದೂ ಇದೇ ತಂತ್ರವನ್ನು. ನೇಪಾಳದ ಪ್ರಚಂಡನೂ, ನಮ್ಮ ನಕ್ಸಲೀಯರದ್ದೂ ಇದೇ ತಂತ್ರ ಇದೇ ವಿಧಾನ, ಈ ಹತಾಶೆ ಹಿಂದೂಗಳಲ್ಲಿಲ್ಲವೇ' ಎಂದು ಮರುಗಿದ್ದಾರೆ. ಆದರೆ ಭೈರಪ್ಪನವರಿಗೆ ಚಾಣಕ್ಯ ಯಾಕೆ ನೆನಪಾಗಲಿಲ್ಲವೋ ಗೊತ್ತಾಗುತ್ತಿಲ್ಲ. ಅದು ವಯೋಸಹಜವಾದ ಮರೆವೋ ಅಥವಾ ಜಾಣ ಮರೆವೋ? ಭಾರತ ನೆಲದ ಮೊದಲ ಭಯೋತ್ಪಾದಕನೇ ಚಾಣಕ್ಯ. ಭೈರಪ್ಪನವರು ಬರೆದಿರುವ ಮೇಲಿನ ಸಾಲಿನ ಪ್ರತಿ ಅಕ್ಷರಕ್ಕೂ ವಾರಸುದಾರ ಅವನೇ. ಕ್ರಿಪೂ. ನಾಲ್ಕನೇ ಶತಮಾನದ ನಂದ ಸಾಮ್ರಾಜ್ಯದ ಅಳಿವಿಗೆ ಚಾಣಕ್ಯ ಬಳಸಿದ ತಂತ್ರಗಳೇ ಭಯೋತ್ಪಾದನೆ ಹೆಸರಿನಲ್ಲಿ ಇಂದು ಬಳಕೆಯಾಗುತ್ತಿವೆ. ವಿವರಗಳಿಗೆ ಭೈರಪ್ಪನವರು ತಾವು ನಂಬುವ ಇತಿಹಾಸಕಾರರನ್ನೇ ಮೊರೆಹೋಗಬಹುದು.

ವೈದಿಕ ಧರ್ಮಕ್ಕೆ 'ಹಿಂದೂ ಧರ್ಮ' ಅಂಥ ಯಾಕೆ ಕರೆಯಲಾಗುತ್ತಿದೆ? ಹಾಗೂ ಯಾರು ಈ ನಾಮಕರಣ ಮಾಡಿದವರು ಮತ್ತು ಯಾಕಾಗಿ ಹಾಗೆ ಮಾಡಿದರು ಎಂಬುದನ್ನು ಸ್ವಲ್ಪ ಗಮನಿಸಬೇಕು. 'ಹಿಂದೂ' ಎಂಬ ಪದವನ್ನು ವೈದಿಕ ಧರ್ಮ ಗ್ರಂಥಗಳ್ಯಾವುದರಲ್ಲೂ ಬಳಕೆ ಮಾಡಿಲ್ಲ. ವೇದ, ಉಪನಿಷತ್ತುಗಳಿಂದ ಹಿಡಿದು ರಾಮಾಯಣ, ಮಹಾಭಾರತದಂತ ಮಹಾಕಾವ್ಯಗಳಲ್ಲೂ ಆ ಹೆಸರಿಲ್ಲ. ಐದು ಸಾವಿರ ವರ್ಷಗಳ ಪರಂಪರೆಯುಳ್ಳ ವೈದಿಕ ಧರ್ಮವನ್ನೂ 'ಹಿಂದೂ ಧರ್ಮ'ವೆಂದೂ ಕರೆಯಲಾರಂಬಿಸಿದ್ದೇ ಹದಿನೆಂಟನೇ ಶತಮಾನದ ನಂತರ. ಐತಿಹಾಸಿಕ ದಾಖಲೆಗಳ ಮೂಲಕ ತಿಳಿದು ಬರುವುದೆಂದರೆ ಪರ್ಶಿಯನ್ನರು ಭಾರತ್ಕಕೆ ಬಂದಾಗ, ಸಿಂಧೂ ನದಿಯ ಬದಿಯಲ್ಲಿರುವ ಭೂಪ್ರದೇಶವಾದುದರಿಂದ ಸಿಂಧೂ ಎಂದು ಉಚ್ಚರಿಸಲಾರದೆ 'ಹಿಂದೂ' ಎಂದರು, ನಂತರ ಭಾರತ ಭೂ ಭಾಗಕ್ಕೆ 'ಹಿಂದೂಸ್ಥಾನ' ಎಂದು ಕರೆದರು. ನಂತರವಷ್ಟೇ 'ಹಿಂದೂಸ್ತಾನ'ದಲ್ಲಿರುವವರನ್ನೆಲ್ಲಾ 'ಹಿಂದು'ಗಳೆಂದು ಕರೆಯಲಾಯಿತು. ಕ್ರಿ.ಶ.೧೮೭೫ರ ನಂತರ ವೈದಿಕ ಧರ್ಮದ ಸುಧಾರಣೆಗೆ ಮುಂದಾದ ಬಂಗಾಳದ ವೈದಿಕ ಹಿನ್ನೆಲೆಯ ರಾಜಾರಾಂ ಮೋಹನ್‌ರಾಯ್ ಮತ್ತು ಗುಜರಾತ್ ವೈದಿಕ ಹಿನ್ನೆಲೆಯ ದಯಾನಂದ ಸರಸ್ವತಿಯವರು ವೈದಿಕ ಧರ್ಮಕ್ಕೆ 'ಹಿಂದೂ ಧರ್ಮ'ವೆಂದು ಮರುನಾಮಕರಣ ಮಾಡಿ ಅದನ್ನು ವ್ಯಾಪಕ ಪ್ರಚಾರಕ್ಕೆ ಬಿಟ್ಟರು.

ವೈದಿಕರಿಗೆ ಸೀಮಿತವಾಗಿದ್ದ ಧರ್ಮವೊಂದನ್ನು ಹೀಗೆ 'ಹಿಂದೂ ಧರ್ಮ'ಎಂದು ಕರೆಯುವ ಮೂಲಕ ಭಾರತ ಭೂ ಭಾಗದ ವಿವಿಧ ಸಂಸ್ಕೃತಿ, ಆಚಾರ, ವಿಚಾರ, ಆಹಾರ ಕ್ರಮಗಳನ್ನು ಹೊಂದಿದ್ದ ಎಲ್ಲ ಜನ ಸಮುದಾಯಗಳನ್ನು ಅದರೊಳಕ್ಕೆ ತರಲು ಪ್ರಯತ್ನಿಸಿದರು. ಆದರೆ ವಿವಿಧ ಸಾಂಸ್ಕೃತಿಕ ನೆಲೆಗಳನ್ನು ಹೊಂದಿದ್ದ ಹಾಗೂ ವಿವಿಧ ಜಾತಿ ಗುಂಪುಗಳಾಗಿದ್ದ ಭಾರತದ ಜನ ವರ್ಗ ಇದನ್ನು ಸ್ವೀಕರಿಸಲೂ ಇಲ್ಲ, ಧಿಕ್ಕರಿಸಲೂ ಇಲ್ಲ.

ತಮ್ಮಷ್ಟಕ್ಕೆ ತಾವಿದ್ದರು. ಆದರೆ 'ಹಿಂದೂ' ಪದದ ಬಳಕೆ ರಾಜಕೀಯ ಮತ್ತು ಸಾಂಸ್ಕೃತಿಕ ವಲಯದಲ್ಲಿ ಪದೇ ಪದೇ ಕೇಳಿ ಬರತೊಡಗಿದ್ದರಿಂದ ಮುಂದೆ ಆಡಳಿತಾತ್ಮಕ ವಾಗಿ ಎಲ್ಲರೂ ಅದನ್ನೇ ಬಳಸಲಾರಂಭಿಸಿದರು. ವಿವೇಕಾ ನಂದರನ್ನು ಓದಿಕೊಂಡವರಿಗೆ ಚೆನ್ನಾಗಿಗೊತ್ತಿದೆ: ಬ್ರಾಹ್ಮಣ ಶಾಹಿ ಮತ್ತು ಪುರೋಹಿತಶಾಹಿಯನ್ನು ಅವರಷ್ಟು ಹೀಗ ಳೆದವರು ಬೇರಾರೂ ಇಲ್ಲ. 'ಈ ಬ್ರಾಹ್ಮಣರು ಮತ್ತು ಪುರೋಹಿತಶಾಹಿಯ ಕಪಿಮುಷ್ಟಿಯಿಂದ 'ಹಿಂದೂ ಧರ್ಮ'ವನ್ನು ಮತ್ತು ಭಾರತವನ್ನು ರಕ್ಷಿಸಬೇಕು' ಎಂದು ಅವರು ಪದೇ ಪದೇ ಕರೆನೀಡುತ್ತಿದ್ದರು. 'ಭಾರತದ ಅಧೋಗತಿಗೆ ಇದೇ ಬ್ರಾಹ್ಮಣರು ಮತ್ತು ಪುರೋಹಿತರೇ ಕಾರಣ' ಎಂದು ವಿವೇಕಾನಂದರು ಬಲವಾಗಿ ಪ್ರತಿಪಾದಿ ಸುತ್ತಿದ್ದರು. ಆದರೆ ಇವತ್ತು ಅದೇ ವೈದಿಕ ಶಕ್ತಿಗಳು ವಿವೇಕಾನಂದರನ್ನು ವಿಕೃತಗೊಳಿಸಿ ಅವರು ಆಡದಿದ್ದ ಮಾತನ್ನೆಲ್ಲಾ ಅವರ ಬಾಯಲ್ಲಿ ಹೇಳಿಸಿ ಅವರ ವ್ಯಕ್ತಿತ್ವ ವನ್ನೇ ವಿಕಾರಗೊಳಿಸುತ್ತಿವೆ.

ಇಂದಿನ ಹಿಂದೂ ಧರ್ಮದಲ್ಲಿ ಜಾತಿ, ಅಸ್ಪೃಶ್ಯತೆ, ಅಸಮಾನತೆಗಳ ಹೊರತಾಗಿ ಬೇರೆನಿದೆ? ಹಾಗೆಂದ ಕೂಡಲೇ ಭೈರಪ್ಪ ಅವರಂಥವರು 'ಹಿಂದೂ ಧರ್ಮ'ದ ಆಧ್ಯಾತ್ಮಿಕ ಮುಖವನ್ನು ತೋರಿಸಲಾರಂಭಿಸುತ್ತಾರೆ. ಆದರೆ ಇವರು ತೋರಿಸುವ ಆಧ್ಯಾತ್ಮಿಕ ಮುಖ ಭಾರತೀಯ ರೆಲ್ಲರ ಆಧ್ಯಾತ್ಮಿಕ ಧಾರೆಯದ್ದಲ್ಲ. ಅದು ಕೇವಲ ವೈದಿಕ ಧರ್ಮದ್ದು. ಅದರಲ್ಲಿ ಸರ್ವಜನರ ಸಮಾನತೆ ಇಲ್ಲ. ಭೈರಪ್ಪನವರು ಹೇಳುವ ಅಂತರ್ಮುಖಿ ಸಾಧನೆ ವ್ಯಕ್ತಿಗತ ಔನ್ನತ್ಯವೇ ಹೊರತು ಸಮುದಾಯದ ಕಲ್ಯಾಣ ಕುರಿತ ದ್ದಲ್ಲ. ವ್ಯಕ್ತಿ ಕಂಡ ಜ್ಞಾನದ ಬೆಳಕನ್ನು ಸಮಾಜದ ಹಿತಕ್ಕೆ ಬಳಸಿದವರು ಬುದ್ಧ-ಬಸವ-ಅಲ್ಲಮರು ಮಾತ್ರ, ಕಾರುಣ್ಯ ಮತ್ತು ಸಮಾನತೆಯನ್ನು ಜಗತ್ತಿಗೇ ಉಣಿಸಿ, ಪ್ರತಿಯೊ ಬ್ಬರ ನೋವಿಗೂ ಸ್ಪಂದಿಸಿ ಅವರಿಗೆ ಬದುಕಿನ ಔನ್ನತ್ಯ ವನ್ನು ತೋರಿಸಿಕೊಟ್ಟವರೂ ಅವರೇ. ಬಹುಶಃ ವೈದಿಕ ರಿಗೆ, ಮತ್ತು ಈಗ ತಮ್ಮನ್ನು ತಾವೇ ಮೇಲ್ಜಾತಿಯವ ರೆಂದು ಕರೆದುಕೊಳ್ಳುತ್ತಿರುವರಿಗೆ ಹಿಂದೂ ಧರ್ಮ ದಲ್ಲಿ ಅದ್ಭುತವಾದದ್ದೇನಾದರೂ ಕಾಣಿಸುತ್ತಿರಬಹುದು. ಆದರೆ ಈ ನಾಡಿನ ದಲಿತರಿಗೆ, ಆದಿವಾಸಿಗಳಿಗೆ, ತಳಸಮುದಾಯ ದವರಿಗೆ, ಅಲ್ಲಿ ಜಾತಿ, ಅಸ್ಪೃಶ್ಯತೆ, ಅಸಮಾನತೆ, ಅಪಮಾನ ಗಳ ಹೊರತಾಗಿ ಬೇರೇನೂ ಕಾಣಿಸುತ್ತಿಲ್ಲ.

ಮತಾಂತರ ವಿರುದ್ಧ ಮಾತಾನಾಡುತ್ತಿರುವವರಿಗೆಲ್ಲಾ ತಿಳಿಯದ ಸತ್ಯ ಒಂದು ಇದೆ. ಅದು ಹಸಿವಿಗಿಂತ ಘೋರವಾದ ಅಸ್ಪೃಶ್ಯತೆ. ಅದನ್ನು ಅನುಭವಿಸಿದವರಿಗೆ ಮಾತ್ರ ಅದರ ಕ್ರೌರ್ಯ ಅರ್ಥವಾಗುತ್ತದೆ. ಹಸಿವನ್ನು ಬೇಕಾದರೆ ಒಬ್ಬ ವ್ಯಕ್ತಿ ಸಹಿಸಿಕೊಳ್ಳಬಹುದು. ಆದರೆ ಅಸ್ಪೃ ಶ್ಯತೆಯನ್ನಲ್ಲ. ನಾಯಿ, ನರಿ, ಹಂದಿ, ಕಾಗೆ, ಗೂಬೆಗ ಳನ್ನೆಲ್ಲಾ ದೇವರೆಂದು ಪೂಜಿಸಿ ಗರ್ಭ ಗುಡಿಯಲ್ಲಿಟ್ಟು ಕೊಳ್ಳುವ ಹಿಂದೂಗಳು ತಮ್ಮಂತೆ ರಕ್ತ ಮಾಂಸ ತುಂಬಿ ಕೊಂಡಿರುವ ಸಹಮಾನವರನ್ನು ಮುಟ್ಟಿಸಿಕೊಳ್ಳಲು ಆಗ ದವರೆಂದು ದೂರವಿಡುವ ಅಮಾನವೀಯ ಬರ್ಬರತೆ ಜಗತ್ತಿನ ಬೇರೆಲ್ಲೂ ಕಂಡು ಬರುವುದಿಲ್ಲ.

ಅನ್ನ ತಿನ್ನುವ ಬಾಯಲ್ಲಿ ಹೇಲು ತಿನ್ನಿಸುವ ಧರ್ಮವನ್ನು ಧರ್ಮವೆಂದು ಕರೆಯುವವರಿಗೆ ಮನುಷ್ಯ ರೆನ್ನಲು ಸಾಧ್ಯವೇ? ಚಿಂತಿಸುವ ಮನಸ್ಸಿದ್ದವರು, ಅಂತಃ ಕರಣ ಉಳ್ಳವರು ಇದಕ್ಕೆ ಉತ್ತರಿಸಬೇಕು. □

ಶ್ವೇತ ಭವನದಲ್ಲಿ ಒಬಾಮ

(೨೭ನೇ ಪುಟದಿಂದ)

ಯನ್ನು ಸುಧಾರಿಸುವುದು ಸಾಧ್ಯವಾಗುವುದಿಲ್ಲವಾದ್ದರಿಂದ ಈ ಅಂಶ ಕೂಡ ಅವರ ಗಮನದಲ್ಲಿದೆ.

ಈ ಸದ್ಯಕ್ಕೆ ಆರ್ಥಿಕ ಬಿಕ್ಕಟ್ಟನ್ನೆದುರಿಸಲು ಅಮೆರಿ ಕಾದ ಅತ್ಯುತ್ತಮ ಆರ್ಥಿಕ ತಜ್ಞರ ತಂಡವನ್ನು ಒಬಾಮ ಸಲಹೆಗಾರರನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಮೊದಲ ನೆಯದಾಗಿ, ಸಾಲದ ಹೊರೆಯನ್ನು ಹಗುರವಾಗಿಸುವುದಕ್ಕೆ ಅಗತ್ಯವಾದ ಕ್ರಮವನ್ನು ಕೈಗೊಳ್ಳುವುದರ ಜೊತೆಗೆ ಆದಷ್ಟು ಬೇಗ ಉದ್ಯೋಗದಲ್ಲಿ ಹೆಚ್ಚಳವನ್ನು ಸೃಷ್ಟಿಸುವುದರತ್ತ ಈ ತಂಡ ಯೋಚಿಸುತ್ತಿದೆ. ಕಡಿಮೆ ಕೂಲಿ ಪಡೆಯುವ ವಲ ಯದ ಕಾರ್ಮಿಕ ವರ್ಗಕ್ಕೆ ಅನುಕೂಲವಾಗುವಂತೆ ಸಹ ಕಾರಿ ಬೆಲೆಯಲ್ಲಿ ಪ್ರಾಥಮಿಕ ಅಗತ್ಯಗಳ ಪೂರೈಕೆಗೆ ಪ್ರಾಮು ಖ್ಯತೆ ದೊರಕಲಿದೆ. ಆರ್ಥಿಕ ತಜ್ಞ ಪೌಲ್ ಕ್ರಗ್‌ಮನ್ ಪ್ರಕಾರ, "ಈ ರೀತಿಯ ತಾತ್ಕಾಲಿಕ ಕುಸಿತ ಹಾಗೂ ಆರ್ಥಿಕ ಹಿನ್ನೆಡೆ ಅನೇಕ ಬಾರಿ ಪ್ರಗತಿಶೀಲ ಯೋಜನೆ ಯತ್ತ ಸಾಗುವುದಕ್ಕೆ ಒಳ್ಳೆಯ ತಳಪಾಯವನ್ನು ಹಾಕು ತ್ತದೆ. ಈ ಹಿಂದೆ ಇದ್ದ Conservative idealogy ನಿರ್ದಿಷ್ಟ ವರ್ಗ, ಹಣವನ್ನು ಕ್ರೋಢೀಕರಿಸುವುದಕ್ಕೆ ಸಾಧ್ಯ ವಾಗುವಂಥ ವ್ಯವಸ್ಥೆಯನ್ನು ಸೃಷ್ಟಿಸಿತು. ಆದರೆ, ಫ್ರಾಂಕ್ಲಿನ್ ಡಿಲ್ಯಾನೊ ರೂಸ್‌ವೆಲ್ಟ್‌ರಂತೆ ನೈತಿಕತೆ ಮತ್ತು ಮೌಲ್ಯಾ ತ್ಮಕತೆಯ ಆಧಾರದ ಮೇಲೆ ಆರ್ಥಿಕತೆಯ ಸಮಾನ ಹಂ ಚಿಕೆಗೆ ಪ್ರೋತ್ಸಾಹಿಸುವ ಮೂಲಕ ನಿಧಾನವಾಗಿ ಆರ್ಥಿಕ ವ್ಯವಸ್ಥೆಯನ್ನು ಹದಕ್ಕೆ ತರುವುದು ಸಾಧ್ಯ."

ಆದರೆ, ಅಮೇರಿಕಾದ ಆರ್ಥಿಕ ತಜ್ಞರಾದ ಫರ್ಗು ಸನ್ ಹೇಳುವುದು, ಒಬಾಮ ತೀವ್ರವಾದ ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡಿದ್ದಾರೆ. ಈ ರೀತಿಯ ಆರ್ಥಿಕ ಕುಸಿತವನ್ನು ನಿರ್ವಹಿಸುವುದಕ್ಕೆ ತೊಡಕಾಗಿರುವ ಅನೇಕ ಸಂಗತಿಗಳಿವೆ. ಒಂದು, ಅಂತರರಾಷ್ಟ್ರೀಯ ಆರ್ಥಿಕ ಕ್ಷೇತ್ರದಲ್ಲೇ ಅನೇಕ ರೀತಿಯ ಏರು ಪೇರುಗಳುಂಟಾಗುತ್ತಿರುವುದರಿಂದ, ಒಂದು ನಿರ್ದಿಷ್ಟ ಆರ್ಥಿಕ ನೀತಿಗೆ ಅಂಟಿಕೊಳ್ಳುವುದು ಕಷ್ಟ ವಾಗುತ್ತದೆ. ಎರಡು, ವಿದೇಶಿಯರು ಅಮೆರಿಕಾದಲ್ಲಿ ಬಂಡ ವಾಳ ಹೂಡುವುದಕ್ಕೆ ಹಿಂದೇಟು ಹಾಕುತ್ತಿರುವುದು ಒಂದು ಬಲವಾದ ಹೊಡೆತ ಆಗಬಹುದು. ಮೂರು, ಡಾಲರ್‌ನ ಬೆಲೆ ಕೂಡ ಇಳಿಮುಖವಾಗುತ್ತಿರುವುದು ಸಮ ಸ್ಯೆಯನ್ನು ಜಟಿಲಗೊಳಿಸುತ್ತದೆ.

*

ಒಬಾಮರ ಆಯ್ಕೆ, ಭಾರತದ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರುತ್ತದೆ ಎನ್ನುವುದರ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿದೆ.

ಮೊದಲನೆಯದಾಗಿ, ಒಬಾಮ ಹೊರಗುತ್ತಿಗೆ ಯನ್ನು ಸ್ಥಗಿತಗೊಳಿಸಬಹುದೆಂಬ ಆಲೋಚನೆ ಇಲ್ಲಿನ ಐಟಿ ಬಿಟಿ ಸೆಕ್ಟರ್‌ಗಳಲ್ಲಿ ಆತಂಕವನ್ನು ಉಂಟುಮಾಡಿದೆ. ಆದರೆ ಒಬಾಮ ಹೊರಗುತ್ತಿಗೆಯನ್ನು ಅಷ್ಟು ಸುಲಭವಾಗಿ ಸ್ಥಗಿತಗೊಳಿಸುವುದು ಸಾಧ್ಯವಿಲ್ಲ ಎನ್ನುವುದಕ್ಕೆ ಕಾರಣಗ ಳಿವೆ. ಅಮೆರಿಕಾ ಹೊರಗುತ್ತಿಗೆಯನ್ನು ಬಿಟ್ಟು ತನ್ನ ನೌಕರ ರಿಂದಲೇ ಕೆಲಸ ಮಾಡಿಸಿಕೊಂಡರೆ, ದೇಶೀಯ ಉತ್ಪನ್ನ ಗಳ ಬೆಲೆ ತೀವ್ರವಾಗಿ ಹೆಚ್ಚುತ್ತದೆ. ಅಮೆರಿಕಾದಲ್ಲಿ ಮಾನವ ಸಂಪನ್ಮೂಲ, ಅದೂ ಕನಿಷ್ಟ ದರದಲ್ಲಿ ಸಿಗುವುದಿಲ್ಲ. ಸಾಲದಕ್ಕೆ ಅಮೆರಿಕಾದಲ್ಲಿ ದೊಡ್ಡ ಪ್ರಮಾಣದಲ್ಲಿ ತಂತ್ರ ಜ್ಞಾನ, ಸಂಪನ್ಮೂಲಗಳ ಕೊರತೆ ಇರುವುದರಿಂದ ಹೊರ ಗುತ್ತಿಗೆ ನಿಲ್ಲುವುದಿಲ್ಲ ಎಂದು NASSCOM ನ ಅಧ್ಯಕ್ಷರಾದ ಸೋಮ್ ಮಿತ್ತಲ್ ಅಭಿಪ್ರಾಯವಾಗಿದೆ.

ಇನ್ನು ವಿದೇಶಾಂಗ ನೀತಿಗೆ ಬಂದಾಗ, ಬುಷ್‌ರ ಂತೆ ಆತ್ಮೀಯತೆಯನ್ನು ಒಬಾಮ ವ್ಯಕ್ತಪಡಿಸದಿದ್ದರೂ, ಇಂಡೊ-ಯುಸ್ ಸಂಬಂಧಕ್ಕೆ ಬಾಧಕವಂತು ಬರಲಾ ರದು. ಏಕೆಂದರೆ, ಇದರ ತಳಪಾಯ ಕ್ಲಿಂಟನ್‌ರ ಕಾಲ ದಲ್ಲಿ ಕಟ್ಟಿದ್ದು. ಆದ್ದರಿಂದ ಒಬಾಮ ಅಷ್ಟು ನಿಷ್ಠುರರಾಗಲಾ ರರು. ಆದರೆ C.T.B.T. (Comprehensive Test Ban Treaty) ಯನ್ನು ಸಹಿ ಮಾಡುವುದಕ್ಕೆ ಒತ್ತಡ ಬರಬಹುದು. ಆದರೂ, ಅದು ಭಾರತದ ನ್ಯೂಕ್ಲಿಯರ್ ವ್ಯಾಪಾರ-ವಹಿವಾಟಿಗೆ ಧಕ್ಕೆಯನ್ನು ಉಂಟುಮಾಡುವು ದಿಲ್ಲ. ಶೀಘ್ರವಾಗಿ ಅಭಿವೃದ್ಧಿಯನ್ನು ಸಾಧಿಸುತ್ತಿರುವ ಭಾರತ ಮತ್ತು ಚೀನಾಕ್ಕಿಂತ, ಪಾಕಿಸ್ತಾನ ಒಬಾಮರಿಗೆ ಪ್ರಿಯವಾಗುತ್ತದೆ. ಆದರೆ ಪಾಕಿಸ್ತಾನದ ಉಗ್ರಗಾಮಿ ಚಟು ವಟಿಕೆಗಳ ಬಗ್ಗೆ ಒಬಾಮ ಕಟ್ಟೆಚ್ಚರ ನೀಡಿರುವುದು ಭಾರ ತಕ್ಕೆ ಅನುಕೂಲಕರವಾಗಬಲ್ಲದು. ಜಮ್ಮು ಕಾಶ್ಮೀರದ ಸಮ ಸ್ಯೆಗೆ ಒಬಾಮ ತಲೆ ಹಾಕುತ್ತಿರುವುದು ಕೂಡ ಭಾರತಕ್ಕೆ ಇಷ್ಟವಾಗುತ್ತಿಲ್ಲ. ಏಕೆಂದರೆ, ಭಾರತಕ್ಕೆ ಇದು ತನ್ನ ಆಂತ ರಿಕ ಸಮಸ್ಯೆಯಾಗಿದೆ

ಭಾರತದ ಬಗ್ಗೆ ಅಮೇರಿಕಾದ ನೀತಿಯಲ್ಲಿ ಇಷ್ಟು ಒಳಸುಳಿಗಳಿದ್ದರೂ, ಈ ವಿಷಯವನ್ನೂ ಕಾದು ನೋಡ ಬೇಕಷ್ಟೆ.

*

ಕೊನೆಯದಾಗಿ, ಒಬಾಮರ ಗೆಲುವು ಒಂದು ಚಾರಿತ್ರಿಕ ಘಟನೆ ಸರಿ; ಇದರಿಂದ ಎತ್ನಿಕ್ ಸಮುದಾಯ ಗಳಿಗೆ ಹೊಸ ಆತ್ಮವಿಶ್ವಾಸ ಕೂಡ ಬಂದಿದೆ. ಆದರೆ, ಈ ವಿಜಯಕ್ಕೆ ಅವರೊಬ್ಬರೇ ವಾರಸುದಾರರಲ್ಲ. ಅಮೇರಿ ಕಾದ ಚರಿತ್ರೆಯಲ್ಲಿ ಕರಿಯರ ವಿಮೋಚನೆಯ ಹೋರಾಟ ಮತ್ತು ನಾಗರಿಕ ಹಕ್ಕುಗಳ ಚಳುವಳಿಯ ಒಂದು ದೀರ್ಘ ಇತಿಹಾಸ ಇದೆ. ಅದಕ್ಕಾಗಿ ಮಾಲ್ಕಂ x ಮತ್ತು ಮಾರ್ಟಿನ್ ಲೂಥರ್ ಕಿಂಗ್ ಜೂ. ಅಂಥವರು ಜೀವ ತೆತ್ತಿದ್ದಾರೆ. ರೋಸಾ ಪಾರ್ಕ್‌ಳ ಪ್ರತಿಭಟನೆಗೆ ಬೆಂಬಲ ನೀಡುವುದಕ್ಕಾಗಿ, ಸಾವಿರಾರು ಜನ ತಮ್ಮ ದೈನಂದಿನ ಸಣ್ಣ ಸಣ್ಣ ಸುಖಗಳನ್ನು ತ್ಯಾಗ ಮಾಡಿದ್ದಾರೆ. ಅಸಂಖ್ಯಾತ ಜನ ಹೇಳ ಹೆಸರಿಲ್ಲದೆ ಹೋಗಿದ್ದಾರೆ. ಒಬಾಮ ಈ ತಾತ್ವಿಕ ತೆಯ ಉತ್ಪನ್ನ ಅಂತು ಖಂಡಿತಾ ಅಲ್ಲ, ಆದರೆ ಇದರಿ ಂದ ಪ್ರತಿಫಲ ಪಡೆದ ಅದೃಷ್ಟಶಾಲಿಗಳಲ್ಲೊಬ್ಬರು. ಯಾವ ಕರಿಯರು ಗರಿಷ್ಟ ಸಂಖ್ಯೆಯಲ್ಲಿ ಬಂದು ಒಬಾಮಾಗೆ ಮತ ಚಲಾಯಿಸಿದರೋ, ಅವರ ಪರವಾಗಿ ಎಷ್ಟರ ಮಟ್ಟಿಗೆ ಒಬಾಮ ನಿಲ್ಲುತ್ತಾರೊ ಗೊತ್ತಿಲ್ಲ. ಒಬಾಮರ ಅಸಾಧಾರಣ ಮಾತುಗಾರಿಕೆ, ಆತ್ಮವಿಶ್ವಾಸ ಇಂದು ಜಗತ್ತಿನ ಮೆಚ್ಚುಗೆಗಳಿಸಿದೆ. ಆದರೆ, ಇದೇ ಒಬಾಮಾ ಕಷ್ಟಸಾಧ್ಯ ವಾಗುವಂಥ ಆರ್ಥಿಕ ಹಾಗೂ ಸಾಮಾಜಿಕ ಸಮಸ್ಯೆಗಳು ಅಮೆರಿಕಾದಲ್ಲಿವೆ. ಒಬಾಮಾ ಜನರ ನಿರೀಕ್ಷೆಯ ಮಟ್ಟ ತಲುಪಲಾರದೆ ಹೋದರೆ, ಈಗ ಅವರ ಸುತ್ತ ಆವರಿಸಿ ರುವ ಪ್ರಭಾವಲಯ ನಿಧಾನವಾಗಿ ಕರಗಿ ಹೋಗುತ್ತದೆ ಎನ್ನುವುದೂ ನಿಜ.

ಅಥವಾ ಜನಾಂಗೀಯ ದ್ವೇಷದಂಥ ದಳ್ಳುರಿಯನ್ನು ಇನ್ನೂ ಆರಿಸದಂತೆ ಉಳಿಸಿಕೊಂಡಿರುವ ಮನಸ್ಸುಗಳ ಅವರ ಹತ್ಯೆಗೂ ಯೋಚಿಸಬಹುದು. ಆಗ ಒಬಾಮ ಸೃಷ್ಟಿ ಸಿದ ಇತಿಹಾಸ, ದಿಗ್ಭ್ರಮೆಯಾಗಿ ಕೊನೆಗೊಳ್ಳಬಹುದು. ಇದು ಇತ್ತೀಚಿನ ಸುದ್ದಿ. □

ಮುಖ್ಯವಾಹಿನಿ ಅಭಿವೃದ್ಧಿ ಮೀಮಾಂಸೆಗೆ ಪ್ರತಿರೋಧವಾಗಿ ಬಂದ ಚಿಪ್ಕೋ ಚಳವಳಿಯ ಸರಳಾ ಬೆಹನ್ ಮಾರುಕಟ್ಟೆ ಮನುಷ್ಯನನ್ನು ಸೆರೆಯಾಳಾಗಿಸಿರುವುದನ್ನು ಕಂಡರೆ ಮನಮೋಹನ್ ಮಾರುಕಟ್ಟೆಯನ್ನೇ ಪರಿಹಾರವನ್ನಾಗಿ ಕಾಣುತ್ತಾರೆ. ಸುಧಾರಣಾ ಯುಗದ ಸರಕಾರಿ ನೀತಿಗಳು ಪ್ರಧಾನಿ ಸಿಂಗ್‌ರ ಮಾತುಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿವೆ. ಇಲ್ಲಿ ಎರಡು ಅಂಶಗಳನ್ನು ಗಮನಿಸಬೇಕು. ಮೊದಲನೆಯದಾಗಿ ಅವರು ಮಾರುಕಟ್ಟೆಯನ್ನು ಪರಿಹಾರಗಳ ಸಂಜೀವಿನಿಯಂತೆ ಕಾಣುತ್ತಾರೆ. ಸಮಸ್ಯೆಗಳನ್ನು ಅದು ಬಗೆಹರಿಸಬಲ್ಲದು ಎಂದು ಅಗಾಧ ವಿಶ್ವಾಸವನ್ನು ಸಿಂಗ್ ಹೊಂದಿದ್ದಾರೆ. ಮಾರುಕಟ್ಟೆಯ ಏಕೀಕರಣದ (ಭಾರತದ ಆರ್ಥಿಕತೆಯನ್ನು ವಿಶ್ವ ಆರ್ಥಿಕತೆ ಜೊತೆ ಜೋಡಿಸಲು ದೇಶೀ ಮಾರುಕಟ್ಟೆ ಅನುಕೂಲಗೊಳಿಸುವುದು) ಬಗ್ಗೆ ಹೇಳುತ್ತಲೇ 'ಸ್ಥಳೀಯ ಮಾರುಕಟ್ಟೆ ಅಭಿವೃದ್ಧಿ' ಕುರಿತು ಕೂಡ ಮಾತನಾಡಬಲ್ಲರು ಎನ್ನುವುದು ಎರಡನೇ ಅಂಶ.

ಶ್ರೀಶ ಉಡುಪ

'ನನ್ನ ಬಾಲ್ಯದ ಅನುಭವಗಳು ಕಾನೂನು ನ್ಯಾಯಪರವಲ್ಲ ... ...ನು ನನ್ನಲ್ಲಿ ಮೂಡಿಸಿದವು. ರಾಜ್ಯವನ್ನು ಆಳುವ ತತ್ತ್ವ ... ...ನುಷ್ಯತ್ವವನ್ನು ಆಳುವ ತತ್ತ್ವಗಳಿಗಿಂತ ಉನ್ನತವಾದವಲ್ಲ. ಜನರಿಗೆ ಸ್ಪಂದಿಸದ ರಾಜ್ಯ ವ್ಯವಸ್ಥೆ ಒಂದು ಕಠೋರ ವ್ಯಂಗ್ಯ. ಖಾಸಗೀ ...ತ್ತು ಸಾರ್ವಜನಿಕ ನೈತಿಕತೆ ನಡುವಿನ ಭೇದ ಶೋಷಣೆ, ಅನ್ಯಾಯ ...ಗೂ ಸಂಕಟದ ಮೂಲ. ರೊಟ್ಟಿ ಜೇಬಿನಲ್ಲಿ ಹಣವಿದ್ದವ ಮಾತ್ರ ಹೊಂದಬಹುದಾದ ಹಕ್ಕಲ್ಲ ಎನ್ನುವುದು ಭಾರತದ ಪ್ರತಿಯೊಂದು ಮಗುವಿಗೂ ಗೊತ್ತಿದೆ. ಹಸಿದ ಹೊಟ್ಟೆಯ ಎಲ್ಲರ ಮೂಲಭೂತ ಹಕ್ಕು ಅದು. ಕುಟುಂಬದೊಳಗೆ ಚಾಲ್ತಿಯಲ್ಲಿರುವ ಈ ಹಕ್ಕು ಸಾಮಾಜಿಕ ಹಂತದಲ್ಲಿ ಕಾಣೆಯಾಗುತ್ತಿದೆ. ಅನಂತರ ಮಾರುಕಟ್ಟೆಯ ನೀತಿ ಮನುಷ್ಯನನ್ನು ಆಳುತ್ತದೆ. ಆತ ಅದರ ಸೆರೆಯಾಳಾಗುತ್ತಾನೆ.'
–ಸರಳಾ ಬೆಹನ್

'ವಿಜ್ಞಾನ ಮತ್ತು ತಂತ್ರಜ್ಞಾನದ ಕೊಡುಗೆಯಿಂದ ಭಾರತದ ರೈತ ನಿಜಕ್ಕೂ ಅನುಕೂಲ ಪಡೆದುಕೊಂಡಿದ್ದಾನೆ. ಮೊದಲ ಹಸಿರು ಕ್ರಾಂತಿಯಿಂದ ಹೊರಹೊಮ್ಮಿದ ತಂತ್ರಜ್ಞಾನ ಮತ್ತು ಕಾರ್ಯ ತಂತ್ರಗಳು ತಮ್ಮ ಸಹಜ ಕೊನೆಯನ್ನು ಕಂಡಿವೆ. ಇದಕ್ಕೆ ಎರಡನೇ ಹಸಿರುಕ್ರಾಂತಿಯ ಅಗತ್ಯ ಇದೆ. ಆಹಾರೇತರ ಬೆಳೆಗಳಲ್ಲಿ, ತೋಟಗಾರಿಕೆಯಲ್ಲಿ, ಹೊಸ ಸಸ್ಯ ಪ್ರಭೇದಗಳಲ್ಲಿ ಈ ಕ್ರಾಂತಿಯ ಅಗತ್ಯ ಇದೆ.

ವ್ಯಾಪಾರಕ್ಕೆ ಹಾಗೂ ಸರಕು, ಸೇವೆ ಮತ್ತು ಜನರ ಸಂಚಾರಕ್ಕೆ ಇರುವ ಆಂತರಿಕ ಅಡೆತಡೆಗಳನ್ನು ನಿವಾರಿಸಿ ನಾವು ಏಕಮಾತ್ರ ಮಾರುಕಟ್ಟೆಯನ್ನು ಸೃಷ್ಟಿಸುತ್ತಾ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸಲು, ಸ್ಥಳೀಯ ಪರಿಹಾರಗಳನ್ನು ಹೊಂದುವುದಕ್ಕಾಗಿ ಸ್ಥಳೀಯ ಮಾರುಕಟ್ಟೆಗಳ ಅಭಿವೃದ್ಧಿಯನ್ನು ನಾವು ಸಾಧ್ಯಗೊಳಿಸಬೇಕು.'

–ಪ್ರಧಾನಿ ಮನಮೋಹನಸಿಂಗ್ ಕೃಷಿಯ ಬಗ್ಗೆ ಭಾರತೀಯ ವಿಜ್ಞಾನ ಸಮ್ಮೇಳನದ ೯೩ನೆಯ ಅಧಿವೇಶನದಲ್ಲಿ ಆಡಿದ ಮಾತುಗಳಿಂದ ಸಮಕಾಲೀನ ವೈರುಧ್ಯದ ಎರಡು ಮಾದರಿಗಳು ಇಲ್ಲಿ ಸ್ಪಷ್ಟವಾಗಿ ವ್ಯಕ್ತಗೊಂಡಿವೆ. ಮುಖ್ಯವಾಹಿನಿ ಅಭಿವೃದ್ಧಿ ಮೀಮಾಂಸೆಗೆ ಪ್ರತಿರೋಧವಾಗಿ ಬಂದ ಚಿಪ್ಕೋ ಚಳವಳಿಯ ಸರಳಾ ಬೆಹನ್ ಮಾರುಕಟ್ಟೆ ಮನುಷ್ಯನನ್ನು ಸೆರೆಯಾಳಾಗಿಸಿರುವುದನ್ನು ಕಂಡರೆ ಮನಮೋಹನ್ ಮಾರುಕಟ್ಟೆಯನ್ನೇ ಪರಿಹಾರವನ್ನಾಗಿ ಕಾಣುತ್ತಾರೆ. ಸುಧಾರಣಾ ಯುಗದ ಸರಕಾರಿ ನೀತಿಗಳ ತರ್ಕ ಪ್ರಧಾನಿ ಸಿಂಗ್‌ರ ಮಾತುಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿವೆ. ಇಲ್ಲಿ ಎರಡು ಅಂಶಗಳನ್ನು ಗಮನಿಸಬೇಕು. ಮೊದಲನೆಯದಾಗಿ ಅವರು ಮಾರುಕಟ್ಟೆಯನ್ನು ಪರಿಹಾರಗಳ ಸಂಜೀವಿನಿಯಂತೆ ಕಾಣುತ್ತಾರೆ. ಎಲ್ಲಾ ಸಮಸ್ಯೆಗಳನ್ನು ಅದು ಬಗೆಹರಿಸಬಲ್ಲದು ಎಂದು ಅಗಾಧ ವಿಶ್ವಾಸವನ್ನು ಸಿಂಗ್ ಹೊಂದಿದ್ದಾರೆ. ಮಾರುಕಟ್ಟೆಯ ಏಕೀಕರಣ (ಭಾರತದ ಆರ್ಥಿಕತೆಯನ್ನು ವಿಶ್ವ ಆರ್ಥಿಕತೆಯ ಜೊತೆ ಜೋಡಿಸಲು ದೇಶೀ ಮಾರುಕಟ್ಟೆಗಳನ್ನು ವಿಶ್ವ ಮಾರುಕಟ್ಟೆಯ ಜೊತೆ ಅನುಕೂಲಗೊಳಿಸುವುದು)ದ ಬಗ್ಗೆ ಹೇಳುತ್ತಲೇ ಅದೇ ಉಸಿರಿನಲ್ಲಿ 'ಸ್ಥಳೀಯ ಮಾರುಕಟ್ಟೆಗಳ ಅಭಿವೃದ್ಧಿ'ಯ ಕುರಿತು ಕೂಡ ಮಾತನಾಡಬಲ್ಲರು ಎನ್ನುವುದು ಎರಡನೇ ಅಂಶ. ಮಾರ್ಕೆಟ್ಟನ್ನೆ, ಕೃಷಿ ಸಂಬಂಧಿ ಸಮಸ್ಯೆಗಳಿಗೂ ಪರಿಹಾರ ಎಂದೇ ಪರಿಗಣಿಸಿದ ಪರಿಣಾಮವಾಗಿ ಕೃಷಿ ಮಾರ್ಕೆಟ್–ಸ್ಪಂದನಶೀಲತೆಯನ್ನು ಹೆಚ್ಚಿಸಿಕೊಂಡಿದೆ. ಈ ಸ್ಪಂದನ ಶೀಲತೆ ಹೆಚ್ಚಾದಂತೆ ಮಾರ್ಕೆಟ್ ಕುಳಗಳು ಕೃಷಿಯನ್ನು ... ... ಹೆಚ್ಚಾದಂತೆ ಹಾಗೂ ಮಾರ್ಕೆಟ್‌ನ ಅಪಾಯಗಳಿಗೆ ಕೃಷಿ ಹೆಚ್ಚು ಪಕ್ಕಾಗುತ್ತದೆ. ಪ್ರಸಕ್ತ ಕೃಷಿ ಬಿಕ್ಕಟ್ಟಿನ ಮೂಲ ಇಲ್ಲಿದೆ.

ಚಾರಿತ್ರಿಕವಾಗಿ ಕೃಷಿಯ ಮಾರ್ಕೆಟ್–ಸ್ಪಂದನಶೀಲತೆ ಆರಂಭಗೊಂಡಿದ್ದು ಪ್ಲಾಂಟೇಷನ್ ವ್ಯವಸಾಯದಿಂದ. ಇದರ ಪರಿಣಾಮವಾಗಿ ಹುಟ್ಟಿಕೊಂಡ ಕೃಷಿ ಬಿಕ್ಕಟ್ಟನ್ನು ಮೊದಲು ಮೊದಲು ಎದುರಿಸಿದ್ದೂ ಪ್ಲಾಂಟೇಷನ್ ಬೆಳೆಗಳೇ. ಈ ಅನುಭವವನ್ನು ಸ್ವಲ್ಪ ವಿವರಿಸಬೇಕಾಗುತ್ತದೆ. ಅದು ಭಾರತೀಯ ಕೃಷಿ ಮಾರ್ಕೆಟ್–ಸ್ಪಂದನಶೀಲತೆಯನ್ನು ಪಡೆದುಕೊಂಡ ವಿವರಣೆಯೂ ಆಗುತ್ತದೆ.

ಬೈ–ಟೂ ಕಾಫಿ : ಅರ್ಧ...ಮತ್ತು ಅರ್ಧ:

ಐತಿಹಾಸಿಕವಾಗಿ, ಪ್ಲಾಂಟೇಷನ್ ಕೃಷಿ ವಸಾಹತುಶಾಹಿಯ ಕೊಡುಗೆ. ರಫ್ತು ಆಧಾರಿತ ಬೃಹತ್ ಎಸ್ಟೇಟ್ ವ್ಯವಸ್ಥೆಗಳನ್ನು ಇಲ್ಲಿ ಆರಂಭಿಸಿದ್ದು ಐರೋಪ್ಯ ಕಂಪನಿಗಳು. ಆದರೆ ಇವುಗಳ ಒಡೆತನ ಕ್ರಮೇಣ ಭಾರತೀಯರಿಗೆ ಸಿಗುವುದರ ಜೊತೆ ಇವು ಬಹುಪಾಲು ಸಣ್ಣ ಹಿಡುವಳಿಗಳಾಗಿಯೂ ಬದಲಾದವು. ಮುಖ್ಯವಾಗಿ ಕಾಫಿ, ಟೀ, ರಬ್ಬರ್ ಹಾಗೂ ಏಲಕ್ಕಿ ಬೆಳೆಯಲಾಗುವ ಭಾರತದ ಪ್ಲಾಂಟೇಷನ್ ಕೃಷಿಯ ಒಟ್ಟು ವಿಸ್ತಾರದಲ್ಲಿ ೬೭.೭೪ ಪ್ರತಿಶತ ದಕ್ಷಿಣ ಭಾರತದಲ್ಲಿಯೇ ಇದೆ. ೧೯೯೭ರ ಹೊತ್ತಿಗೆ ಶುರುವಾದ ಬಿಕ್ಕಟ್ಟಿನಿಂದಾಗಿ ೨೦೦೩ರಲ್ಲಿ ಟೀ ಹಾಗೂ ರಬ್ಬರ್‌ಗಳ ಬೆಲೆ ಪ್ರತಿಶತ ೨೫ರಷ್ಟು ಹಾಗೂ ಕಾಫಿಯ ಬೆಲೆ ಪ್ರತಿಶತ ೫೭ರಷ್ಟು (೧೯೯೦ರ ಬೆಲೆಗೆ ಹೋಲಿಸಿದಾಗ) ಕುಸಿತವನ್ನು ಕಂಡಿದ್ದವು. ಅಂತರರಾಷ್ಟ್ರೀಯ ಕಾಫಿ ಒಕ್ಕೂಟ್ಟ ಹಾಗೂ ವಿಶ್ವ ಬ್ಯಾಂಕ್‌ಗಳೇ ಒಪ್ಪಿಕೊಂಡ ಹಾಗೆ ಕಾಫಿಯ ಈ ಬೆಲೆ ಕಳೆದ ನೂರುವರ್ಷಗಳಲ್ಲಿ ದಾಖಲಾದ ಅತಿ ಕಡಿಮೆ ಬೆಲೆಯಾಗಿತ್ತು. ಇವು ಉತ್ಪಾದನಾ ವೆಚ್ಚದ ೬೦ ಪ್ರತಿಶತವನ್ನು ಪೂರೈಸುತ್ತಿರಲಿಲ್ಲ. ಇದು ವಿಶ್ವ ಕಾಫಿ ಆರ್ಥಿಕತೆಯ ಬಿಕ್ಕಟ್ಟಾಗಿತ್ತು.

ಕಾಫಿಯ ಮಾರುಕಟ್ಟೆ ಉದ್ದಕ್ಕೂ ಶೋಷಕ–ಶೋಷಿತರೆಂಬ ನೆಲೆಯ ವಿಶ್ವದ ವಿಘಟನೆಯನ್ನು ಪ್ರತಿನಿಧಿಸುತ್ತಲೇ ಬಂದಿದೆ. ಕಾಫಿ ನಿಜಕ್ಕೂ ತೃತೀಯ ಜಗತ್ತಿನ ಬೆಳೆ. ೭೦ ಪ್ರತಿಶತದಷ್ಟು ಬೆಳೆಯನ್ನು ಸಣ್ಣ ಹಿಡುವಳಿದಾರರೇ ಬೆಳೆಯುತ್ತಾರೆ. ಲ್ಯಾಟಿನ್ ಅಮೆರಿಕಾ ವಿಶ್ವ ಕಾಫಿಯ ೬೦% ರಷ್ಟು ಉತ್ಪಾದಿಸುತ್ತದೆ; ಏಷ್ಯಾ ೨೫% ಉತ್ಪಾದಿಸಿದರೆ ಉಳಿದ ೧೫% ಆಫ್ರಿಕಾದಿಂದ ಬರುತ್ತದೆ. ೨೦೦೩ರಲ್ಲಿ ಬ್ರೆಜಿಲ್ ವಿಶ್ವ ಕಾಫಿಯ ೩೦ ಪ್ರತಿಶತ ಉತ್ಪಾದಿಸಿತ್ತು. ವಿಯೆಟ್ನಾಂ ೧೧.೫ ಪ್ರತಿಶತ ಹಾಗೂ ಕೊಲಂಬಿಯಾ ೧೦.೫ ಪ್ರತಿಶತ ಉತ್ಪಾದಿಸಿದ್ದವು.

ಗ್ವಾಟೆಮಾಲಾ, ಉಗಾಂಡ ಹಾಗೂ ಇಂಡೋನೇಷ್ಯಾಗಳಿಗಿಂತ ನಂತರದ ಏಳನೆಯ ಸ್ಥಾನದಲ್ಲಿರುವ ಭಾರತ ವಿಶ್ವ ಕಾಫಿಯ ೪.೫ ಪ್ರತಿಶತವನ್ನು ಉತ್ಪಾದಿಸಿತ್ತು. ಜಾಗತಿಕ ಕಾಫಿಯ ೩.೫ ಪ್ರತಿಶತ ಹಾಗೂ ಭಾರತೀಯ ಉತ್ಪಾದನೆಯ ೭೦ ಪ್ರತಿಶತ ಕೊಡುಗೆ ಕರ್ನಾಟಕದ್ದು. ಕೇರಳ ೨೨%, ತಮಿಳುನಾಡು ೭% ಹಾಗೂ ಆಂಧ್ರಪ್ರದೇಶ ಮತ್ತು ಈಶಾನ್ಯ ಭಾರತ ೧% ಪಾಲನ್ನು ಹೊಂದಿವೆ.

ಕರ್ನಾಟಕದಲ್ಲಿ ಕಾಫಿಯನ್ನು ಮುಖ್ಯವಾಗಿ ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಜಿಲ್ಲೆಗಳಲ್ಲಿ ಬೆಳೆಯಲಾಗುತ್ತದೆ. ಕೇರಳದ ಬಹುಪಾಲು ಕಾಫಿ ವೈನಾಡ್‌ನಿಂದ ಬಂದರೆ ತಮಿಳುನಾಡಿನ ನೀಲಗಿರಿ ಜಿಲ್ಲೆ ರಾಜ್ಯದ ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿದೆ. ಇವೆಲ್ಲ ಪಶ್ಚಿಮ ಘಟ್ಟದಲ್ಲೇ ಬರುವ ಅಕ್ಕಪಕ್ಕದ ಜಿಲ್ಲೆಗಳು ಹಾಗೂ ಈ ಪ್ರದೇಶ, ಮುಖ್ಯವಾಗಿ ಕರ್ನಾಟಕ, ಕಾಫಿ ಮಾರುಕಟ್ಟೆಯಲ್ಲಿ ಮುಖ್ಯ ಪಾಲು ಪಡೆದಿದೆ ಎಂಬ ಅಂಶಗಳನ್ನು ಇಲ್ಲಿ ಗುರುತಿಸಿಕೊಳ್ಳಬೇಕು.

ಒಡೆತನಕ್ಕೆ ಕೇಡಿಲ್ಲವಾಗಿ–೪

ಕೊಂದವರುಳಿವರೆ?

ವಿಶ್ವದ ೪೦ ಪ್ರತಿಶತ ಜನ ಕಾಫಿ ಕುಡಿಯುತ್ತಾರೆ. ಪೆಟ್ರೋಲಿಯಂ ಹೊರತು ಪಡಿಸಿದರೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅತಿಹೆಚ್ಚು ಮಾರಾಟವಾಗುವ ಸರಕು ಕಾಫಿ. ವಿಶ್ವ ಕಾಫಿಯ ೮೦ ಪ್ರತಿಶತವನ್ನು ಸಾಮ್ರಾಜ್ಯಶಾಹಿ ರಾಷ್ಟ್ರಗಳೇ ಬಳಸಿಕೊಳ್ಳುತ್ತವೆ. ಪಶ್ಚಿಮ ಯುರೋಪು ೪೦%, ಯುಎಸ್‌ಎ೨೪% ಹಾಗೂ ಜಪಾನ್೧೦% ರಷ್ಟು ವಿಶ್ವಕಾಫಿಯನ್ನು ಬಳಸುತ್ತವೆ. ಉತ್ಪಾದನೆ ಹಾಗೂ ಬಳಕೆಯನ್ನು ಗಮನಿಸಿದಾಗ ಕಾಫಿಸಂಸ್ಕೃತಿ ತನ್ನನ್ನು ಯಾವುದರ ಪ್ರಾತಿನಿಧಿಕ ಸಂಕೇತವೆಂದು ಸ್ಥಾಪಿಸಿಕೊಳ್ಳುತ್ತದೆ ಎಂಬುದನ್ನು ವಿವರಿಸುವ ಅಗತ್ಯವಿಲ್ಲ. ಈಗ ಬೆಲೆಯ ಪ್ರಶ್ನೆ. ಕಾಫಿ ಮುಖ್ಯವಾಗಿ ರಫ್ತು ಉದ್ಧೇಶಿತ ಬೆಳೆ. ೮೦% ರಷ್ಟು ಉತ್ಪಾದನೆ ರಫ್ತುಗೊಳ್ಳುತ್ತದೆ.

೨೦೦೦ ದಿಂದ ೨೦೦೩ರ ವರೆಗಿನ ಕಾಫಿರಫ್ತಿನ ಮೌಲ್ಯ ಹಾಗೂ ಪ್ರಮಾಣವನ್ನು ನೋಡೋಣ.

ವರ್ಷ	ರಫ್ತುಪ್ರಮಾಣ	ರಫ್ತು ಮೌಲ್ಯ
೨೦೦೦	೨.೫೩ಲ.ಟನ್	೧೧೬೮೫ಕೋ.ರೂ
೨೦೦೧	೨.೧೯ಲ.ಟನ್	೧೧೧೩ಕೋ.ರೂ
೨೦೦೨	೨.೧೪ಲ.ಟನ್	–
೨೦೦೩	೧.೮೬ಲ.ಟನ್	–

೨೦೦೦ ಹಾಗೂ ೨೦೦೩ರ ನಡುವೆ ರಫ್ತು ಪ್ರಮಾಣ ೩೭% ರಷ್ಟು ಕುಸಿತವನ್ನು ಕಂಡಿದೆ. ರಫ್ತುಗಳಿಕೆ ೧೯೯೭ ಹಾಗೂ ೨೦೦೨ರ ಮಧ್ಯೆ ೨೦೦೦ ಕೋಟಿ ರೂಪಾಯಿಗಳಿಂದ ೯೭೨ ಕೋಟಿ ರೂಪಾಯಿಗಳಿಗೆ, [illegible] ಪ್ರತಿಶತದಷ್ಟು ಕುಸಿದಿದೆ. ಕಾಫಿ ಬಿಕ್ಕಟ್ಟಿನಿಂದಾದ ಈ ಕುಸಿತ ಕಾಫಿರಫ್ತನ್ನೇ ಆಧರಿಸಿಕೊಂಡಿದ್ದ ಆರ್ಥಿಕತೆಗಳಿಗೆ ಚೇತರಿಸಲಾಗದ ಹೊಡೆತ ನೀಡಿದೆ. ಆಫ್ರಿಕಾ ಕೇವಲ ವಿಶ್ವ ಕಾಫಿಯ ೧೫ ಪ್ರತಿಶತದಷ್ಟೇ ಉತ್ಪಾದಿಸಿದರೂ ಉಗಾಂಡ ,ಬುರುಂಡಿಯಂಥ ರಾಷ್ಟ್ರಗಳ ಆರ್ಥಿಕತೆ ೭೦%ರಷ್ಟು, ರ್ವಾಂಡಾ ೫೦% ಕಾಫಿ ರಫ್ತುಗಳಿಕೆಯನ್ನೇ ಆಧರಿಸಿದೆ. ಈ ಬಿಕ್ಕಟ್ಟಿಗೆ ಕಾರಣವೆಂದು ಭಾವಿಸಲಾಗಿದ್ದ ವಿಯೆಟ್ನಾಂ ಕೂಡ ದೊಡ್ಡ ಮಟ್ಟದಲ್ಲೇ ಬಿಕ್ಕಟ್ಟಿಗೆ ಬಲಿಯಾಗಿದೆ. ಅಂದರೆ ಈ ಬಿಕ್ಕಟ್ಟಿಗೆ ನಿಜವಾದ ಕಾರಣ ಯಾರು?

ಇದನ್ನು ತಿಳಿಯಬೇಕಾದರೆ ಕಾಫಿ ಮಾರುಕಟ್ಟೆಯ ಬೆಳವಣಿಗೆಯನ್ನು ಅವಲೋಕಿಸಬೇಕು. ಎರಡನೇ ಮಹಾಯುದ್ಧ ನಂತರ ಕಾಫಿಯ ಬೆಲೆ ಏರಿಕೆ ಕಂಡಿತ್ತು. ಆದರೆ ೧೯೫೫ರ ಕುಸಿತ ಕಾಫಿ ಬೆಳೆಯುವ-ರಫ್ತುಮಾಡುವ ರಾಷ್ಟ್ರಗಳಲ್ಲಿ ಅಭದ್ರತೆ ಮೂಡಿಸಿತು. ಇದನ್ನು ಸರಿಪಡಿಸಲು ಯುಎಸ್‌ಎ ಅಂತರರಾಷ್ಟ್ರೀಯ ಕಾಫಿ ಒಪ್ಪಂದ (ICA) ವನ್ನು ಮುಂದಿಟ್ಟಿತು. ಇದು ಶೀತಲ ಸಮರದ ಹೊತ್ತಿನ ತನ್ನ ಸಾಮ್ರಾಜ್ಯವನ್ನು ವಿಸ್ತರಿಸುವ 'ಟ್ರೂಮನ್ ಅಭಿವೃದ್ಧಿ ಮಾದರಿ'ಯ ವಿದೇಶಾಂಗ ನೀತಿಗೆ ಪೂರಕವಾಗಿಯೇ ಇತ್ತು. ಇದರನ್ವಯ ಜಾಗತಿಕ ಕಾಫಿ ಮಾರುಕಟ್ಟೆಯ ಬೇಡಿಕೆಯನ್ನು ಅಂದಾಜಿಸಿ ಪ್ರತಿ ರಾಷ್ಟ್ರಗಳ ರಫ್ತು ಕೋಟಾವನ್ನು ನಿಗದಿಪಡಿಸಲಾಯಿತು. ಅಂತರರಾಷ್ಟ್ರೀಯ ಕಾಫಿ ಸಂಸ್ಥೆ ಇದನ್ನು ಜಾರಿಗೆ ತರಲು ೧೯೬೩ರಲ್ಲಿ ಸ್ಥಾಪಗೊಂಡಿತು. ಮುಂದಿನ ಇಪ್ಪತ್ತೈದು ವರ್ಷಗಳ ಕಾಲ ಕಾಫಿ ಮಾರುಕಟ್ಟೆ ಸುಮಾರಾಗಿ ಸ್ಥಾಯಿಯಾಗಿತ್ತು. ಭಾರತೀಯ ಕಾಫಿ ಮಾರುಕಟ್ಟೆಯಲ್ಲಿ ಏಕಸ್ವಾಮ್ಯವನ್ನು ಹೊಂದಿದ್ದ ಭಾರತೀಯ ಕಾಫಿ ಮಂಡಳಿ ಆಂತರಿಕ ಮಾರುಕಟ್ಟೆಯಲ್ಲಿ ದೃಢತೆಯನ್ನು ಕಾಯ್ದುಕೊಂಡು ಬಂದಿತ್ತು.

ಕಾಫಿಯ ಮಾರುಕಟ್ಟೆ ಉದ್ದಕ್ಕೂ ಶೋಷಕ-ಶೋಷಿತರೆಂಬ ನೆಲೆಯ ವಿಶ್ವದ ವಿಘಟನೆಯನ್ನು ಪ್ರತಿನಿಧಿಸುತ್ತಲೇ ಬಂದಿದೆ. ಕಾಫಿ ನಿಜಕ್ಕೂ ತೃತೀಯ ಜಗತ್ತಿನ ಬೆಳೆ. ೭೦ ಪ್ರತಿಶತದಷ್ಟು ಬೆಳೆಯನ್ನು ಸಣ್ಣ ಹಿಡುವಳಿದಾರರೇ ಬೆಳೆಯುತ್ತಾರೆ. ಲ್ಯಾಟಿನ್ ಅಮೇರಿಕಾ ವಿಶ್ವ ಕಾಫಿಯ ೬೦% ರಷ್ಟು ಉತ್ಪಾದಿಸುತ್ತದೆ; ಏಷ್ಯಾ ೨೫% ಉತ್ಪಾದಿಸಿದರೆ ಉಳಿದ ೧೫% ಆಫ್ರಿಕಾದಿಂದ ಬರುತ್ತದೆ. ವಿಯೆಟ್ನಾಂ ೧೧.೫ ಪ್ರತಿ ಶತ ಉತ್ಪಾದಿಸಿದ್ದವು. ಕರ್ನಾಟಕದಲ್ಲಿ ಕಾಫಿಯನ್ನು ಮುಖ್ಯವಾಗಿ ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಜಿಲ್ಲೆಗಳಲ್ಲಿ ಬೆಳೆಯಲಾಗುತ್ತದೆ. ಕೇರಳದ ಬಹುಪಾಲು ಕಾಫಿ ವೈನಾಡ್ ನಿಂದ ಬಂದರೆ ತಮಿಳುನಾಡಿನ ನೀಲಗಿರಿ ಜಿಲ್ಲೆ ರಾಜ್ಯದ ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿದೆ.ಇವೆಲ್ಲ ಪಶ್ಚಿಮ ಘಟ್ಟದಲ್ಲೇ . ೫೬ ಬರುವ ಅಕ್ಕಪಕ್ಕದ ಜಿಲ್ಲೆಗಳು ಹಾಗೂ ಈ ಪ್ರದೇಶ, ಮುಖ್ಯವಾಗಿ ಕರ್ನಾಟಕ, ಕಾಫಿ ಮಾರುಕಟ್ಟೆಯಲ್ಲಿ ಮುಖ್ಯ ಪಾಲು ಪಡೆದಿದೆ ಎಂಬ ಅಂಶಗಳನ್ನು ಇಲ್ಲಿ ಗುರುತಿಸಿಕೊಳ್ಳಬೇಕು.

ಅತ್ತ ಸೋವಿಯತ್ ಒಕ್ಕೂಟದ ವಿಘಟನೆಗೆ ಸಿದ್ಧತೆಗಳಾಗುತ್ತಿದ್ದಂತೆ ಅಮೆರಿಕಾ ಏಕಪಕ್ಷೀಯವಾಗಿ ಅಂತರರಾಷ್ಟ್ರೀಯ ಕಾಫಿ ಒಪ್ಪಂದದಿಂದ ಹೊರಬಂದಿತು. ಈ ಒಪ್ಪಂದ ಶಿಥಿಲಗೊಳ್ಳುತ್ತಿದ್ದಂತೆ ವಿಶ್ವಬ್ಯಾಂಕ್ ಹಾಗೂ ಐಎಂಎಫ್ ಕಾಫಿ ಮಾರುಕಟ್ಟೆಯನ್ನು ಮುಕ್ತಗೊಳಿಸಲು ಆಫ್ರಿಕನ್ ಹಾಗೂ ಏಷ್ಯಾದ ರಾಷ್ಟ್ರಗಳ ಮೇಲೆ ಒತ್ತಡ ಹೇರತೊಡಗಿತು. ICA ವಿಘಟನೆಯಿಂದಾಗಿ ಮಾರ್ಕೆಟ್ ಅಸ್ಥಿರತೆಯನ್ನು ಕೊನೆಗೊಳಿಸಲು ಹದಿನಾಲ್ಕು ರಾಷ್ಟ್ರಗಳು ೧೯೯೩ರಲ್ಲಿ ಕಾಫಿ ಬೆಳೆಯುವ ರಾಷ್ಟ್ರಗಳ ಒಕ್ಕೂಟ (ACPC)ವನ್ನು ಸ್ಥಾಪಿಸಿಕೊಂಡವು. OPEC ನಂತೆ ಕಾರ್ಯನಿರ್ವಹಿಸುವುದು ಇದರ ಉದ್ಧೇಶವಾಗಿತ್ತು. ವಿಶ್ವದ ಶ್ರೀಮಂತ ರಾಷ್ಟ್ರಗಳು ವಿಯೆಟ್ನಾಂ ಈ ಒಪ್ಪಂದದಿಂದ ಹೊರಗುಳಿಯುವಂತೆ ನೋಡಿಕೊಂಡವು. ವಿಶ್ವಬ್ಯಾಂಕ್, ಏಷ್ಯನ್ ಅಭಿವೃದ್ಧಿ ಬ್ಯಾಂಕ್, ಫ್ರೆಂಚ್ ಅಭಿವೃದ್ಧಿ ನಿಧಿಗಳನ್ನೆಲ್ಲ ಒದಗಿಸಿ ವಿಯೆಟ್ನಾಂನಲ್ಲಿ ಕಾಫಿ ಬೆಳೆಯಲು ಉತ್ತೇಜಿಸಲಾಯಿತು. ೧.೨ ಲಕ್ಷ ಹೆಕ್ಟೇರ್ ಕಾಡುಗಳನ್ನು ಸುಟ್ಟು ಪ್ಲಾಂಟೇಶನ್ ನಿರ್ಮಿಸಲಾಯಿತು.೨೦೦೧ರ ಹೊತ್ತಿಗೆ ವಿಯೆಟ್ನಾಂ ವಿಶ್ವದ ಕಾಫಿ ಉತ್ಪಾದಿಸುವ ರಾಷ್ಟ್ರಗಳಲ್ಲಿ ಎರಡನೇ ಸ್ಥಾನ ಪಡೆಯಿತು. ವಿಯೆಟ್ನಾಂನ ಅಗ್ಗದ ದರದ ರೊಬಸ್ಟಾ ಕಾಫಿ ಮಾರುಕಟ್ಟೆಯನ್ನು ತುಂಬಿ ಕೊಂಡಿತು. ಈ ಸುರಿಯುವಿಕೆ ಮಾರುಕಟ್ಟೆಯಲ್ಲಿ ಕಾಫಿ ಬೆಲೆಯ ಕುಸಿತಕ್ಕೆ ಕಾರಣವಾಯಿತು. ಇದನ್ನು ತಡೆಯುವಲ್ಲಿ ACPC ಕೂಡ ವಿಫಲವಾಯಿತು. ಪರಿಣಾಮವಾಗಿ ಕಾಫಿ ಬೆಲೆ ಪಾತಾಳ ಕಂಡಿತು.

ಈ ಹೊತ್ತಿನಲ್ಲೇ ಜಾಗತಿಕ ಕಾಫಿಯ ಚಿಲ್ಲರೆ ಮಾರುಕಟ್ಟೆಯನ್ನು ನಿಯಂತ್ರಿಸುವ ಬಹುರಾಷ್ಟ್ರೀಯ ಕಂಪೆನಿಗಳ ಲಾಭದಲ್ಲಿ ಭಾರಿ ಏರಿಕೆಯಾಯಿತು. ೨೦೦೦ನೇ ಇಸವಿಯಲ್ಲಿ ಅಮೆರಿಕದ ಸ್ಟಾರ್ ಬಕ್ಸ್ ೪೦ ಪ್ರತಿಶತ ನಿವ್ವಳ ಲಾಭದ ಹೆಚ್ಚಳ ಸಾಧಿಸಿದರೆ ನೆಸ್ಲೆ ೨೨% ಅನ್ನು ದಾಖಲಿಸಿತು. ನೆಸ್ಲೆಯ ಲಾಭ ೨೦೦೧ ರಲ್ಲಿ ೨೬% ಗೆ ಏರಿತು. ಒಬ್ಬ ಗ್ರಾಹಕ ಕಾಫಿ ಖರೀದಿಸಲು ಮಾಡಿದ ವೆಚ್ಚದಲ್ಲಿ ೫% ಪ್ಲಾಂಟೇಶನ್ ಒಡೆಯನಿಗೆ, ೮% ಕೆಲಸಗಾರನಿಗೆ, ೧೧% ಚಿಲ್ಲರೆ ಮಾರಾಟಗಾರನಿಗೆ ಹಾಗೂ ೬೭% ಬಹುರಾಷ್ಟ್ರೀಯ ಕಂಪೆನಿಗಳಿಗೆ ಹೋಗುತ್ತದೆ.

ಇದರ ಜೊತೆಗೆ ಭಾರತದ ಆಂತರಿಕ ಮಾರುಕಟ್ಟೆಯಲ್ಲಿ ಕೂಡ ಬದಲಾವಣೆ ಸಂಭವಿಸಿತು. ಮುಕ್ತ ವ್ಯಾಪಾರ ನೀತಿಗೆ ಸಹಿ ಹಾಕಿದ ಭಾರತ ೧೯೯೧ರ ವಿಶ್ವ ಬ್ಯಾಂಕ್-ಐಎಂಎಫ್ ಸಾಲ ನೀಡಲು ವಿಧಿಸಿದ್ದ ಷರತ್ತಿನಂತೆ ಕಾಫಿ ಮಂಡಳಿಯ ಏಕಸ್ವಾಮ್ಯವನ್ನು ಕೊನೆಗೊಳಿಸಬೇಕಿತ್ತು. ಆ ಪ್ರಕಾರವಾಗಿ ೧೯೯೨ರಲ್ಲಿ ಕೇಂದ್ರ ಸರಕಾರ ೧೯೪೨ರ ಕಾಫಿ ಕಾಯ್ದೆಗೆ ತಿದ್ದುಪಡಿ ತಂದು ಉತ್ಪನ್ನದ ಮೂವತ್ತು ಪ್ರತಿಶತ ಕಾಫಿಯನ್ನು ಮುಕ್ತ ವ್ಯಾಪಾರ ಕೋಟಾದಡಿ ಬೆಳೆಗಾರರೇ ಮಾರಬಹುದೆಂದು ಘೋಷಿಸಿತು. ೧೯೯೪ರಲ್ಲಿ ಈ ಕೋಟಾವನ್ನು ೫೦ ಪ್ರತಿಶತಕ್ಕೆ ಏರಿಸಲಾಯಿತು. ೧೯೯೬ರಲ್ಲಿ ಇದನ್ನು ಸಂಪೂರ್ಣವಾಗಿ ವಿಸ್ತರಿಸುವುದರೊಂದಿಗೆ ಕಾಫಿ ಮಂಡಳಿ ಕೇವಲ ಸಲಹಾ ಮಂಡಳಿಯಷ್ಟೇ ಆಗಿಬಿಟ್ಟಿತು. ಮಾರುಕಟ್ಟೆಯ ದರವನ್ನು ವಾಸ್ತವವಾಗಿ ಇನ್ನೆಷ್ಟೂ ನಿಯಂತ್ರಿಸುವಂತಿರಲಿಲ್ಲ.

ಈ ಎಲ್ಲ ಬೆಳವಣಿಗೆಗಳ ಪರಿಣಾಮವಾಗಿ ಭಾರತೀಯ ಕಾಫಿ ಉತ್ಪಾದನೆಯ ೬೪ ಪ್ರತಿಶತದಷ್ಟಿರುವ ರೋಬಸ್ಟಾ ಕಾಫಿಯ ಬೆಲೆ ೧೯೯೮ರಲ್ಲಿ ಕೆಜಿಗೆ ೭೧.೯೦ ರೂ.ಗಳಿದ್ದದ್ದು ೨೦೦೨ರಲ್ಲಿ ೨೮.೭೦ ರೂಗಳಿಗೆ ಇಳಿಯಿತು. ಅರೇಬಿಕಾ ಕಾಫಿಯ ಬೆಲೆ ೯೬.೮೦ ರೂ.ಗಳಿಗೆ ೩೬.೭೦ರೂ.ಗೆ ಇಳಿಯಿತು. ಕಾಫಿ ಉತ್ಪಾದನೆಯ ಏರಿಕೆಯ ಪ್ರಮಾಣ ೩.೬% ಗಳಷ್ಟಿದ್ದು ಬೇಡಿಕೆ ೧.೮%ದಷ್ಟೇ ಏರಿಕೆ ಕಾಣುತ್ತಿದ್ದುದರಿಂದ ಒಟ್ಟು ವಾರ್ಷಿಕ ಬಳಕೆಯ ೪೦ ಪ್ರತಿಶತ ಕಾಫಿ ದಾಸ್ತಾನು ಮಳಿಗೆಗಳಲ್ಲಿ ಮಾರಾಟವಾಗದೇ ಉಳಿದಿದ್ದರೂ ಭಾರತ ಸರಕಾರ ೨೦೦೩ರಲ್ಲಿ ಜುಲೈನಲ್ಲಿ ಕಾಫಿ ಪ್ಲಾಂಟೇಶನ್‌ಗಳಲ್ಲಿ ವಿದೇಶೀ ಬಂಡವಾಳದ ಹೂಡಿಕೆಗೆ ಅನುಮತಿ ನೀಡುವ ಬಗ್ಗೆ 'ಪರಿಶೀಲಿಸಿತು.' ಇದರ ಅವಶ್ಯಕತೆಯಾದರೂ ಏನಿತ್ತು?

ಈ ಬೆಲೆ ಕುಸಿತದಿಂದಾಗಿ ಕಾಫಿ ಬೆಳೆಗಾರರ ಮುಂದಿದ್ದ ಆಯ್ಕೆಗಳು ಎರಡು: ಮೊದಲನೆಯದಾಗಿ ಇಳುವರಿ ಹೆಚ್ಚಿಸುವುದು. ಆದರೆ ಜೈವಿಕ ಹಾಗೂ ತಾಂತ್ರಿಕ ಪರಿಮಿತಿಗಳಿಂದ ಇದು ಸಾಧ್ಯವಿರಲಿಲ್ಲ. ಜೊತೆಗೆ ಮಾರುಕಟ್ಟೆಯ ಅಸ್ಥಿರತೆಯಿಂದಾಗಿ ಈ ಪ್ರಯತ್ನ ಅಪಾಯಕಾರಿಯೆಂದು ತೋರಿತ್ತು. ಎರಡನೇ ಆಯ್ಕೆ ವೆಚ್ಚಗಳನ್ನು ಕಡಿಮೆಗೊಳಿಸುವುದು. ೨.೫ ಮಿಲಿಯನ್ ಕೂಲಿಗಳಿಗೆ ಕೆಲಸ ನೀಡಿದ್ದ ಕಾಫಿ ಪ್ಲಾಂಟೇಶನ್‌ಗಳ ಬಹಳಷ್ಟು ಕೆಲಸಗಾರರು ಕೆಲಸ ಕಳೆದುಕೊಳ್ಳಬೇಕಾಗಿತ್ತು. ಆದದ್ದೂ ಕೂಡ ಹಾಗೆಯೇ.

ಒಂದೆಡೆ ಇದರಿಂದ ಕೃಷಿ ಭೂಮಿಗಳ ಒತ್ತಡ ದಿಢೀರಾಗಿ ಹೆಚ್ಚಳಗೊಂಡಿತು. ಇನ್ನೊಂದೆಡೆ ಕೂಲಿ

[illegible] ಅಸ್ಥಿರತೆಯನ್ನು [illegible] ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನಲ್ಲಿ ಕಾರ್ಮಿಕನೊಬ್ಬ ಈ ಅಸ್ಥಿರತೆಯನ್ನು ನಿಭಾಯಿಸಲಾರದೆ ಆತ್ಮಹತ್ಯೆ ಮಾಡಿಕೊಂಡ. ಈ [illegible] ಪರಿಣಾಮವಾಗಿ ಕರ್ನಾಟಕದಲ್ಲಿ ೨೦೦ಕ್ಕೂ ಹೆಚ್ಚು ಆತ್ಮಹತ್ಯೆಗಳು ಸಂಭವಿಸಿದವು. ಮಾರುಕಟ್ಟೆಗೆ ಕೃಷಿ ಹೆಚ್ಚು ಹೆಚ್ಚು ಸ್ಪಂದನಶೀಲವಾಗುತ್ತ ಹೋದಂತೆ ಅಸ್ಥಿರತೆ ಹೆಚ್ಚುತ್ತಾ ಹೋಗುತ್ತದೆ. ಪ್ಲಾಂಟೇಶನ್ ಬೆಳೆಗಳ ಈ [illegible] ಎಲ್ಲ ವಾಣಿಜ್ಯ ಬೆಳೆಗಳದ್ದೂ ಕೂಡ. ಮೊದಲಿಗೆ [illegible] ಮರಗಳಾಗಿ ಕಾಣುವ ಅವುಗಳ ಸಮಸ್ಯೆಯೆಂದರೆ ದಶಕಗಳ ನಂತರ ಅವು ಕಡಿಮೆ ಹಣ ಉತ್ಪಾದಿಸುತ್ತವೆ; ಎನ್ನುತ್ತಾರೆ ಲಾರ್ಡ್ ಟಿಂಬರ್ ಲೇಕ್.

ಕರ್ನಾಟಕ ರಾಜ್ಯ ಕ್ರೈಂ ಬ್ಯೂರೋದ ವರದಿಯಂತೆ ೧೯೯೬ ಹಾಗೂ ೨೦೦೦ದ ನಡುವಿನ ಅವಧಿಯಲ್ಲಿ ಕರ್ನಾಟಕದಲ್ಲಿ ೧೯೯೮ 'ವ್ಯವಸಾಯ ಹಾಗೂ ಕೃಷಿ ಚಟುವಟಿಕೆ ಸಂಬಂಧಿ' ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ. ಅಂದರೆ ಸರಾಸರಿ ದಿನಕ್ಕೆ ಆರು ರೈತರು ನಮ್ಮ ರಾಜ್ಯದಲ್ಲೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದೂ ಸರಾಸರಿ ಅಂಕಿಅಂಶ ಹೇಳುವಂತೆ. ಆದರೆ ಜಿಕೆ ವಿರೇಶ್ ನೇತೃತ್ವದ ತಜ್ಞರ ಸಮಿತಿ 'ಈ ಆತ್ಮಹತ್ಯೆಗಳಿಗೆ ಆರ್ಥಿಕ ಕಾರಣಗಳನ್ನು ತಳುಕು ಹಾಕುವುದು ಸರಿಯಲ್ಲ' ಎಂದು ಬೇಜವಾಬ್ದಾರಿ ವರದಿಯನ್ನು ನೀಡುತ್ತದೆ. ಈ ವರದಿಯನ್ನು ವಿಶೇಷವಾಗಿ ದೂಷಿಸಬೇಕಾಗಿಲ್ಲ. ಯಾಕೆಂದರೆ ಸುಳಿದಾಡುವ ಗಾಳಿಯಲ್ಲಿರುವ 'ನಾರ್ಮಾಲಿಟಿಗೆ' ಹೊಂದಿಕೊಂಡಂತೆಯೇ ಇದೆ. ಹಸಿವಿನಿಂದ ಜನ ಸಾಯುತ್ತಾರೆ ಎಂಬುದನ್ನು ಇವತ್ತು ಬಹುತೇಕರು ಒಪ್ಪಿಕೊಳ್ಳಲಾರರು. ಹಾಗೇ ಬೇರೆ ಆಯ್ಕೆಯೆ ಇಲ್ಲದೆ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ ಎಂಬುದನ್ನೂ ಕೂಡ. ಒಂದು ವೇಳೆ ಒಪ್ಪಿಕೊಂಡರೆ ಸೃಷ್ಟಿಸಿಕೊಂಡ 'ಶ್ರೀಮಂತ ಇಂಡಿಯಾ'ದ ಇಮೇಜ್‌ಗೆ ಘಾಸಿಯಾಗುತ್ತದೆ. ಒಂದೊಮ್ಮೆ ಇನ್ನೊಂದು ರೀತಿಯ ಪರಿಸ್ಥಿತಿಯಿತ್ತು. ಮೊದಲ ಬಾರಿಗೆ ಇಂಡಿಯಾದಲ್ಲಿರುವ ಬಡತನವನ್ನು ಪ್ರಕಟಿಸಿದಾಗ ಬಹಳಷ್ಟು ಅಪನಂಬಿಕೆಗಳು ವ್ಯಕ್ತವಾಗಿದ್ದವು. (ಅಫ್‌ಕೋರ್ಸ್, ಮೆಥ ಡಾಲಜಿಯ ಬಗೆಗಿನ ಭಿನ್ನಾಭಿಪ್ರಾಯ ಬೇರೆ) ಯಾಕೆಂದರೆ ಆಗ ಹರಕು ಚಿಂದಿಗಳನ್ನುಟ್ಟ ಜನರ ಕೊಳೆತುನಾರುವ ಬಡತನದ ಇಂಡಿಯಾದ ಇಮೇಜ್ ಇತ್ತು. ಆದರೆ ಇವತ್ತು ಅತ್ಮಹತ್ಯೆ ಮಾಡಿಕೊಳ್ಳುವ ರೈತ ಇಂಡಿಯಾವನ್ನು ಪ್ರತಿನಿಧಿಸುವುದಿಲ್ಲ. ಬದಲಾಗಿ ಜಾಗತಿಕ ಕೋಟ್ಯಾದಿಪತಿಗಳ ತಟ್ಟೆಯಲ್ಲಿ ಸ್ಥಾನ ಪಡೆದವರು ಇಂಡಿಯಾವನ್ನು ಪ್ರತಿನಿಧಿಸುತ್ತಾರೆ.

ಭಿನ್ನ ಸಾಂಸ್ಕೃತಿಕ–ಮನೋವೈಜ್ಞಾನಿಕ ರಚನೆಗಳು ರೂಪುಗೊಳ್ಳುತ್ತಿರುವುದರ ಬಗ್ಗೆ ಹೇಳುತ್ತಿದ್ದೇನೆ. ಇವತ್ತಿನ ಜಾಗತಿಕ ಅಭಿವೃದ್ಧಿಶಾಹಿ ಸಂಜಯಗಾಂಧಿ ಮಾದರಿಯನ್ನೇ ಮಾರ್ಪಡಿಸಿಕೊಂಡು ಸಾಮಾನ್ಯೀಕರಿಸುತ್ತದೆ. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನಾಗರಿಕ ಹಕ್ಕುಗಳು ಮೊಟಕುಗೊಂಡಾಗ ಭಾರತದ ರಾಜಧಾನಿಯಲ್ಲಿದ್ದ ಬಡವರನ್ನೆಲ್ಲ ನೋಟದ ಪರಿಧಿಯಾಚೆಗೆಸೆದು ಆತ ಬಡತನವನ್ನು ನಿವಾರಿಸಿದ್ದ. ಇದೇ ಮಾದರಿ ಭಿನ್ನ ಆಯಾಮದಲ್ಲಿ ಸಾಮಾನ್ಯ ರಾಜಕೀಯ, ಪತ್ರಿಕೋದ್ಯಮ ಹಾಗೂ ಸಮಾಜ ವಿಜ್ಞಾನಿಗಳನ್ನೆಲ್ಲ ಆವರಿಸಿಕೊಂಡಿದೆ. ಬೌದ್ಧಿಕ ಲೋಲುಪತನವೂ ಅಭಿವೃದ್ಧಿಯ ತರ್ಕದಲ್ಲಿ ಇಗೋ ಡಿಫೆನ್ಸಿವ್ ಮೆಕಾನಿಸಮ್ ಆಗಿ ರೂಪುಗೊಳ್ಳುತ್ತಿದೆ. ಇದಕ್ಕೆ ವಿರುದ್ಧವಾದ ಪ್ರಕ್ರಿಯೆ ಕೂಡ ಇನ್ನೊಂದು ಕೊನೆಯಲ್ಲಿ ಜರುಗುತ್ತದೆ. ಲೋಕಜ್ಞಾನ ಕಟ್ಟಿಕೊಟ್ಟ ಸ್ವರಕ್ಷಣಾ ಮಾನಸಿಕ ರಚನೆಗಳು ನಿರಂತರವಾಗಿ ಶಿಥಿಲಗೊಳ್ಳುತ್ತಿವೆ. ಮನುಷ್ಯನಿಗಲ್ಲದೆ ಮರಕ್ಕೆ ಕಷ್ಟ ಬಂದಾತಾ ಮಗಾ...ಎಂಬಂಥ ಸಾಂತ್ವನದ ಮಾತುಗಳ ಜತೆಗಿದ್ದ ಜೀವನದ್ರವ್ಯ ಕೂಡ ಬತ್ತಿ ಹೋಗುತ್ತಿದೆ. ಅಥವಾ ಸಮಾಧಾನ ತುಂಬುತ್ತಲೇ ಪ್ರತಿರೋಧವನ್ನು ಕೂಡ ರೂಪಿಸುವ ಹರಟೆ ಕಟ್ಟೆಗಳೂ ಕಣ್ಮರೆಯಾಗುತ್ತಿವೆ. ರೈತ ಕೂಡ ಈಗ ಒಂಟಿಯಾಗಿದ್ದಾನೆ. ಸುತ್ತ ಸಿರಿವಂತಿಕೆ ತುಂಬಿರುವಾಗ ತಾನು ಮಾತ್ರ ದೈನೇಸಿಯಾಗಿರುವುದಾಗಿ ಭಾವಿಸುತ್ತಾನೆ. ಶ್ರೀಮಂತ ಇಂಡಿಯಾದಲ್ಲಿ ಬದುಕಬೇಕಾದ ಭವಿಷ್ಯದ ಕಲ್ಪನೆ ಜೀಪಿಸಿರಲು ಅನರ್ಹವೆಂಬ ತೀರ್ಪನ್ನು ಕೊಡುತ್ತದೆ. ವ್ಯವಸ್ಥೆ ವ್ಯವಸ್ಥಿತವಾಗಿ ಕೊಲೆಮಾಡುತ್ತದೆ.

> **ಕರ್ನಾಟಕ ರಾಜ್ಯ ಕ್ರೈಂ ಬ್ಯೂರೋದ ವರದಿಯಂತೆ ೧೯೯೬ ಹಾಗೂ ೨೦೦೦ದ ನಡುವಿನ ಅವಧಿಯಲ್ಲಿ ಕರ್ನಾಟಕದಲ್ಲಿ ೧೯೯೮ 'ವ್ಯವಸಾಯ ಹಾಗೂ ಕೃಷಿ ಚಟುವಟಿಕೆ ಸಂಬಂಧಿ' ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ. ಅಂದರೆ ಸರಾಸರಿ ದಿನಕ್ಕೆ ಆರು ರೈತರು ನಮ್ಮ ರಾಜ್ಯದಲ್ಲೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದೂ ಸರಾಸರಿ ಅಂಕಿಅಂಶ ಹೇಳುವಂತೆ. ಆದರೆ ಜಿಕೆ ವಿರೇಶ್ ನೇತೃತ್ವದ ತಜ್ಞರ ಸಮಿತಿ 'ಈ ಆತ್ಮಹತ್ಯೆಗಳಿಗೆ ಆರ್ಥಿಕ ಕಾರಣಗಳನ್ನು ತಳುಕು ಹಾಕುವುದು ಸರಿಯಲ್ಲ' ಎಂದು ಬೇಜವಾಬ್ದಾರಿ ವರದಿಯನ್ನು ನೀಡುತ್ತದೆ. ಹಸಿವಿನಿಂದ ಜನ ಸಾಯುತ್ತಾರೆ ಎಂಬುದನ್ನು ಇವತ್ತು ಬಹುತೇಕರು ಒಪ್ಪಿಕೊಳ್ಳಲಾರರು. ಹಾಗೇ ಬೇರೆ ಆಯ್ಕೆಯೆ ಇಲ್ಲದೆ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ ಎಂಬುದನ್ನೂ ಕೂಡ.**



ಡಾಕ್ಟರೇಟು
ಒಂದೊಂದು ವಿ.ವಿ.ಯಲ್ಲಿ
ಒಂದೊಂದು ರೇಟು!

ಅಲ್ಲಮಪ್ರಭು ಬೆಟ್ಟದೂರು

ಈ ಬಿಕ್ಕಟ್ಟಿಗೆ ವಿಸ್ಫೋಟಕವಾಗಬಹುದಾದ ಒಂದು ಸಾಮಾಜಿಕ ಆಯಾಮವೂ ಇದೆ ಎಂಬುದನ್ನು ಗಮನಿಸಬೇಕು. ದಶಕದಿಂದ ಸಾಮಾನ್ಯವಾಗಿ ಹೋದ ಸರಣಿ ಆತ್ಮಹತ್ಯೆಗಳ ಹಿಂದೆ ವಿಫಲಗೊಂಡ ಜನ ತಾಂತ್ರಿಕ ಪ್ರತಿರೋಧದ ಮಾತೃಕೆಗಳೂ ಇವೆ; ಹತಾಶೆಯ ಆಕೃತಿಗಳೂ ಇವೆ. ದುರಂತವೆಂದರೆ ಕೆಲವು ವರ್ಷಗಳ ಹಿಂದೆ ಪ್ರತಿಭಟನೆಯ ಸೂಚಕಗಳಾಗಬಹುದಾಗಿದ್ದ ಇವುಗಳನ್ನು ಇವತ್ತು ಪ್ರದರ್ಶಕಗಳ ಮಟ್ಟಕ್ಕಿಳಿಸಿ ನೋಡುತ್ತಿದ್ದೇವೆ. ಒಬ್ಬ ರೈತ ತಾನೇ ಬೆಳೆದ ಕಬ್ಬಿನ ಗದ್ದೆಗೆ ಕೈಯಾರೆ ಬೆಂಕಿ ಇಕ್ಕುತ್ತಾನೆಂದರೆ, ತಾನೇ ಬೆಳೆದ ಟೊಮೆಟೋಗಳನ್ನು ರಸ್ತೆಗೆ ಚೆಲ್ಲುತ್ತಾನೆಂದರೆ ಅದರ ಹಿಂದಿರುವ ಸಿಟ್ಟು, ಹತಾಶೆಗಳನ್ನು ಅರ್ಥಮಾಡಿಕೊಳ್ಳಬೇಕು. ಎಲ್ಲ ಪ್ರತಿಭಟನೆಯ ದಾರಿಗಳೂ ಮುಚ್ಚಿಹೋಗುತ್ತಿವೆ. ತನ್ನ ಅಹವಾಲನ್ನು ಆತ ಯಾರೊಂದಿಗೆ ಹೇಳಿಕೊಳ್ಳಬೇಕು? ಹೇಗೆ ಹೇಳಬೇಕು? ಕೇಳುವವರು ಯಾರಿದ್ದಾರೆ? ಅಧಿಕಾರವನ್ನುದ್ದೇಶಿಸಿ ಹೇಳಬಹುದಾದ ಎಲ್ಲ ದಾರಿಗಳೂ ಮುಚ್ಚಿಕೊಳುತ್ತಿವೆ. ಇದು ಪ್ರಜಾತಂತ್ರದ ಬಿಕ್ಕಟ್ಟು ಕೂಡಾ.

ಇಷ್ಟಕ್ಕೂ ವ್ಯವಸಾಯಿಕ ಬಂಡವಾಳಶಾಹಿಯನ್ನು ಮೇಲಿನಿಂದ ಹೇರಿದ ವ್ಯವಸ್ಥೆ ಆಂತರಿಕ ವೈರುಧ್ಯಗಳ ಗೊಡವೆಗೆ ಹೋಗದ ಸಂಕಥನಾತ್ಮಕ ರಾಜ್ಯವಾಗಿತ್ತೇ ಹೊರತು ಕಲ್ಯಾಣ ರಾಜ್ಯವಲ್ಲ. ಇದರಿಂದ ಉದ್ಭವಿಸಿದ ಹಾಗೂ ಸೃಜನಾತ್ಮಕ ಸಮಾಜದ ವೈರುಧ್ಯಗಳನ್ನು ಮುಚ್ಚಿಹಾಕಲು ರಾಜ್ಯ ಯಾವತ್ತೂ ಟೋಕನಿಸಂ ಅನ್ನೇ ಆಶ್ರಯಿಸಿದೆ. ಮೊದಲಿಗೆ ರೈತನ ಆತ್ಮಹತ್ಯೆಯ ವಾಸ್ತವವನ್ನೇ ನಿರಾಕರಿಸಲಾಗುತ್ತದೆ. ನಂತರ ಅದನ್ನು ಸ್ಥಳೀಯ, ವೈಯಕ್ತಿಕ ಹಾಗೂ ಪ್ರತ್ಯೇಕಿಸಲ್ಪಟ್ಟ ಪ್ರಕರಣವೆಂದು ಪರಿಗಣಿಸಲಾಗುತ್ತದೆ. ನಂತರವಷ್ಟೇ ನಿರಂತರ ಒತ್ತಡದ ಪರಿಣಾಮವಾಗಿ ಪರಿಹಾರ ನೀಡುವ ಬಗ್ಗೆ ಪರಿಶೀಲಿಸಲಾಗುತ್ತದೆ. ಈ ಹೊತ್ತಿಗೆ ತಕ್ಷಣದ ಹಾಗೂ ಸಾಂದ್ರಗೊಂಡ ಗಮನ ಪರಿಹಾರ ದೊರಕಿಸುವುದರ ಮೇಲಿರುತ್ತದೆಯೇ ಹೊರತು ಸಮಸ್ಯೆಯ ಮೇಲಲ್ಲ. ಹೋರಾಟದ ಮೆಕಾನಿಸಮ್‌ಗಳು ಅಲ್ಲಿಗೇ ನಿಂತುಬಿಡುತ್ತವೆ. ಸಾಮುದಾಯಿಕ ತಲ್ಲಣವಾಗಬೇಕಿದ್ದ ಒಬ್ಬ ಮನುಷ್ಯನ ಸಾವು ಅಂಚಿಗೆ ಸರಿದು ಬಿಡುತ್ತದೆ.

ಆತ್ಯಂತಿಕವಾಗಿ ಕೊಲೆಗಾರ ಹಾಗೂ ಕೊಲೆಯಾದವನಿದ್ದರೂ ನಡೆದ ಕೊಲೆ ನಿರಾಕರಿಸಲ್ಪಡುತ್ತದೆ. ಬಲಿಪಶು ಕೊಲ್ಯಾಟರಲ್ ವಿಕ್ಟಿಮ್ ಆಗಿರುತ್ತಾನೆ. (ಯುದ್ಧದ ಸಂದರ್ಭದಲ್ಲಿ ಕಾಲ್ತೊಡಕಾಗಿ ಪರಿಣಮಿಸುವ ನಾಗರಿಕರನ್ನು ನಿವಾರಿಸಿಕೊಳ್ಳಲು ಅಮೆರಿಕನ್ ಮಿಲಿಟರಿ ಬಳಸುವ ಪದ ಇದು) ಎಲ್ಲ ಅನ್ಯಾಯಗಳಿಗೆ ಅಭಿವೃದ್ಧಿಯ ಛತ್ರಿಯಡಿ ಕ್ಷಮೆ ಸಿಕ್ಕಿಬಿಡುತ್ತದೆ. ಹೀಗಾಗಿ ಇದು ಅಸ್ತಿತ್ವದ ಬಿಕ್ಕಟ್ಟಿನ ಪ್ರಶ್ನೆ. ಬಹುಪಾಲು ಚಿಂತನೆಗಳು ಜಾಗತೀಕರಣ ಅನಿವಾರ್ಯ ಎಂದುಕೊಂಡೇ ಆರಂಭವಾಗುತ್ತವೆ. ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವಾಗ ಅಲ್ಲಿಂದಲೇ ತಿದ್ದಿಕೊಳ್ಳಬೇಕಿದೆ ಎಂಬುದನ್ನಷ್ಟೇ ಸೂಚಿಸ ಬಯಸುತ್ತೇನೆ.

(ಮುಗಿಯಿತು) □



ಕರ್ನಾಟಕ - ಸುಂದರ ನದಿವನಗಳ ನಾಡು. ಕಲೆ ಸಂಸ್ಕೃತಿಗಳ ಬೀಡು. ಕವಿಗಳು, ವಚನಕಾರರು, ದಾಸಶ್ರೇಷ್ಠರುಗಳ ನೆಲವೀಡು. ವೀರ ವನಿತೆಯರ ಪುಣ್ಯಭೂಮಿ. ಮಾದರಿ ಆಡಳಿತದ ಮಾರ್ಗದರ್ಶಿ ರಾಜ್ಯ. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದ ತವರೂರು. ಕರ್ನಾಟಕದ ರಾಜಧಾನಿ ಬೆಂಗಳೂರು ವಿಶ್ವ ವಿಖ್ಯಾತಿಯ ನಗರ. ಇಂತಹ ಭವ್ಯ ಪರಂಪರೆ, ಹಿನ್ನೆಲೆಯ ಭದ್ರ ಬುನಾದಿಯ ಮೇಲೆ

ಸಮೃದ್ಧ ಕರ್ನಾಟಕವನ್ನು ಕಟ್ಟುವ ಸಂಕಲ್ಪ ನಮ್ಮದು

ನಾಡು ನುಡಿಗೆ ವಿಶೇಷ ಕಾರ್ಯಕ್ರಮಗಳು

- ಬೆಂಗಳೂರಿನಲ್ಲಿ ವರನಟ ಡಾ|| ರಾಜ್‌ಕುಮಾರ್ ಸ್ಮಾರಕ ನಿರ್ಮಾಣಕ್ಕೆ 8 ಕೋಟಿ ರೂ.
- ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನಕ್ಕಾಗಿ 25 ಕೋಟಿ ರೂ.
- ರಾಜ್ಯದ ಗಡಿಜಿಲ್ಲೆಗಳಲ್ಲಿ 4 ಸುವರ್ಣ ಕರ್ನಾಟಕ ಭವನಗಳ ನಿರ್ಮಾಣಕ್ಕೆ 5 ಕೋಟಿ ರೂ.
- ರಾಜ್ಯ ಮಟ್ಟದಲ್ಲಿ ಪ್ರಪ್ರಥಮ ಬಾರಿಗೆ ಸಂತಕವಿ ಕನಕದಾಸರ ಜಯಂತಿ ಆಚರಣೆ. ಕನಕ ಜಯಂತಿಗೆ ಸಾರ್ವತ್ರಿಕ ರಜೆ. ಕನಕದಾಸರ ಜನ್ಮ ಸ್ಥಳ "ಬಾಡ" ಅಭಿವೃದ್ಧಿಗೆ 1 ಕೋಟಿ ರೂ.
- ಕನ್ನಡದ ಮೇರು ಕೃತಿಗಳು ಮತ್ತು ಡಾ || ಬಿ. ಆರ್ ಅಂಬೇಡ್ಕರ್ ಕೃತಿಗಳ ಪುನರ್ ಮುದ್ರಣ.
- ಕೆ. ಪಿ ಪೂರ್ಣಚಂದ್ರ ತೇಜಸ್ವಿ ಸಂಶೋಧನಾ ಕೇಂದ್ರ, ಶಿವಯೋಗಿ ಶಿಶುನಾಳ ಷರೀಫರ ಸಮಾಧಿ ಮತ್ತು ಸಂಗೊಳ್ಳಿ ರಾಯಣ್ಣ ಜನ್ಮಸ್ಥಳ ಅಭಿವೃದ್ಧಿಗೆ ತಲಾ 1 ಕೋಟಿ ರೂ.
- ಅಲ್ಲಮಪ್ರಭು ಸಾಹಿತ್ಯ ಸಂಶೋಧನಾ ಕೇಂದ್ರ ಸ್ಥಾಪನೆ.
- ಮೈಸೂರಿನಲ್ಲಿ ಸ್ವಾಮಿ ವಿವೇಕಾನಂದರ ಭೇಟಿ ನೆನಪಿಗೆ ಸಾಂಸ್ಕೃತಿಕ ಯುವ ಕೇಂದ್ರ ಸ್ಥಾಪನೆಗೆ 5 ಕೋಟಿ ರೂ.
- ಹಂಪಿ ಉತ್ಸವ, ಕಿತ್ತೂರು ಉತ್ಸವ, ಕದಂಬ ಉತ್ಸವ, ಕರಾವಳಿ ಉತ್ಸವ ಇತ್ಯಾದಿ ಸಾಂಸ್ಕೃತಿಕ ಉತ್ಸವಗಳ ಮೂಲಕ ನಾಡಿನಾದ್ಯಂತ ಕಲೆ ಸಂಸ್ಕೃತಿಗಳ ಪುನರುಜ್ಜೀವನಕ್ಕೆ ಪ್ರೋತ್ಸಾಹ.
- ರಾಜ್ಯೋತ್ಸವ ಪ್ರಶಸ್ತಿ ವಿಜೇತರಿಗೆ ಪ್ರಪ್ರಥಮ ಬಾರಿಗೆ 1 ಲಕ್ಷ ರೂ ನಗದು ಬಹುಮಾನ.
- ಅನಿವಾಸಿ ಕನ್ನಡಿಗರಿಗಾಗಿ "ಅನಿವಾಸಿ ಕನ್ನಡಿಗರ ಕೋಶ" ಸ್ಥಾಪನೆ.

ನಾಡಿನ ಜನತೆಗೆ
53ನೇ ಕರ್ನಾಟಕ ರಾಜ್ಯೋತ್ಸವದ
ಶುಭಾಶಯಗಳು

ಕರ್ನಾಟಕ ವಾರ್ತೆ

ಮಹಾಯಾನವೆಂಬ ಹೊಸಯಾನ

ಡಾ. ಎಸ್. ನಟರಾಜ್ ಬೂದಾಳು

ಬುದ್ಧನ ಲೋಕವಿವರಣೆ ಉದ್ದೇಶ ಅಧಿಕಾರದ ನಿರ್ವಚನವಲ್ಲ. ಬದಲಿಗೆ ಲೋಕಜೀವಿಗಳನ್ನು ದು:ಖದಿಂದ ಪಾರು ಮಾಡುವುದಾಗಿದೆ. ಹಾಗಾಗಿ ದು:ಖವನ್ನು ವಿವರಿಸಿಕೊಡುವ ನಾಲ್ಕು ಶ್ರೇಷ್ಠ ಸತ್ಯಗಳಿಗೂ ಬೌದ್ಧ ಸೌಂದರ್ಯಮೀಮಾಂಸೆಗೂ ನೇರವಾದ ಸಂಬಂಧವಿದೆ. ಲೋಕಸಂಬಂದವನ್ನು ವಿವರಿಸಿಕೊಳ್ಳುವಲ್ಲಿನ ದೋಷವೇ ದು:ಖವಾಗಿ ಪರಿಣಮಿಸುವುದರಿಂದ, ಸರಿಯಾದ ದೃಷ್ಟಿಯು ಮರೆವನ್ನು ನಾಶ ಮಾಡಿ ದು:ಖದ ಬಿಡುಗಡೆಗೆ ಕಾರಣವಾಗುತ್ತದೆ. ಧರ್ಮಗಳಾಗಲೀ/ಪಂಥಗಳಾಗಲೀ ನೀಡುವ ತಪ್ಪು ಲೋಕವಿವರಣೆ ನಮ್ಮಲ್ಲಿನ 'ಮರವೆ'ಯನ್ನು ಪ್ರಚೋದಿಸುತ್ತದೆ. ಹಿಂದೂ ಧರ್ಮ ಮಾಡಿದ್ದು ಮತ್ತು ಮಾಡುತ್ತಿರುವುದು ಅದನ್ನೆ. ಹಿಂದೂ ಧರ್ಮದಲ್ಲಿನ ಅಷ್ಟು ದೊಡ್ಡ ಸಮೂಹವು, ಸಾವಿರಾರು ವರ್ಷಗಳ ಕಾಲ ಅಸ್ಪೃಶ್ಯತೆಯನ್ನು ತೆಪ್ಪಗೆ ಅನುಭವಿಸುವಂತೆ ಮಾಡಿದ್ದು ಯಾವುದು? ಅಷ್ಟು ದೀರ್ಘಕಾಲ ಅವರನ್ನು ದಿಕ್ಕು ತಪ್ಪಿಸಿದ್ದು ಯಾವುದು? ಇವುಗಳಿಗೆ ಉತ್ತರ ದೊರಕುವುದು ಇಲ್ಲಿಯೇ ಎಂಬುದು ನಿಜವಾಗಿಯೂ ಆಶ್ಚರ್ಯಕರವಾದ ಸಂಗತಿ.

ಸೌಂದರ್ಯ ಮೀಮಾಂಸೆಯ ಅಧ್ಯಯನವೆಂದರೆ ಮೊದಲಿಗೆ ಲೋಕವಿವರಣೆಯ ಅಧ್ಯಯನ ಮತ್ತು ಅದನ್ನಾಧರಿಸಿದ ಕಾವ್ಯಕಲೆಗಳ ವಿಶ್ಲೇಷಣೆಯೆಂದೇ ಅರ್ಥ. ಏಕೆಂದರೆ ಎಲ್ಲ ದರ್ಶನಗಳೂ ತಮ್ಮ ವಿವರಣೆಯನ್ನು ಲೋಕವನ್ನು ವಿವರಸಿಕೊಡುವುದರಿಂದಲೇ ಪ್ರಾರಂಭಿಸುತ್ತವೆ. ಈ ಲೋಕದ ಉಗಮದ ಬಗೆಗೆ ಬೌದ್ಧ ಧರ್ಮವು ಮೌನ ತಾಳುತ್ತದೆ. ಕೆಲವು ದರ್ಶನಗಳು ಲೋಕ ವನ್ನು 'ಇದೆ'(ಸತ್) ಎಂದು ಭಾವಿಸುತ್ತವೆ. ಇನ್ನು ಕೆಲವು 'ಇಲ್ಲ' (ಅಸತ್) ಎಂದು ಭಾವಿಸುತ್ತವೆ. ನಮ್ಮೆದುರಿನ ವಸ್ತುಪ್ರಪಂಚದ ಮೂಲದ್ರವ್ಯ ಏನು? ಎಂಬುದೇ ಇಲ್ಲಿನ ಜಿಜ್ಞಾಸೆ. ಬೌದ್ಧ ಧರ್ಮದ ಹೊರತಾಗಿ ಉಳಿದೆಲ್ಲ ಧರ್ಮಗಳೂ ಲೋಕವನ್ನು 'ಇದೆ' ಎಂದೋ 'ಇಲ್ಲ' ಎಂದೋ ವಿವರಿಸುತ್ತವೆ. ಆಧುನಿಕ ವಿಜ್ಞಾನದ ಪರಿಭಾಷೆ ಯಲ್ಲಿ ಇದನ್ನು ವಿವರಿಸುವುದಾದರೆ, ಲೋಕದ ಮೂಲದ್ರವ್ಯವು 'ಕಣ'ವೋ 'ಅಲೆಯೋ" ಎಂಬುದೇ ಇಲ್ಲಿನ ಪ್ರಶ್ನೆ. ಕಣ ಎಂದಾದರೆ ಅಸ್ತಿತ್ವವಾದ, ಅಲೆ ಎಂದಾದರೆ ನಾಸ್ತಿತ್ವವಾದ. ಸಾಮಾನ್ಯವಾಗಿ ಎಲ್ಲ ದರ್ಶನಗಳೂ (ಬೌದ್ಧ ಧರ್ಮದ ಹೊರತಾಗಿ) ಯಾವುದಾದರೊಂದನ್ನು ಒಪ್ಪುತ್ತವೆ. ಉದಾಹರಣೆಗೆ ವೈದಿಕ ದರ್ಶನಗಳ ನಿಲುವುಗಳಲ್ಲಿ ಒಂದು ನಿಲುವು ಇದು: (ಇದನ್ನು ಭರ್ತೃಹರಿಯ ವಾಕ್ಯಪದೀಯದಿಂದ ಉದ್ಧರಿಸಲಾಗಿದೆ)

"ಅನಾದಿನಿಧನಂ ಬ್ರಹ್ಮಶಬ್ದತತ್ತ್ವಂ ಯದಕ್ಷರಂ/
ವಿವರ್ತತೇರ್ಥಭಾವೇನ ಪ್ರಕ್ರಿಯಾ ಜಗತೋ ಯತ://

(ಇಲ್ಲಿನ ಶಬ್ದ ಮತ್ತು ಅರ್ಥ ಪದಗಳಿಗೆ ಇರಬಹುದಾದ ಅನೇಕ ಅರ್ಥಗಳಲ್ಲಿ, ಅರ್ಥವೆಂದರೆ ಪದಾರ್ಥಪ್ರಪಂಚವೆಂದೂ, ಶಬ್ದವೆಂದರೆ ಪದಾರ್ಥಪ್ರಪಂಚವನ್ನು ಸೃಷ್ಟಿಸಿರುವ 'ಅಲೆ'ಯ ರೂಪದ 'ಮೂಲವಸ್ತು'ವೆಂದೂ ಭಾವಿಸಲು ಸಾಧ್ಯವಿದೆ) ಉತ್ಪತ್ತಿವಿನಾಶಗಳಿಲ್ಲದ ಶಾಶ್ವತವಾಗಿರುವ ಶಬ್ದದ ಮೂಲಸ್ವರೂಪವೇ ಬ್ರಹ್ಮವೆನಿಸುತ್ತದೆ. ಇದು ಘಟ, ಪಟ – ಮೊದಲಾದ ಪದಾರ್ಥರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಈ ಶಬ್ದತತ್ತ್ವದಿಂದ ಜಗತ್ತಿನ ಸೃಷ್ಟಿಯಾಗಿದೆ. ಪರಬ್ರಹ್ಮವು ಶಬ್ದಸ್ವರೂಪವೆಂಬುದು ವೈಯಾಕರಣರ ಸಿದ್ಧಾಂತ.. ಇರತಕ್ಕದ್ದು ಶಬ್ದ ಬ್ರಹ್ಮ ಒಂದೇ ಎಂದು ವೇದವು ಮತ್ತೆ ಮತ್ತೆ ಸಾರಿದೆ. ಅದು ನಾನಾ ಶಕ್ತಿಗಳನ್ನಾಶ್ರಯಿಸಿ ನಾನಾರೂಪವಾಗಿರುತ್ತದೆ. (ಅನೇಕ ಪದಾರ್ಥಗಳನ್ನು ಸೃಜಿಸಬಲ್ಲ) ಶಕ್ತಿಗಳಿಂದಲೇ ಅದು ಒಂದೇ ಆಗಿ, ಭಿನ್ನವಾಗದಿದ್ದರೂ ಭಿನ್ನವಾಗಿ ನಾನಾ ರೂಪಗಳಲ್ಲಿರುವಂತೆ ಕಂಡು ಬರುತ್ತದೆ. ಬ್ರಹ್ಮವು ಸರ್ವಶಕ್ತಿಸಮನ್ವಿತವಾದ್ದರಿಂದ ಪಂಚಮಹಾಭೂತಗಳ ರೂಪದಲ್ಲಿಯೂ ಮನುಷ್ಯ, ಮೃಗ, ಪಕ್ಷಿ, ಮರ, ಘಟ, ಪಟಾದಿಗಳ ರೂಪದಲ್ಲಿಯೂ ಕಾಣಿಸಿಕೊಳ್ಳಬಲ್ಲದು. ಏವಂಚ ಶಬ್ದ ಬ್ರಹ್ಮ ಒಂದೇ ಇದೆ".(ವಾಕ್ಯಪದೀಯ -ವಿದ್ವಾನ್ ಎನ್. ರಂಗನಾಥಶರ್ಮಾ) . ಮಹಾವೈಯಾಕರಣಿ ಭರ್ತೃಹರಿ ಕೂಡ ತನ್ನ ವ್ಯಾಕರಣವಿಜ್ಞಾನದ ವಿವರಣೆಗೆ ತೊಡಗುವುದು ಲೋಕವಿವರಣೆಯನ್ನು ನೀಡುವ ಮೂಲಕವೇ. ಅವನ ಪ್ರಕಾರ ಈ ಲೋಕ ಸೃಷ್ಟಿಯ ಮೂಲ ಆಕರವಾಗಿರುವ 'ಅದು' ಅಲೆಯ ರೂಪದಲ್ಲಿದೆ. ಇಷ್ಟು ದೀರ್ಘವಿವರಣೆಗೆ ತೊಡಗಲು ಅನೇಕ ಕಾರಣಗಳಿವೆ. ಅವುಗಳಲ್ಲಿ ಕೆಲವನು, ಚರ್ಚಿಸಬಹುದು.



ಲೋಕವನ್ನು ವಿವರಿಸುವ ಹಕ್ಕಿಗಾಗಿ ಸೆಣಸಾಡುವ ಅನೇಕ ಸಂಸ್ಥೆಗಳಿವೆ. ಈ ಹೋರಾಟಕ್ಕೆ ಭಿನ್ನ ಉದ್ದೇಶಗಳಿವೆ. ಕೇವಲ ವಿವರಿಸುವ ಉದ್ಯೋಗವನ್ನಷ್ಟೆ ಮಾಡಿ ತಣ್ಣಗಿರುವ ಪಂಥವೂ ಇಲ್ಲ, ಸಂಸ್ಥೆಯೂ ಇಲ್ಲ. ಹೆಚ್ಚೆಂದರೆ ಮನುಷ್ಯನನ್ನು ಇಡಿಯಾಗಿ ಅಧಿಕಾರದ ಕೇಂದ್ರದಲ್ಲಿ ಪ್ರತಿಷ್ಠಾಪಿಸಿ, ಅವನ ಅನುಕೂಲಕ್ಕಾಗಿ ವಿವರಣೆಯ ಉದ್ಯೋಗ ಹಿಡಿವ ವಿಜ್ಞಾನ ಒಂದು ಕಡೆಯಾದರೆ ಸಮೂಹದ ಭಿನ್ನ ಭಿನ್ನ ಗುಂಪುಗಳಿಗೆ ಯಜಮಾನಿಕೆ ದೊರಕಿಸಿಕೊಡುವ ಊಳಿಗ ಇನ್ನು ಕೆಲವು ವ್ಯಾಖ್ಯಾನಗಳದ್ದು. ಈ ಎಲ್ಲದರ ಹಿಂದೆ ಅಧಿಕಾರವೇ ಚಾಲಕಶಕ್ತಿ. ಹಾಗಾಗಿ ಅಧಿಕಾರ ಕೇಂದ್ರಗಳೂ ಕೂಡ, ತಮಗೆ ಅಧಿಕಾರವನ್ನು ನೀಡಿದ ಜನಸಾಮಾನ್ಯರನ್ನು ನಿರ್ಲಕ್ಷಿಸಿ, ತನಗೆ ಅನುಕೂಲಕರವಾದ ವ್ಯಾಖ್ಯಾನ ನೀಡಬಲ್ಲ ಧಾರ್ಮಿಕ ಕೇಂದ್ರಗಳಿಗೆ ಜೋತುಬೀಳುತ್ತವೆ. ಅಂತಹ ಬೆಳವಣಿಗೆಗಳನ್ನು ನಾವು ಕಾಣುತ್ತಿದ್ದೇವೆ.

ಆದರೆ ಬುದ್ಧನ ಲೋಕವಿವರಣೆ ಉದ್ದೇಶ ಅಧಿಕಾರದ ನಿರ್ವಚನವಲ್ಲ. ಬದಲಿಗೆ ಲೋಕಜೀವಿಗಳನ್ನು ದು:ಖದಿಂದ ಪಾರು ಮಾಡುವುದಾಗಿದೆ. ಹಾಗಾಗಿ ದು:ಖವನ್ನು ವಿವರಿಸಿಕೊಡುವ ನಾಲ್ಕು ಶ್ರೇಷ್ಠ ಸತ್ಯಗಳಿಗೂ ಬೌದ್ಧ ಸೌಂದರ್ಯಮೀಮಾಂಸೆಗೂ ನೇರವಾದ ಸಂಬಂಧವಿದೆ. ಲೋಕಸಂಬಂದವನ್ನು ವಿವರಿಸಿಕೊಳ್ಳುವಲ್ಲಿನ ದೋಷವೇ ದು:ಖವಾಗಿ ಪರಿಣಮಿಸುವುದರಿಂದ, ಸರಿಯಾದ ದೃಷ್ಟಿಯು ಮರೆವನ್ನು ನಾಶ ಮಾಡಿ ದು:ಖದ ಬಿಡುಗಡೆಗೆ ಕಾರಣವಾಗುತ್ತದೆ. ಧರ್ಮಗಳಾಗಲೀ/ಪಂಥಗಳಾಗಲೀ ನೀಡುವ ತಪ್ಪು ಲೋಕವಿವರಣೆ ನಮ್ಮಲ್ಲಿನ 'ಮರವೆ'ಯನ್ನು ಪ್ರಚೋದಿಸುತ್ತದೆ. ಹಿಂದೂ ಧರ್ಮವು ಮಾಡಿದ್ದು ಮತ್ತು ಮಾಡುತ್ತಿರುವುದು ಅದನ್ನೆ. ಹಿಂದೂ ಧರ್ಮದಲ್ಲಿನ ಅಷ್ಟು ದೊಡ್ಡ ಸಮೂಹವು, ಸಾವಿರಾರು ವರ್ಷಗಳ ಕಾಲ ಅಸ್ಪೃಶ್ಯತೆಯನ್ನು ತೆಪ್ಪಗೆ ಅನುಭವಿಸುವಂತೆ ಮಾಡಿದ್ದು ಯಾವುದು? ಅಷ್ಟು ದೀರ್ಘಕಾಲ ಅವರನ್ನು ದಿಕ್ಕು ತಪ್ಪಿಸಿದ್ದು ಯಾವುದು? ಇವುಗಳಿಗೆ ಉತ್ತರ ದೊರಕುವುದು ಇಲ್ಲಿಯೇ ಎಂಬುದು ನಿಜವಾಗಿಯೂ ಆಶ್ಚರ್ಯಕರವಾದ ಸಂಗತಿ. ಒಮ್ಮೆ ತಪ್ಪು ಲೋಕವಿವರಣೆಯನ್ನು ಒಂದು ಸಮೂಹ ಒಪ್ಪಿಕೊಂಡು ಬಾಳಲಾರಂಭಿಸಿದರೆ, ಅದರ ಮುಂದಿನ ಪ್ರಯಾಣ ಪೂರ್ತಿ ದಿಕ್ಕು ತಪ್ಪಿದ ಯಾನವಾಗಲೇಬೇಕು. ಅನ್ಯಾಯವನ್ನೆಸಗಲು ತೀರ್ಮಾನಿಸಿಕೊಂಡ ಒಂದು ವರ್ಗ ಉಳಿದ ಸಮೂಹವನ್ನು ದಿಕ್ಕು ತಪ್ಪಿಸಿ ತನ್ನ ಅಂಕೆಗೆ ತೆಗೆದುಕೊಳ್ಳುವುದೇ ಹೀಗೆ ತಪ್ಪು ವಿವರಣೆಯನ್ನು ನೀಡುವ ಮೂಲಕ. ಒಮ್ಮೆ ಯಾವುದಾದರೊಂದು ವಿವರಣೆಯನ್ನು ಒಪ್ಪಿಕೊಂಡು ಹೊರಟ ಪ್ರಯಾಣವನ್ನು ಸರಿಪಡಿಸಿಕೊಳ್ಳಬೇಕಾದರೆ ಆ ಪ್ರಯಾಣದ ಆರಂಭಬಿಂದುವಿಗೆ ಬಂದು ತಪ್ಪು ವಿವರಣೆಯನ್ನು ನಿರಾಕರಿಸಿ ಸರಿಪಡಿಸಿಕೊಳ್ಳಬೇಕು. ಇದು ಅತ್ಯಂತ ಸೂಕ್ಷ್ಮ ನೆಲೆಯಲ್ಲಿ ನಡೆಯುವ ಸಮರವಾದುದರಿಂದ ಎಚ್ಚರತಪ್ಪಿದ ಸಮೂಹಕ್ಕೆ ಯಾತನೆ ತಪ್ಪಿದ್ದಲ್ಲ. ಅದಕ್ಕೆ ಅಲ್ಲಮ ಪ್ರಭುವು ಶರಣನೊಬ್ಬ ತನ್ನ ಯಾನವನ್ನು ಆದಿ ಆಧಾರವಿಲ್ಲದಂದಿಗೆ ಬಂದು, ಸಚರಾಚರವೆಲ್ಲ ರಚನೆಗೆ ಬಾರದಂದಿಗೆ ಬಂದು, ಎಲ್ಲವನ್ನು ನಿರಸನಗೊಳಿಸಿಕೊಂಡು ಆರಂಭಿಸಬೇಕೆಂದು ಸೂಚಿಸುತ್ತಾನೆ.

ಹಾಗೆಯೇ ಮಂಟೇಸ್ವಾಮಿಯು ಬೆಳಕಿನಹುಳುವಿನ ರೂಪದಲ್ಲಿ ಬಂದು ತನಗೆ ಬೇಕಾದ ಹಾಗೆ ತಾನೆ ಲೋಕಗಳನ್ನು ಸೃಷ್ಟಿಸಿಕೊಳ್ಳುತ್ತಾನೆ. ತನ್ನಮೇಲೆ ಸವಾರಿ ಮಾಡದಿರಲಿ ಎಂದು ಎಲ್ಲ ದೇವತೆಗಳನ್ನು ತಾನೆ ಸೃಷ್ಟಿಸಿ ಕೆಲಸಗಳನ್ನು ಹಂಚುತ್ತಾನೆ!.

ಹೊಸ ಯಾನ... ಮಹಾಯಾನ

ಇನ್ನು ಮೇಲೆ ನಿರಸನದ ಕಾಲ. ಇದುವರೆಗೆ ನಾವು ಕಟ್ಟಿಕೊಂಡು ಬಂದ ರಚನೆಗಳು ಮತ್ತು ಅವುಗಳನ್ನಾಧರಿಸಿದ ಬದುಕಿನ ಕ್ರಮಗಳು ಇಂದು ತಮ್ಮ ಸೋಲನ್ನು ಒಪ್ಪಿಕೊಂಡು ಕೈ ಚೆಲ್ಲಿವೆ. ಇದುವರೆಗೆ ಕಾರಣಮೀಮಾಂಸೆ ಮತ್ತು ಪರಿಣಾಮ ಮೀಮಾಂಸೆಗಳು ನಮ್ಮ ಲೋಕಗ್ರಹಿಕೆಯನ್ನು ನಿಯಂತ್ರಿಸಿದವು. ಇವುಗಳನ್ನು ಆಧರಿಸಿದ ಕಾವ್ಯ ಮೀಮಾಂಸೆಯು ನಮ್ಮ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯನ್ನು ನಿರ್ದೇಶಿಸಿತು. ರಚನೆಗಳು ನಿಜವೆಂದು ನಂಬಿ ಹುಟ್ಟಿಕೊಂಡ ಮೀಮಾಂಸೆಗಳು ನಮ್ಮ ಬಾಳನ್ನು ಸಂಕಟಕ್ಕೆ ನೂಕಿವೆ. ಸಾಮಾನ್ಯವಾಗಿ ಸಮೂಹವೊಂದರ ಸಾಹಿತ್ಯ ಮೀಮಾಂಸೆ ಮತ್ತು ಜೀವನ ಮೀಮಾಂಸೆಯು ಒಂದೇ ತಾತ್ವಿಕ ಆಕರದಿಂದ ನಿರ್ದೇಶಿತವಾಗಿರುತ್ತವೆ. ಅಂದರೆ ಇವೆರಡನ್ನೂ ಒಂದೇ ದರ್ಶನವು ನಿಯಂತ್ರಿಸುತ್ತಿರುತ್ತದೆ. ಉದಾಹರಣೆಗೆ ವಚನಕಾರರ ಜೀವನ ಮೀಮಾಂಸೆ ಮತ್ತು ಕಾವ್ಯ ಮೀಮಾಂಸೆಯು ಒಂದೇ ತತ್ವದಿಂದ ರೂಪಿತವಾಗಿದೆ. ಅವರಲ್ಲಿ ನಡೆ ಮತ್ತು ನುಡಿಯ ನಡುವೆ ಭಿನ್ನತೆ ಇಲ್ಲ. ಆದರೆ ಇದೇ ನಿಲುವನ್ನು ಭಾರತೀಯವೆಂದು ನಾವು ಕರೆಯುತ್ತಿರುವ ನಮ್ಮ ಜೀವನಕ್ಕೆ ಅನ್ವಯಿಸಿ ನೋಡಿದಾಗ ಗೋಚರವಾಗುವ ಸಂಗತಿಯೆಂದರೆ ನಮ್ಮ ಜೀವನ ಮೀಮಾಂಸೆಯಲ್ಲಿ ಬಹಳ ದೊಡ್ಡ ಊನಗಳಿವೆ. ಅವು ನಮ್ಮ ಜೀವನ ಕ್ರಮವನ್ನು ವಿರೂಪಗೊಳಿಸಿವೆ. ಯಾವ ತತ್ವವು ನಮ್ಮ ಜೀವನ ಮೀಮಾಂಸೆಯನ್ನು ನಿರ್ದೇಶಿಸುತ್ತಿದೆಯೋ ಅದೇ ತತ್ವ ನಮ್ಮ ಕಾವ್ಯ ಮೀಮಾಂಸೆಯನ್ನೂ ನಿರ್ದೇಶಿಸುತ್ತಿದೆ. ಹಾಗಾಗಿ ನಮ್ಮ ಜೀವನಕ್ರಮದಲ್ಲಿನ ದೋಷಗಳು ನಮ್ಮ ಕಾವ್ಯ ಮೀಮಾಂಸೆಯಲ್ಲಿಯೂ ಇರಲೇಬೇಕು. ಇದುವರೆಗೆ ನಂಬಿದ ಕಾರಣ ಮತ್ತು ಪರಿಣಾಮ ಮೀಮಾಂಸೆಗಳನ್ನಾಧರಿಸಿದ ಲೋಕಸಂಬಂಧದ ನಿರ್ವಚನವು ಉಂಟು ಮಾಡಿರುವ ವಿಕಲ್ಪಗಳು ನಮ್ಮ ಬದುಕಿನ ಸಾಮರಸ್ಯವನ್ನು ನಾಶಮಾಡಿವೆ. ಜನಸಮೂಹಗಳು ಕಟ್ಟಿಕೊಂಡಿರುವ ಬದುಕಿನ ಕ್ರಮ; ಒಪ್ಪಿಕೊಂಡಿರುವ ಮೌಲ್ಯಗಳು ಇತ್ಯಾದಿಗಳನ್ನು ಇತ್ಯರ್ಥಗೊಳಿಸುವ ನಿರ್ಧಾರಕ ಶಕ್ತಿಗಳಾಗಿ ಈ ಮೀಮಾಂಸೆಗಳು ಕೆಲಸ ಮಾಡಿರುವುದರಿಂದ ನಮ್ಮ ಲೋಕಸಂಬಂಧದ ನಿರ್ವಹಣೆಯಲ್ಲಿನ ತೊಡಕುಗಳೇನಿದ್ದರೂ ಅವುಗಳಿಗೆ ಕಾರಣಗಳನ್ನು ಇಲ್ಲಿಯೇ ಹುಡುಕಬೇಕಾಗಿದೆ. ಕಾರಣ ಮೀಮಾಂಸೆ, ಪರಿಣಾಮ ಮೀಮಾಂಸೆಗಳೆಂಬ ಪರಿಕಲ್ಪನೆಗಳ ಸದ್ಯದ ಬಳಕೆಯ ರೀತಿಯನ್ನು ಇಲ್ಲಿಯೇ ವಿವರಿಸಿ ನಂತರ ಮುಂದುವರಿಯಬಹುದು.

ಪದಾರ್ಥ ಪ್ರಪಂಚಕ್ಕೆ ಶಾಶ್ವತ ಸ್ವತಂತ್ರ ಆದಿಕಾರಣದ ಶೋಧನೆಗೆ ಸಂಬಂಧಿಸಿದುದು ಕಾರಣ ಮೀಮಾಂಸೆ. ಹಾಗೆಯೇ ಶಾಶ್ವತ ಅಂತ್ಯ, ಫಲ, ಪರಿಣಾಮಗಳನ್ನು ಶೋಧಿಸುವುದು ಪರಿಣಾಮ ಮೀಮಾಂಸೆ. ಆದಿ ಕಾರಣವೆಂಬುದು ಅಗ್ರಾಹ್ಯವೆಂಬ ಕಾರಣಕ್ಕೆ ಆ ಸಂಬಂಧದ ಪ್ರಶ್ನೆಗಳಿಗೆ ಬುದ್ಧ ಮೌನ ತಾಳಿದ. ಪ್ರಪಂಚದ ಆದಿಕಾರಣದ ಬಗೆಗಿನ ಊಹೆ ಎಂದೂ ಮುಗಿಯದ ಹಿಮ್ಮುಖ ಪಯಣ. ಹಾಗೆಯೇ ಶಾಶ್ವತ ಪರಿಣಾಮವೆಂಬುದು ಕೂಡಾ. ಈ ಪ್ರಪಂಚಕ್ಕೆ ಪ್ರಾರಂಭವೊಂದಿರಲೇಬೇಕು ಎಂಬ ನಿಲುವೇ ಅನಗತ್ಯವಾದುದು. ಆದರೆ ಪ್ರಪಂಚದ ಬಹುತೇಕ ದರ್ಶನಗಳು ಲೋಕಕ್ಕೆ ಪ್ರಾರಂಭವೊಂದನ್ನು ಆರೋಪಿಸುವುದರ ಜೊತೆಗೆ ಅಂತಹ ಪ್ರಾರಂಭಕ್ಕೆ ತಾವು ನಂಬಿಕೊಂಡಿರುವ ದೈವವೋ ಪುಸ್ತಕವೋ ಕಾರಣವೆಂದು ದೃಢವಾಗಿ ನಂಬುತ್ತವೆ. ಚರಿತ್ರೆಯಲ್ಲಿ ಇಂತಹ ನಂಬಿಕೆಗಳನ್ನು ಪ್ರಶ್ನಿಸಿದ್ದಕ್ಕೆ ಅನೇಕ ವಿಜ್ಞಾನಿಗಳ ತಲೆಗಳೇ ಉರುಳಿಹೋಗಿವೆ. ಈ ವಿಷಯದಲ್ಲಿ ಬಹುತೇಕ ಎಲ್ಲ ಧರ್ಮಗಳೂ ಹಠಮಾರಿಗಳೇ. ಈ ವಿಷಯದಲ್ಲಿ ಧರ್ಮಗಳು ಹೀಗೇಕೆ ವರ್ತಿಸುತ್ತವೆಂದರೆ ಅವುಗಳ ತಾತ್ವಿಕತೆಯ ಸ್ವರೂಪವನ್ನು ನಿರ್ಧರಿಸುವುದೇ ಅವು ಲೋಕವನ್ನು ಹೇಗೆ ವಿವರಿಸಿಕೊಳ್ಳುತ್ತವೆ ಎಂಬ ಸಂಗತಿ. ನಮ್ಮ ಸುತ್ತಲಿನ ಧರ್ಮಗಳು ಲೋಕವನ್ನು ಏನೆಂದು ವಿವರಿಸಿಕೊಂಡಿವೆ ಎಂಬ ಸಂಗತಿಯ ಬಗೆಗೆ ಒಮ್ಮೆ ಗಮನ ಹರಿಸಿದರೆ ಬಹುಪಾಲು ಅಪ್ಪಟ ಸುಳ್ಳಿನ ಕಟ್ಟುಕತೆಗಳ ಲೋಕವಿವರಣೆಗಳನ್ನು ನಮ್ಮ ಮುಂದಿಟ್ಟಿರುವುದನ್ನು ಕಾಣುತ್ತೇವೆ. ಈ ಕಟ್ಟುಕತೆಗಳು ಕೇವಲ ಧಾರ್ಮಿಕ ನಂಬಿಕೆಗಳಷ್ಟೇ ಆಗಿದ್ದರೆ ತೊಂದರೆಯಿರಲಿಲ್ಲ. ಆದರೆ ನಮ್ಮ ಸಾಮಾಜಿಕ ಜೀವನ ಮತ್ತು ರಾಜಕೀಯ ನಿರ್ಧಾರಗಳನ್ನೂ ಇವೇ ನಿರ್ಧರಿಸಿಬಿಡುತ್ತವೆ. ಇದರಿಂದಾಗಿ ರಾಜಕೀಯ ಶಕ್ತಿಕೇಂದ್ರಗಳು ತಮ್ಮ ಅಧಿಕಾರವನ್ನು ರೂಢಿಸಿಕೊಳ್ಳಲು ಪ್ರಜೆಗಳನ್ನು ಬಿಟ್ಟು ಧಾರ್ಮಿಕ ಕೇಂದ್ರಗಳನ್ನು ಅವಲಂಬಿಸುತ್ತವೆ. ಅಂತಹ ಬೆಳವಣಿಗೆಯನ್ನು ನಾವೀಗ ಕಾಣುತ್ತಿದ್ದೇವೆ.

ಈ ಪ್ರಪಂಚಕ್ಕೆ ಪ್ರಾರಂಭವೊಂದಿರಲೇಬೇಕು ಎಂಬ ನಿಲುವೇ ಅನಗತ್ಯವಾದುದು. ಆದರೆ ಪ್ರಪಂಚದ ಬಹುತೇಕ ದರ್ಶನಗಳು ಲೋಕಕ್ಕೆ ಪ್ರಾರಂಭವೊಂದನ್ನು ಆರೋಪಿಸುವುದರ ಜೊತೆಗೆ ಅಂತಹ ಪ್ರಾರಂಭಕ್ಕೆ ತಾವು ನಂಬಿಕೊಂಡಿರುವ ದೈವವೋ ಪುಸ್ತಕವೋ ಕಾರಣವೆಂದು ದೃಢವಾಗಿ ನಂಬುತ್ತವೆ. ಚರಿತ್ರೆಯಲ್ಲಿ ಇಂತಹ ನಂಬಿಕೆಗಳನ್ನು ಪ್ರಶ್ನಿಸಿದ್ದಕ್ಕೆ ಅನೇಕ ವಿಜ್ಞಾನಿಗಳ ತಲೆಗಳೇ ಉರುಳಿಹೋಗಿವೆ. ಈ ವಿಷಯದಲ್ಲಿ ಬಹುತೇಕ ಎಲ್ಲ ಧರ್ಮಗಳೂ ಹಠಮಾರಿಗಳೇ. ಈ ವಿಷಯದಲ್ಲಿ ಧರ್ಮಗಳು ಹೀಗೇಕೆ ವರ್ತಿಸುತ್ತವೆಂದರೆ ಅವುಗಳ ತಾತ್ವಿಕತೆಯ ಸ್ವರೂಪವನ್ನು ನಿರ್ಧರಿಸುವುದೇ ಅವು ಲೋಕವನ್ನು ಹೇಗೆ ವಿವರಿಸಿಕೊಳ್ಳುತ್ತವೆ ಎಂಬ ಸಂಗತಿ.

ಇಂದು ಜಗತ್ತು ಬುದ್ಧನೆಡೆಗೆ ನೋಡಲು ಎರಡು ಪ್ರಮುಖ ಕಾರಣಗಳಿವೆ. ಒಂದು ಅವನು ಲೋಕವನ್ನು ಸರಿಯಾಗಿ ವಿವರಿಸಿಕೊಟ್ಟಿದ್ದಾನೆ ಮತ್ತು ಎಲ್ಲವನ್ನೂ ಅದಿರುವಂತೆ ನೋಡಲು ಕಲಿಸಿಕೊಟ್ಟಿದ್ದಾನೆ. ಎರಡನೆಯದಾಗಿ ಈ ವಿವರಣೆಯು ನಮ್ಮನ್ನು ಲೋಕದೊಡನೆ ಕರುಣೆ ಮೈತ್ರಿಯಿಂದ ವರ್ತಿಸುವಂತೆ ಪ್ರೇರೇಪಿಸುತ್ತದೆ. ಈ ಕರುಣಾಮೈತ್ರಿ ಮಾರ್ಗವು ಹೊರಗಿನಿಂದ ಆವಾಹಿಸಿಕೊಳ್ಳಬೇಕಾದ ಭಾವ ವಿಶೇಷವಾಗಿರದೆ ಲೋಕ ಸಂಬಂಧದ ಸರಿಯಾದ ಅರಿವಿನಿಂದ ಮೂಡುವ ಅಂತರ್ವಾಹಿನಿಯಾಗಿದೆ.

ಬುದ್ಧ ಗುರುವು ಅಸ್ತಿತ್ವವಾದ ಮತ್ತು ನಾಸ್ತಿತ್ವವಾದಗಳೆಂಬ ಎರಡೂ ತುದಿಗಳನ್ನು ನಿರಾಕರಿಸಿ, ಕಣ್ಣೆದುರಿಗಿನ ಈ ವಸ್ತು ಪ್ರಪಂಚವನ್ನು 'ಸ್ವೀಕರಿಸಿ' ಅದನ್ನು ನಿರಂತರ ಚಲನೆಯಲ್ಲಿರುವ, ಶಾಶ್ವತವಲ್ಲದ, ಸ್ವಭಾವವಿಲ್ಲದ ಕ್ರಿಯಾ ಸಾಮರ್ಥ್ಯವನ್ನಾಗಿ ವಿವರಿಸಿದನು. ಈ ಕ್ರಿಯಾ ಸಾಮರ್ಥ್ಯವನ್ನು ಚಲನೆಯಲ್ಲಿಯೇ ಇರುವ ಸಾಪೇಕ್ಷ ಕಾರಣ, ಸಾಪೇಕ್ಷ ಪ್ರತ್ಯಯ (ಪರಿಸ್ಥಿತಿ) ಮತ್ತು ಸಾಪೇಕ್ಷ ಫಲಗಳ ನೆರವಿನಿಂದ ವಿವರಿಸಿದನು. ಉದಾಹರಣೆಗೆ: ಬೀಜ–ಮೊಳಕೆ–ಸಸಿ–ವೃಕ್ಷ–ಹೂವು–ಫಲ–ಬೀಜ–ಮೊಳಕೆ–ಸಸಿ... ಈ ಸರಣಿಯಲ್ಲಿ ಆದಿ ಅಂತ್ಯಗಳೆಂಬ ತುದಿಗಳು ನಿರಾಕರಣೆಗೊಂಡು ಪ್ರತಿಯೊಂದು ಮತ್ತೊಂದಕ್ಕೆ ಕಾರಣವಾಗುತ್ತ ಹಿಂದಿನ ಕಾರಣಕ್ಕೆ ಪರಿಣಾಮವಾಗುತ್ತ ಚಲನೆಯಲ್ಲಿವೆ. ಹೀಗೆ ತುದಿಗಳನ್ನು ವರ್ಜಿಸಿದ (ಶಾಶ್ವತ ಕಾರಣ ಮತ್ತು ಪರಿಣಾಮಗಳನ್ನು ನಿರಾಕರಿಸಿದ) ಮಧ್ಯಮ ಪ್ರತಿಪದವು ಬುದ್ಧನಿಂದ ಪ್ರತಿಪಾದಿಸಲ್ಪಟ್ಟಿತು. ಇದನ್ನೇ ಇಲ್ಲಿ 'ಪ್ರಕ್ರಿಯಾ ಮೀಮಾಂಸೆ' ಎಂದು ಸೂಚಿಸಲಾಗಿದೆ. ಬುದ್ಧ ಎದುರಿಗಿರುವ ವಸ್ತುವನ್ನು ವಸ್ತುವೆಂದು ವಿವರಿಸುವುದಿಲ್ಲ. ಬದಲಿಗೆ ಅದನ್ನೊಂದು ಪ್ರಕ್ರಿಯೆ ಎಂದು ವಿವರಿಸುತ್ತಾನೆ. ಅದು ಹೇಗೆಂದರೆ ವಸ್ತುರೂಪ (ಫಾರ್ಮ್), ಸ್ಪರ್ಶ (ಕಾಂಟ್ಯಾಕ್ಟ್), ಸಂವೇದನೆ(ಫೀಲಿಂಗ್) ಮತ್ತು ಬೋಧೆ ಇವುಗಳಿಂದ ಉಂಟಾಗುವ ಸಂಯೋಜನೆಯನ್ನು ಸದಾ ಆಗುತ್ತಲೇ ಇರುವ ಪ್ರಕ್ರಿಯೆ ಎನ್ನಬಹುದೇ ಹೊರತು ಈಗಾಗಲೇ ಸಿದ್ಧವಾಗಿರುವ ವಸ್ತುವೆಂದು ಭಾವಿಸಲಾಗದು. ಲೋಕದಲ್ಲಿರುವ ಎಲ್ಲವೂ ಸಾಪೇಕ್ಷ ಕಾರಣ ಮತ್ತು ಪ್ರತ್ಯಯಗಳಿಂದಾದ ಸಾಪೇಕ್ಷ ಪರಿಣಾಮಗಳು ಮತ್ತು ಎಲ್ಲವೂ ನಿರಂತರ ಬದಲಾವಣೆಗೊಳ್ಳುತ್ತ ಚಲನೆಯಲ್ಲಿವೆ. ಇದನ್ನು ಪ್ರತೀತ್ಯ ಸಮುತ್ಪಾದ ಎನ್ನುತ್ತಾರೆ.

ಬುದ್ಧಗುರುವು ಈ ಪ್ರತೀತ್ಯ ಸಮುತ್ಪಾದ ತತ್ವದ ತಿಳುವಳಿಕೆಯನ್ನು ದುಃಖದ ಬಿಡುಗಡೆಯ ಮಾರ್ಗವಾಗಿಸಿದನು. ದುಃಖವೆಂಬ ಪದಕ್ಕೆ ಇರುವ ಅರ್ಥವನ್ನು ವಿವರಿಸುವ ಅನೇಕ ಪ್ರಯತ್ನಗಳಿವೆ. ಪಾಲಿ ಭಾಷೆಯ 'ದುಃಖ'ಕ್ಕೆ ಕನ್ನಡದ 'ದುಃಖ' ಸಮಾನಾರ್ಥಕ ಪದ ಅಲ್ಲ. ದುಃಖವನ್ನು ಒಂದು ಲೋಕಲಕ್ಷಣವನ್ನಾಗಿಯೂ ಬುದ್ಧ ಗುರುತಿಸಿದ್ದಾನೆ. ಅವನು ತಿಳಿಸಿದ ಮೂರು ಲೋಕಲಕ್ಷಣಗಳಲ್ಲಿ 'ದುಃಖವೂ ಒಂದು. (೧) ಎಲ್ಲ ಸಂಯೋಜನೆಗಳೂ ಅನಿತ್ಯವಾದವು (೨) ಎಲ್ಲ ಸಂಯೋಜನೆಗಳೂ ದುಃಖದಿಂದ ಕೂಡಿವೆ (೩) ಎಲ್ಲ ಧರ್ಮಗಳೂ ಅನಾತ್ಮವಾಗಿವೆ – ಈ ತ್ರಿಲಕ್ಷಣಗಳಲ್ಲಿ ಮೊದಲಿನ ಎರಡು ಲಕ್ಷಣಗಳು ಎಲ್ಲ ಸಂಯೋಜನೆಗಳನ್ನು ಕುರಿತವುಗಳಾಗಿವೆ. ಲೋಕದ ಎಲ್ಲವೂ ಅಂದರೆ ವಸ್ತು ಮತ್ತು ಜೀವ ಸಮುಚ್ಚಯದ ಎಲ್ಲವೂ ಸಂಯೋಜನೆಗಳೇ ಆಗಿವೆ ಮತ್ತು ಅವು ಸದಾ ಬದಲಾಗುತ್ತಲೇ ಇರುತ್ತವೆ. ಎರಡನೆಯದಾಗಿ ಈ ಸಂಯೋಜನೆಗಳು ದುಃಖದಿಂದ ಕೂಡಿವೆ. ವಸ್ತು ಪ್ರಪಂಚದ ಸಂಯೋಜನೆಗಳಿಗೆ ಅನ್ವಯವಾಗುವ ಈ 'ದುಃಖವು' ಜೀವ ಪ್ರಪಂಚಕ್ಕೆ ಅನ್ವಯವಾಗುವ ಭಾವ ವಿಶೇಷವಲ್ಲ, ಬದಲಿಗೆ ಸರ್ವವೂ 'ಆಗುವಿಕೆ'ಯಲ್ಲಿಯೇ ಇರುತ್ತದೆ. ಆಗಿ ಇರುವುದು ಯಾವುದೂ ಇಲ್ಲ. ಹೀಗೆ ಆಗುವ 'ತಲ್ಲಣ'

[illegible] ಎಲ್ಲ ಸಂಯೋಜನೆಗಳೂ ನಿರಂತರ ಬದಲಾವಣೆ ಮತ್ತು ಚಲನೆಯಲ್ಲಿಯೇ ಇರುತ್ತವೆ. ಈ ತಲ್ಲಣವನ್ನೇ ದುಃಖವೆಂಬ ಲಕ್ಷಣವನ್ನಾಗಿ ವಿವರಿಸಲಾಗಿದೆ. ಮನುಷ್ಯನಿಗೆ ಸಂಬಂಧಿಸಿದಂತೆ ಸಂತೋಷದ ಅನುಭವವೂ ದುಃಖವೇ. ಅದು ನಿರಂತರವಾಗದುದಕ್ಕೆ ದುಃಖ. ಸಂಕಟದ ಅನುಭವ ದೂರಾಗದುದಕ್ಕೆ ದುಃಖ ಇತ್ಯಾದಿ.

ಅನಿತ್ಯವಾದ ಸಂಯೋಜನೆಗಳನ್ನು ನಿತ್ಯವಸ್ತುಗಳೆಂದು ಭಾವಿಸಿ ವ್ಯವಹರಿಸುವುದರಿಂದ; ಸದಾ ಆಗುವಿಕೆಯಲ್ಲಿಯೇ ಇರುವ ಸಂಯೋಜನೆಗಳನ್ನು ಆಗಿ ಇರುವ ವಸ್ತುಗಳೆಂದು ಭಾವಿಸುವುದರಿಂದ ಮತ್ತು ಈ ಲೋಕವನ್ನು ಪರಿಭಾವಿಸುತ್ತಿರುವ ನಾವೂ ಸೇರಿದಂತೆ ಲೋಕಸಮಸ್ತದಲ್ಲಿ ಸ್ವತಂತ್ರ ಅಸ್ತಿತ್ವವೊಂದನ್ನು ಗುರುತಿಸಿಕೊಂಡು ವ್ಯವಹರಿಸುವ ಮಿಥ್ಯಾ ನಿಲುವಿನಿಂದಾಗಿ ನಾವು 'ದುಃಖ'ಕ್ಕೆ ಒಳಗಾಗುತ್ತೇವೆ. ಲೋಕಲಕ್ಷಣಗಳನ್ನು ಅರಿತು ಆ ಅರಿವನ್ನು ಸ್ವಯವಾಗಿಸಿಕೊಂಡರೆ ಯಾವುದಕ್ಕೂ ಅಂಟಿಕೊಳ್ಳುವ ಸಂದರ್ಭವೇ ಉಂಟಾಗುವುದಿಲ್ಲ. ಲೋಕಸಂಬಂಧದ ಜಾಲದಲ್ಲಿ ನಾವು ಬೆರೆತುಹೋಗುವುದರಿಂದ 'ದುಃಖಪಡುವ ಸ್ವತಂತ್ರ 'ಭಾವ'ವುಳ್ಳ ಜೀವಿಯೊಂದು ಇರಲೂ ಸಾಧ್ಯವಿಲ್ಲ ಮತ್ತು ದುಃಖವೂ ಸಾಧ್ಯವಿಲ್ಲ.

ಆಧುನಿಕತೆಯು ಬಹು ಸಂಭ್ರಮದಿಂದ ಮುಂದಿಡುವ ವಸ್ತುವಾದಿ ದೃಷ್ಟಿಕೋನವೂ ವಿಕಲ್ಪಗಳ ಸೃಷ್ಟಿಯಲ್ಲಿಯೇ ತೊಡಗಿದೆ. ಬಲು ಸಂಭ್ರಮದಿಂದ ಭಕ್ತಿಯನ್ನು ಅಭಿನಯಿಸುತ್ತಾ, ವಸ್ತುಗಳ ಹಿಂದೆ ವೇಗವಾಗಿ ಓಡುತ್ತಿರುವ ಆಧುನಿಕ ವಸ್ತುವಾದಿ ಲೋಕಕ್ಕೆ, ನಿರಸನ ಪ್ರಿಯವಾಗದ ಸಂಗತಿ. ಲೋಕಸಮಸ್ತವನ್ನೂ ಭಿನ್ನ ಭಿನ್ನ ಘಟಕಗಳನ್ನಾಗಿ ನೋಡುವ ನಿಲುವಿಗೆ, 'ಸಂಬಂಧ' ಪಥ್ಯವಾಗುವುದಿಲ್ಲ. ಲೋಕವನ್ನು ಸಂಬಂಧಗಳ ಸರಮಾಲೆಯೆಂದು ವಿವರಿಸುವ ಮೂಲಕ ಈ ವಿವರಣೆಯ ಉದ್ಯೋಗವನ್ನು ಲೋಕದ ಸಂಕಟ ಪರಿಹಾರಕ್ಕಾಗಿಯೇ ಮಾಡಿದವರು, ಬುದ್ಧ, ನಾಗಾರ್ಜುನ, ಅಲ್ಲಮರು. ಅವರ ವಿಚಾರಗಳಿಗೆ ಮತ್ತೆ ಜೀವ ಬರಬೇಕು.

ಬುದ್ಧನ ಕಾಲಕ್ಕಾಗಲೇ ಲೋಕವನ್ನು ವಿವರಿಸಿಕೊಡುವ ಅರುವತ್ತೆರಡು ಚಿಂತನಾಪ್ರಸ್ಥಾನಗಳಿದ್ದುವೆಂದು ಬ್ರಹ್ಮಜಾಲ ಸುತ್ತವು ತಿಳಿಸುತ್ತದೆ. ಈ ಅರುವತ್ತೆರಡು ಚಿಂತನಾಪ್ರಸ್ಥಾನಗಳ ದೃಷ್ಟಿಯನ್ನು ವಿಶ್ಲೇಷಿಸಿದಾಗ ಪ್ರಧಾನವಾಗಿ ಎರಡು ದೃಷ್ಟಿವಾದಗಳಿದ್ದುದು ಕಂಡುಬಂದಿತು. ಒಂದು : ಶಾಶ್ವತ ಅಸ್ತಿತ್ವದಲ್ಲಿ ನಂಬಿಕೆ ಇರುವ ಶಾಶ್ವತವಾದ, ಇನ್ನೊಂದು : ಅಸ್ತಿತ್ವವೇ ಇಲ್ಲ ಎನ್ನುವ ಉಚ್ಛೇದವಾದ (ನಾಸ್ತಿತ್ವವಾದ). ಇವೆರಡೂ ವಾದಗಳನ್ನು ಬುದ್ಧ ತಿರಸ್ಕರಿಸಿದ ಮತ್ತು ಮತ್ತಾವುದೇ 'ದೃಷ್ಟಿವಾದ'ವೂ ಸಹ ಸತ್ಯವನ್ನು ನುಡಿಯಲಾರದೆಂದು ತಿಳಿಸಿ, ದೃಷ್ಟಿವಾದಗಳೆಂಬ ಈ ತುದಿಗಳನ್ನು ನಿರಾಕರಿಸಿ ಮಧ್ಯಮ ಮಾರ್ಗವನ್ನು ಉಪದೇಶಿಸಿದ. ಮಧ್ಯಮ ಮಾರ್ಗ ಅಥವಾ ಶೂನ್ಯತೆಯ ವಿವರಣೆಯು ಕಚ್ಚಾಯನ ಗೊತ್ತ ಸುತ್ತ ಮತ್ತು ಧಮ್ಮಚಕ್ಕಪವತ್ತನ ಸುತ್ತ ಹಾಗೂ ವಚ್ಚಾರ್ಯಗೊತ್ತ ಸುತ್ತಗಳಲ್ಲಿ ಉಪದೇಶಿಸಲ್ಪಟ್ಟಿದೆ ಎಂದು ವಿದ್ವಾಂಸರು ಗುರುತಿಸುತ್ತಾರೆ. ಅವುಗಳ ಮಾದರಿಯನ್ನು ಪರಿಶೀಲಿಸುವುದು ಸೂಕ್ತ.

<u>ಕಚ್ಚಾಯನ ಗೊತ್ತ ಸುತ್ತ</u> : ಈ ಸೂತ್ರದ ಅಧಿಕೃತತೆಯನ್ನು ಬೌದ್ಧ ಧರ್ಮದ ಎಲ್ಲ ಶಾಖೆಗಳೂ ಮಾನ್ಯ ಮಾಡುತ್ತವೆ. ಈ ಸೂತ್ರದಲ್ಲಿ ಮಧ್ಯಮ ಮಾರ್ಗದ ತಾತ್ವಿಕತೆ ಇದೆ. ಉಪನಿಷತ್ತುಗಳ 'ಅಸ್ತಿತ್ವ' ಮತ್ತು ಭೌತವಾದಿಗಳ 'ನಾಸ್ತಿತ್ವ'ದ ಹಿನ್ನೆಲೆಯಲ್ಲಿ ಮಧ್ಯಮ ಮಾರ್ಗವನ್ನು ಕುರಿತು ಚರ್ಚಿಸಲಾಗಿದೆ. ಮಧ್ಯಮಮಾರ್ಗವನ್ನು 'ಪ್ರತೀತ್ಯ ಸಮುತ್ಪಾದ'ವೆಂದು ಹೆಸರಿಸಲಾಗಿದೆ.

<u>ಸೂತ್ರದ ಪಠ್ಯ (ಸಂಗ್ರಹಿತ) :</u>

"ಹೀಗೆಂದು ನಾನು ಕೇಳಿಸಿಕೊಂಡೆ":-

ಒಂದು ಸಲ ಭಗವಾನರು ಶ್ರಾವಸ್ತಿಯಲ್ಲಿನ ಅನಾಥ ಪಿಂಡಿಕನ ಆಶ್ರಮದಲ್ಲಿ ತಂಗಿದ್ದಾಗ, ಅಲ್ಲಿನ ಬುಡ ಕಟ್ಟಿಗೆ ಸೇರಿದ ಕಚ್ಚಾಯನನು ಭಗವಾನರನ್ನು ಕಾಣಲು ಬಂದನು. ಭಗವಾನರಿಗೆ ವಂದಿಸಿ, ಒಂದು ಕಡೆ ಕುಳಿತು ಭಗವಾನರನ್ನು ಹೀಗೆಂದು ಪ್ರಶ್ನಿಸಿದನು : "ಪೂಜ್ಯರೇ, ಸಮ್ಯಕ್‌ದೃಷ್ಟಿ, ಸಮ್ಯಕ್‌ದೃಷ್ಟಿ(ಸರಿಯಾದ ದೃಷ್ಟಿ) ಎನ್ನುತ್ತಾರಲ್ಲ– ಎಷ್ಟರ ಮಟ್ಟಿಗೆ ಆ ಸಮ್ಯಕ್‌ದೃಷ್ಟಿ ಇದೆ?" ಅದಕ್ಕೆ ಬುದ್ಧನು "ಕಚ್ಚಾಯನ, ಪ್ರಾಪಂಚಿಕರೆಲ್ಲರೂ ಸಾಮಾನ್ಯವಾಗಿ ಈ ಎರಡು ದೃಷ್ಟಿಗಳೆಡೆಗೆ ತಮ್ಮ ಒಲವು ತೋರುತ್ತಾರೆ. ಒಂದು ಅಸ್ತಿತ್ವ, ಇನ್ನೊಂದು ನಾಸ್ತಿತ್ವ. ಸಮ್ಯಕ್ ಜ್ಞಾನವುಳ್ಳವನಿಗೆ ಪ್ರಪಂಚದ ಉತ್ಪತ್ತಿಯಾಗಲೀ, ಅದು ನಾಸ್ತಿ ಎಂಬ ಗ್ರಹಿಕೆಯಾಗಲೀ ಉಂಟಾಗುವುದಿಲ್ಲ, ಹಾಗೆಯೇ ಜ್ಞಾನಿಗೆ ಪ್ರಪಂಚದ ಅಂತ್ಯವನ್ನು ಕುರಿತಾಗಲೀ ಅದರ ಅಸ್ತಿತ್ವವನ್ನು ಕುರಿತಾಗಲೀ ಯಾವ ಗ್ರಹಿಕೆಯೂ ಉಂಟಾಗುವುದಿಲ್ಲ. ಅನುಸಂಧಾನ, ಗ್ರಹಿಕೆ ಮತ್ತು ಅವುಗಳಿಗೇ ಅಂಟಿಕೊಳ್ಳುವುದು – ಇದು ಸಾಮಾನ್ಯ ಪ್ರಪಂಚದ ಅರಿಯುವಿಕೆಯ ಕ್ರಮ. ಹೀಗೆ ಅನುಸಂಧಾನ, ಗ್ರಹಿಕೆ ಮತ್ತು ಅಂಟಿಕೊಳ್ಳುವಿಕೆಯ ಪರಿಣಾಮವಾದ ಸಂಸ್ಕಾರಗಳಿಗೆ ಯಾರು ಒಳಗಾಗನೋ ; ಯಾರು 'ಇದೇ ನಾನು' ಎಂಬ ದೃಷ್ಟಿಗೆ ಒಳಗಾಗನೋ, ಯಾರು 'ಉತ್ಪಾದಗೊಳ್ಳಬೇಕಾದ ದುಃಖವು ಉತ್ಪಾದಗೊಳ್ಳುತ್ತದೆ, ಭಂಗಗೊಳ್ಳಬೇಕಾದ ದುಃಖವು ಭಂಗಗೊಳ್ಳುತ್ತದೆ' ಎಂದು ಆಲೋಚಿಸುತ್ತಾನೆಯೋ, ಅವನು ದುಗುಡಗೊಳ್ಳುವುದಿಲ್ಲ. ಅವನ ಈ ಅರಿವು ಪರಾವಲಂಬಿಯಲ್ಲ. –ಕಚ್ಚಾಯನ, ಸಮ್ಯಕ್‌ದೃಷ್ಟಿ ಇಷ್ಟರ ಮಟ್ಟಿಗಿನದು: ಎಲ್ಲದಕ್ಕೂ ಅಸ್ತಿತ್ವ ಇದೆ– ಇದು ಒಂದು ದೃಷ್ಟಿ (ಒಂದು ತುದಿ) ಎಲ್ಲವೂ ನಾಸ್ತಿ – ಇದು ಇನ್ನೊಂದು ದೃಷ್ಟಿ (ಒಂದು ತುದಿ) ಇವೆರಡನ್ನೂ ನಿವಾರಿಸಿ ತಥಾಗತನು ಧ್ಯಮಿಕ ತಾತ್ವಿಕತೆಯನ್ನು ಬೋಧಿಸುತ್ತಾನೆ."

ಅವಿದ್ಯೆಯಿಂದಾಗಿ ಸಂಸ್ಕಾರಗಳುಂಟಾಗುತ್ತವೆ. ಸಂಸ್ಕಾರಗಳಿಂದಾಗಿ ಅರಿಯುವಿಕೆ (ಬೋಧೆ) ಉಂಟಾಗುತ್ತದೆ, ಅರಿಯುವಿಕೆನ್ನವಲಂಬಿಸಿ ಮನೋ–ದೈಹಿಕ ವ್ಯಕ್ತಿತ್ವ ಉಂಟಾಗುತ್ತದೆ. ಮನೋದೈಹಿಕ ವ್ಯಕ್ತಿತ್ವವನ್ನವಲಂಬಿಸಿ ಷಡಾಯತನ ಉಂಟಾಗುತ್ತದೆ. ಷಡಾಯತನವನ್ನವಲಂಬಿಸಿ ಸ್ಪರ್ಶ ಉಂಟಾಗುತ್ತದೆ. ಸ್ಪರ್ಶವನ್ನವಲಂಬಿಸಿ ಸಂವೇದನೆಯುಂಟಾಗುತ್ತದೆ. ಸಂವೇದನೆಯನ್ನವಲಂಬಿಸಿ ಹಂಬಲ ಉಂಟಾಗುತ್ತದೆ. ಹಂಬಲವನ್ನಲಂಬಿಸಿ ಉಪಾದಾನ (ಅಂಟಿಕೊಳ್ಳುವಿಕೆ) ಉಂಟಾಗುತ್ತದೆ. ಅಂಟಿಕೊಳ್ಳುವಿಕೆಯನ್ನವಲಂಬಿಸಿ ಭವ ಉಂಟಾಗುತ್ತದೆ, ಭವವನ್ನವಲಂಬಿಸಿ ಹುಟ್ಟು ಉಂಟಾಗುತ್ತದೆ. ಹುಟ್ಟನ್ನವಲಂಬಿಸಿ ಜರಾ–ಮರಣಗಳು, ದುಃಖ, ಸಂಕಟ, ಮ್ಲಾನತೆ, ನಿರಾಸೆಗಳುಂಟಾಗುತ್ತವೆ. ದುಃಖಸಮಸ್ತವೂ ಹೀಗೆಯೇ ಉಂಟಾಗುತ್ತವೆ.

> **ಅವಿದ್ಯೆಯನ್ನು ದೂರ ಮಾಡುವುದರಿಂದ (ಅವಿದ್ಯೆಯ ಭಂಗದಿಂದ) ಸಂಸ್ಕಾರಗಳು ಭಂಗಗೊಳ್ಳುತ್ತವೆ. ಸಂಸ್ಕಾರಗಳು ಭಂಗಗೊಳ್ಳುವುದರಿಂದ ಅರಿಯುವಿಕೆ ಭಂಗಗೊಳ್ಳುತ್ತದೆ. ಅರಿಯುವಿಕೆಯು ಭಂಗಗೊಳ್ಳುವುದರಿಂದ ಮನೋ ದೈಹಿಕ ವ್ಯಕ್ತಿತ್ವವು ಭಂಗಗೊಳ್ಳುತ್ತದೆ. ಮನೋ ದೈಹಿಕ ವ್ಯಕ್ತಿತ್ವವು ಭಂಗಗೊಳ್ಳುವುದರಿಂದ ಷಡಾಯತನಗಳು ಭಂಗಗೊಳ್ಳುತ್ತವೆ. ಷಡಾಯತನಗಳು ಭಂಗಗೊಳ್ಳುವುದರಿಂದ ಸ್ಪರ್ಶ ಭಂಗಗೊಳ್ಳುತ್ತದೆ.**

ಅವಿದ್ಯೆಯನ್ನು ದೂರ ಮಾಡುವುದರಿಂದ (ಅವಿದ್ಯೆಯ ಭಂಗದಿಂದ) ಸಂಸ್ಕಾರಗಳು ಭಂಗಗೊಳ್ಳುತ್ತವೆ. ಸಂಸ್ಕಾರಗಳು ಭಂಗಗೊಳ್ಳುವುದರಿಂದ ಅರಿಯುವಿಕೆ ಭಂಗಗೊಳ್ಳುತ್ತದೆ. ಅರಿಯುವಿಕೆಯು ಭಂಗಗೊಳ್ಳುವುದರಿಂದ ಮನೋದೈಹಿಕ ವ್ಯಕ್ತಿತ್ವವು ಭಂಗಗೊಳ್ಳುತ್ತದೆ. ಮನೋದೈಹಿಕ ವ್ಯಕ್ತಿತ್ವವು ಭಂಗಗೊಳ್ಳುವುದರಿಂದ ಷಡಾಯತನಗಳು ಭಂಗಗೊಳ್ಳುತ್ತವೆ. ಷಡಾಯತನಗಳು ಭಂಗಗೊಳ್ಳುವುದರಿಂದ ಸ್ಪರ್ಶ ಭಂಗಗೊಳ್ಳುತ್ತದೆ. ಸ್ಪರ್ಶ ಭಂಗಗೊಳ್ಳುವುದರಿಂದ ವೇದನೆ ಭಂಗಗೊಳ್ಳುತ್ತದೆ. ವೇದನೆ ಭಂಗಗೊಳ್ಳುವುದರಿಂದ ಹಂಬಲ ಭಂಗಗೊಳ್ಳುತ್ತದೆ. ಹಂಬಲ ಭಂಗಗೊಳ್ಳುವುದರಿಂದ ಉಪಾದಾನ (ಅಂಟಿಕೊಳ್ಳುವಿಕೆ) ಭಂಗಗೊಳ್ಳುತ್ತದೆ. ಉಪಾದಾನ ಭಂಗಗೊಳ್ಳುವುದರಿಂದ ಭವ ಭಂಗಗೊಳ್ಳುತ್ತದೆ. ಭವ ಭಂಗಗೊಳ್ಳುವುದರಿಂದ ಜರಾ–ಮರಣಗಳು, ದುಃಖ, ಸಂಕಟ, ಮ್ಲಾನತೆ, ನಿರಾಸೆಗಳು ಭಂಗಗೊಳ್ಳುತ್ತವೆ. ಹಾಗಾಗಿ ದುಃಖ ಸಮಸ್ತವೂ ಭಂಗಗೊಳ್ಳುತ್ತದೆ".

ಕಚ್ಚಾಯನ ಗೊತ್ತ ಸುತ್ತದ ಧ್ವನಿ ಇದು:

೧. ಲೋಕವನ್ನು ನಿತ್ಯ ಚಲನೆಯಲ್ಲಿರುವ ಪ್ರವಾಹವನ್ನಾಗಿ ಗ್ರಹಿಸಲಾಗಿದೆ. ಎಲ್ಲವೂ ಕಾರಣ, ಪರಿಸ್ಥಿತಿಗಳ ಸಂಬಂಧದಲ್ಲಿ ಉಂಟಾಗುವ ಪರಿಣಾಮಗಳಾಗಿವೆ.

೨. ಅಸ್ತಿತ್ವವನ್ನು ವಿವರಿಸಲು ಬುದ್ಧ ಕಾರಣ–ಪ್ರತ್ಯಯಗಳನ್ನು ಅವಲಂಬಿಸಿದ್ದಾನೆ. ನಿರಂತರ ಪ್ರವಾಹದಲ್ಲಿ ಕಾರಣ–ಪ್ರತ್ಯಯಗಳ ಮತ್ತು ಪರಿಣಾಮದ ಸ್ಥಾನಗಳು ಸ್ಥಿತವಲ್ಲ. ಫಲವು ಪ್ರವಾಹದ ಮುಂದುವರಿಕೆಯಲ್ಲಿ ಕಾರಣದ ಸ್ಥಾನವನ್ನು ಪಡೆದುಕೊಳ್ಳಬಹುದು. ಕಾರಣ–ಪ್ರತ್ಯಯ–ಪರಿಣಾಮಗಳು ಯಾವ ಪಾತ್ರವನ್ನಾದರೂ ನಿರ್ವಹಿಸುತ್ತಿರಬಹುದು. ಅದು ಜ್ಞಾತೃವಿನ ಸ್ಥಾನವನ್ನವಲಂಬಿಸಿದೆ ಮತ್ತು ಜ್ಞಾತೃ ಕೂಡಾ ಚಲನೆಯಲ್ಲಿಯೇ ಇರುವುದರಿಂದ ಇಡಿಯಾಗಿ ಪ್ರಕ್ರಿಯೆ ಮಾತ್ರ ಗೋಚರವೇ ಹೊರತು ಆದಿಯೆಂಬ ಹಂತವಾಗಲೀ, ಅಂತ್ಯವೆಂಬ ಹಂತವಾಗಲೀ ಅಗ್ರಾಹ್ಯವಾಗುತ್ತದೆ. 'ಅದು ಉಂಟಾದರೆ, ಇದು ಉಂಟಾಗುತ್ತದೆ. ಅದು ಭಂಗಗೊಂಡರೆ ಇದೂ ಭಂಗಗೊಳ್ಳುತ್ತದೆ' ಇದು ಸತ್ಯ. ಇಲ್ಲಿನ 'ಅದು' 'ಇದು' ಎಂಬುವು ಸ್ವತಂತ್ರ ಅವಸ್ಥೆಗಳಲ್ಲವಾದುದರಿಂದ ಯಾವುವೂ ಶಾಶ್ವತ ಕಾರಣಗಳಲ್ಲ, ಶಾಶ್ವತ ಪ್ರತ್ಯಯಗಳಲ್ಲ–ಎನ್ನುವುದೂ ಸತ್ಯ.

೩. ಸಾಮಾನ್ಯ ಲೋಕಗ್ರಹಿಕೆಯು 'ಸ್ವಯಂಕೃತ' ಅಸ್ತಿತ್ವವೆಂಬ ತಿಳುವಳಿಕೆಯ ಮೇಲೆ ನಿಂತಿದೆ. ಇದು ಶಾಶ್ವತ ಆದಿಭೌತಿಕ ಆತ್ಮವೊಂದರ ಕಡೆಗೆ ಕೈ ಮಾಡುತ್ತದೆ. ಹಾಗೆಯೇ ಇನ್ನೊಂದು ತುದಿಯಾದ 'ಪರನಿರ್ಮಿತ'

ಅಸ್ತಿತ್ವವು ನಾಸ್ತಿತ್ವವಾದವಾಗಿ, ನೈತಿಕ ಹೊಣೆಗಾರಿಕೆಯನ್ನು ಲೋಕ ಜೀವನದಿಂದ ದೂರ್ರಾಗಿಸುತ್ತದೆ.

೪. ಲೋಕ ಚಟುವಟಿಕೆಗಳೆಲ್ಲ ಪ್ರತ್ಯಯಗಳನ್ನಾಧರಿಸಿ ಉಂಟಾಗುವುದರಿಂದ ಅವೆಲ್ಲವೂ ಪ್ರತೀತ್ಯ ಸಮುತ್ಪಾದಗಳೆಂದು ವಿವರಿಸಲಾಗಿದೆ.

೫. ಈ ವಿವರಣೆ ಕೇವಲ ತಾತ್ವಿಕ ಊಹಾಪೋಹವಲ್ಲ. ಬದಲಿಗೆ ಇದು ದು:ಖ ಕಾರಣ ಮತ್ತು ನಿವಾರಣೆಯ ಮಾರ್ಗವಾಗಿ ವಿವರಿಸಲ್ಪಟ್ಟಿದೆ.

ಚೂಲಮಾಲುಂಕ್ಯ ಸುತ್ತ:

ಮಜ್ಜಿಮ ನಿಕಾಯದ ಅಗ್ಗಿವಚ್ಛಗೊತ್ತ ಸುತ್ತ ಮತ್ತು ಚೂಲಮಾಲುಂಕ್ಯ ಸುತ್ತಗಳು ಸಹ ಮಧ್ಯಮ ಮಾರ್ಗದ ತಾತ್ವಿಕತೆಯನ್ನೇ ವಿವರಿಸಿವೆ. ಚೂಳಮಾಲುಂಕ್ಯ ಸುತ್ತದಲ್ಲಿ ಅಸ್ತಿತ್ವ-ನಾಸ್ತಿತ್ವದ ಪ್ರಶ್ನೆಯನ್ನು ಕೇವಲ ಪಾರಭೌತಿಕ ಕಲ್ಪನೆಗಳಾಗಿ ಚರ್ಚಿಸುವುದನ್ನು ಬುದ್ಧ ನಿರಾಕರಿಸಿದನು ಮತ್ತು ಅಂತಹ ಪ್ರಶ್ನೆಗಳಿಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲಿಲ್ಲ. ಚೂಳಮಾಲುಂಕ್ಯ ಸುತ್ತದ ಸಾರಾಂಶರೂಪದ ಪಠ್ಯ (ಸಂಗ್ರಹ ಪಠ್ಯ) ಹೀಗಿದೆ:

“. . . . . . . ಆಗ ಆಯುಷ್ಮಂತ ಮಾಲುಕ್ಯಪುತ್ತನು ಸಾಯಂಕಾಲದ ಸಮಯದಲ್ಲಿ ಏಕಾಂತವಾಸದ ಧ್ಯಾನದಿಂದ ಎದ್ದು, ಎಲ್ಲಿ ಭಗವಾನರಿದ್ದರೋ ಅಲ್ಲಿಗೆ ಬಂದನು. ಸನಿಹಕ್ಕೆ ಬಂದು ಭಗವಾನರಿಗೆ ನಮಿಸಿ ಒಂದೆಡೆ ಕುಳಿತನು. ಒಂದೆಡೆ ಕುಳಿತ ಆ ಆಯುಷ್ಮಂತ ಮಾಲುಕ್ಯಪುತ್ತನು ಭಗವಾನರಿಗೆ ಹೀಗೆ ಹೇಳಿದನು :

“ಲೋಕವು ಶಾಶ್ವತವಾದದ್ದು / ಶಾಶ್ವತವಲ್ಲದ್ದು, ಲೋಕವು ಅಂತ್ಯವುಳ್ಳದ್ದು / ಅಂತ್ಯವಿಲ್ಲದ್ದು, ಜೀವವೂ ಮತ್ತು ಶರೀರವೂ ಒಂದೇ, ಜೀವ ಬೇರೆ ಮತ್ತು ಶರೀರ ಬೇರೆ, ಮರಣದ ನಂತರ ತಥಾಗತನು ಇರುವನು / ಇರುವುದಿಲ್ಲ ; ಇದ್ದರೂ ಇರಬಹುದು / ಇಲ್ಲದಿರಲೂಬಹುದು ; ಇರುವುದೂ ಇಲ್ಲ / ಇಲ್ಲದಿರುವುದೂ ಇಲ್ಲ – ಈ ಪ್ರಶ್ನೆಗಳಿಗೆ ತಥಾಗತನು ಉತ್ತರಿಸಿಲ್ಲ ಎಂದು ಆಕ್ಷೇಪಿಸಿದನು.

ಅದಕ್ಕೆ ಬುದ್ಧ ಭಗವಾನನು “ಮಾಲುಕ್ಯಪುತ್ತ, ನನ್ನಿಂದ ಯಾವುದು ತಿಳಿಸಿಲ್ಲವೋ ಅದನ್ನು ವಿವರಿಸಿ ತಿಳಿಸಲ್ಪಟ್ಟಿಲ್ಲ ಎಂದೇ ಅರ್ಥಮಾಡಿಕೊಳ್ಳಬೇಕು, ಯಾವುದನ್ನು ವಿವರಿಸಿ ತಿಳಿಸಿದೆಯೋ, ಅದನ್ನು ವಿವರಿಸಿ ತಿಳಿಸಲ್ಪಟ್ಟಿದೆ ಎಂದೇ ಅರ್ಥಮಾಡಿಕೊಳ್ಳಬೇಕು. ಮೇಲಿನ ನಿನ್ನ ಪ್ರಶ್ನೆಗಳು ನನ್ನಿಂದ ವಿವರಿಸಲ್ಪಟ್ಟಿಲ್ಲ. ಏಕೆಂದರೆ, ಇವು ಗುರಿಸಾಧನೆಗೆ ಒದಗಿ ಬರುವಂಥವು ಅಲ್ಲ. ನಿಬ್ಬಾನಕ್ಕೆ ಇವು ದಾರಿಯಲ್ಲ. ಆದುದರಿಂದ ಅವುಗಳು ನನ್ನಿಂದ ವಿವರಿಸಲ್ಪಟ್ಟಿಲ್ಲ. ಹಾಗಾದರೆ ಯಾವುವು ನನ್ನಿಂದ ವಿವರಿಸಲ್ಪಟ್ಟಿವೆ? ಮಾಲುಕ್ಯಪುತ್ರ ‘ಇದೇ ದು:ಖ’ ‘ಇದು ದು:ಖದ ಹುಟ್ಟು, ಇದು ದು:ಖದ ನಿರೋಧ, ಇದು ದು:ಖ ನಿರೋಧ ಮಾಡಲು ಸಾಗುವ ದಾರಿ’ ಎಂಬುವು ನನ್ನಿಂದ ವಿವರಿಸಲ್ಪಟ್ಟಿದೆ.

–ಈ ಸೂತ್ರದಲ್ಲಿ ಗಮನಿಸಬೇಕಾದ ಪ್ರಮುಖ ಸಂಗತಿಗಳನ್ನು ಗುರುತಿಸುವದಾದರೆ :

೧. ತಾತ್ವಿಕತೆಯೊಂದು ಲೋಕ ಜೀವನಕ್ಕೆ ಸಂಬಂಧಿಸಿದ್ದು, ಅನುಭವ ಜನ್ಯವಾಗಲಿ, ಕಾಲ್ಪನಿಕ ಊಹಾಪೋಹವಾಗಿರಲಿ, ಅದು ಪರಿಕಲ್ಪನೆಯಾಗಿ ಸ್ಥಾಪಿತಗೊಂಡ ಕ್ಷಣದಲ್ಲಿ ಅಧಿಕಾರ ಸ್ಥಾಪಿಸುವ ಉದ್ಯೋಗದಲ್ಲಿ ತೊಡಗುತ್ತದೆಯಾದ್ದರಿಂದ ಅನುಭವ ಜನ್ಯ ತಾತ್ವಿಕತೆಗೆ ದೊರಕುವ ಸ್ಥಾನಮಾನ ತಾತ್ವಿಕ ಊಹಾಪೋಹಗಳಿಗೆ ದೊರಕಬಾರದು.

ಬುದ್ಧನ ನಂತರ ಹುಟ್ಟಿಕೊಂಡ ಅನೇಕ ಶಾಖೆಗಳು ಬೌದ್ಧತತ್ವದ ವ್ಯಾಖ್ಯಾನದಲ್ಲಿ ತೊಡಗಿದವು. ಅವುಗಳಲ್ಲಿ ಸರ್ವಾಸ್ತಿವಾದಿಗಳು ಮತ್ತು ಸೌತ್ರಾಂತಿಕರು ಬೌದ್ಧ ತಾತ್ವಿಕತೆಯನ್ನು ತಿರುಚಲು ಯತ್ನಿಸಿದರೆಂಬ ಆಪಾದನೆ ಇದೆ. ಬೌದ್ಧ ತಾತ್ವಿಕತೆಯು ಹೀಗೆ ಅಪವ್ಯಾಖ್ಯಾನಕ್ಕೆ ಈಡಾಗುತ್ತಿದ್ದ ಸಮಯದಲ್ಲಿ ಅಂತಹ ಪ್ರಯತ್ನಗಳನ್ನು ತಡೆಯಲು ಕೆಲವು ಗಂಭೀರ ಪ್ರಯತ್ನಗಳು ನಡೆದವು.

೨. ತಾತ್ವಿಕ ಪ್ರಶ್ನೆಗಳು ಲೋಕಜೀವನವನ್ನು ಪರಿಣಾಮಿಸದಿದ್ದರೆ (ಒಳಿತಾಗಲೀ, ಕೆಡುಕಾಗಲೀ) ಅವು ಚರ್ಚೆಗೆ ಅನರ್ಹ.

೩. ಬುದ್ಧನ ಕಾಲಕ್ಕೆ ಅವನ ಸುತ್ತ ಮೊರೆಯುತ್ತಿದ್ದ ದೃಷ್ಟಿವಾದಗಳು ಹೀಗೆ ಎಚ್ಚರದಿಂದ ಪ್ರತಿಕ್ರಿಯಿಸುವಂತೆ ಮಾಡಿದ್ದವು.

೪. ಕೇವಲ ಪಾರಭೌತಿಕ ಪ್ರಶ್ನೆಗಳಿಗೆ ಉತ್ತರ ದೊರಕಿಸುವ ಪ್ರಯತ್ನಗಳು ಮಾನ್ಯವಲ್ಲ.

೫. ಬಾಣಮೂಲ ಚಿಂತನೆ ಸಲ್ಲ.

ವಚ್ಛಗೊತ್ತ ಸುತ್ತವೂ ಇದೇ ತಾತ್ವಿಕತೆಯನ್ನೇ ಇನ್ನೂ ವಿಸ್ತಾರವಾಗಿ ವಿವರಿಸುತ್ತದೆ. ಮೇಲಿನ ಪ್ರಶ್ನೆಗಳಿಗೆ ತನ್ನ ಪ್ರತಿಕ್ರಿಯೆ ಇಲ್ಲವೆಂದೂ, ಇದು ಉತ್ತರ ಗೊತ್ತಿಲ್ಲದ ಮೌನವಲ್ಲವೆಂದೂ, ಸ್ಪಷ್ಟಪಡಿಸುತ್ತದೆ. ಮುಂದುವರಿದು ಈ ಪ್ರಶ್ನೆಗಳನ್ನು ಕೇಳಿದ ವಚ್ಛಗೊತ್ತನಿಗೆ ಬುದ್ಧನು “ಎಲ್ಲ ಕಲ್ಪನೆಗಳನ್ನು ತೊಡೆದು ಹಾಕುವುದರಿಂದ ವಿಮುಕ್ತಿ. ಆದುದರಿಂದ ತಥಾಗತರು (ಬೆಂಕಿಯಂತೆ) ಆರಿಹೋದವರು. ಅದು ಹೇಗೆಂದರೆ ‘ವಚ್ಛ, ಒಂದು ವೇಳೆ ಬೆಂಕಿ ಎದುರು ಉರಿಯುವಾಗ ಯಾರಾದರೂ ಬೆಂಕಿ ಏನನ್ನು ಅವಲಂಬಿಸಿ ಉರಿಯುತ್ತಿದೆ? ಎಂದು ಕೇಳಿದರೆ ಏನು ಹೇಳುತ್ತೀಯಾ?’ ಎಂದು ಪ್ರಶ್ನಿಸಿದನು. ಅದಕ್ಕೆ ವಚ್ಛನು ‘ಯಾವ ಬೆಂಕಿ ನನ್ನೆದುರು ಉರಿಯುತ್ತಿದೆಯೋ ಆ ಬೆಂಕಿ ಹುಲ್ಲು-ಕಟ್ಟಿಗೆಗಳನ್ನು ಅವಲಂಬಿಸಿದೆ’ ಎಂದು ಹೇಳುತ್ತೇವೆ ಎಂದನು. ಅದಕ್ಕೆ ಬುದ್ಧನು ‘ಉರಿಯುತ್ತಿದ್ದ ಬೆಂಕಿ ಆರಿಹೋದಾಗ, ಯಾರಾದರೂ ಆ ಬೆಂಕಿ ಎಲ್ಲಿ ಹೋಯಿತು’ ಎಂದು ಪ್ರಶ್ನಿಸಿದರೆ ಏನು ಹೇಳುತ್ತೀಯಾ? ಎಂದು ಕೇಳಿದಾಗ ವಚ್ಛನು ‘ಗೌತಮರೆ, ಬೆಂಕಿಯು ಹುಲ್ಲುಕಟ್ಟಿಗೆಗಳನ್ನು ಅವಲಂಬಿಸಿ ಉರಿಯುತ್ತಿತ್ತು. ಯಾವಾಗ ಅವು ಮುಗಿದುಹೋದವೋ, ಬೆಂಕಿಗೆ ಆಹಾರವಿಲ್ಲದೆ ಉರಿಯಲು ಸಾಧ್ಯವಾಗದಾಗ ಅದು ಆರಿಹೋಯಿತು ಎಂದು ಪರಿಗಣಿಸಲಾಗುತ್ತದೆ’ ಎಂದು ಉತ್ತರಿಸುತ್ತಾನೆ.

ಈ ಸೂತ್ರಗಳಲ್ಲಿ ಬುದ್ಧನು ಪ್ರತೀತ್ಯಸಮುತ್ಪಾದತತ್ವವನ್ನು ವಿವರಿಸುವ ಪರಿಯನ್ನು ಗಮನಿಸಿದರೆ ಪ್ರತೀತ್ಯಸಮುತ್ಪಾದವನ್ನು ಭಾಷೆಯಲ್ಲಿ ನುಡಿಯಲಿಕ್ಕಾಗದು ಎಂದು ಹೇಳಿಲ್ಲ. ವೇದಾಂತ ದರ್ಶನಗಳು ಶುದ್ಧ ಸತ್ಯವು ಅನಿರ್ವಚನೀಯ, ಅವಾಚ್ಯ ಎಂದ ಹಾಗೆ, ಪ್ರತೀತ್ಯ ಸಮುತ್ಪಾದವನ್ನು ಕುರಿತು ಬುದ್ಧ ಹೇಳಿಲ್ಲ. ಅಲ್ಲಿ (ಸೂತ್ರಗಳಲ್ಲಿ) ಬಳಸಿರುವ ‘ಅವ್ಯಕ್ತ’ ಪದವು ಪ್ರಪಂಚದ ಆದಿ-ಅಂತ್ಯ, ಆತ್ಮ-ದೇಹಗಳ ಅನ್ಯ / ಅನನ್ಯಗಳ ವಿವರಣೆ, ಮರಣಾನಂತರದ ತಥಾಗತನ ಅಸ್ತಿತ್ವ / ನಾಸ್ತಿತ್ವ, ಎರಡೂ ಹೌದು ಅಥವಾ ಎರಡೂ ಅಲ್ಲ ಇತ್ಯಾದಿಗಳನ್ನು ಕುರಿತದ್ದು. ಹಾಗಾಗಿ ಬುದ್ಧ ತನ್ನ ಶಿಷ್ಯರಿಗೆ ಉಪದೇಶ ನೀಡುವಾಗ ಭಾಷಾ ಸಾಮರ್ಥ್ಯದ ಮಿತಿಗಳನ್ನು ಮೀರಿದ ಹಠವನ್ನಾಗಲೀ ಲೋಕದ ಭಾಷಾ ಪದ್ಧತಿಯ ಮಿತಿಯನ್ನು ಮೀರಿ ನುಡಿವ ಪ್ರಯತ್ನಗಳನ್ನಾಗಲೀ ಮಾಡಲಿಲ್ಲ. ಭಾಷೆಯೇ ಪರಬ್ರಹ್ಮವೆಂಬ ನಿಲುವೂ ಬುದ್ಧನಿಗೆ ಮಾನ್ಯವಲ್ಲ. ಹಾಗೆಯೇ ಭಾಷೆ ಸತ್ಯವನ್ನು ನುಡಿಯಲಾರದು ಎಂಬುದು ಕೂಡ.

ಬುದ್ಧನ ನಂತರ ಹುಟ್ಟಿಕೊಂಡ ಅನೇಕ ಶಾಖೆಗಳು ಬೌದ್ಧತತ್ವದ ವ್ಯಾಖ್ಯಾನದಲ್ಲಿ ತೊಡಗಿದವು. ಅವುಗಳಲ್ಲಿ ಸರ್ವಾಸ್ತಿವಾದಿಗಳು ಮತ್ತು ಸೌತ್ರಾಂತಿಕರು ಬೌದ್ಧ ತಾತ್ವಿಕತೆಯನ್ನು ತಿರುಚಲು ಯತ್ನಿಸಿದರೆಂಬ ಆಪಾದನೆ ಇದೆ. ಬೌದ್ಧ ತಾತ್ವಿಕತೆಯು ಹೀಗೆ ಅಪವ್ಯಾಖ್ಯಾನಕ್ಕೆ ಈಡಾಗುತ್ತಿದ್ದ ಸಮಯದಲ್ಲಿ ಅಂತಹ ಪ್ರಯತ್ನಗಳನ್ನು ತಡೆಯಲು ಕೆಲವು ಗಂಭೀರ ಪ್ರಯತ್ನಗಳು ನಡೆದವು. ಅಂತಹವರಲ್ಲಿ ಪ್ರಮುಖರೆಂದರೆ ; ವಿಮಲಕೀರ್ತಿ, ಮೊಗ್ಗಲಿಪುತ್ತತಿಸ್ಸ ಮತ್ತು ನಾಗಾರ್ಜುನ.

ನಾಗಾರ್ಜುನನ ಮಧ್ಯಮಮಾರ್ಗವು ಲೋಕವನ್ನು ಮತ್ತು ಲೋಕದ ಭಾಗವಾಗಿರುವ ನಮ್ಮನ್ನು ಸರಿಯಾಗಿ ಅರಿತುಕೊಳ್ಳುವ ಕ್ರಮ. ಹಾಗಾದರೆ ಹಿಂದೂ ಧರ್ಮವಾಗಲೀ ಇತರೆ ಧರ್ಮಗಳಾಗಲೀ ಲೋಕವನ್ನು ಸರಿಯಾಗಿ ವಿವರಿಸಿಕೊಟ್ಟಿಲ್ಲವೆ? ಈ ಪ್ರಶ್ನೆಗೆ ವಿಜ್ಞಾನ ಮತ್ತು ಬೌದ್ಧ ಧರ್ಮ ಖಚಿತವಾಗಿ ಮತ್ತು ದೃಢವಾಗಿ ನೀಡುವ ಉತ್ತರವೆಂದರೆ “ ಇಲ್ಲ. ಸರಿಯಾಗಿ ವಿವರಿಸಿಕೊಟ್ಟಿಲ್ಲ ಬದಲಿಗೆ ಸುಳ್ಳು ವಿವರಣೆಗಳನ್ನು ನೀಡಿವೆ. ಹಾಗೆ ಸುಳ್ಳು ವಿವರಣೆಗಳನ್ನು ನೀಡಿದ್ದೂ ಅಲ್ಲದೆ, ತಮ್ಮ ವಿವರಣೆಗಳೇ ಸತ್ಯವೆಂದು ಹಠ ಹಿಡಿದು ಸಾಧಿಸುತ್ತಿವೆ. ಸಾಮಾನ್ಯವಾಗಿ ಬೌದ್ಧೇತರ ಧರ್ಮಗಳು ಲೋಕವನ್ನು ಅಸ್ತಿತ್ವ ಅಥವಾ ನಾಸ್ತಿತ್ವದ ಮೂಲಕ ವಿವರಿಸುತ್ತವೆ. ಅಂದರೆ ಕಣ್ಣೆದುರಿನ ವಸ್ತು ಪ್ರಪಂಚವನ್ನು ‘ಇದೆ’ ಎಂದೋ ‘ಇಲ್ಲ’ ಎಂದೋ ವಿವರಿಸುತ್ತವೆ.

ಆದರೆ ಬೌದ್ಧ ಧರ್ಮವು ಲೋಕವನ್ನು ಸದಾ ಚಲಿಸುತ್ತಿರುವ ಪ್ರವಾಹವೆಂದೂ, ಇದೆ ಎಂದು ಕರೆಯಬಹುದಾದ ಸ್ವತಂತ್ರ ವಸ್ತುರೂಪದ ಶಾಶ್ವತವಾದ ಯಾವುದೂ ಎಂದೂ ಎಲ್ಲಿಯೂ ಉಂಟಾಗುವುದಿಲ್ಲ ಎಂದು ವಿವರಿಸುತ್ತದೆ. ಹಾಗಾದರೆ ಕಣ್ಣೆದುರಿಗೆ ಕಾಣುವ ವಸ್ತು ಪ್ರಪಂಚವಾಗಲೀ ಈ ವಸ್ತುಪ್ರಪಂಚದ ಭಾಗವಾಗಿರುವ ನಾವಾಗಲೀ ಉಂಟಾಗುವುದು ಹೇಗೆ? ಎಂಬ ಪ್ರಶ್ನೆಗೆ ಬೌದ್ಧ ಧರ್ಮದ ಉತ್ತರ ಖಚಿತವೂ ಅತ್ಯಂತ ನಿಖರವೂ ಆಗಿದೆ. ಅದು ಲೋಕವನ್ನು ತ್ರಿಲಕ್ಷಣಗಳ ಮೂಲಕ ವಿವರಿಸುತ್ತದೆ. ಆ ತ್ರಿಲಕ್ಷಣಗಳನ್ನು ಅರಿತುಕೊಳ್ಳುವ ಮುನ್ನ ಅರಿತುಕೊಳ್ಳಬೇಕಾದ ಸಂಗತಿಯೊಂದಿದೆ. ಲೋಕದಲ್ಲಿ ನಾವು ಕಾಣುವ ಎಲ್ಲವೂ ಅನೇಕ ಸಂಗತಿಗಳಿಂದಾದ ಸಂಯೋಜನೆಗಳು. ಅವುಗಳನ್ನು ಪಾಲಿಯಲ್ಲಿ ಸಂಖಾರಗಳೆನ್ನುತ್ತಾರೆ. ಬೇರೆಯವರು ಲೋಕವನ್ನು ಇದೆ ಅಥವಾ ಇಲ್ಲ ಎಂದು ಕರೆಯಬಹುದಾದ ವಸ್ತುಗಳೆಂದರೆ ಬೌದ್ಧ ಧರ್ಮವು ಅದನ್ನು ಸದಾ ಪ್ರವಾಹದಲ್ಲಿರುವ ಸಂಯೋಜನೆಗಳೆನ್ನುತ್ತದೆ. ಇದನ್ನೇ ಪ್ರಕ್ರಿಯಾ ಮೀಮಾಂಸೆ ಎನ್ನುತ್ತಾರೆ. ಪ್ರಕ್ರಿಯಾ ಮೀಮಾಂಸೆಯ ವಿಸ್ತಾರವಾದ ವಿವರಣೆಯನ್ನು ಮುಂದೆ ನೀಡಲಾಗುವುದು. □

ಹಕ್ಕು v/s ಹಂಗು
ಅಭಿವೃದ್ಧಿಯ ಎರಡು ವಿಚಾರಧಾರೆಗಳು



- ೫೭ -

ಡಾ. ಟಿ.ಆರ್. ಚಂದ್ರಶೇಖರ್

ತನ್ನಾಶ್ರಯದ ರತಿ ಸುಖವನು
ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ?
ತನ್ನ ಲಿಂಗಕ್ಕೆ ಮಾಡುವ ನಿತ್ಯ ನೇಮವ
ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ?
ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ
ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ

ಅಭಿವೃದ್ಧಿಯನ್ನು ನಾವು ಪರಿಭಾವಿಸಿಕೊಂಡಿರುವ ರೀತಿಯ ಬಗ್ಗೆ ಅನೇಕ ಅನುಮಾನಗಳು ಸಾಧ್ಯ. ಏಕೆಂದರೆ ಲಾಗಾಯ್ತಿನಿಂದಲೂ ಜನರನ್ನು ಅಲಾಯದ ಮಾಡಿಕೊಂಡೇ ಅದನ್ನು ಪರಿಭಾವಿಸಿಕೊಂಡು ಬರಲಾಗಿದೆ. ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತಗಳಲ್ಲಿ ಸರಕು-ಸಾಮಗ್ರಿಗಳಿಗೆ ನೀಡಿದಷ್ಟು ಮಹತ್ವವನ್ನು ಜನರಿಗೆ, ಮಹಿಳೆಯರನ್ನು ಒಳಗೊಂಡಂತೆ ಜನರ ಧಾರಣಾ ಸಾಮರ್ಥ್ಯಕ್ಕೆ ನೀಡಿಲ್ಲ. ಅಭಿವೃದ್ಧಿ ಕುರಿತಂತೆ ಅಮರ್ತ್ಯಸೇನ್‌ನ ಬಹು ಮುಖ್ಯ ಟೀಕೆ ಇದಾಗಿದೆ. ಇಂದು ನಾವು 'ಜನರನ್ನು ಒಳಗೊಳ್ಳುವ ಅಭಿವೃದ್ಧಿ' ಬಗ್ಗೆ ಮಾತನಾಡುತ್ತಿದ್ದೇವೆ. ನಮ್ಮ ವಿತ್ತ ಮಂತ್ರಿಗಳಾದ ಪಿ.ಚಿದಂಬರಂ ಹಾಗೂ ನಮ್ಮ ಪ್ರಧಾನ ಮಂತ್ರಿ ಡಾ.ಮನಮೋಹನ ಸಿಂಗ್ ಅವರು 2006-07 ರಲ್ಲಿ ಮಂಡಿಸಿದ್ದ ಬಜೆಟ್ಟಿಗೆ ಸಂಬಂಧಿಸಿದಂತೆ 'ಜನರನ್ನು ಒಳಗೊಳ್ಳುವ ಅಭಿವೃದ್ಧಿ'ಯ ಬಗ್ಗೆ ಮಾತನ್ನಾಡಿದ್ದಾರೆ.ಅಭಿವೃದ್ಧಿ ಕುರಿತಂತೆ ವಿಶ್ವಾದ್ಯಂತ ನಿರ್ಲಕ್ಷಿಸಿಕೊಂಡು ಬಂದಂತಹ ಒಂದು ಪ್ರಶ್ನೆಯೆಂದರೆ ಅದು ಜನರ ಹಕ್ಕಾಗಿರಬೇಕೋ ಅಥವಾ ಅದು ಜನರು ಬೇಡಿ ಪಡೆದುಕೊಳ್ಳುವಂತಹ ಹಂಗಿನ ಸಂಗತಿಯಾಗಿರಬೇಕೋ ಎಂಬುದಾಗಿದೆ. ಅದು ಹಕ್ಕಿನ ಅಭಿವೃದ್ಧಿಯೋ ಅಥವಾ ಹಂಗಿನ ಅಭಿವೃದ್ಧಿಯೋ ಎಂಬುದಾಗಿದೆ. ಇಂದು ಕರ್ನಾಟಕದಲ್ಲಿ ಸರ್ಕಾರವು ಅಭಿವೃದ್ಧಿಯನ್ನು 'ದಾತ'ನ ನೆಲೆಯಿಂದ ಪರಿಭಾವಿಸಿಕೊಳ್ಳುವ ಪ್ರಯತ್ನ ನಡೆಸಿದೆ. ಜನರನ್ನು 'ದಾಸ'ರನ್ನಾಗಿ ಅದು ನೋಡಲು ಬಯಸುತ್ತಿದೆ. ಈ 'ದಾತ-ದಾಸ' ಪರಿಭಾವನೆಗಳು ಜನತಂತ್ರಕ್ಕೆ ಸಲ್ಲುವ ಸಂಗತಿಗಳಲ್ಲ. ಈ ದಾತ-ದಾಸ ವ್ಯವಸ್ಥೆಯಲ್ಲಿ ಹಂಗಿನ ಅಭಿವೃದ್ಧಿ ಮಾತ್ರ ಸಾಧ್ಯ. ಲಿಂಗ ಅಸಮಾನತೆಯ ಬಗ್ಗೆ ಜನರು ಮಾತನಾಡಿದರೆ ಸರ್ಕಾರವು ಹುಟ್ಟಿದ ಹೆಣ್ಣುಮಗುವಿಗೆ ಉಳಿತಾಯದ ಪ್ರಮಾಣ ಪತ್ರ ಕೊಡಲು ಮುಂದಾಗುತ್ತಿದೆ. ಧರ್ಮಛತ್ರಗಳಿಗೆ ಅನುದಾನವನ್ನು ಉದಾರವಾಗಿ ಅದು ನೀಡುತ್ತಿದೆ. ಹೆಣ್ಣು ಮಕ್ಕಳು ಸಮಾನತೆಯಿಂದ ಕೂಡಿದ ಸ್ವಾಭಿಮಾನಿ ಬದುಕನ್ನು ರೂಢಿಸಿಕೊಳ್ಳುವುದರ ಬಗ್ಗೆ ಅದು ಯೋಚಿಸುವುದಕ್ಕೆ ಪ್ರತಿಯಾಗಿ 'ದಾನ' ನೀಡುವ ಕೆಲಸಕ್ಕೆ ಮುಂದಾಗಿದೆ. ಅದರ ದೃಷ್ಟಿಕೋನವು 'ಕಲ್ಯಾಣವಾದಿ' ಯಾದುದೇ ವಿನಾ 'ಸಂಘರ್ಷವಾದಿ' ಯಾದುದಲ್ಲ. ಅದು ಇರುವ ಅಧಿಕಾರ ಸಂಬಂಧಗಳನ್ನು ರವಷ್ಟು ಅಲುಗಾಡಿಸದೆ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಇಂತಹ ವಿಚಾರ ಪ್ರಣಾಳಿಕೆಯು ಇನ್ನಾ ಹಂಗಿನ ಅಭಿವೃದ್ಧಿಯನ್ನು ಪರಿಪೋಷಿಸ ಬಲ್ಲುದೇ ವಿನಾ ಹಕ್ಕಿನ ಅಭಿವೃದ್ಧಿಯನ್ನಲ್ಲ. ಇಂದು ಹಕ್ಕಿನ ಪರಿಭಾಷೆಗೆ ಪ್ರತಿಯಾಗಿ ಆಳುವ ಅರಸರು ಹಂಗಿನ ಪರಿಭಾಷೆಯನ್ನು ಪ್ರಚುರ ಪಡಿಸಲು ಪ್ರಯತ್ನಿಸುತ್ತಿದ್ದಾರೆ. ಅದಕ್ಕೆ ಪಾರಮಾರ್ಥಿಕ ಪರಿವೇಶವನ್ನು ತೊಡಿಸಲಾಗುತ್ತಿದೆ. ಅಕ್ಷರ ದಾಸೋಹದಂತಹ ಜನರ ಹಕ್ಕಿನ ಸಂಗತಿಯನ್ನು, ಸಾಮಾಜಿಕ ಬದಲಾವಣೆಯ ಸಾಧನವನ್ನು ಇಸ್ಕಾನ್‌ನ ಮೂಲಕ ಹಂಗಿನ ಸಂಗತಿಯನ್ನಾಗಿ ಮಾಡುವ ಹುನ್ನಾರವೊಂದು ಸರ್ಕಾರದ ನೆರವಿನಿಂದಲೇ ನಡೆದಿದೆ. ನಾವು ಪ್ರತಿಪಾದಿಸಬೇಕಾಗಿರುವುದು-ಪರಿಭಾವಿಸಿಕೊಳ್ಳಬೇಕಾಗಿರುವುದು ಹಕ್ಕಿನ ಅಭಿವೃದ್ಧಿಯೋ ಅಥವಾ ಹಂಗಿನ ಅಭಿವೃದ್ಧಿಯೋ ಎಂಬುದನ್ನು ಕುರಿತಂತೆ ಇಲ್ಲಿ ಕೆಲವು ಪ್ರಮುಖ ಸಂಗತಿಗಳನ್ನು ಕರ್ನಾಟಕವನ್ನು ಅನುಲಕ್ಷಿಸಿ ಚರ್ಚಿಸಲಾಗಿದೆ.

ಅಭಿವೃದ್ಧಿಯನ್ನು ಪರಿಭಾವಿಸಿಕೊಂಡಿರುವ ಬಗೆ-

ಲಾಗಾಯ್ತಿನಿಂದ ಅಭಿವೃದ್ಧಿಯನ್ನು ಭೌತಿಕ ಸರಕು-ಸಾಮಗ್ರಿಗಳ ನೆಲೆಯಲ್ಲಿ ಪರಿಭಾವಿಸಿಕೊಳ್ಳುತ್ತಾ ಬರಲಾಗಿದೆ. ಅಭಿವೃದ್ಧಿಯೆನ್ನುವುದನ್ನು ವರಮಾನದ ಏರಿಕೆಯಲ್ಲಿ ಗುರುತಿಸುವುದು ವಾಡಿಕೆಯಲ್ಲಿದೆ. ಅದನ್ನು ಅಳೆಯಲು ನಾವು 'ಜಿಡಿಪಿ' ಅಥವಾ 'ಜಿಎನ್‌ಪಿ' ಎಂಬ ಮಾಪಕಗಳನ್ನು ಬಳಸುತ್ತಿದ್ದೇವೆ. ಅಂದರೆ ಇಲ್ಲಿ ಜನರು, ಜನರ ಬದುಕು,ಅವರ ಧಾರಣಾ ಸಾಮರ್ಥ್ಯ, ಅವರ ಬೆವರು, ಅವರ ಸಂತಾನೋತ್ಪತ್ತಿ ದುಡಿಮೆ ಮುಖ್ಯವಾಗುವುದಿಲ್ಲ. ಇಡೀ ದೇಶವನ್ನು ಒಂದು ಘಟಕವನ್ನಾಗಿ ಮಾಡಿಕೊಂಡು ಸರಕು-ಸಾಮಗ್ರಿಗಳ ಉತ್ಪಾದನೆಯನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿಯನ್ನು ಗುರುತಿಸಲಾಗುತ್ತಿದೆ. ಇದನ್ನು ಒಂದು ಉದಾಹರಣೆ ಮೂಲಕ ಸ್ಪಷ್ಟಪಡಿಸಬಹುದು. ನಮಗೆಲ್ಲಾ ತಿಳಿದಿರುವಂತೆ 70ರ ದಶಕದಲ್ಲಿ ನಾವು ಕೃಷಿಗೆ ಸಂಬಂಧಿಸಿದಂತೆ 'ಹಸಿರು ಕ್ರಾಂತಿ'ಯನ್ನು ಸಾಧಿಸಿಕೊಂಡೆವು. ಅದರಿಂದಾಗಿ ನಾವು ಆಹಾರದ ಕೊರತೆಯನ್ನು ಪರಿಹರಿಸಿಕೊಂಡೆವು. ಆಹಾರವನ್ನು ಆಮದು ಮಾಡಿಕೊಳ್ಳುತ್ತಿದ್ದ ದೇಶವು ಹಸಿರು ಕ್ರಾಂತಿಯಿಂದಾಗಿ ಆಹಾರ ಪದಾರ್ಥವನ್ನು ರಫ್ತು ಮಾಡುವ ಸ್ಥಿತಿಗೆ ಬಂದುಬಿಟ್ಟಿತು. ಒಟ್ಟಾರೆ ದೇಶವು 'ಆಹಾರ ಭದ್ರತೆ'ಯನ್ನು ಸಾಧಿಸಿಕೊಂಡಿತು. ಆದರೆ ಇಲ್ಲಿ ಅಗೋಚರವಾಗುಳಿದ ಸಂಗತಿಯೆಂದರೆ 'ಜನರ ಆಹಾರ ಭದ್ರತೆ'ಯಾಗಿದೆ.

ಇಂದಿಗೂ ನಮಲ್ಲಿ ಜನರಿಗೆ ಆಹಾರ ಭದ್ರತೆಯನ್ನು ಸಾಧಿಸಿಕೊಳ್ಳುವುದು ಸಾಧ್ಯವಾಗಿಲ್ಲ. ಉತ್ಪಾದನೆಯಾದ ಸರಕು-ಸಾಮಗ್ರಿಗಳ ಮೇಲೆ, ಅಂದರೆ ಆಹಾರ ಪದಾರ್ಥಗಳ ಮೇಲೆ ಜನರಿಗೆ ತಮ್ಮ ಹಕ್ಕುದಾರಿಕೆಯನ್ನು ಸ್ಥಾಪಿಸಿಕೊಳ್ಳುವುದು ಸಾಧ್ಯವಾಗಿಲ್ಲ. ಆಹಾರ ಪದಾರ್ಥಗಳ ಮೇಲಿನ ಜನರ ಹಕ್ಕುದಾರಿಕೆಯನ್ನು 'ಜನರ ಆಹಾರಭದ್ರತೆ'ಯೆಂದು ಕರೆಯಬಹುದು. ಸರಿಸುಮಾರು 65ಲಕ್ಷಕ್ಕೂ ಅಧಿಕ ಜನರು

ನಮಗೆಲ್ಲಾ ತಿಳಿದಿರುವಂತೆ ೭೦ರ ದಶಕದಲ್ಲಿ ನಾವು ಕೃಷಿಗೆ ಸಂಬಂಧಿಸಿದಂತೆ 'ಹಸಿರು ಕ್ರಾಂತಿ'ಯನ್ನು ಸಾಧಿಸಿಕೊಂಡೆವು. ಅದರಿಂದಾಗಿ ನಾವು ಆಹಾರದ ಕೊರತೆಯನ್ನು ಪರಿಹರಿಸಿಕೊಂಡೆವು. ಆಹಾರವನ್ನು ಆಮದು ಮಾಡಿಕೊಳ್ಳುತ್ತಿದ್ದ ದೇಶವು ಹಸಿರು ಕ್ರಾಂತಿಯಿಂದಾಗಿ ಆಹಾರ ಪದಾರ್ಥವನ್ನು ರಫ್ತು ಮಾಡುವ ಸ್ಥಿತಿಗೆ ಬಂದು ಬಿಟ್ಟಿತು. ಒಟ್ಟಾರೆ ದೇಶವು 'ಆಹಾರ ಭದ್ರತೆ'ಯನ್ನು ಸಾಧಿಸಿಕೊಂಡಿತು. ಆದರೆ ಇಲ್ಲಿ ಅಗೋಚರವಾಗುಳಿದ ಸಂಗತಿಯೆಂದರೆ 'ಜನರ ಆಹಾರ ಭದ್ರತೆ'ಯಾಗಿದೆ. ಇಂದಿಗೂ ನಮಲ್ಲಿ ಜನರಿಗೆ ಆಹಾರ ಭದ್ರತೆಯನ್ನು ಸಾಧಿಸಿ ಕೊಳ್ಳುವುದು ಸಾಧ್ಯವಾಗಿಲ್ಲ. ಉತ್ಪಾದನೆಯಾದ ಸರಕು-ಸಾಮಗ್ರಿಗಳ ಮೇಲೆ, ಅಂದರೆ ಆಹಾರ ಪದಾರ್ಥಗಳ ಮೇಲೆ ಜನರಿಗೆ ತಮ್ಮ ಹಕ್ಕುದಾರಿಕೆಯನ್ನು ಸ್ಥಾಪಿಸಿಕೊಳ್ಳುವುದು ಸಾಧ್ಯವಾಗಿಲ್ಲ. ಆಹಾರ ಪದಾರ್ಥಗಳ ಮೇಲಿನ ಜನರ ಹಕ್ಕುದಾರಿಕೆಯನ್ನು 'ಜನರ ಆಹಾರಭದ್ರತೆ'ಯೆಂದು ಕರೆಯ ಬಹುದು.

ಕರ್ನಾಟಕದಲ್ಲಿ ಆಹಾರ ಅಭದ್ರತೆಯಿಂದ ನರಳುತ್ತಿದ್ದಾರೆ. ಏಕೆಂದರೆ ಅಭಿವೃದ್ಧಿಯನ್ನು ಉತ್ಪಾದನೆ ನೆಲೆಯಿಂದ ಅಳೆಯುತ್ತಿರುವುದರಿಂದ ಅಲ್ಲಿ ಜನರ ಬದುಕು,ಅವರ ಬವಣೆ, ಅವರ ಬೆವರು, ಮನೆವಾರ್ತೆ ಅವರ ಹಕ್ಕುದಾರಿಕೆ ಮುಂತಾದ ಸಂಗತಿಗಳು ಮುಖ್ಯವಾಗುವುದಿಲ್ಲ. ಸರಕು, ಸಾಮಗ್ರಿ, ತಂತ್ರಜ್ಞಾನ ವರಮಾನ, ಉದ್ಯೋಗ, ಬಂಡವಾಳ, ಉಳಿತಾಯ, ಬಡ್ಡಿ ಮುಂತಾದವುಗಳು ಅಭಿವೃದ್ಧಿಯ ಸಾಧನಗಳೇ ವಿನಾ ಅವುಗಳ ವರ್ಧನೆಯೇ ಅಭಿವೃದ್ಧಿಯಲ್ಲ. ಮೆಹಬೂಬ್-ಉಲ್-ಹಕ್ ಒಂದು ಕಡೆ 'ವರಮಾನದ ಮೊತ್ತವೇ ಜನರ ಬದುಕಲ್ಲ' ವೆಂದು ಹೇಳಿದ್ದಾನೆ. ಅಭಿವೃದ್ಧಿಯು ಜನರನ್ನು ಒಳಗೊಳ್ಳುವ ಒಂದು ಪ್ರಕ್ರಿಯೆಯಾಗಬೇಕು. ಅಭಿವೃದ್ಧಿಯೆನ್ನುವುದು ಅನುಭವಿಸುವ ಒಂದು ಸಂಗತಿ. ಅಭಿವೃದ್ಧಿಯೆಂಬುದು ಜನರ ಬದುಕಿಗೆ, ಜನರ ಅನುಭವಕ್ಕೆ ಸಂಬಂಧಿಸಿದ ಸಂಗತಿ ಯಾಗಿದೆ. ಈ ಹಿನ್ನೆಲೆಯಲ್ಲಿ ಅಮರ್ತ್ಯಸೇನ್ ಅರ್ಥಶಾಸ್ತ್ರ ವನ್ನು ಭಿನ್ನ ನೆಲೆಯಲ್ಲಿ ಪರಿಭಾವಿಸಿಕೊಳ್ಳಲು ಪ್ರಯತ್ನಿಸಿದ್ದಾನೆ. ಜನರನ್ನು ಮೂಲ ಧಾತುವನ್ನಾಗಿ ಮಾಡಿ ಕೊಂಡು ಅವನು ಅರ್ಥಶಾಸ್ತ್ರವನ್ನು ಹೀಗೆ ನಿರ್ವಚಿಸಿ ದ್ದಾನೆ.

' ಅರ್ಥಶಾಸ್ತ್ರದ ಬಹುಪಾಲು ಸಂಗತಿಗಳು ಒಂದು ಕಡೆ ಸರಕು,ಸಾಮಗ್ರಿ, ಸೇವೆಗಳು ಮತ್ತು ಇನ್ನೊಂದು ಕಡೆ ಜನರು – ಇವೆರಡರ ನಡುವೆ ಇರುವ ಸಂಬಂಧದ ಜಗತ್ತಿಗೆ ಸೇರುತ್ತವೆ. ಸರಕು, ಸಾಮಗ್ರಿ ಮತ್ತು ಸೇವೆಗಳನ್ನು ಉತ್ಪಾದಿಸಲು ಜನರು ಹೇಗೆ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಅವುಗಳ ಮೇಲೆ ಜನರು ಹೇಗೆ ತಮ್ಮ ಹಕ್ಕುದಾರಿಕೆ ಸ್ಥಾಪಿಸಿಕೊಳ್ಳುತ್ತಾರೆ. ಅವುಗಳನ್ನು ಜನರು ಏನು ಮಾಡುತ್ತಾರೆ ಮತ್ತು ಅವುಗಳಿಂದ ಜನರು ಏನನ್ನು ಪಡೆಯುತ್ತಾರೆ ಎಂಬ ಸಂಗತಿಗಳ ಅಧ್ಯಯನವೇ ಅರ್ಥಶಾಸ್ತ್ರ'(೧೯೮೫).

ಅಮರ್ತ್ಯಸೇನ್‌ನ ನಿರ್ವಚನದಲ್ಲಿ ಎರಡು ಸಂಗತಿಗಳು ಪ್ರಧಾನವಾಗಿದ್ದಾವೆ. ಮೊದಲನೆಯದು ಜನರು. ಎರಡನೆಯದು ಸರಕು-ಸಾಮಗ್ರಿಗಳು. ಆದರೆ ಇಲ್ಲಿ ಬಹಳ ಸ್ಪಷ್ಟವಾಗಿ ಕಾಣುವ ಸಂಗತಿಯೇನೆಂದರೆ ಜನರಿಗೆ ಮೊದಲನೆಯ ಸ್ಥಾನ ನೀಡಲಾಗಿದೆ. ಸರಕು-ಸಾಮಗ್ರಿಗಳಿಗೆ ಎರಡನೆಯ ಸ್ಥಾನ ನೀಡಲಾಗಿದೆ. ಜನರ ನೆಲೆಯಿಂದಲೇ ಅರ್ಥಶಾಸ್ತ್ರವನ್ನು ಅವನು ಪರಿಭಾವಿಸಿಕೊಳ್ಳುತ್ತಿದ್ದಾನೆ. ಈ ವ್ಯಾಖ್ಯೆಯಲ್ಲಿ ಜನರ ಹಕ್ಕುದಾರಿಕೆ ಬಗ್ಗೆ ಒತ್ತು ನೀಡಲಾಗಿದೆ. ಜನರಿಲ್ಲದಿದ್ದರೆ ಅಭಿವೃದ್ಧಿಗೆ ಯಾವುದೇ ಅರ್ಥವಿರುವುದಿಲ್ಲ. ಬರಗಾಲ ಕುರಿತ ತನ್ನ ಪ್ರಸಿದ್ಧ ಅಧ್ಯಯನಗಳಲ್ಲಿ ಅಮರ್ತ್ಯಸೇನ್ ಅವರು ಹಸಿವು ಎಂಬುದು ಆಹಾರ ಪದಾರ್ಥಗಳು ಇಲ್ಲದೇ ಇರುವುದರಿಂದ ಉಂಟಾಗುವುದಿಲ್ಲ. ಆಹಾರ ಪದಾರ್ಥಗಳ ಮೇಲೆ ಜನರು ತಮ್ಮ ಹಕ್ಕುದಾರಿಕೆಯನ್ನು ಸ್ಥಾಪಿಸಲು ವಿಫಲವಾದಾಗ ಹಸಿವಿನ ಹಾಹಾಕಾರ ಉಂಟಾಗುತ್ತದೆಯೆಂಬ ವಿಚಾರವನ್ನು ಅವನು ಮಂಡಿಸಿದ್ದಾನೆ. ಹಕ್ಕುದಾರಿಕೆಯ ವೈಫಲ್ಯವೆ ಬರಗಾಲದಲ್ಲಿ ಹಸಿವು, ಸಾವು-ನೋವು ಉಂಟಾಗಲು ಕಾರಣವಾಗುತ್ತದೆಯೆಂದು ಸೇನ್ ತೋರಿಸಿಕೊಟ್ಟಿದ್ದಾನೆ. ಆರ್ಥಿಕತೆಯಲ್ಲಿ ಸರಕು-ಸಾಮಗ್ರಿ ಗಳು ಸಮೃದ್ಧವಾಗಿರಬಹುದು. ಆದರೆ ಅವು ಜನರಿಗೆ ದಕ್ಕುವ ಬಗೆ ಹೇಗೆ? ಅವುಗಳನ್ನು ದಕ್ಕಿಸಿಕೊಳ್ಳುವ ಸಾಮರ್ಥ್ಯ ಜನರಿಗಿದೆಯೇ? ಅಭಿವೃದ್ಧಿಯನ್ನು ಸೇನ್ ಇಂತಹ ಹರಿದು ಬರುತ್ತಿರುವ ಅವಕಾಶಗಳನ್ನು, ಅಂದರೆ, ಸರಕು-ಸಾಮಗ್ರಿಗಳನ್ನು

> ಇಂದು ದೇವರುಗಳಿಗೆ ಮತ್ತು ದೇವರ ಅನುಯಾಯಿಗಳಿಗೆ, ಅದರ ಏಜೆಂಟರಾದ ಸ್ವಾಮಿಗಳಿಗೆ ಬರವೇನಿಲ್ಲ. ಗುಡಿ-ಗುಡಾರಗಳನ್ನು ಕಟ್ಟಿಸುವವರಿಗೂ ಕೊರತೆಯಿಲ್ಲ. ಇಂತಹ ಸಂಗತಿಗಳ ಬಗ್ಗೆ ಜನರಿಗೆ ಎಲ್ಲಿಲ್ಲದ ಕುತೂಹಲ ಉಂಟಾಗಿ ಬಿಟ್ಟಿದೆ. ದೂರದರ್ಶನ, ಪತ್ರಿಕೆಗಳು ಮತ್ತು ಇತರೆ ಮಾಧ್ಯಮಗಳಲ್ಲಿ ಅವರ ಪ್ರಚಾರದ ಕಾರ್ಯ ಯಾವ ಅಡೆತಡೆಯಿಲ್ಲದೆ ತಲೆ ಚಿಟ್ಟು ಹಿಡಿಸುವಷ್ಟು ಅವ್ಯಾಹತವಾಗಿ ನಡೆದಿದೆ. ಭವಿಷ್ಯ ನುಡಿಯುವವರಿಗಂತೂ ಟಿವಿ ವಾಹಿನಿಗಳಲ್ಲಿ ಪೈಪೋಟಿಯೇ ನಡೆದಿದೆ. ಇಂದು ಮಠ-ಮಾನ್ಯಗಳಿಗೆ ಹೆಚ್ಚಿನ ಮಹತ್ವ ಬಂದು ಬಿಟ್ಟಿದೆ. ದೇವರುಗಳು-ಸ್ವಾಮಿಗಳು, ಉತ್ಸವಗಳು-ಉಪಾಸನೆಗಳು, ರಥೋತ್ಸವಗಳು-ಆರಾಧನೆಗಳು- ಇಂದು ಜನರ ಮನೆಯೊಳಗಿನ ಖಾಸಗಿ ಸಂಗತಿಯಾಗಿ ಉಳಿದಿಲ್ಲ.

ಧಾರಣೆ ಮಾಡಿಕೊಳ್ಳುವ ಜನರ ಸಾಮರ್ಥ್ಯದಲ್ಲಿ ಗುರುತಿಸಲು ಪ್ರಯತ್ನಿಸುತ್ತಾನೆ. ಈ ಸಾಮರ್ಥ್ಯವನ್ನು ಅಮರ್ತ್ಯಸೇನ್ ಅಭಿವೃದ್ಧಿಯೆಂದು ನಿರ್ವಚಿಸಲು ಬಯಸುತ್ತಾನೆ. ಧಾರಣಾ ಸಾಮರ್ಥ್ಯವನ್ನು ನಿರ್ಧರಿಸುವ ಸಂಗತಿಗಳಾವುವೆಂದರೆ ಅಕ್ಷರ, ಶಿಕ್ಷಣ, ಆರೋಗ್ಯ, ಆಶ್ರಯ ಮುಂತಾದವು.

ಪರಮಾರ್ಥವಾದಿ ಪರಿಭಾಷೆ

ಇಂದು ದೇವರುಗಳಿಗೆ ಮತ್ತು ಅವರ ಅನುಯಾಯಿಗಳಿಗೆ, ಅದರ ಏಜೆಂಟರಾದ ಸ್ವಾಮಿಗಳಿಗೆ ಬರವೇನಿಲ್ಲ. ಗುಡಿ-ಗುಡಾರಗಳನ್ನು ಕಟ್ಟಿಸುವವರಿಗೂ ಕೊರತೆಯಿಲ್ಲ. ಇಂತಹ ಸಂಗತಿಗಳ ಬಗ್ಗೆ ಜನರಿಗೆ ಎಲ್ಲಿಲ್ಲದ ಕುತೂಹಲ ಉಂಟಾಗಿ ಬಿಟ್ಟಿದೆ. ದೂರದರ್ಶನ, ಪತ್ರಿಕೆಗಳು ಮತ್ತು ಇತರೆ ಮಾಧ್ಯಮಗಳಲ್ಲಿ ಅವರ ಪ್ರಚಾರದ ಕಾರ್ಯ ಯಾವ ಅಡೆತಡೆಯಿಲ್ಲದೆ ತಲೆ ಚಿಟ್ಟು ಹಿಡಿಸುವಷ್ಟು ಅವ್ಯಾಹತವಾಗಿ ನಡೆದಿದೆ. ಭವಿಷ್ಯ ನುಡಿಯುವವರಿಗಂತೂ ಟಿವಿ ವಾಹಿನಿಗಳಲ್ಲಿ ಪೈಪೋಟಿಯೇ ನಡೆದಿದೆ. ಇಂದು ಮಠ-ಮಾನ್ಯಗಳಿಗೆ ಹೆಚ್ಚಿನ ಮಹತ್ವ ಬಂದು ಬಿಟ್ಟಿದೆ. ದೇವರುಗಳು-ಸ್ವಾಮಿಗಳು, ಉತ್ಸವಗಳು-ಉಪಾಸನೆಗಳು, ರಥೋತ್ಸವಗಳು-ಆರಾಧನೆಗಳು-ಧಾರ್ಮಿಕ ಅಭಿಯಾನಗಳು ಇಂದು ಜನರ ಮನೆಯೊಳಗಿನ ಖಾಸಗಿ ಸಂಗತಿಯಾಗಿ ಉಳಿದಿಲ್ಲ. ಇಂದು ಸಮುದಾಯಗಳ ಅಭಿವೃದ್ಧಿಯನ್ನು ಆ ಸಮುದಾಯಗಳಲ್ಲಿ ಮಠಗಳಿವೆಯೇ, ಸ್ವಾಮಿಗಳಿದ್ದಾರೆಯೇ, ಆ ಸಮುದಾಯವು ಎಷ್ಟು ಮಠ-ಗುಡಿಗಳನ್ನು ಕಟ್ಟಿಸಿದೆ ಅಥವಾ ಹೊಂದಿದೆ, ಆ ಸಮುದಾಯವು ವರ್ಷಕ್ಕೆ ಎಷ್ಟು ಸಾರಿ ತನ್ನ ಸಮುದಾಯದ ಸಮಾವೇಶಗಳನ್ನು ಸಂಘಟಿಸುತ್ತದೆ ಮುಂತಾದವುಗಳ ಆಧಾರದ ಮೇಲೆ ಮಾಪನ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿ ಬಿಟ್ಟಿದೆ. ಆ ಸಮುದಾಯದಲ್ಲಿ ಎಷ್ಟು ಜನರು ಬಡವರಿದ್ದಾರೆ, ಆ ಸಮುದಾಯದಲ್ಲಿ ಸಾಕ್ಷರತೆ ಮಟ್ಟ ಎಷ್ಟಿದೆ, ಆ ಸಮುದಾಯದಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣವೆಷ್ಟು, ಅಲ್ಲಿ ಮಹಿಳೆಯರ ಮದುವೆಯ ವಯಸ್ಸೆಷ್ಟು, ಮಹಿಳೆಯರ ಪೌಷ್ಟಿಕ ಮಟ್ಟವೆಷ್ಟು, ಆ ಸಮುದಾಯದಲ್ಲಿ ವಸತಿಹೀನರು, ನಿವೇಶನಹೀನರು ಎಷ್ಟು ಜನರಿದ್ದಾರೆ ಮುಂತಾದವು ಅಭಿವೃದ್ಧಿಯ ಸೂಚಿಗಳಾಗುಳಿದಿಲ್ಲ. ಖಾಸಗಿ ಸಂಗತಿಗಳೆಲ್ಲ ಸಾರ್ವಜನಿಕ ಸ್ವರೂಪವನ್ನು ಪಡೆದುಕೊಳ್ಳುತ್ತಿವೆ. ರಥೋತ್ಸವ, ಯಾಗ, ಯಜ್ಞ, ಹೋಮ, ಹವನ, ಭಜನೆ, ಉಪಾಸನೆ, ಆರಾಧನೆ, ಹರಕೆ, ಉಚಿತ ವಿವಾಹ, ಅನ್ನ ಸಂತರ್ಪಣೆ ಮುಂತಾದವುಗಳು ಆದ್ಯತೆಯ ಸಂಗತಿಗಳಾಗಿ ಬಿಟ್ಟಿವೆ. ಇದನ್ನೆ ಇಲ್ಲಿ 'ಪಾರಮಾರ್ಥಿಕ ಪರಿಭಾಷೆ' ಯೆಂದು ಕರೆಯಲಾಗಿದೆ. ದೇವಸ್ಥಾನಗಳನ್ನು ಖಾಸಗಿ ಮಠಗಳಿಗೆ ಕೊಡುಗೆಯಾಗಿ ಸರ್ಕಾರವು ನೀಡುತ್ತಿದೆ. ಪಾರಮಾರ್ಥಿಕ ಪರಿಭಾಷೆಯನ್ನು ಸರ್ಕಾರವೆ ಪ್ರಚುರಪಡಿಸುತ್ತಿರುವುದು ಮತ್ತು ಪರಿಪಾಲಿಸುತ್ತಿರುವುದು ಜನತಂತ್ರದ ದೃಷ್ಟಿಯಿಂದ ಅಪೇಕ್ಷಣೀಯ ಸಂಗತಿಯಲ್ಲ. ದೇವಾಲಯಗಳಲ್ಲಿ, ಮಠಗಳಲ್ಲಿ ಛತ್ರ ಕಟ್ಟಲು ದಂಡಿ ದಂಡಿಯಾಗಿ ಸರ್ಕಾರವು ಹಣದ ಹೊಳೆಯನ್ನು ಹರಿಸುತ್ತಿದೆ. ಈ ಪರಮಾರ್ಥದ ಪರಿಭಾಷೆಯ ಮೆರೆದಾಟ ಅವ್ಯಾಹತವಾಗಿ ನಡೆದಿದೆ. ಗುಡಿಗಳನ್ನು ಕಟ್ಟುವುದು ಇಂದು ಆಂದೋಳನದ ರೂಪ ಪಡೆದುಕೊಳ್ಳುತ್ತಿದೆ. ಇಲ್ಲಿ ಭಕ್ತಿಗಿಂತ ಆವೇಶವು ಮುಖ್ಯವಾಗಿ ಬಿಟ್ಟಿದೆ. ದಯೆಗಿಂತ ಅಸಹನೆ-ಹಿಂಸೆ ಮುಖ್ಯವಾಗಿ ಬಿಟ್ಟಿದೆ. 'ನಾವು-ಅವರು' ಎಂಬಂತಹ ವಿಭಜನೆಯ ರಾಜಕಾರಣವು ಇಂದು ಮುಂಚೂಣಿಗೆ ಬಂದುಬಿಟ್ಟಿದೆ. ಈ ಬಗೆಯ ಸಂಗತಿಗಳು ಅರ್ಥಹೀನವೆಂಬುದನ್ನು ಬಸವಣ್ಣ ೮೫೦ ವರ್ಷಗಳ ಹಿಂದೆಯೆ ಅತ್ಯಂತ ಮಾರ್ಮಿಕವಾಗಿ ತಿಳಿಸಿದ್ದಾನೆ.

ನೀರ ಕಂಡರೆ ಮುಳುಗುವರಯ್ಯಾ
ಮರವ ಕಂಡರೆ ಸುತ್ತುವರಯ್ಯಾ
ಒಣಗುವ ಮರವ ಬತ್ತುವ ಜಲವ
ನಚ್ಚಿ ಕೊಂಡವರ
ನಾನೆಂಬೆ ಕೂಡಲಸಂಗಮದೇವಾ.

ಬಳ್ಳಾರಿ ಜಿಲ್ಲೆಯ ಬವಣೆ

ಬಳ್ಳಾರಿ ಜಿಲ್ಲೆಯು ಕರ್ನಾಟಕದಲ್ಲಿ ಬಹಳ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾಗಿದೆ. ಆದರೆ ಸಾಂಪ್ರದಾಯಿಕ ಅಭಿವೃದ್ಧಿ ಮಾನದಂಡವನ್ನು ಅಳವಡಿಸಿದರೆ ಅದು ಹಿಂದುಳಿದ ಜಿಲ್ಲೆಯಾಗಿ ಉಳಿಯುವುದಿಲ್ಲ. ವರಮಾನ ವರ್ಧನೆಯ ದೃಷ್ಟಿಯಿಂದ ಅದು ಮುಂದುವರಿದ ಜಿಲ್ಲೆಯಾಗಿದೆ. ಆದರೆ ಧಾರಣಾ ಸಾಮರ್ಥ್ಯದ ವರ್ಧನೆ ದೃಷ್ಟಿಯಿಂದ ಅದು ದುಸ್ಥಿತಿ ಅನುಭವಿಸುತ್ತಿರುವ ಜಿಲ್ಲೆಯಾಗಿದೆ. ಜಿಲ್ಲೆಯೇನೋ ವರಮಾನದಲ್ಲಿ ಮತ್ತು ಉತ್ಪಾದನೆಯಲ್ಲಿ ಸಮೃದ್ಧವಾಗುತ್ತ ನಡೆದಿದೆ. ಆದರೆ ಜನರ ಬದುಕು ಮಾತ್ರ ಬರಡಾಗುತ್ತಾ ನಡೆದಿದೆ. ಅದರ ಪ್ರಾಕೃತಿಕ ಸಂಪತ್ತು ಬರಿದಾಗುತ್ತಿದೆ. ಏಕೆಂದರೆ ೨೦೦೫-೦೬ ರಲ್ಲಿ ಅದರ ತಲಾ ಆದಾಯ ರೂ೪೦,೭೬೮ ರಷ್ಟಾಗಿದ್ದರೆ ಕರ್ನಾಟಕ ರಾಜ್ಯದ ತಲಾ ಆದಾಯ ಅದೇ ವರ್ಷದಲ್ಲಿ ರೂ೩೦,೦೦೦ದಷ್ಟಿತ್ತು. ರಾಜ್ಯದಲ್ಲಿ ಅತ್ಯಂತ ಕನಿಷ್ಟ ತಲಾ ವರಮಾನ ಬೀದರ್ ಜಿಲ್ಲೆಯಲ್ಲಿ ರೂ ೧೫೪೯೧ರಷ್ಟಿದೆ. ಅಂದರೆ ಬಳ್ಳಾರಿ ಜಿಲ್ಲೆಯ ತಲಾ ವರಮಾನಕ್ಕೂ ಮತ್ತು

[illegible] ವರಮಾನದ [illegible] ನಡುವೆ [illegible] ಎಂಬುದನ್ನು, ನಾವು ಇಲ್ಲಿ ಊಹಿಸಿಕೊಳ್ಳಬಹುದು. ಬಳ್ಳಾರಿ ಜಿಲ್ಲೆಯ ತಲಾ ವರಮಾನವು ರಾಜ್ಯದ ತಲಾ ವರಮಾನದ ಶೇ೧೩೫.೮೯ರಷ್ಟಾಗಿದೆ. ಇಡೀ ರಾಜ್ಯದ ೨೯ ಜಿಲ್ಲೆಗಳ ಪೈಕಿ ತಲಾ ಆದಾಯದಲ್ಲಿ(೨೦೦೫-೦೬, ಚಾಲ್ತಿ ಬೆಲೆಗಳಲ್ಲಿ) ಬಳ್ಳಾರಿ ಜಿಲ್ಲೆಯು ಬೆಂಗಳೂರು ನಗರ ಜಿಲ್ಲೆ (ರೂ೬೪೧೮), ದಕ್ಷಿಣ ಕನ್ನಡ (ರೂ೪೪೪೦೩) ಮತ್ತು ಕೊಡಗು (ರೂ೪೧೮೯೪) ಜಿಲ್ಲೆಗಳ ನಂತರ ನಾಲ್ಕನೆಯ ಸ್ಥಾನದಲ್ಲಿದೆ. ಅಂದಮೇಲೆ ಅದು ಹಿಂದುಳಿದ ಜಿಲ್ಲೆಯಾಗಲು ಸಾಧ್ಯವಿಲ್ಲ.

ಆದರೆ ಅತ್ಯಂತ ದುರದೃಷ್ಟದ ಸಂಗತಿಯೆಂದರೆ ಅದು ಮಾನವ ಅಭಿವೃದ್ಧಿಯಲ್ಲಿ ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿದೆ. ಅಲ್ಲಿ ಅದರ ಸ್ಥಾನ ೧೮. ಸಾಕ್ಷರತೆಯಲ್ಲಿ ಅದರ ಸಾಧನೆ ಕೆಳ ಮಟ್ಟದಲ್ಲಿದೆ. ರಾಜ್ಯದಲ್ಲಿ ೨೦೦೧ರಲ್ಲಿ ಸಾಕ್ಷರತೆ ಶೇ೬೬.೬೪ರಷ್ಟಿದ್ದರೆ ಬಳ್ಳಾರಿ ಜಿಲ್ಲೆಯಲ್ಲಿ ಅದರ ಪ್ರಮಾಣ ಶೇ೫೭.೪೦. ಇಡೀ ರಾಜ್ಯದಲ್ಲಿ ಅಕ್ಷರಸ್ಥರಿಗಿಂತ ಅನಕ್ಷರಸ್ಥ ಮಹಿಳೆಯರು ಅಧಿಕವಿರುವ ಕೆಲವೇ ಕೆಲವು ಜಿಲ್ಲೆಗಳ ಪೈಕಿ ಬಳ್ಳಾರಿಯೂ ಒಂದಾಗಿದೆ. ಈ ಜಿಲ್ಲೆಯ

ಗ್ರಾಮೀಣ ಮಹಿಳೆಯರ ಸಾಕ್ಷರತೆಯ ಪ್ರಮಾಣ ಶೇ೩೬.೮೭. ಈ ಜಿಲ್ಲೆಯು ಅಭಿವೃದ್ಧಿಯಲ್ಲಿ ಅತ್ಯಂತ ಗಂಭೀರವಾದ ಸಮಸ್ಯೆಯನ್ನು ಎದುರಿಸುತ್ತಿದೆ ಎಂಬುದಕ್ಕೆ ಇದು ಬಹುಮುಖ್ಯವಾದ ಸೂಚಿಯಾಗಿದೆ.

ಆರೋಗ್ಯದಲ್ಲಿ ಜಿಲ್ಲೆಯ ಪರಿಸ್ಥಿತಿ ಬಗ್ಗೆ ಏನನ್ನು ಹೇಳದಿರುವುದೇ ಒಳ್ಳೆಯದು ಎನ್ನುವಂತಹ ಸ್ಥಿತಿಯಿದೆ. ಇಡೀ ದೇಶದ ೫೯೧ ಜಿಲ್ಲೆಗಳ ಪೈಕಿ ಐದು ವರ್ಷಕ್ಕಿಂತ ಕಡಿಮೆ ವಯೋಮಾನದ ಮಕ್ಕಳ ಮರಣ ಪ್ರಮಾಣದಲ್ಲಿ ಅದರ ಸ್ಥಾನ ೩೮೦. ಐದು ವರ್ಷಕ್ಕಿಂತ ಕಡಿಮೆ ವಯೋಮಾನದ ಮಕ್ಕಳ ಮರಣ ಪ್ರಮಾಣ ಜಿಲ್ಲೆಯಲ್ಲಿ ೧೧೬. ಅಂದರೆ ಹುಟ್ಟಿದ ಸಾವಿರ ಮಕ್ಕಳಲ್ಲಿ ಐದನೆಯ ಹುಟ್ಟುಹಬ್ಬದಿಂದ ವಂಚಿತರಾಗುವ ಮಕ್ಕಳ ಸಂಖ್ಯೆ ೧೧೬. ಇದು ಯಾರಿಗೂ ಶೋಭೆ ತರುವಂತಹ ವಿಷಯವಲ್ಲ! ರಾಜ್ಯದ ಆರೋಗ್ಯ ಮಂತ್ರಿಗಳಿರುವ ಜಿಲ್ಲೆಯಲ್ಲಿ ಇಂತಹ ಸ್ಥಿತಿಯಿದೆ! ಹೇಳಿಕೊಳ್ಳಲು ಮಾತ್ರ ಅಲ್ಲಿ ಅತ್ಯಂತ ಪ್ರಭಾವಶಾಲಿಗಳಾದ ಇಬ್ಬರು ಸಂಪುಟ ದರ್ಜೆಯ ಮಂತ್ರಿಗಳಿದ್ದಾರೆ. ಆದರೆ ಜನರ ಬವಣೆಯನ್ನು ಕೇಳುವವರಿಲ್ಲ ಎಂಬಂತಾಗಿದೆ. ಈ ಸಚಿವರುಗಳು ಇಂದು ಜಿಲ್ಲೆಯಲ್ಲಿ ವಿಮಾನ ನಿಲ್ದಾಣದ ಬಗ್ಗೆ ಮಾತನಾಡುತ್ತಿದ್ದಾರೆ. ಹೆಲಿ ಪ್ರವಾಸೋದ್ಯಮದ ಬಗ್ಗೆ ಯೋಚನೆ ಮಾಡುತ್ತಿದ್ದಾರೆ. ಉಚಿತ ಸಾಮೂಹಿಕ ವಿವಾಹದ ಆಚರಣೆಯಲ್ಲಿ ತೊಡಗಿದ್ದಾರೆ. ವರಮಹಾಲಕ್ಷ್ಮಿ ಪೂಜೆಮಾಡಲೆಂದೆ ಜಿಲ್ಲೆಗೆ ಪ್ರತಿ ವರ್ಷ ಬರುವುದಾಗಿ ಕೇಂದ್ರದ ಮಾಜಿ ಮಂತ್ರಿಯೊಬ್ಬರು ಆಶ್ವಾಸನೆ ನೀಡಿದ್ದಾರೆ. ಅವರು ಅದರಂತೆ ನಡೆದುಕೊಳ್ಳುತ್ತಿದ್ದಾರೆ. ಇಲ್ಲಿ ಈ ನಾಯಕ-ನಾಯಕಿಯರಿಗೆ ಜನರ ಬವಣೆ, ಭಂಗ ಮುಖ್ಯವಾಗುವುದಿಲ್ಲ. ಇಲ್ಲಿ ಜನರು ಗೌರವದಿಂದ ಮತ್ತು ಸ್ವಾಭಿಮಾನದಿಂದ ಬದುಕಲು ಸಾಧ್ಯವಿಲ್ಲದಂತಹ ಸ್ಥಿತಿ ನಿರ್ಮಾಣವಾಗುತ್ತಿದೆ. ಉದಾಹರಣೆಗೆ ಇಡೀ ರಾಜ್ಯದಲ್ಲಿ ಭೂರಹಿತ ಕೃಷಿ ಕೂಲಿಕಾರರ ಪ್ರಮಾಣ ಶೇ೨೬ ರಷ್ಟಿದ್ದರೆ ಬಳ್ಳಾರಿ ಜಿಲ್ಲೆಯಲ್ಲಿ ಅವರ ಪ್ರಮಾಣ ಶೇ೫೯.೨೫.

ಹಬ್ಬ, ಹರಿದಿನ, ಜಾತ್ರೆ-ಪರಿಷೆಗಳಿಗೆ ಈ ಜಿಲ್ಲೆಯಲ್ಲಿ ಉಳ್ಳವರು ನೀಡುವ ದಾನ-ದತ್ತಿಗಳಿಗೆ, ವಸ್ತ್ರದಾನಕ್ಕೆ, ಉಚಿತ ಕುಡಿಯುವ ನೀರಿಗೆ, ಉಚಿತ ನೋಟು ಪುಸ್ತಕಗಳಿಗೆ ಕೊರತೆಯೇನೂ ಇಲ್ಲ. ಬಡವರ ಅಳಲನ್ನು, ಬವಣೆಯನ್ನು ಪಾರಮಾರ್ಥಿಕ ಪರಿಭಾಷೆಯಲ್ಲಿ ಮುಚ್ಚಿಡುವ ಕುತಂತ್ರ ಇಲ್ಲಿ ನಡೆದಿದೆ. ನರಕದ ಅನುಭವವನ್ನು ಇಲ್ಲಿಯೇ, ಈ ಜನ್ಮದಲ್ಲಿಯೇ, ಈ ಭೂಲೋಕದಲ್ಲಿಯೆ ಅನುಭವಿಸಬೇಕೆಂದು ಯಾರಾದರೂ ಬಯಸಿದರೆ ಅವರು ಬಳ್ಳಾರಿ ಜಿಲ್ಲೆಯ ರಸ್ತೆಗಳಲ್ಲಿ ಒಮ್ಮೆ ಓಡಾಡಿದರೆ ಸಾಕು. ಅದು ಬಳ್ಳಾರಿ-ಸಂಡೂರು ರಸ್ತೆಯಾಗಬಹುದು ಅಥವಾ ಬಳ್ಳಾರಿ-ಹೊಸಪೇಟೆ ರಸ್ತೆಯಾಗಬಹುದು. ಬಳ್ಳಾರಿ-ತೋರಣಗಲ್ಲು-ಸಂಡೂರು ರಸ್ತೆಯಿರಬಹುದು. ಅತ್ಯಂತ ಕುತೂಹಲದ ಸಂಗತಿಯೆಂದರೆ ಇಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಬೇರೆ ಹಾದು ಹೋಗುತ್ತವೆ. ಸರಿಸುಮಾರು ರೂ೨೦೦೦೦ ಕೋಟಿಯಿಂದ ರೂ೫೫೦೦೦ ಕೋಟಿಯಷ್ಟು ಬಂಡವಾಳ ಜಿಲ್ಲೆಯಲ್ಲಿ ಹೂಡಿಕೆಯಾಗಿದೆ. ಆದರೆ ಅದರ ರಸ್ತೆಗಳು ಮಾತ್ರ ಜನರಿಗಾಗಿ ಇಲ್ಲವೆ ಇಲ್ಲ ಎನ್ನುವಂತಹ ಸ್ಥಿತಿಯಲ್ಲಿವೆ. ಇಲ್ಲಿ ಅಭಿವೃದ್ಧಿಯೆಂಬುದು ಜನರಿಗಾಗಿ ಇಲ್ಲ. ಅದು ಕೇವಲ ಭೌತಿಕ ಸರಕು-ಸಾಮಗ್ರಿಗಳ ರೂಪದಲ್ಲಿ, ಕೈಗಾರಿಕೋದ್ಯಮಿಗಳ ಬೊಕ್ಕಸದಲ್ಲಿ, ಗಣಿದಣಿಗಳ ತಿಜೋರಿಗಳಲ್ಲಿ ಮಡುಗಟ್ಟಿಕೊಂಡು ಬಿಟ್ಟಿದೆ. ಅವರ ದತ್ತಿ-ದಾನಕ್ಕೆ ಮಾತ್ರ ಅದು ಮೀಸಲಾಗಿದೆ. ಅಭಿವೃದ್ಧಿಯು ಇಲ್ಲಿ ಜನರ ಅನುಭವವಾಗಿ, ಜನರ ಬದುಕಾಗಿ ಪರಿವರ್ತನೆಯಾಗಿಲ್ಲ. ಈ ಜಿಲ್ಲೆಯಲ್ಲಿ ಇಷ್ಟೆಲ್ಲ ಬಂಡವಾಳ ಹೂಡಿಕೆಯಾಗಿದೆ, ಉದ್ದಿಮೆಗಳು ಲೆಕ್ಕವಿಲ್ಲದಷ್ಟು ಮೇಲೇಳುತ್ತಿವೆ. ನಾವು ಊಹಿಸಿಕೊಳ್ಳಲಾರದಷ್ಟು ಹೆಲಿಕಾಪ್ಟರುಗಳು ಜಿಲ್ಲೆಯಲ್ಲಿವೆ! ಆದರೆ ಕಳೆದ ೧೦-೧೫ ವರ್ಷಗಳಲ್ಲಿ ಜಿಲ್ಲೆಯಲ್ಲಿ ಮಾತ್ರ ವೈದ್ಯಕೀಯ ಸೌಲಭ್ಯ ವಿಸ್ತರಣೆಗೊಂಡಿಲ್ಲ. ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಂಖ್ಯೆ ಹೆಚ್ಚಾಗಲಿಲ್ಲ. ಆಸ್ಪತ್ರೆಗಳನ್ನು ಜನರು ಪ್ರವೇಶಿಸಲು ಅರ್ಹವಾದ ರೀತಿಯಲ್ಲಿ ಕಟ್ಟಲಿಲ್ಲ. ಬಡವರ ಬವಣೆಯನ್ನು ಇಲ್ಲಿ ಕೇಳುವವರಿಲ್ಲದಂತಾಗಿದೆ. ಇದು ಹಂಗಿನ ಅಭಿವೃದ್ಧಿ. ಜನರು ತಮ್ಮ ಹಕ್ಕನ್ನಾಗಿ ಅಭಿವೃದ್ಧಿಯನ್ನು ಒತ್ತಾಯಿಸುವ ಸ್ಥಿತಿ ಇಲ್ಲಿಲ್ಲ.

> **ಜನರು ಗೌರವಯುತವಾಗಿ ಬದುಕು ನಡೆಸಲು ಸಾಧ್ಯವಾಗುವ ಒಂದು ಸಂಗತಿಯೇ ಅಭಿವೃದ್ಧಿ. ಅಮರ್ತ್ಯಸೇನ್ ಅಭಿವೃದ್ಧಿಯನ್ನು ಸ್ವಾತಂತ್ರ್ಯಕ್ಕೆ ಸಂವಾದಿಯಾಗಿ ಬಳಸುತ್ತಾನೆ. ಜನರು ತಾವೇನಾಗಬೇಕೆಂದಿದ್ದಾರೋ ಅದರಂತಾಗಲು ಮತ್ತು ಜನರು ತಾವು ಏನುಮಾಡಬೇಕೆಂದಿದ್ದಾರೋ ಅದನ್ನು ಮಾಡಲು ಅಗತ್ಯವಾದ ಸಾಮರ್ಥ್ಯ ಮತ್ತು ಸ್ವಾತಂತ್ರ್ಯವನ್ನು ಅಭಿವೃದ್ಧಿಯೆಂದು ಅವನು ನಿರ್ವಚಿಸಿದ್ದಾನೆ. 'ಸ್ವಾತಂತ್ರ್ಯವಾಗಿ ಅಭಿವೃದ್ಧಿ' ಯೆಂದಾಗ ಅಮರ್ತ್ಯಸೇನ್ ಜನರ ಸ್ವಾಭಿಮಾನಿ ಮತ್ತು ಸ್ವಾವಲಂಬಿ ಬದುಕನ್ನು ಗಮನದಲ್ಲಿಟ್ಟುಕೊಂಡೇ ಹೇಳಿದ್ದಾನೆ. ಯಾವುದೆ ಬಗೆಯ ಅವಮಾನವಿಲ್ಲದೆ ಸಾರ್ವಜನಿಕವಾಗಿ ಸಹಭಾಗಿಗಳಾಗುವ ಜನರ ಸಾಮರ್ಥ್ಯವನ್ನು ಇಲ್ಲಿ ಗುರುತಿಸಲಾಗಿದೆ.**

ಅಮರ್ತ್ಯಸೇನ್‌ನ ಭಾಷೆಯಲ್ಲಿ ಹೇಳುವುದಾದರೆ, ಜಿಲ್ಲೆಯಲ್ಲಿ ಆಸ್ಫೋಟಕಾರಿಯಾಗಿ ಉತ್ಪಾದನೆಯಾಗುತ್ತಿರುವ ಸರಕು-ಸಾಮಗ್ರಿಗಳ ಮೇಲೆ ಜನರು ತಮ್ಮ ಹಕ್ಕುದಾರಿಕೆಯನ್ನು ಸ್ಥಾಪಿಸಲು ಸಾಧ್ಯವಾಗಿಲ್ಲ. ಆಸ್ಫೋಟಕಾರಿಯಾಗಿ ಉತ್ಪಾದನೆಯಾಗುತ್ತಿರುವ ಸರಕು-ಸಾಮಗ್ರಿಗಳು ಜನರ ಬದುಕಾಗಿ ಪರಿವರ್ತನೆಯಾಗುತ್ತಿಲ್ಲ. ಒಂದು ದೃಷ್ಟಿಯಿಂದ ಇಲ್ಲಿ ಅಭಿವೃದ್ಧಿಯೆಂಬುದು ಜನರಿಗೆ ಅಭಿಶಾಪವಾಗಿ ಪರಿಣಮಿಸಿಬಿಟ್ಟಿದೆ.

ಪ್ರಾದೇಶಿಕ ಅಸಮಾನತೆ ಬಗ್ಗೆ ಔದಾಸೀನ್ಯ!

ಈ ಹಿಂದೆ ನನ್ನ ಅಂಕಣದಲ್ಲಿ ಅನೇಕ ಬಾರಿ ಕರ್ನಾಟಕದಲ್ಲಿ ಸರ್ಕಾರಗಳು ಪ್ರಾದೇಶಿಕ ಅಸಮಾನತೆಯನ್ನು ಗಂಭೀರವಾಗಿ ಪರಿಗಣಿಸಿಲ್ಲವೆಂಬುದನ್ನು ಬರೆಯಲಾಗಿದೆ. ಈಗ ನೋಡಿ! ಅದಕ್ಕೆ ಮತ್ತೊಂದು ನಿದರ್ಶನ ಇಲ್ಲಿದೆ. ಡಾ.ಡಿ.ಎಮ್.ನಂಜುಂಡಪ್ಪ ವರದಿಯ ಶಿಫಾರಸ್ಸುಗಳ ಅನುಷ್ಠಾನದ ನಿರ್ವಹಣೆಗಾಗಿ ಸಂಪುಟ ದರ್ಜೆಯ ಸ್ಥಾನಮಾನಕೊಟ್ಟು ಶ್ರೀಸುಶೀಲ ನಮೋಶಿ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ಸರ್ಕಾರ ರಚಿಸಿದೆ. ಇಡೀ ಗುಲಬರ್ಗಾ ವಿಭಾಗದಲ್ಲಿನ ೩೧ ತಾಲ್ಲೂಕುಗಳ ಪೈಕಿ ಸಾಪೇಕ್ಷವಾಗಿ ಮುಂದುವರಿದ ತಾಲ್ಲೂಕುಗಳ ಸಂಖ್ಯೆ ಮೂರು. ಅವುಗಳಲ್ಲಿ ಬಳ್ಳಾರಿ, ಹೊಸಪೇಟೆ ಮತ್ತು ಬೀದರ್ ತಾಲ್ಲೂಕುಗಳು ಸೇರಿವೆ. ಆದರೆ ಬಳ್ಳಾರಿ ಜಿಲ್ಲೆಯ ಹಡಗಲಿಯು ಅತ್ಯಂತ ಹಿಂದುಳಿದ ತಾಲ್ಲೂಕಾಗಿದೆ. ಅಲ್ಲಿಗೆ ಸರ್ಕಾರವು ಕೊಟ್ಟಿದ್ದ ಸರ್ಕಾರಿ ಎಂಜನಿಯರಿಂಗ್ ಕಾಲೇಜನ್ನು ಇಲ್ಲದ ನೆಪಮಾಡಿಕೊಂಡು ಅತ್ಯಂತ ಮುಂದುವರಿದ ಬಳ್ಳಾರಿ ನಗರಕ್ಕೆ ಅದನ್ನು ವರ್ಗಾವಣೆ ಮಾಡಲಾಗಿದೆ. ಹೀಗೆ ಡಾ.ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಯ ಉಲ್ಲಂಘನೆ ನಡೆಯುತ್ತಿದ್ದರೆ ಅದರ ಅನುಷ್ಠಾನಕ್ಕೆ ನೇಮಿಸಿರುವ ಸಮಿತಿಗೆ ಕೆಲಸವಾದರು ಏನಿದೆ? ಅದನ್ನು ತೋರಿಕೆಗಾಗಿ ಮಾತ್ರ ರಚಿಸಲಾಗಿದೆಯೆ? ಡಾ.ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಯ ಮೂಲ ಮಂತ್ರವೆಂದರೆ ಅನುದಾನ ಹಂಚಿಕೆಯಲ್ಲಿ, ಅಭಿವೃದ್ಧಿ ಕಾರ್ಯಕ್ರಮಗಳನ್ನು ನೀಡುವಲ್ಲಿ ಮತ್ತು ಬಂಡವಾಳದ ವಿನಿಯೋಜನೆಯಲ್ಲಿ ಹಿಂದುಳಿದ ತಾಲ್ಲೂಕುಗಳ ಹಿಂದುಳಿದಿರುವಿಕೆಯು ಆಧಾರವಾಗಿರಬೇಕು ಮತ್ತು ಆ ತಾಲ್ಲೂಕುಗಳಿಗೆ ಆದ್ಯತೆ ನೀಡಬೇಕೆಂಬುದಾಗಿದೆ. ಆದರೆ ಈಗ ಅದಕ್ಕೆ ವಿರುದ್ಧವಾದ ಸಂಗತಿಗಳು ಸಚಿವ ಸಂಪುಟದ ನಿರ್ಣಯಗಳಾಗಿ ಹೊರಬೀಳುತ್ತಿವೆ. ಈ ಸರ್ಕಾರಕ್ಕೆ ಡಾ.ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಯೆಂಬುದು ಮತ್ತು ಅದರ ಅನುಷ್ಠಾನಕ್ಕಾಗಿ ನೇಮಕವಾಗಿರುವ ಸಮಿತಿ ಎಲ್ಲವೂ ಹೆಸರಿಗೆ ಮಾತ್ರ ಎಂಬಂತಾಗಿದೆ.

ಈ ಸರ್ಕಾರಕ್ಕೆ ಡಾ.ಡಿಎಮ್.ನಂಜುಂಡಪ್ಪ ಸಮಿತಿ ವರದಿ ಬಗ್ಗೆ, ಅದರ ಅನುಷ್ಠಾನಕ್ಕಾಗಿ ನೇಮಿಸಿರುವ ಸಮಿತಿ ಬಗ್ಗೆ ಮತ್ತು ಪ್ರಾದೇಶಿಕ ಸಮಾನತೆಯ ಗುರಿ ಬಗ್ಗೆ ರವಷ್ಟಾದರೂ ಗೌರವ ಮತ್ತು ಬದ್ಧತೆಯಿದ್ದರೆ ತಕ್ಷಣ ಸರ್ಕಾರವು ಅತ್ಯಂತ ಮುಂದುವರಿದ ಬಳ್ಳಾರಿಗೆ ವರ್ಗಾವಣೆ ಮಾಡಿರುವ ಎಂಜನಿಯರಿಂಗ್ ಕಾಲೇಜನ್ನು

ವಾಪಸ್ಸು ಅತ್ಯಂತ ಹಿಂದುಳಿದ ಹಡಗಲಿಗೆ ವರ್ಗಾಯಿಸುವ ಕ್ರಮ ತೆಗೆದುಕೊಳ್ಳಬೇಕು. ಈಗಾಗಲೆ ಬಳ್ಳಾರಿ ನಗರದಲ್ಲಿ ಎರಡು ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ನಡೆಯುವೆ. ಹಿಂದುಳಿದ ತಾಲ್ಲೂಕುಗಳಿಗೆ ಖಾಸಗಿ ಸಂಸ್ಥೆಗಳು ಹೋಗಿ ಕಾಲೇಜುಗಳನ್ನು ಸ್ಥಾಪಿಸುವುದಿಲ್ಲ. ಅಲ್ಲಿಗೆ ಸರ್ಕಾರಿ ಸಂಸ್ಥೆಗಳು ಮಾತ್ರ ಹೋಗಬೇಕಾಗುತ್ತದೆ. ಹಡಗಲಿಯಲ್ಲಿ ಎಂಜಿನಿಯರಿಂಗ್ ಕಾಲೇಜಿಗೆ ಪ್ರವೇಶ ಅಪೇಕ್ಷಿಸಿ ಬಂದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾದ್ದರಿಂದ ಅದನ್ನು ಬಳ್ಳಾರಿಗೆ ವರ್ಗಾಯಿಸಲಾಗಿದೆಯೆಂದು ಹೇಳಲಾಗುತ್ತಿದೆ. ಇಂತಹ ಹಿಂದುಳಿದ ತಾಲ್ಲೂಕುಗಳಲ್ಲಿ ಎಂಜಿನಿಯರಿಂಗ್‌ಗೆ ಪ್ರವೇಶ ಅಪೇಕ್ಷಿಸಿ ಬರುವ ಮಕ್ಕಳ ಸಂಖ್ಯೆ ಕಡಿಮೆಯಿರದೆ ಅಧಿಕವಿರುತ್ತದೆಯೇ? ಅದು ಕಡಿಮೆಯಿರುವುದರಿಂದಲೆ ಅದನ್ನು ಹಿಂದುಳಿದ ತಾಲ್ಲೂಕ್ಕೆಂದು ಕರೆಯಲಾಗಿದೆ. ಪ್ರವೇಶ ಅಪೇಕ್ಷಿಸಿ ಬರುವ ಮಕ್ಕಳ ಸಂಖ್ಯೆಯು ಅಧಿಕವಿದ್ದರೆ ಅದನ್ನು ಹಿಂದುಳಿದ ತಾಲ್ಲೂಕ್ಕೆಂದು ಕರೆಯುತ್ತಿರಲಿಲ್ಲ. ಅಂದರೆ ಸರ್ಕಾರಕ್ಕೆ ಹಿಂದುಳಿದಿರುವಿಕೆಯ ನೆಲೆ ಯಾವುದೆಂಬುದರ ಪರಿಜ್ಞಾನವೇ ಇರುವಂತೆ ಕಾಣುತ್ತಿಲ್ಲ. ಪರಿಸ್ಥಿತಿ ಹೀಗಿರುವಾಗ ಸರ್ಕಾರವೇ ಪ್ರಾದೇಶಿಕ ಅಸಮಾನತೆಯೆಂಬ ದಳ್ಳುರಿಗೆ ಎಣ್ಣೆ ಸುರಿಯುವುದಾದರೆ ಹಿಂದುಳಿದ ಪ್ರದೇಶದ ಜನರು ಮತ್ತಾರಿಗೆ ದೂರು ಹೇಳಿಕೊಳ್ಳಬೇಕು! (ಒಲೆ ಹತ್ತಿ ಉರಿದರೆ ಸಹಿಸಿಕೊಳ್ಳಬಹುದು. ಧರೆ ಹತ್ತಿ ಉರಿದರೆ ಸಹಿಸಿಕೊಳ್ಳುವುದು ಹೇಗೆ?).

ಪರಾವಲಂಬಿ ಅಭಿವೃದ್ಧಿ ಸಿದ್ಧಾಂತ

ಜನರು ಗೌರವಯುತವಾಗಿ ಬದುಕು ನಡೆಸಲು ನೆರವಾಗುವ ಒಂದು ಸಂಗತಿಯೇ ಅಭಿವೃದ್ಧಿ. ಅಮರ್ತ್ಯ ಸೆನ್ ಅಭಿವೃದ್ಧಿಯನ್ನು ಸ್ವಾತಂತ್ರ್ಯಕ್ಕೆ ಸಂವಾದಿಯಾಗಿ ಬಳಸುತ್ತಾನೆ. ಜನರು ತಾವೇನಾಗಬೇಕೆಂದಿದ್ದಾರೋ ಅದರಂತಾಗಲು ಮತ್ತು ಜನರು ತಾವು ಏನುಮಾಡಬೇಕೆಂದಿದ್ದಾರೋ ಅದನ್ನು ಮಾಡಲು ಅಗತ್ಯವಾದ ಸಾಮರ್ಥ್ಯ ಮತ್ತು ಸ್ವಾತಂತ್ರ್ಯವನ್ನು ಅಭಿವೃದ್ಧಿಯೆಂದು ಅವನು ನಿರ್ವಚಿಸಿದ್ದಾನೆ. 'ಸ್ವಾತಂತ್ರ್ಯವಾಗಿ ಅಭಿವೃದ್ಧಿ'ಯೆಂದಾಗ ಅಮರ್ತ್ಯಸೇನ್ ಜನರ ಸ್ವಾಭಿಮಾನಿ ಮತ್ತು ಸ್ವಾವಲಂಬಿ ಬದುಕನ್ನು ಗಮನದಲ್ಲಿಟ್ಟುಕೊಂಡೇ ಹೇಳಿದ್ದಾನೆ. ಯಾವುದೇ ಬಗೆಯ ಅವಮಾನವಿಲ್ಲದೆ ಸಾರ್ವಜನಿಕವಾಗಿ ಸಹಭಾಗಿಗಳಾಗುವ ಜನರ ಸಾಮರ್ಥ್ಯವನ್ನು ಇಲ್ಲಿ ಗುರುತಿಸಲಾಗಿದೆ.

ಸರ್ಕಾರವು ಜನರನ್ನು 'ದಾಸ'ರನ್ನಾಗಿ ನೋಡುವುದಕ್ಕೆ ಪ್ರತಿಯಾಗಿ ಸ್ವಾಭಿಮಾನಿ ಪ್ರಜೆಗಳನ್ನಾಗಿ ನೋಡಬೇಕು. ಜನರನ್ನು ತನ್ನ 'ಮರ್ಜಿ'ಯಲ್ಲಿರುವವರು, ತನ್ನ ಕೃಪೆಯಲ್ಲಿರುವವರು ಎಂಬಂತೆ ಸರ್ಕಾರವು ಪರಿಭಾವಿಸಿಕೊಳ್ಳಬಾರದು. ಸರ್ಕಾರದ ಕ್ರಮಗಳು ಜನರ ಬದುಕನ್ನು ಸಬಲೀಕರಣಗೊಳಿಸಬೇಕೆ ವಿನಾ ಅದರ ಕೃಪಾಕಟಾಕ್ಷದಲ್ಲಿ ಬದುಕುವವರೆಂಬ ಭಾವನೆಯನ್ನು ಅದು ಬೆಳೆಸಬಾರದು. ದಾನ ಮಾಡುವವರು ಮತ್ತು ದಾನ ಪಡೆಯುವವರು ಎಲ್ಲಿ ಹೆಚ್ಚಿರುತ್ತಾರೋ ಅಲ್ಲಿ ಬಡತನವೂ ಅಧಿಕವಾಗಿರುತ್ತದೆ ಎಂಬುದನ್ನು ದಾನ ಮಾಡುವವರು ಮೊದಲು ಮನಗಾಣಬೇಕು. ಬಡವರಿಲ್ಲದಿದ್ದರೆ ದಾನಕ್ಕೆ ಮತ್ತು ದಾನಿಗಳಿಗೆ ಅವಕಾಶವಿರುವುದಿಲ್ಲ. ದಾನ ಶೂರರ ಮೆರೆದಾಟ ನಡೆಯಬೇಕೆಂದರೆ ಅಲ್ಲಿ ಬಡವರಿರಬೇಕು ಮತ್ತು ಬಡತನವಿರಬೇಕು. ಹಾಗಾದರೆ ಈ ದಾನ ನೀಡುವವರ ಉದ್ದೇಶ ಬಡತನವನ್ನು ಊರ್ಜಿತಗೊಳಿಸುವುದೆ? ಮಠದಲ್ಲಿ ಭೋಜನಾಲಯವನ್ನು ಕಟ್ಟಿಸಲು ಸರ್ಕಾರವು ಲಕ್ಷ-ಲಕ್ಷ ಅನುದಾನ ನೀಡುತ್ತಿದೆಯೆಂದರೆ ಅದು ಜನರ ಪರಾವಲಂಬನೆಯನ್ನು ಪೋಷಿಸುವ ಕ್ರಮವೇ ಆಗಿದೆ. ರಾಜ್ಯದ ತುಂಬಾ ಅದು ಧರ್ಮ ಛತ್ರಗಳನ್ನು ಕಟ್ಟಿಸುವುದಾದರೆ ಅಲ್ಲಿ ಅಭಿವೃದ್ಧಿ ಯಾಕೆ ಬೇಕು? ಜನರು ಅಂತಹ ಧರ್ಮ ಛತ್ರಗಳಲ್ಲಿ ತಲೆ ತಗ್ಗಿಸಿ- ದೈನ್ಯದಿಂದ ಮುದುಡಿಕೊಂಡು ನಿಲ್ಲುವುದು ಅಭಿವೃದ್ಧಿಯೆನಿಸಿಕೊಳ್ಳುವುದಿಲ್ಲ. ಈ ಬಗೆಯ ಪರಾವಲಂಬಿ ಬದುಕನ್ನು ಕುರಿತಂತೆ ಬಸವಣ್ಣ ಹೀಗೆ ಹೇಳಿದ್ದಾನೆ

> ಕಣ್ಣುಮುಚ್ಚಿ ಕನ್ನಡಿಯ ತೋರುವಂತೆ
> ಇರುಳು ಹಗಲಿನ ನಿದ್ರೆ ಸಾಲದೆ?
> ಬೆರಳನೆಣಿಸಿ ಪರಮಾರ್ಥವ ಹಡೆವಡೆ
> ಚೋದ್ಯವಲ್ಲವೆ?
> ಮೂಗಮುಚ್ಚಿ ಮುಕ್ತಿಯ ಬಯಸುವ
> ನಾಚಿಕೆಯಿಲ್ಲದವರನೇನೆಂಬೆ ಕೂಡಲಸಂಗಮದೇವ.

ಅತ್ಯಂತ ದುರದೃಷ್ಟದ ಸಂಗತಿಯೆಂದರೆ ಇಂದು ಸರ್ಕಾರ, ಮಠಗಳು, ಮಠಾಧಿಪತಿಗಳು, 'ವಿದ್ವಾಂಸರು', ಮಂತ್ರಿ-ಮಹೋದಯರು 'ಬೆರಳನೆಣಿಸುವ' ಮತ್ತು 'ಮೂಗು ಮುಚ್ಚಿ' ಪರಮಾತ್ಮನನ್ನು ಕಾಣುವ ಕ್ಲೈಬ್ಯದಿಂದ ಕೂಡಿದ ಬದುಕನ್ನು ಪ್ರತಿಪಾದಿಸುತ್ತಿರುವ ಸ್ಥಿತಿ ನಿರ್ಮಾಣವಾಗಿದೆ. ಖಾಸಗಿಯಾಗಿರಬೇಕಾಗಿದ್ದ ಆಚರಣೆಗಳು, ರಿಚುವಲ್ಲುಗಳು ಇಂದು ಸಾರ್ವಜನಿಕ ರೂಪ ಪಡೆಯುತ್ತಿವೆ. ಅವು ಜನರಲ್ಲಿ ಪರಾವಲಂಬನೆಯನ್ನು ಮಾತ್ರ ಪೋಷಿಸಬಲ್ಲವು.

ಇಂದು ಹಕ್ಕುಗಳ ಪರಿಭಾಷೆಯಲ್ಲಿ ಅಭಿವೃದ್ಧಿಯನ್ನು ನಿರ್ವಚಿಸುವ ಪ್ರಯತ್ನ ನಡೆಯುತ್ತಿದೆ. ಹಕ್ಕುಗಳು ಇಂದು ಕೇವಲ ರಾಜಕೀಯ ಸಂಗತಿಗಳಿಗೆ ಮಾತ್ರ ಮೀಸಲಾಗಿಲ್ಲ. ಅವು ಆರ್ಥಿಕ ಮತ್ತು ಸಾಮಾಜಿಕ ಸಂಗತಿಗಳಿಗೂ ವಿಸ್ತೃತಗೊಂಡಿವೆ. ಇಂದು ಮೂರನೆಯ ತಲೆಮಾರಿನ ಮಾನವ ಹಕ್ಕುಗಳ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಹಕ್ಕುಗಳ ಬಗ್ಗೆ ಎದ್ದಿರುವ ಮುಖ್ಯವಾದ ಪ್ರಶ್ನೆಯೆಂದರೆ ಅವುಗಳ ಅನುಷ್ಠಾನಕ್ಕೆ ಸಮಾಜವು ಮಾಡಿಕೊಂಡಿರುವ ವ್ಯವಸ್ಥೆ ಯಾವುದು ಎಂಬುದಾಗಿದೆ. ಅವುಗಳ ಅನುಷ್ಠಾನದ ಬಗ್ಗೆ ಯೋಜಿಸದೆ ಕೇವಲ ಹಕ್ಕುಗಳ ಬಗ್ಗೆ ಶಾಸನ ರೂಪಿಸಿಬಿಟ್ಟರೆ ಸಾಕಾಗುವುದಿಲ್ಲ. ಇಲ್ಲಿ ಪ್ರಶ್ನೆಯೆಂದರೆ ಹಕ್ಕುಗಳ ಬಗ್ಗೆ ನಮ್ಮ ರಾಜಕೀಯ ಪಕ್ಷಗಳ ಬದ್ಧತೆ. ಅಭಿವೃದ್ಧಿಯನ್ನು ಧಾರ್ಮಿಕ ದತ್ತಿ-ದಾನದ ನೆಲೆಯಲ್ಲಿ ಪರಿಭಾವಿಸಿಕೊಳ್ಳುತ್ತಿರುವ ರಾಜಕೀಯ ಪ್ರಣಾಳಿಕೆಯ ಬಗ್ಗೆ ನಾವು ಮೊದಲು ಪರ್ಯಾಲೋಚಿಸಬೇಕಾಗಿದೆ. ಪಾರಮಾರ್ಥಿಕ ನೆಲೆಯಲ್ಲಿ, ಹಂಗಿನ ಪರಿಭಾಷೆಯಲ್ಲಿ, ಪರಾವಲಂಬಿ ಪ್ರಣಾಳಿಕೆಯಲ್ಲಿ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವ ಕ್ರಮವನ್ನು ಬಿಟ್ಟು ಅದರ ಬಗ್ಗೆ ಹಕ್ಕಿನ, ಧಾರಣಾ ಸಾಮರ್ಥ್ಯದ, ಸ್ವಾತಂತ್ರ್ಯದ, ಜನತಂತ್ರದ ನೆಲೆಯಲ್ಲಿ ಅನುಸಂಧಾನ ನಡೆಸುವ ಪ್ರಯತ್ನವನ್ನು ಪರಿಪೋಷಿಸಬೇಕಾಗಿದೆ. ಜನರಿಗೆ ಎರಡೊತ್ತಿನ ಕೂಳು ಮುಖ್ಯ ನಿಜ. ಆದರೆ ಅದು ಹಂಗಿನ ಕೂಳಾಗಬಾರದು. ಅದು ತನ್ನ ಪರಿಶ್ರಮದಿಂದ ಪಡೆದುಕೊಂಡ ಪ್ರತಿಫಲವಾಗಿರಬೇಕು. ಅಭಿವೃದ್ಧಿಯು ದತ್ತಿ ಅಥವಾ ಉಂಬಳಿಯಲ್ಲ. ಅದು ಜನರು ಪಡೆದುಕೊಳ್ಳಬೇಕಾದ ಹಕ್ಕು, ರಾಜಕಾರಣದಲ್ಲಿನ ಜನರ ಪಾಲು.

(ಲೇಖಕರನ್ನು trckuh@yahoo.comನಲ್ಲಿ ಸಂಪರ್ಕಿಸಬಹುದು) □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಹಿಂದುತ್ವದ ಎರಡು ಮುಖಗಳು



ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಮಧ್ಯಯುಗದ ಸಾಮಾಜಿಕ ವ್ಯವಸ್ಥೆಯನ್ನು ವಿಶ್ವದ ಎಲ್ಲ [illegible]ರೂ ವಿರೋಧಿಸುವುದು ಸಹಜ. ಮಧ್ಯಯುಗದ ಸಮಾಜದಲ್ಲಿ ಸಮಾನವಾದ ಶಾಸನಬದ್ಧ ಆಡಳಿತ ಅಸ್ತಿತ್ವದಲ್ಲಿರಲಿಲ್ಲ. ರಾಜವಂಶಸ್ಥರು, ಶ್ರೀಮಂತರು ಮತ್ತು ಭೂಮಾಲೀಕರಿಗೆ ಒಂದು ಕಾನೂನು ಅನ್ವಯವಾದರೆ ಸಾಮಾನ್ಯರಿಗೆ ಬೇರೊಂದು ಬಗೆಯ ಕಾನೂನು ಅನ್ವಯವಾಗುತ್ತಿತ್ತು. ಕಾನೂನು ಕಟ್ಟಳೆಗಳು ಯಾವಾಗಲೂ ಪ್ರಬಲರ ಪರವಾಗಿಯೇ ಇತ್ತು. ಮಧ್ಯಯುಗದ ಸಾಮಾಜಿಕ ವ್ಯವಸ್ಥೆಗೆ 'ಸಮಾನ'ವಾದ ಕಾನೂನಿನ ಬಗ್ಗೆ ನಂಬಿಕೆ ಇರಲಿಲ್ಲ.

ಪ್ರಜಾತಂತ್ರ ವ್ಯವಸ್ಥೆಯ ಮೂಲ ಆಶಯಗಳಲ್ಲೊಂದಾದ 'ಶಾಸನಾತ್ಮಕ ಸಮಾನತೆ' ಆಧುನಿಕ ನಾಗರಿಕತೆಯ ಬಹುಮುಖ್ಯವಾದ ಲಕ್ಷಣ. ಈ 'ಶಾಸನಾತ್ಮಕ ಸಮಾನತೆ' ಇಲ್ಲದೆ ಹೋದರೆ ಪ್ರಜಾತಂತ್ರ ವ್ಯವಸ್ಥೆಗೆ ಅರ್ಥವಿರುವುದೇ ಇಲ್ಲ.

ನಾವು ಭಾರತದ ನಿದರ್ಶನವನ್ನು ಗಮನಿಸುವುದಾದರೆ, ಪರಿಸ್ಥಿತಿ ಇನ್ನೂ ಕೆಟ್ಟದಾಗಿದೆ. ಭಾರತದಲ್ಲಿ ಜಾತಿ ಶ್ರೇಣೀಕರಣಕ್ಕೆ ಪೂರಕವಾದ ಕಾಯ್ದೆಗಳು ಸೃಷ್ಟಿಯಾಗುತ್ತಿದ್ದವು. ಅಪರಾಧಕ್ಕೆ ಆಯಾ ಜಾತಿಗಳ ಸಂಖ್ಯಾಬಲಕ್ಕನುಗುಣವಾಗಿ ಅಷ್ಟೇ ಸಂಖ್ಯೆಯ ಕಾಯ್ದೆಗಳಿದ್ದವು. ಉದಾಹರಣೆಗೆ ಒಂದು ಮೂಲಂಗಿಯ ಕಳ್ಳತನಕ್ಕಾಗಿ ದಲಿತನೋರ್ವನನ್ನು ನೇಣಿಗೆ ಹಾಕಬಹುದಾಗಿದ್ದರೆ, ಓರ್ವ ದಲಿತನನ್ನು ಕೊಂದ ಅಪರಾಧಕ್ಕಾಗಿ ಬ್ರಾಹಣನಿಗೆ ಬಿಡಿಗಾಸಿನ ದಂಡ ವಿಧಿಸಲಾಗುತ್ತಿತ್ತು. ಮಹಿಳೆಯರನ್ನು ಅತ್ಯಾಚಾರ ಮಾಡುವುದು ಕ್ಷತ್ರಿಯರಿಗೆ ಪೌರುಷದ ಸಂಕೇತವಾಗಿದ್ದರೆ, ನವಾಬರಿಗೆ ಶೋಕಿಯಾಗಿತ್ತು. ಎಲ್ಲ ಕಾಯ್ದೆ ಕಾನೂನುಗಳಾಚೆ ಬೃಹದಾಕಾರವಾಗಿ ಬೆಳೆದು ನಿಂತಿದ್ದ ಇವರನ್ನು ಕಾನೂನು ಏನೂ ಮಾಡಲಾಗುತ್ತಿರಲಿಲ್ಲ.

ಆದರೆ ಆಧುನಿಕತೆ ಪ್ರವೇಶವಾದ ಬಳಿಕ, ಭಾರತದಲ್ಲಿಯೂ ಕೆಲವು ಬದಲಾವಣೆಗಳಾದವು. ಉದಾಹರಣೆಗೆ ಎಲ್ಲ ಭಾರತೀಯರೂ ಸಮಾನವಾದ ಅಪರಾಧಗಳಿಗೆ ಸಮಾನವಾದ ಕಾನೂನಿನ ವ್ಯಾಪ್ತಿಗೆ ಒಳಪಡುವಂತಹ ವಾತಾವರಣ ನಿರ್ಮಾಣವಾಯಿತು. ಆದರೆ ಆಧುನಿಕತೆ ಭಾರತಕ್ಕೆ ಕಾಲಿಟ್ಟಿದ್ದಾದರೂ ಯಾವಾಗ? ಈ ವಿಚಾರದ ಬಗ್ಗೆ ವಾದ ಮಾಡುತ್ತಾ ಕೂರಬಹುದು. 1757ರಲ್ಲಿ ಆಧುನಿಕತೆ ಭಾರತಕ್ಕೆ ಕಾಲಿಟ್ಟ ಬಗ್ಗೆ ನಿಖರವಾದ ಪುರಾವೆ ಇದೆ. ಆದರೆ ರಾಬರ್ಟ್ ಕ್ಲೈವ್‌ನ ಕುತಂತ್ರದ ಭರದಲ್ಲಿ ಇದರ ಪರಿಣಾಮ ಭಾರತದ ಮೇಲಾಗಲಿಲ್ಲ.

ಸುಮಾರು ನೂರು ವರ್ಷದ ನಂತರ ಆಧುನಿಕತೆ ಭಾರತಕ್ಕೆ ಕಾಲಿರಿಸಿತು. 1859ರಲ್ಲಿ ಬಂದ ಭಾರತೀಯ ದಂಡ ಸಂಹಿತೆ (ಐಪಿಸಿ) ಮೊಟ್ಟ ಮೊದಲ ಬಾರಿಗೆ ಎಲ್ಲ ಭಾರತೀಯರನ್ನು "ಕಾನೂನಿನಡಿ ಸಮಾನರು" ಎಂದು ಪರಿಗಣಿಸಿತು. ಹೀಗಾಗಿ ಐಪಿಸಿ ಭಾರತದ ಆಧುನಿಕತೆಯ ಮೊದಲ ಮೈಲಿಗಲ್ಲಾಗಿದೆ. ಐಪಿಸಿಯಿಂದಾಗಿ ಇದುವರೆಗೆ ಅಪರಾಧಗಳನ್ನೆಸಗಿ ಯಾವುದೇ ರೀತಿಯ ಶಿಕ್ಷೆಗೆ ಗುರಿಯಾಗದೆ ನೆಮ್ಮದಿಯಾಗಿದ್ದ ಭಾರತೀಯ ಉನ್ನತವರ್ಗದ ಜಂಘಾಬಲವೇ ಉಡುಗಿಹೋಯಿತು.

ಪ್ರಜಾತಂತ್ರ ವ್ಯವಸ್ಥೆಯ ಮೇಲೆ ಭರವಸೆಯಿರಿಸಿಕೊಂಡಿರುವ ಎಲ್ಲರೂ ಐಪಿಸಿಯ ಕರ್ತೃವಿಗೆ ಭಾರತರತ್ನ ನೀಡುವ ಬಗ್ಗೆ ಬೆಂಬಲ ವ್ಯಕ್ತಪಡಿಸಬೇಕಾಗಿರುವುದು ತಾರ್ಕಿಕವಾಗಿ ಸರಿ. ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಐಪಿಸಿ ಇವತ್ತಿಗೂ ಭಾರತದಲ್ಲಿ ಜಾರಿಯಲ್ಲಿದೆ. ಐಪಿಸಿಯನ್ನು ರಚಿಸಿದ ಲಾರ್ಡ್ ಮೆಕಾಲೆ ಅವರನ್ನು ಬಹುತೇಕ ಭಾರತೀಯರು ದ್ವೇಷಿಸುತ್ತಾರೆ. ಇನ್ನು ಎಡರಂಗ ಮತ್ತು ಸಂಘಪರಿವಾರ ಲಾರ್ಡ್ ಮೆಕಾಲೆಯನ್ನು ಸೈದ್ಧಾಂತಿಕವಾಗಿ ವಿರೋಧಿಸುವ ಗುಂಪುಗಳು. ಹಿಂದುತ್ವದ ಜೀವಾಳವಾಗಿರುವ ಜಾತಿವ್ಯವಸ್ಥೆಯ ಅಂತ[illegible] ವಿಚಾರದಲ್ಲಿ ಲಾರ್ಡ್ ಮೆಕಾಲೆ ಹಸ್ತಕ್ಷೇಪ ಮಾಡಿದ್ದಕ್ಕಾಗಿ ಸಂಘಪರಿವಾರ ಮತ್ತು ಎಡರಂಗದ ಸೈದ್ಧಾಂತಿಕ ಹುರಿಯಾಳುಗಳ ಸುಪ್ತವಾಗಿ ಕೆಂಡಾಮಂಡಲವಾಗುತ್ತಾರೆ.

ಹೀಗಾಗಿ, ಭಾರತ ಮತ್ತು ಅಮೆರಿಕದ ಅಣು ಒಪ್ಪಂದವನ್ನು ಸೈದ್ಧಾಂತಿಕವಾಗಿ ವಿರೋಧಿಸಿದವರು ಎಡರಂಗ ಮತ್ತು ಸಂಘಪರಿವಾರ ಮಾತ್ರ ಎನ್ನುವುದು ಆಶ್ಚರ್ಯವೇನಲ್ಲ.

ಇಂದು ವಿಚ್ಛಿದ್ರಕಾರಿಯಾಗಿ ಬೆಳೆದು ನಿಂತಿರುವ ಹಿಂದುತ್ವದ ಧಾರ್ಮಿಕ ಸೆಲೆಯಾದ ಹಿಂದೂಧರ್ಮವನ್ನು ಸಂಘಟನಾತ್ಮಕವಾಗಿ ಪುನರುತ್ಥಾನಗೊಳಿಸಿದ ಕೀರ್ತಿ ಶಂಕರಾಚಾರ್ಯರಿಗೆ ಸಲ್ಲುತ್ತದೆ. ಶಂಕರಾಚಾರ್ಯರ ಹೆಸರಿನ ಹಿಂದೆ 'ಜಗದ್ಗುರು' ಎಂಬ ಗೌರವಸೂಚಕ ಪದವನ್ನು ಕೂಡ ಬಳಸಲಾಗುತ್ತದೆ. ಇಡೀ ವಿಶ್ವಕ್ಕೇ ಗುರುವಾಗಿರುವ ಹಿಂದೂಗಳು ಅಮೆರಿಕಾದವರಿಂದ ಪಾಠ ಕಲಿಯುವ ಅವಶ್ಯಕತೆಯಿಲ್ಲ ಎಂಬ ಭಾವನೆ ಈ ಹಿಂದೂಗಳಿಗೆ. ಈ ನಿಷ್ಠಾವಂತ ಹಿಂದೂಗಳಿಗೆ ಲಾರ್ಡ್ ಮೆಕಾಲೆ ಅವರ ನಾಗರಿಕತೆ ಮತ್ತು ಅಮೆರಿಕಾದ ನಾಗರಿಕತೆ ಕೂಡ ಕೀಳೇ. ಆದ್ದರಿಂದ ಎಡರಂಗ ಮತ್ತು ಸಂಘಪರಿವಾರಕ್ಕೆ, ಭಾರತ ಸರ್ಕಾರ ಅಮೆರಿಕಾದಂತಹ 'ಕೀಳು' ನಾಗರಿಕತೆಯಿಂದ ಸಹಾಯ ಪಡೆಯುವುದನ್ನು ಊಹಿಸಿಕೊಳ್ಳಲೂ ಆಗುವುದಿಲ್ಲ. ಆಧ್ಯಾತ್ಮದ ದೃಷ್ಟಿಯಿಂದ 'ಉಚ್ಛ'ವಾದ ಭಾರತೀಯ ನಾಗರೀಕತೆ ಬ್ರಿಟನ್ ಅಥವಾ ಅಮೆರಿಕಾದಿಂದ ಪಡೆದುಕೊಳ್ಳುವುದೇನೂ ಇಲ್ಲ ಎಂಬ ಅಭಿಪ್ರಾಯ ನಿಷ್ಠಾವಂತ ಹಿಂದೂಗಳದು.

ಹಿಂದೂ ಧರ್ಮವನ್ನು ವ್ಯಾಖ್ಯಾನಿಸುವ ಮತ್ತು ಅರ್ಥೈಸುವ ಹಲವಾರು ಮಾರ್ಗಗಳಿರಬಹುದು. ಇವುಗಳಲ್ಲಿ, ಹಿಂದೂ ಧರ್ಮ 'ಮೇಲು' ಮತ್ತು 'ಕೀಳು'ಗಳ ತತ್ವವನ್ನು ಅವಲಂಬಿಸಿದೆ ಎನ್ನುವುದು ಒಂದು ವಿಶ್ಲೇಷಣೆ. ಓರ್ವ ನಿಷ್ಠಾವಂತ ಹಿಂದೂವಿಗೆ ಎಲ್ಲ ರಾಷ್ಟ್ರಗಳು ಮತ್ತು ಧರ್ಮಗಳು ಹಿಂದೂ ಧರ್ಮ ಮತ್ತು ಭಾರತಕ್ಕಿಂತ ಕೀಳು. ಹಾಗೆಯೇ ಆಚರಣೆಯ ಶ್ರೇಣೀಕರಣದಲ್ಲಿ ಕೆಳಮಟ್ಟದಲ್ಲಿರುವ ಎಲ್ಲ ಜಾತಿ-ವರ್ಗಗಳು, ಮೇಲ್ವರ್ಗಗಳಿಗಿಂತ ಕೀಳು.

ಎಡರಂಗ ಮತ್ತು ಸಂಘಪರಿವಾರ, ಈ ಎರಡು ಸೈದ್ಧಾಂತಿಕ ಗುಂಪುಗಳು ಎಂದಾದರೂ ಜಾತಿವ್ಯವಸ್ಥೆಯನ್ನು ವಿರೋಧಿಸಿದ ಇತಿಹಾಸ ಇಲ್ಲದಿರುವುದು ಕಾಕತಾಳೀಯವೇನಲ್ಲ. ಜಾತಿವ್ಯವಸ್ಥೆಯನ್ನು ವಿರೋಧಿಸಿ, ಅದರ ವಿರುದ್ಧ ಹೋರಾಡುವವರನ್ನು ಈ ಎರಡೂ ಸೈದ್ಧಾಂತಿಕ ಗುಂಪುಗಳು ಹಾಸ್ಯಕ್ಕೆ ಗುರಿಮಾಡುತ್ತವೆ.

ಇವತ್ತು, ಹಿಂದೆಂದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ವಿಶ್ವದಾದ್ಯಂತ ಸಂಪರ್ಕ ಬೆಳೆಯುತ್ತಿದೆ. ಹೀಗಾಗಿ, ಬಹಳಷ್ಟು ಮಂದಿ ಹಿಂದೂಗಳು ಅಮೆರಿಕಾ 'ಉಚ್ಛ'ವಾದ ರಾಷ್ಟ್ರ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಆದರೆ ನಿಷ್ಠಾವಂತ ಹಿಂದೂಗಳು ಈಗಲೂ ಸೋತಿಲ್ಲ. ಹಿಂದುತ್ವದ ಎರಡು ಮುಖಗಳಾದ ಎಡರಂಗ ಮತ್ತು ಸಂಘಪರಿವಾರ ಹಿಂದೂ ಧರ್ಮ ಮತ್ತು ಭಾರತದ ಹಿರಿಮೆ-ಗರಿಮೆಯನ್ನು ಇವತ್ತಿಗೂ ಪ್ರತಿಪಾದಿ

ನಾವು ಭಾರತದ ನಿದರ್ಶನವನ್ನು ಗಮನಿಸುವುದಾದರೆ, ಪರಿಸ್ಥಿತಿ ಇನ್ನೂ ಕೆಟ್ಟದಾಗಿದೆ. ಭಾರತದಲ್ಲಿ ಜಾತಿ ಶ್ರೇಣೀ ಕರಣಕ್ಕೆ ಪೂರಕವಾದ ಕಾಯ್ದೆಗಳು ಸೃಷ್ಟಿಯಾಗುತ್ತಿದ್ದವು. ಅಪರಾಧಕ್ಕೆ ಆಯಾ ಜಾತಿಗಳ ಸಂಖ್ಯಾಬಲಕ್ಕನುಗುಣವಾಗಿ ಅಷ್ಟೇ ಸಂಖ್ಯೆಯ ಕಾಯ್ದೆಗಳಿದ್ದವು. ಉದಾಹರಣೆಗೆ ಒಂದು ಮೂಲಂಗಿಯ ಕಳ್ಳತನಕ್ಕಾಗಿ ದಲಿತ ನೋರ್ವನನ್ನು ನೇಣಿಗೆ ಹಾಕಬಹುದಾಗಿದ್ದರೆ, ಓರ್ವ ದಲಿತನನ್ನು ಕೊಂದ ಅಪರಾಧಕ್ಕಾಗಿ ಬ್ರಾಹಣನಿಗೆ ಬಿಡಿಗಾಸಿನ ದಂಡ ವಿಧಿಸಲಾಗುತ್ತಿತ್ತು. ಮಹಿಳೆಯರನ್ನು ಅತ್ಯಾಚಾರ ಮಾಡುವುದು ಕ್ಷತ್ರಿಯರಿಗೆ ಪೌರುಷದ ಸಂಕೇತವಾಗಿದ್ದರೆ, ನವಾಬರಿಗೆ ಶೋಕಿಯಾಗಿತ್ತು. ಎಲ್ಲ ಕಾಯ್ದೆ ಕಾನೂನುಗಳಾಚೆ ಬೃಹದಾಕಾರವಾಗಿ ಬೆಳೆದು ನಿಂತಿದ್ದ ಇವರನ್ನು ಕಾನೂನು ಏನೂ ಮಾಡಲಾಗುತ್ತಿರಲಿಲ್ಲ. ಆದರೆ ಆಧುನಿಕತೆ ಪ್ರವೇಶವಾದ ಬಳಿಕ, ಭಾರತದಲ್ಲಿಯೂ ಕೆಲವು ಬದಲಾವಣೆಗಳಾದವು.

ಅನುವಾದ :
ಸತ್ಯಪ್ರಕಾಶ್ ಎಂ.ಆರ್

ನಿಷ್ಪ್ರಯೋಜಕ ಸ್ವತ್ತುಗಳು

ಸುತ್ತಲೇ ಇದ್ದಾರೆ.

ಜೀವನಾಧಾರಿತ ಕೃಷಿ ವ್ಯವಸ್ಥೆ ಹೇಗೆ ನಿರಂಕುಶ ಪ್ರಭುತ್ವವನ್ನು ಆಂತರಿಕವಾಗಿ ಒಳಗೊಂಡಿರುತ್ತದೆ ಎಂಬುದನ್ನು ಕ್ಷಣಕಾಲ ಮರೆತುಬಿಡಿ. ನರಕಸದೃಶ ಜೀವನವನ್ನು ಆಸ್ವಾದಿಸುವ ರೈತರು ಭೂಮಿಯನ್ನು ಹೊಂದಿಲ್ಲದ ಕೃಷಿ ಕಾರ್ಮಿಕರನ್ನು ಸಹಿಸಲಾಗದಷ್ಟು ಶೋಷಣೆಗೆ ಗುರಿಪಡಿಸುತ್ತಾರೆ.

ಆದರೆ ಈಗ ನಾವು ಜೀವನಾಧಾರಿತ ಕೃಷಿಯ ಶೋಷಣೆಯ ಆಯಾಮವನ್ನು ಬದಿಗಿರಿಸಿ ಆರ್ಥಿಕವಾದ ವಿಚಾರವನ್ನು ಚರ್ಚಿಸೋಣ. ಅಂದರೆ, ಊಳಿಗಮಾನ್ಯ ವ್ಯವಸ್ಥೆ ಹೇಗೆ ಭೂಮಿಯ ಇಳುವರಿಯನ್ನು ಕಡಿಮೆ ಮಾಡುತ್ತದೆ ಎಂಬುದರ ಬಗ್ಗೆ ಮಾತ್ರ ಮಾತನಾಡೋಣ. ತಾನೇ ಸದಾಕಾಲ ಹೇಳಿಕೊಳ್ಳುವಂತೆ ಮೂಲತಃ ಭಾರತ ಕೃಷಿ ಪ್ರಧಾನ ದೇಶ. ಈ ಮಾನದಂಡದ ಪ್ರಕಾರ ಬಹುತೇಕ ಭಾರತೀಯರು ಕೃಷಿಯನ್ನು ಅವಲಂಬಿಸಬೇಕಿತ್ತು ಮತ್ತು ಕೃಷಿ ಚಟುವಟಿಕೆಗಳ ಬಗ್ಗೆ ನೈಪುಣ್ಯತೆ ಹೊಂದಿರಬೇಕಿತ್ತು. ನಿಜ, ಭಾರತದಲ್ಲಿ ಶೇ. 60ರಷ್ಟು ಮಂದಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ, ಇವರು ಕೃಷಿ ಚಟುವಟಿಕೆಗಳಲ್ಲಿ ನಿಷ್ಣಾತರೆ?

'ಕೃಷಿ ಪ್ರಧಾನ ದೇಶ'ದ ಬಗ್ಗೆ ಲಭ್ಯವಿರುವ ಅಂಕಿ ಅಂಶಗಳನ್ನು ನೋಡಿ ಭಾರತದ ಕೃಷಿಕರಿಗೆ ನಾಚಿಕೆಯಾಗಬೇಕು. ಭಾರತದ ಸಮಗ್ರ ಆಂತರಿಕ ಉತ್ಪನ್ನ (ಜಿಡಿಪಿ) ದಲ್ಲಿ ಕೃಷಿಯ ಕೊಡುಗೆ ಕೇವಲ ಶೇ. 17.8. ಅಂದರೆ 60 ಮಂದಿ ಕೃಷಿಕರು ಉತ್ಪಾದಿಸುವುದು 17.8 ಪೈಸೆ ಮಾತ್ರ. ಆದರೆ, ಕೈಗಾರಿಕೆ ಮತ್ತು ಸೇವಾವಲಯ ಕ್ರಮವಾಗಿ ಶೇ. 29.4 ಮತ್ತು ಶೇ. 52.8 ರಷ್ಟು ಕೊಡುಗೆಯನ್ನು ನೀಡುತ್ತವೆ. ಮತ್ತು ಭಾರತದ ಒಟ್ಟಾರೆ ಉದ್ಯೋಗಸ್ಥರಲ್ಲಿ ಕ್ರಮವಾಗಿ ಶೇ. 12 ಮತ್ತು ಶೇ. 28ರಷ್ಟು ಮಂದಿಗೆ ಕೆಲಸ ಒದಗಿಸುತ್ತದೆ. ಅಂದರೆ ಕೈಗಾರಿಕಾ ವಲಯದ 12 ಮಂದಿ 29.4 ಪೈಸೆ ಉತ್ಪಾದಿಸಿದರೆ, ಸೇವಾವಲಯದ 28 ಮಂದಿ 52.8 ಪೈಸೆ ಉತ್ಪಾದಿಸುತ್ತಾರೆ. ಇವೆರಡನ್ನೂ ಒಟ್ಟಾಗಿ ನೋಡಿದರೆ ಕೈಗಾರಿಕೆ ಮತ್ತು ಸೇವಾ ವಲಯದ 40 ಮಂದಿ 82.2 ಪೈಸೆ ಉತ್ಪಾದಿಸಿದರೆ, 60 ಮಂದಿ ಕೃಷಿಕರು 17.8 ಪೈಸೆ ಮಾತ್ರ ಉತ್ಪಾದಿಸುತ್ತಾರೆ.

ಇದರರ್ಥ ಏನು? ಅತ್ಯಧಿಕ ಭೂಮಿಯ ಮಾಲಿಕತ್ವ ಹೊಂದಿರುವ ರೈತರು ಕಡಿಮೆ ಉತ್ಪಾದನೆ ಮಾಡುವ ಮೂಲಕ ದೇಶದ ಆರ್ಥಿಕ ವ್ಯವಸ್ಥೆಗೆ ಹೊರೆಯಾಗಿದ್ದಾರೆ. ಈ ರೈತರು ಆದಾಯ ತೆರಿಗೆಯನ್ನು ಕೂಡ ಪಾವತಿಸುವುದಿಲ್ಲ ಮತ್ತು ಹೆಜ್ಜೆ ಹೆಜ್ಜೆಗೂ ಸರ್ಕಾರದ ನೆರವು ಕೂಡ ಕೋರುತ್ತಾರೆ. ಹೀಗೆ, ಸಮರ್ಪಕವಾಗಿ ಬಳಸಲು ಆಗದ ಈ ರೈತರು ಅಷ್ಟು ಭೂಮಿಯ ಮಾಲಿಕತ್ವವನ್ನು ಯಾಕೆ ಹೊಂದಿರಬೇಕು ಎಂಬುದೇ ನಮ್ಮ ಮುಂದಿರುವ ಪ್ರಶ್ನೆ.

ಒಂದು ಹೆಕ್ಟೇರಿನಲ್ಲಿ ಭಾರತೀಯ ರೈತರು 2.80 ಟನ್‌ಗಳಷ್ಟು ಗೋಧಿ ಬೆಳೆಯುತ್ತಾರೆ. ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿಯಲ್ಲಿ ಒಂದು ಹೆಕ್ಟೇರಿನಲ್ಲಿ ಕ್ರಮವಾಗಿ 7.9, 7.16 ಮತ್ತು 8.11 ಟನ್‌ಗಳಷ್ಟು ಗೋಧಿಯನ್ನು ಬೆಳೆಯುತ್ತಾರೆ. ಕೃಷಿ ಕ್ಷೇತ್ರದಲ್ಲಿ ಅದ್ಭುತ ಕೌಶಲ್ಯ ಹೊಂದಿರುವ ರೈತರು ಭಾರತದಲ್ಲಿದ್ದಾರೆ ಎಂಬಂತೆ ಬಿಂಬಿತವಾಗುವ 'ಭಾರತ ಕೃಷಿ ಪ್ರಧಾನ ದೇಶ' ಎನ್ನುವ ಭ್ರಮೆಯನ್ನು ಈ ಮೇಲಿನ ಅಂಕಿ ಅಂಶ ಹೊಡೆದು ಹಾಕುತ್ತದೆ. ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿಯ ರೈತರು 6.39 ಕೋಟಿ ಟನ್‌ಗಳಷ್ಟು ಗೋಧಿ ಬೆಳೆಯಲು 97.09 ಲಕ್ಷ ಹೆಕ್ಟೇರುಗಳನ್ನು ಬಳಸಿದರೆ, 6.51 ಕೋಟಿ ಟನ್‌ಗಳಷ್ಟು ಗೋಧಿ ಬೆಳೆಯಲು ಭಾರತದ ರೈತರು 2.48 ಕೋಟಿ ಹೆಕ್ಟೇರುಗಳನ್ನು ಬಳಸುತ್ತಾರೆ.

'ಕೃಷಿ ಪ್ರಧಾನ ದೇಶ'ದ ಬಗ್ಗೆ ಲಭ್ಯವಿರುವ ಅಂಕಿ ಅಂಶಗಳನ್ನು ನೋಡಿ ಭಾರತದ ಕೃಷಿಕರಿಗೆ ನಾಚಿಕೆಯಾಬೇಕು. ಭಾರತದ ಸಮಗ್ರ ಆಂತರಿಕ ಉತ್ಪನ್ನ (ಜಿಡಿಪಿ) ದಲ್ಲಿ ಕೃಷಿಯ ಕೊಡುಗೆ ಕೇವಲ ಶೇ. 17.8. ಅಂದರೆ 60 ಮಂದಿ ಕೃಷಿಕರು ಉತ್ಪಾದಿಸುವುದು 17.8 ಪೈಸೆ ಮಾತ್ರ. ಆದರೆ, ಕೈಗಾರಿಕೆ ಮತ್ತು ಸೇವಾ ವಲಯ ಕ್ರಮವಾಗಿ ಶೇ. 29.4 ಮತ್ತು ಶೇ. 52.8ರಷ್ಟು ಕೊಡುಗೆಯನ್ನು ನೀಡುತ್ತವೆ. ಮತ್ತು ಭಾರತದ ಒಟ್ಟಾರೆ ಉದ್ಯೋಗಸ್ಥರಲ್ಲಿ ಕ್ರಮವಾಗಿ ಶೇ. 12 ಮತ್ತು ಶೇ. 28ರಷ್ಟು ಮಂದಿಗೆ ಕೆಲಸ ಒದಗಿಸುತ್ತದೆ. ಅಂದರೆ ಕೈಗಾರಿಕಾ ವಲಯದ 12 ಮಂದಿ 29.4 ಪೈಸೆ ಉತ್ಪಾದಿಸಿದರೆ, ಸೇವಾವಲಯದ 28 ಮಂದಿ 52.8 ಪೈಸೆ ಉತ್ಪಾದಿಸುತ್ತಾರೆ. ಇವೆರಡನ್ನೂ ಒಟ್ಟಾಗಿ ನೋಡಿದರೆ ಕೈಗಾರಿಕೆ ಮತ್ತು ಸೇವಾ ವಲಯದ 40 ಮಂದಿ 82.2 ಪೈಸೆ ಉತ್ಪಾದಿಸಿದರೆ, 60 ಮಂದಿ ಕೃಷಿಕರು 17.8 ಪೈಸೆ ಮಾತ್ರ ಉತ್ಪಾದಿಸುತ್ತಾರೆ. ಇದರರ್ಥ ಏನು? ಅತ್ಯಧಿಕ ಭೂಮಿಯ ಮಾಲಿಕತ್ವ ಹೊಂದಿರುವ ರೈತರು ಕಡಿಮೆ ಉತ್ಪಾದನೆ ಮಾಡುವ ಮೂಲಕ ದೇಶದ ಆರ್ಥಿಕ ವ್ಯವಸ್ಥೆಗೆ ಹೊರೆಯಾಗಿದ್ದಾರೆ.

ಭಾರತ ಕೂಡ ಒಂದು ಹೆಕ್ಟೇರಿಗೆ 7.16 ಟನ್‌ಗಳಷ್ಟು ಗೋಧಿಯನ್ನು ಬೆಳೆಯಲು ಸಾಧ್ಯವಾದರೆ, ಸುಮಾರು 1.51 ಕೋಟಿ ಹೆಕ್ಟೇರುಗಳಷ್ಟು ಭೂಮಿ ಕೃಷಿ ಚಟುವಟಿಕೆಗಳಿಂದ ಮುಕ್ತವಾಗುತ್ತದೆ.

ಅಥವಾ ಭಾರತದ ರೈತರು ಪ್ರಸ್ತುತ ಬಳಸುವುದಕ್ಕಿಂತ ಅರ್ಧದಷ್ಟು ಭೂಮಿಯನ್ನು ಬಳಸಿಕೊಂಡು ಒಂದು ಹೆಕ್ಟೇರಿಗೆ 7.16 ಟನ್‌ಗಳಷ್ಟು ಗೋಧಿಯನ್ನು ಬೆಳೆಯಲು ಸಾಧ್ಯವಾದರೆ, 8.87 ಕೋಟಿ ಟನ್‌ಗಳಷ್ಟು ಗೋಧಿಯನ್ನು ಬೆಳೆಯಬಹುದು. ಅಂದರೆ, ಭಾರತದ ಸುಮಾರು 1.24 ಕೋಟಿ ಹೆಕ್ಟೇರುಗಳಷ್ಟು ಭೂಮಿ ಕೃಷಿ ಚಟುವಟಿಕೆಗಳಿಂದ ಮುಕ್ತವಾಗುವುದಲ್ಲದೆ, 3.36 ಕೋಟಿ ಟನ್‌ಗಳಷ್ಟು ಗೋಧಿಯನ್ನು ಹೆಚ್ಚುವರಿಯಾಗಿ ಬೆಳೆಯಬಹುದು.

ಆದರೆ, ಭಾರತದಲ್ಲಿ ಈ ಪ್ರಕ್ರಿಯೆ ನಡೆಯುತ್ತಿಲ್ಲವಾದ್ದರಿಂದ ಇಂಗ್ಲೆಂಡ್, ಫ್ರಾನ್ಸ್ ಅಥವಾ ಜರ್ಮನಿಗಿಂತ ತೀರ ಹಿಂದುಳಿದಿರುವುದು. ಒಂದು ವೇಳೆ ಯುರೋಪಿನ ಕೃಷಿ ಭೂಮಿಯೇನಾದರೂ ಭಾರತಕ್ಕಿಂತ ಹೆಚ್ಚು ಫಲವತ್ತಾಗಿದೆಯೇ?

1800ರಲ್ಲಿ ಇಂಗ್ಲೆಂಡ್‌ನಲ್ಲಿ ಒಂದು ಹೆಕ್ಟೇರ್‌ಗೆ 1.2 ಟನ್‌ಗಳಷ್ಟು ಗೋಧಿ ಇಳುವರಿಯಾಗುತ್ತಿತ್ತು. ಭಾರತದಲ್ಲಿ 2007ರಲ್ಲಿ ಒಂದು ಹೆಕ್ಟೇರ್‌ಗೆ 2.80 ಟನ್‌ಗಳಷ್ಟು ಗೋಧಿ ಇಳುವರಿಯಾಗಿತ್ತು. ಅಂದರೆ, ಎರಡು ಶತಮಾನಗಳ ಹಿಂದೆ ಇಂಗ್ಲೆಂಡ್ ಗೋಧಿ ಉತ್ಪಾದನೆಯಲ್ಲಿ ತೀರ ಬಡವಾಗಿತ್ತು. ಇಂಗ್ಲೆಂಡ್ ಮತ್ತು ಭಾರತದ ಮಣ್ಣಿನ ಫಲವತ್ತತೆಯನ್ನು ಹೋಲಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ವಾತಾವರಣದ ಬದಲಾವಣೆ ಮತ್ತು ಭೂಮಿಯ ಫಲವತ್ತತೆ ರೂಪುಗೊಳ್ಳುವುದಕ್ಕೆ ಸಾವಿರಾರು ವರ್ಷಗಳು ಬೇಕಾಗುತ್ತವೆ. ಅದೇನೇ ಇರಲಿ, ಇಲ್ಲಿ ನಾವು ಗಮನಿಸಬೇಕಾದ ಅಂಶವೇನೆಂದರೆ 1800ರಲ್ಲಿ ಇಂಗ್ಲೆಂಡ್‌ನ ಕೃಷಿ ಚಟುವಟಿಕೆ ಎಷ್ಟು ಸಾಂಪ್ರದಾಯಿಕವಾಗಿತ್ತೋ ಅದೇ ಮಟ್ಟದಲ್ಲಿ 2007ರಲ್ಲಿ ಭಾರತದ ಕೃಷಿಯ ಪರಿಸ್ಥಿತಿ ಇದೆ.

ಹಾಗಾದರೆ ಯುರೋಪಿನಲ್ಲಿ ಕೃಷಿಯ ಸ್ವರೂಪ ಬದಲಾಗಲು ಕಾರಣವೇನು? ಭಾರತದಲ್ಲಿ ಇದೇ ರೀತಿಯ ಬದಲಾವಣೆಗೆ ಇರುವ ತೊಡಕುಗಳಾದರೂ ಏನು? ಭಾರತದ ಬಹುತೇಕ ಕೃಷಿಕರು ಇವತ್ತಿಗೂ ಅರ್ಥೈಸಿಕೊಂಡಿರುವಂತೆ 1800ರಲ್ಲಿ ಇಂಗ್ಲೆಂಡ್‌ನ ರೈತರು ಕೃಷಿಯನ್ನು ಉದ್ಯಮವಾಗಿ ಪರಿಗಣಿಸದೆ ಜೀವನಾಧಾರಿತ ಚಟುವಟಿಕೆಯಾಗಿ ಪರಿಗಣಿಸಿದ್ದರು ಎಂಬುದನ್ನು ನಾವಿಲ್ಲಿ ಗಮನಿಸಬೇಕು. ಇದೇ ಕಾರಣದಿಂದ ಭಾರತದಲ್ಲಿ ಇಂದು ರೈತರು ಬೆಳೆದಿದ್ದಷ್ಟಕ್ಕೆ ತೃಪ್ತಿ ಪಟ್ಟುಕೊಳ್ಳುತ್ತಾರೆ. ಬರ ಅಥವಾ ಪ್ರವಾಹ ಮತ್ತಿತರ ಪ್ರಕೃತಿ ವಿಕೋಪಗಳೇನಾದರೂ ಘಟಿಸಿದರೆ ಸರ್ಕಾರ ಮೊರೆ ಹೋಗುತ್ತಾರೆ.

ಭಾರತದ ರೈತರು ಒಂದೆಡೆ ಸಾಂಪ್ರದಾಯಿಕವಾದ ಜೀವನಾಧಾರಿತ ಕೃಷಿಗೆ ಜೋತುಬಿದ್ದರೆ, ಇನ್ನೊಂದೆಡೆ ಕತ್ತಲ ಕೂಪದಲ್ಲಿಯೇ ಬದುಕಲು ಇಚ್ಛಿಸುತ್ತಾರೆ. ಭಾರತ ಈಗಿನಂತೆಯೇ ಸದಾಕಾಲ ಕೊಳೆಯಬೇಕೇ? ಭಾರತದಲ್ಲಿ ಬದಲಾವಣೆಯ ಗಾಳಿ ಬೀಸಬಾರದೆ? ಭಾರತ ಬದಲಾಗಬೇಕಾದರೆ 1800ರ ನಂತರ ಇಂಗ್ಲೆಂಡ್ ಸಾಗಿದ ದಾರಿಯಲ್ಲಿ ಸಾಗಲೇಬೇಕು. ರೈತರ ಬಿಗಿಪಟ್ಟಿನಿಂದ ಕೃಷಿ ಭೂಮಿಯನ್ನು ಮುಕ್ತಗೊಳಿಸಿ ಭಾರತ ಕೈಗಾರಿಕಾ ಸಮಾಜವಾಗಿ ರೂಪುಗೊಳ್ಳಬೇಕು.

ದಲಿತ ಮಾತೆ ಇಂಗ್ಲಿಷ್

ದಲಿತರೆ
ಏದ್ದೇಳಿ
ಇದು ಆದಿ
ಹೊಸ ಯುಗದ ಆದಿ
ಇಂಗ್ಲಿಷ್ ಎಂಬ ದಲಿತ ಮಾತೆಯ ಯುಗವಿದು
ವಿಶ್ವವನು ಮೆಟ್ಟಿ ನಿಲ್ಲುತಿರುವಳು ದಲಿತ ಮಾತೆ ಇಂಗ್ಲಿಷ್
ಶಾಸ್ತ್ರೀಯ ಭಾಷೆಯ ಹರಿಕಾರರಾದ ಚೀನಿಯರಿಂದ ದಲಿತ ಮಾತೆಯ ಆರಾಧನೆ
ಸಾಂಪ್ರದಾಯಿಕ ಭಾಷಾ ಪ್ರೇಮಿ ಫ್ರೆಂಚರಿಂದ ದಲಿತ ಮಾತೆಯ ಅಪ್ಪುಗೆ
ಭಾಷಾಂಧ ಜರ್ಮನರು ಕೂಡ ಸರತಿಯಲಿ
ಕಜಕಿಯನರು ದಲಿತ ಮಾತೆಯ ಮರ್ಮವನು ಅರಿತ ದಿನ
ದಲಿತ ಮಾತೆ ಇಂಗ್ಲಿಷ್ ಇಲ್ಲದ ಜ್ಞಾನವೆಂಬುದು ತುಪಾಕಿಯಿಲ್ಲದ ಗುಂಡಿನಂತೆ
ದಲಿತ ಮಾತೆ ಇಂಗ್ಲಿಷ್ ಇಲ್ಲದ ಪದವಿ ಬರಿಯ ಪುಟಗಳಷ್ಟೆ
ಮುನ್ನುಗ್ಗಿ
ದಲಿತ ಮಾತೆ ಇಂಗ್ಲಿಷ್ ದಲಿತ ಕಂದಮ್ಮಗಳಿಗಾಗಿ ಕಾಯುತಿರುವಳು
ದಲಿತ ಮಾತೆ ಇಂಗ್ಲಿಷ್ ಹಸುಕಂದಮ್ಮಗಳಿಗಾಗಿ ಕಾಯುತಿರುವಳು
ದಲಿತ ಮಾತೆ ಇಂಗ್ಲಿಷ್ ಗರ್ಭದಲಿರುವ ಕಂದಮ್ಮಗಳಿಗಾಗಿ ಕಾಯುತಿರುವಳು
ತುರ್ತು ಪರಿಸ್ಥಿತಿ ಬಂದಿದೆ!
ವೈದ್ಯರನು ಕರೆಯಿರಿ
ತಾಯಿ ರೋದಿಸುತಿಹಳು
ಹಸುಕಂದಮ್ಮ ಬೆಳಕ ನೋಡುವ ದಿನ
ಬಂತು ನೋಡಿ ಹಸುಕಂದಮ್ಮ
ಅಳುವ ಮಗುವನು ನೋಡಿ
ಇದು ಮುಕ್ತಿ ಬೇಡುವ ಅಳು
ದಲಿತ ಮಾತೆ ಇಂಗ್ಲಿಷ್‌ಗಾಗಿ ಅಳು
ಸರಿ
ಇನ್ನು ಮುಂದಡಿಯಿಡಿ
ಹಸುಕಂದಮ್ಮನ ಕಡೆ ಬಾಗಿ
ಕಾವ್ಯಾತ್ಮಕವಾಗಿ ಬಾಗಿ
ಕಂದನ ಕಿವಿಯ ಬಳಿ ಹೋಗಿ
ಮೊದಲಿಗೆ ಎಡ ಕಿವಿ
ಈಗ ಪಿಸುಮಾತಿನಲಿ ಹೇಳಿ
"ಎ–ಬಿ–ಸಿ–ಡಿ"
ಬಲ ಕಿವಿ
ಪಿಸುಮಾತಿನಲಿ ಹೇಳಿ
"1–2–3–4"
ರೋಮಾಂಚನವೆಲ್ಲೆಲ್ಲೂ, ದಲಿತ ಮಾತೆ ಇಂಗ್ಲಿಷ್‌ನ ಅಪ್ಪುಗೆಯಲಿ ಕಂದಮ್ಮ
ಇಂಗ್ಲಿಷ್ ಮಾತೆಯ ಮಡಿಲಲಿರುವ ಕಂದಮ್ಮ ಬೆಳೆದು ಭೂಮಾಲೀಕರ ಜೀತ ಮಾಡುವುದಿಲ್ಲ
ಇಂಗ್ಲಿಷ್ ಮಾತೆಯ ಮಡಿಲಲಿರುವ ಕಂದಮ್ಮ ಬೆಳೆದು ಸತ್ತ ಪ್ರಾಣಿಗಳ ಚರ್ಮ ಸುಲಿಯುವುದಿಲ್ಲ
ಇಂಗ್ಲಿಷ್ ಮಾತೆಯ ಮಡಿಲಲಿರುವ ಕಂದಮ್ಮ ಬೆಳೆದು ಹಂದಿ ಕೋಣಗಳ ಸಾಕುವುದಿಲ್ಲ
ಇಂಗ್ಲಿಷ್ ಮಾತೆಯ ಮಡಿಲಲಿರುವ ಕಂದಮ್ಮ ಬೆಳೆದು ಹೊಲಗಳಲಿ ಇಲಿಗಳ ಹಿಂದೆ ಓಡುವುದಿಲ್ಲ
ಇಂಗ್ಲಿಷ್ ಮಾತೆಯ ಮಡಿಲಲಿರುವ ಕಂದಮ್ಮ ನಾಯಕನಾಗಿ ಬೆಳೆಯಬಹುದು
ಇಂಗ್ಲಿಷ್ ಮಾತೆಯ ಮಡಿಲಲಿರುವ ಕಂದಮ್ಮ ಮಾಲೀಕನಾಗಿ ಬೆಳೆಯಬಹುದು
ಇಂಗ್ಲಿಷ್ ಮಾತೆಯ ಮಡಿಲಲಿರುವ ಕಂದಮ್ಮ ಸಮಾಜ ಸೇವಕನಾಗಿ ಬೆಳೆಯಬಹುದು

ದಲಿತರೆ ಇನ್ನಾದರೂ ಮೇಲೇಳಿ
ಭಾವಣಿಯ ಮೇಲೆ ಹತ್ತಿ
ಭರವಸೆಯಿಂದ ಹೇಳಿ
"ದಲಿತ ಮಾತೆ ಇಂಗ್ಲಿಷ್‌ಗೆ ಜೈ"
ಪ್ರತಿವರ್ಷ ಅಕ್ಟೋಬರ್ 25ರಂದು ದಲಿತ ಮಾತೆಯನ್ನು ನೆನಪಿಸಿಕೊಳ್ಳಿ
ನಿಮಗೆ ಸಾಧ್ಯವಿದೆ ನಂಬಿಕೆಯಿಡಿ. ಗೆಲುವಿನ ಹೆಜ್ಜೆಯಿಡಿ.

2006 ಅಕ್ಟೋಬರ್ 26ರಂದು ದಲಿತ ಮಾತೆ ಇಂಗ್ಲಿಷ್‌ನ ಹುಟ್ಟು. 2008ರ ಅಕ್ಟೋಬರ್ 26ರಂದು ಅಂದರೆ ಲಾರ್ಡ್ ಮೆಕಾಲೆಯ 208ನೆಯ ಜನ್ಮ ದಿನದಂದು ದಲಿತ ಮಾತೆ ಎಲ್ಲ ದಲಿತರ ಮನೆಗಳಿಗೂ ಪ್ರವೇಶ. ಹೌದು ಅಂದು ತಾಯಿ ಎಲ್ಲ ದಲಿತರ ಮನೆಗಳನ್ನು ಪ್ರವೇಶಿಸಿದಳು.

ಅಂದು 70ಕ್ಕೂ ಅಧಿಕ ಅತಿಥಿಗಳಿಗೆ ವಿಶ್ವದ ಜನಪ್ರಿಯ ಬ್ರ್ಯಾಂಡ್‌ಗಳ ಬಿಯರ್, ಸ್ಕಾಚ್ ಮತ್ತು ವೈನ್‌ಗಳನ್ನು ನೀಡಿ ಸತ್ಕರಿಸಲಾಯಿತು. ಜೊತೆಗೆ ಮೇಕೆ ಮಾಂಸದ 'ಕರ್ರಿ' ಯನ್ನು ಕೂಡ ಬಡಿಸಲಾಯಿತು. ಸ್ಟಾರ್ಟರ್ಸ್‌ಗೆ ರಫ್ತು ಗುಣಮಟ್ಟದ ಟೈಗರ್ ಪ್ರಾನ್, ಪಶ್ಚಿಮ ಬಂಗಾಳದ ಮೂಳೆಗಳಿಲ್ಲದ 'ಭೇಟ್ಕಿ' ಮೀನು. ಇವೆಲ್ಲವುಗಳಿಗಿಂತ ರುಚಿಕರ ಮತ್ತು ಸ್ವಾದಿಷ್ಟವಾದ ನಾಟಿ ಕೋಳಿ ಕೂಡ ಇತ್ತು. ಪ್ರತ್ಯೇಕತಾವಾದಿಗಳಿಗೆ ಬಾಟಲ್ ನೀರು, ತರಕಾರಿಗಳು ಮತ್ತು ತಂಪು ಪಾನೀಯವನ್ನು ಕೂಡ ನೀಡಲಾಯಿತು. ಚಪಾತಿಯೊಂದನ್ನು ಹೊರತುಪಡಿಸಿ ಇನ್ನೆಲ್ಲ ತಿನಿಸುಗಳನ್ನು ಮನೆಯಲ್ಲಿಯೇ ಸಿದ್ಧಪಡಿಸಲಾಯಿತು.

ಮೆಕಾಲೆ ಅವರ ಮೈನೂಟ್ಸ್‌ಅನ್ನು ಮತ್ತೆ ಓದುವಾಗ ನನಗನಿಸಿದ್ದೇನೆಂದರೆ, ಆತ ಭಾರತೀಯ ಭಾಷೆಗಳ ವಿರುದ್ಧ ಒಂದೇ ಒಂದು ಪದವನ್ನೂ ಬಳಸಿಲ್ಲ. ಮೆಕಾಲೆ, ನಿಜ ಹೇಳಬೇಕೆಂದರೆ ಪಶ್ಚಿಮದ ವಿಜ್ಞಾನ ಮತ್ತು ತತ್ವಶಾಸ್ತ್ರದ ಮೂಲಕ ಭಾರತೀಯ ಭಾಷೆಗಳನ್ನು ಮತ್ತಷ್ಟು ಗಟ್ಟಿಗೊಳಿಸಬೇಕೆಂದಿದ್ದ. ಆದರೆ, ಮೆಕಾಲೆ ಸಂಸ್ಕೃತ ಭಾಷೆಯ ವಿರುದ್ಧ ಕಠಿಣ ಧೋರಣೆ ತಳೆದಿದ್ದ. ಮೆಕಾಲೆಗೆ ಸಂಸ್ಕೃತ ಕೇವಲ ಭಾಷೆ ಮಾತ್ರವಾಗಿರದೆ, ಭಾರತದ ನೈತಿಕ, ಆಧ್ಯಾತ್ಮಿಕ ಮತ್ತು ಸಾಮಾಜಿಕ ಅಧಃಪತನದ ಸಂಕೇತವಾಗಿತ್ತು. ದಲಿತ ಪರಂಪರೆ ಸಂಸ್ಕೃತ ಭಾಷೆಯ ಬಗ್ಗೆ ತಳೆದಿರುವ ಧೋರಣೆಯ ತರ್ಕವನ್ನೇ ಮೆಕಾಲೆ ಕೂಡ ಬಳಸುತ್ತಾನೆ.

ಇನ್ನು ಮ್ಲೇಚ್ಛರ ಭಾಷೆಯ ವಿಚಾರಕ್ಕೆ ಬರುವುದಾದರೆ, ಡಾ. ಅಂಬೇಡ್ಕರ್ ಅವರ ಬರಹಗಳ ಸಂಪುಟ–1ರಲ್ಲಿ ಅಂಬೇಡ್ಕರ್ ಮನುವಿನ ಈ ಮೂರು ಉವಾಚಗಳನ್ನು ಉಲ್ಲೇಖಿಸುತ್ತಾರೆ: "ಬ್ರಹ್ಮನ ಬಾಯಿ, ಭುಜ, ತೊಡೆ ಮತ್ತು ಕಾಲಿನಿಂದ ಜನಿಸದ ಎಲ್ಲ ಜನಾಂಗಗಳನ್ನು ದಸ್ಯು ಎನ್ನಬಹುದು. ಅವರಾಡುವ ಭಾಷೆ ಆರ್ಯನ್ನರದಾಗಿರಲಿ ಅಥವಾ ಮ್ಲೇಚ್ಛರದಾಗಿರಲಿ ಅವರೆಲ್ಲರೂ ದಸ್ಯುಗಳೇ." ಅಂಬೇಡ್ಕರ್ ಬರಹಗಳ ಸಂಪುಟ–7ರಲ್ಲಿ ಸಂಸ್ಕೃತ ಮತ್ತು ಮ್ಲೇಚ್ಛರ ಭಾಷೆಯ ಬಗ್ಗೆ ಹೆಚ್ಚಿನ ವಿವರಣೆ ಸಿಗುತ್ತದೆ.

ಮೆಕಾಲೆಗೆ ಸಂಸ್ಕೃತ ಕೇವಲ ಭಾಷೆ ಮಾತ್ರವಾಗಿರದೆ, ಭಾರತದ ನೈತಿಕ, ಆಧ್ಯಾತ್ಮಿಕ ಮತ್ತು ಸಾಮಾಜಿಕ ಅಧಃಪತನದ ಸಂಕೇತವಾಗಿತ್ತು. ದಲಿತ ಪರಂಪರೆ ಸಂಸ್ಕೃತ ಭಾಷೆಯ ಬಗ್ಗೆ ತಳೆದಿರುವ ಧೋರಣೆಯ ತರ್ಕವನ್ನೇ ಮೆಕಾಲೆ ಕೂಡ ಬಳಸುತ್ತಾನೆ.

ನಮ್ಮ ಮನಸ್ಸಿನಲ್ಲಿದ್ದ ಕಾರ್ಯಸೂಚಿಯಂತೆ ಸಮಾರಂಭ ಆರಂಭವಾಯಿತು. ನನ್ನ ಮಾರ್ಗದರ್ಶಿಯಾದ ಚಂದನ್ ಮಿತ್ರ ಅವರನ್ನು ನನಗೆ ಪರಿಚಯಿಸಿ, ಆ ಮೂಲಕ 'ದಲಿತ ಡೈರಿ'ಯ ಹುಟ್ಟಿಗೆ ಕಾರಣರಾದ ಪತ್ರಕರ್ತ ಮತ್ತು ಈಗ ಕಾದಂಬರಿಕಾರರಾದ ಅವಿಜೀತ್ ಘೋಷ್ ಈ ವರ್ಷದ ಸಮಾರಂಭದ ಗೌರವಾನ್ವಿತ ಅತಿಥಿಯಾಗಿದ್ದರು. ಅವರ ಮಹತ್ವದ ಮೊದಲನೆಯ ಕೃತಿ 'ಬ್ಯಾಂಡಿಕೂಟ್ಸ್ ಇನ್ ದ ಮೂನ್‌ಲೈಟ್'ನ ಮುಖಪುಟ ವೇದಿಕೆಯ ಮೇಲಿದ್ದ ಪೋಸ್ಟರ್‌ನಲ್ಲಿ ರಾರಾಜಿಸುತ್ತಿತ್ತು. ಕಿವಿಗಡಚಿಕ್ಕುವ ಕರತಾಡನದ ನಡುವೆ ಅವಿಜೀತ್ ದಲಿತ ಮಾತೆ ಇಂಗ್ಲಿಷ್‌ನ ಪೋಸ್ಟರ್ ಅನಾವರಣಗೊಳಿಸಿದರು. ನಾವು ಸುಮಾರು 1,000 ಪೋಸ್ಟರ್‌ಗಳನ್ನು ಸೂಚನೆಗಳೊಂದಿಗೆ ಪ್ರಕಟಿಸಿದೆವು. ನಂತರ ಜಾತಿ ವಿರೋಧಿ ಪ್ರಕಾಶನ ಸಂಸ್ಥೆ 'ನವಯಾನ'ದ ಎಸ್. ಆನಂದ್ ವೇದಿಕೆಗೆ ಬಂದು ದಲಿತ–ಮಾರ್ಕ್ಸಿಸ್ಟ್ ವಿದ್ವಾಂಸ ಆನಂದ್ ತೇಲ್ತುಂಬ್ಡೆ ಅವರು ...ದ 'ಖೇರ್ಲಾಂಜಿ– ಎ ಸ್ಟ್ರೇಂಜ್ ಅಂಡ್ ಬಿಟ್ಟರ್ ...' ಎಂಬ ಅದ್ಭುತವಾದ ಕೃತಿಯ ಪೋಸ್ಟರ್ ಪ್ರದರ್ಶಿಸಿದರು.

ನಂತರ ಸಮಾರಂಭ ಮುಂದುವರೆಯಿತು. ಈ ನಡುವೆ ಇಂಗ್ಲಿಷ್ ಮಾತೆಯ ಪೋಸ್ಟರ್ ಮಾತ್ರ ಎಲ್ಲರನ್ನೂ ಆಕರ್ಷಿಸುತ್ತಿತ್ತು. ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಲಾರ್ಡ್ ಮೆಕಾಲೆ ಅವರ ರೇಖಾಚಿತ್ರಪಟವನ್ನು ಹೂವಿನಿಂದ ಅಲಂಕೃತಗೊಳಿಸಲಾಗಿತ್ತು. ನಂತರ, ಭಾರತದ ಬಹುದೊಡ್ಡ ಆಧುನಿಕತೆಯ ಪ್ರತಿಪಾದಕ ಪ್ರೊ. ಬಿಬೇಕ್ ದೇಬ್‌ರಾಯ್ ಅವರನ್ನು ಭಾಷಣ ಮಾಡುವಂತೆ ನಾನು ಆಹ್ವಾನಿಸಿದೆ.

ಪ್ರೊ. ದೇಬ್‌ರಾಯ್ ಮೇಲೆದ್ದರು. ತಾವು ಕೊಂಚ ಎತ್ತರವಾಗಿಯೇ ಇದ್ದರೂ ಪಕ್ಕದಲ್ಲಿದ್ದ ಕುರ್ಚಿಯೊಂದನ್ನು ಎಳೆದುಕೊಂಡು ಅದರ ಮೇಲೆ ನಿಂತರು. ಆಗ ರಾತ್ರಿ ಸುಮಾರು 9.30ರ ಸಮಯ. ಇದ್ದಕ್ಕಿದ್ದಂತೆ ಎಲ್ಲೆಡೆ ಮೌನ. ಅತಿಥಿಗಳು ಪಾನೀಯಗಳನ್ನು ಕೈಯಲ್ಲಿ ಹಿಡಿದಿದ್ದರೂ, ಕುಡಿಯುತ್ತಿರಲಿಲ್ಲ. ಯಾಕೆಂದರೆ ಭಾರತದ ಸ್ಟಾರ್ ಮಾತುಗಾರ ಭಾಷಣ ಆರಂಭಿಸಿಯಾಗಿತ್ತು. ಈಗ ನಮ್ಮ ಕಾರ್ಯಸೂಚಿ ಸ್ವಲ್ಪ ತಿರುವು ಪಡೆದುಕೊಂಡಿತು. ದಲಿತ ಮಾತೆ ಇಂಗ್ಲಿಷ್ ಈಗ ಮತ್ತೊಂದು ಕಾರ್ಯ ಮಾಡುವಂತಾಯಿತು. ನಮ್ಮ ಉದ್ದೇಶ, ದಲಿತ ಮಾತೆ ದಲಿತರ ಮನೆ ಮನಗಳಲ್ಲಿ ಸಂತೋಷ ಉಂಟುಮಾಡಬೇಕೆಂಬುದಾಗಿತ್ತು. ಆದರೆ ಈಗ ಆ ತಾಯಿ ಜಾತಿಬದ್ಧ ಹಿಂದೂವಿನ ...ಲಿಗೆಯ ಮಾನಸಿಕ ತಳಹದಿಯನ್ನೇ ಹರಿದು ಹಂಚಲು ಶುರುಮಾಡಿದಳು.

ಪ್ರೊ. ದೇಬ್‌ರಾಯ್ ಅವರ ಭಾಷಣದ ತುಣುಕುಗಳು ಇಲ್ಲಿವೆ:

• ಮೆಕಾಲೆ ಅವರ ಮೈನೂಟ್ಸ್ ಅನ್ನು ಮತ್ತೆ ಓದುವಾಗ ನನಗನಿಸಿದ್ದೇನೆಂದರೆ, ಆತ ಭಾರತೀಯ ಭಾಷೆಗಳ ವಿರುದ್ಧ ಒಂದೇ ಒಂದು ಪದವನ್ನೂ ಬಳಸಿಲ್ಲ. ಮೆಕಾಲೆ, ನಿಜ ಹೇಳಬೇಕೆಂದರೆ ಪಶ್ಚಿಮದ ವಿಜ್ಞಾನ ಮತ್ತು ತತ್ವ ಶಾಸ್ತ್ರದ ಮೂಲಕ ಭಾರತೀಯ ಭಾಷೆಗಳನ್ನು ಮತ್ತಷ್ಟು ಗಟ್ಟಿಗೊಳಿಸಬೇಕೆಂದಿದ್ದ. ಆದರೆ, ಮೆಕಾಲೆ ಸಂಸ್ಕೃತ ಭಾಷೆಯ ವಿರುದ್ಧ ಕಠಿಣ ಧೋರಣೆ ತಳೆದಿದ್ದ. ಮೆಕಾಲೆಗೆ ಸಂಸ್ಕೃತ ಕೇವಲ ಭಾಷೆ ಮಾತ್ರವಾಗಿರದೆ, ಭಾರತದ ನೈತಿಕ, ಆಧ್ಯಾತ್ಮಿಕ ಮತ್ತು ಸಾಮಾಜಿಕ ಅಧಃಪತನದ ಸಂಕೇತವಾಗಿತ್ತು. ದಲಿತ ಪರಂಪರೆ ಸಂಸ್ಕೃತ ಭಾಷೆಯ ಬಗ್ಗೆ ತಳೆದಿರುವ ಧೋರಣೆಯ ತರ್ಕವನ್ನೇ ಮೆಕಾಲೆ ಕೂಡ ಬಳಸುತ್ತಾನೆ.

ಇನ್ನು ಮ್ಲೇಚ್ಛರ ಭಾಷೆಯ ವಿಚಾರಕ್ಕೆ ಬರುವುದಾದರೆ, ಡಾ. ಅಂಬೇಡ್ಕರ್ ಅವರ ಬರಹಗಳ ಸಂಪುಟ–1ರಲ್ಲಿ ಅಂಬೇಡ್ಕರ್ ಮನುವಿನ ಈ ಮೂರು ಉವಾಚಗಳನ್ನು ಉಲ್ಲೇಖಿಸುತ್ತಾರೆ: "ಬ್ರಹ್ಮನ ಬಾಯಿ, ಭುಜ, ತೊಡೆ ಮತ್ತು ಕಾಲಿನಿಂದ ಜನಿಸದ ಎಲ್ಲ ಜನಾಂಗಗಳನ್ನು ದಸ್ಯು ಎನ್ನಬಹುದು. ಅವರಾಡುವ ಭಾಷೆ ಆರ್ಯನ್ನರದಾಗಿರಲಿ ಅಥವಾ ಮ್ಲೇಚ್ಛರದಾಗಿರಲಿ ಅವರೆಲ್ಲರೂ ದಸ್ಯುಗಳೇ." ಅಂಬೇಡ್ಕರ್ ಬರಹಗಳ ಸಂಪುಟ–7ರಲ್ಲಿ ಸಂಸ್ಕೃತ ಮತ್ತು ಮ್ಲೇಚ್ಛರ ಭಾಷೆಯ ಬಗ್ಗೆ ಹೆಚ್ಚಿನ ವಿವರಣೆ ಸಿಗುತ್ತದೆ.

ಈ ಮ್ಲೇಚ್ಛರು ಯಾರು? ಕ್ರಿ.ಪೂ 800ರಲ್ಲಿ ಜೀವಿಸಿದ್ದ ಸಂಖ್ಯಾಶಾಸ್ತ್ರಜ್ಞ, 'ಸುಲಭ ಸೂತ್ರ' ಕೃತಿಯ ಕರ್ತೃ ಬೌದ್ಧಾಯನ "ಮಾಂಸ ತಿನ್ನುವ ಅಥವಾ ವೈರುಧ್ಯಪೂರ್ಣ ಹೇಳಿಕೆ ನೀಡುವ ಅಥವಾ ಉತ್ತಮ ನಡವಳಿಕೆ ಹೊಂದಿಲ್ಲದವ" ಮತ್ತು ಪವಿತ್ರವಾದ ಸಂಸ್ಕೃತ ಭಾಷೆಯನ್ನು ಮಾತನಾಡದೆ ಇರುವವನನ್ನು ಮ್ಲೇಚ್ಛ ಎಂದು ವ್ಯಾಖ್ಯಾನಿಸುತ್ತಾನೆ. ಇನ್ನು ಪುರಾಣದಲ್ಲಿ ಉಲ್ಲೇಖಗೊಳ್ಳುವ ಅಸುರರು/ ದಸ್ಯುಗಳು, ನಾಗ ಜನಾಂಗದವರೇ ಇಂದಿನ ದಲಿತರು ಎಂಬುದು ನಮಗೆ ಗೊತ್ತಿರುವ ವಿಚಾರ.

ತಮ್ಮ ಭಾಷಣದ ಕೊನೆಯಲ್ಲಿ ಭಾರಿ ಕರತಾಡನದ ನಡುವೆ ಪ್ರೊ. ದೇಬ್‌ರಾಯ್ ಈ ವಿಡಂಬನಾತ್ಮಕ ಶ್ಲೋಕವನ್ನು ಹೇಳಿದರು:

"ಯಾ ದೇವಿ ಸರ್ವಭೂತೇಷು ಮ್ಲೇಚ್ಛ ಭಾಷಾ ರೂಪೇಣ ಸಂಸ್ಥಿತಾ, ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ. ಯಾ ದೇವಿ ಸರ್ವಭೂತೇಷು ಇಂಗ್ಲಿಷ್ ರೂಪೇಣ ಸಂಸ್ಥಿತಾ, ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ." (ವಿದೇಶಿ ಭಾಷೆಯ ರೂಪದಲ್ಲಿ ಎಲ್ಲ ಜೀವಿಗಳ ಒಳಗೆ ನೆಲೆಸಿರುವ ಓ ದೇವಿ, ನಾ ನಿನಗೆ ತಲೆ ಬಾಗುವೆ, ನಾ ನಿನಗೆ ತಲೆ ಬಾಗುವೆ, ನಾ ನಿನಗೆ ತಲೆಬಾಗುವೆ. ಇಂಗ್ಲಿಷ್ ಭಾಷೆಯ ರೂಪದಲ್ಲಿ ಎಲ್ಲ ಜೀವಿಗಳ ಒಳಗೆ ನೆಲೆಸಿರುವ ಓ ದೇವಿ, ನಾ ನಿನಗೆ ತಲೆ ಬಾಗುವೆ, ನಾ ನಿನಗೆ ತಲೆ ಬಾಗುವೆ, ನಾ ನಿನಗೆ ತಲೆಬಾಗುವೆ.) □

ಇಂಗ್ಲಿಷ್‌ಗೆ ಜಯವಾಗಲಿ!

ಕನಲಿಕೆ

ಅರಳಿಕೊಂಡ ಚೆಲುವ ಬದುಕು
ಕಣ್ಣ ಮುಂದೆ ನಲಿದಿವೆ
ಹುಡುಕುತಲಿ ಒಂದು ತುಣುಕು
ಮನವದೇಕೋ ಕನಲಿದೆ

ಉರಿಯುತಿರುವ ದೀಪಗಳಲಿ
ಮಂಕು ಏಕೆ ಕವಿದಿದೆ
ಮೈ ಚಾಚಿದ ಬತ್ತಿಯಲಿ
ಕರಿಯ ಛಾಯೆ ಇಣಕಿವೆ

ನಿನ್ನ ನೆನಪ ಗಾಳಿ ಬೀಸಿ
ಬೆಳಕು ಸಹ ತೊನೆದಾಡಿದೆ
ಗೋಡೆ ಮೇಲೆ ಮೂಡಿನಿಂತು
ನೆರಳು ಕೂಡ ನಗುತಿದೆ

ಹೊಂಗಿರಣ ಹುಡುಕಲೆಂತು
ನಡುರಾತ್ರಿಯ ಮಡಿಲಲಿ
ಸುಖದ ಕನಸ ಕಾಣಲೆಂತು
ಮಮತೆ ಇರದ ಬದುಕಲಿ

ನಿಂತೇ ಇದೆ ಕಾಲ ಹೀಗೆ
ಯಾರ ಬರುವ ಕಾಯುತ
ಮನದ ತಮವ ಅಳಿಸಲೆಂದು
ಇರದ ಖುಷಿಯ ತುಂಬುತ

○ ಶಾರದಾ ಮುಳ್ಳೂರ

ಬುದ್ಧಾಯಣ



೩೯

ವಿನಯವೇ ಧರ್ಮ, ಸಕಲರ ಸುಖ-ಸೌಖ್ಯ...?!

ಬುದ್ಧ ವಿನಯವಿಲ್ಲದ ಧರ್ಮವನ್ನು ಊಹಿಸಲು ಸಾಧ್ಯವಿಲ್ಲ ಎನ್ನುತ್ತಾನೆ. ಏಕೆಂದರೆ, ವಿನಯವೇ ಧರ್ಮ, ಧರ್ಮವೇ ವಿನಯ. ಎಲ್ಲಿ ವಿನಯವು ದಾರಿ ತಪ್ಪುತ್ತದೋ ಅಲ್ಲಿ ಧರ್ಮವು ದಾರಿ ತಪ್ಪುತ್ತದೆ. ವಿನಯವು ಸಾಧನೆ, ಸರಳತೆ, ಜಾಗೃತಿ, ಮುನ್ನೋಟ ಮತ್ತು ಪ್ರಾಜ್ಞತೆಯನ್ನು ಪ್ರತಿಬಿಂಬಿಸುತ್ತದೆ. ಅದೇ ಧರ್ಮಕ್ಕೆ ಮೂಲ. ಆದ್ದರಿಂದ ಬುದ್ಧನು ವಿನಯ ಮತ್ತು ಧರ್ಮಕ್ಕೆ ಪ್ರಥಮ ಆದ್ಯತೆ ಕೊಡುತ್ತಾನೆ. ತಮ್ಮ ಭಿಕ್ಷುಗಳಿಗೆ ಆ ಬಗ್ಗೆ ಶಿಕ್ಷಣ ಕೊಟ್ಟು ಧರ್ಮ ಮತ್ತು ವಿನಯತೆಯಲ್ಲಿ ನೆಲೆ ನಿಲ್ಲಿಸುತ್ತಾನೆ. ಈ ಕಥೆಯನ್ನು ಗಮನಿಸಿ. ಇಲ್ಲಿ ವಿನಯ ಮತ್ತು ಧರ್ಮದೊಂದಿಗೆ ಇತಿಹಾಸ ಮತ್ತು ಸಂಸ್ಕೃತಿ ಬೆರೆತಿದೆ.

ಸಿ.ಎಚ್. ರಾಜಶೇಖರ್

ವಿನಯ ಮತ್ತು ಧರ್ಮ ಬುದ್ಧನ ಎರಡು ಕಣ್ಣುಗಳಿದಂತೆ ಇದು ಒಂದನ್ನು ಮತ್ತೊಂದರಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ. ಅದು ಆತನ ಧರ್ಮವೆಂಬ ನಾಣ್ಯದ ಎರಡು ಮುಖಗಳು. ಮುಂದೆ ಇದು ಈ ಲೋಕಕ್ಕೆ ಉತ್ಕೃಷ್ಟವಾದ ಸಂಸ್ಕೃತಿಯನ್ನೇ ಕಾಣಿಕೆಯನ್ನಾಗಿನೀಡಿತು. ಇಂದು ಕೂಡ ನಾವುಗಳು ನಮ್ಮಗಳ ದಿನನಿತ್ಯದ ಬದುಕಿನಲ್ಲಿ ಆ ಸಂಸ್ಕೃತಿಯನ್ನೇ ಅಪ್ರಜ್ಞಾಪೂರ್ವಕವಾಗಿ ಅಳವಡಿಸಿಕೊಂಡು ಬದುಕುತ್ತಿದ್ದೇವೆ.

ಕಣ್ಣಿಗೆ ಕಾಣುವ ಸಾಧನೆಯ ಹಿಂದೆ ಅಪಾರ ತ್ಯಾಗವಿರುತ್ತದೆ. ಯಾರು ಅಥವಾ ಯಾವ ಸಮಾಜ ಈ ತ್ಯಾಗ ಮತ್ತು ಸಾಧನೆಯನ್ನು ಅರಿತು ಅದರಿಂದ ಸ್ಫೂರ್ತಿಗೊಂಡು ತಮ್ಮ ಬದುಕಿನಲ್ಲಿ ಅಳವಡಿಸಿ ಕೊಳ್ಳುತ್ತಾರೋ ಅಲ್ಲಿ ಸುಖ ಸೌಖ್ಯಗಳು ನೆಲೆ ನಿಲ್ಲುತ್ತವೆ. ಆಗ ಮಾತ್ರ ಆ ಸಾಧಕನ ಶ್ರಮವು ಸಾರ್ಥಕವಾಗುತ್ತದೆ. ಹೀಗೆ ಆತ ಲೋಕಕ್ಕೆ ಮಾದರಿಯು ಮತ್ತು ಮಾರ್ಗದರ್ಶಿಯು ಆಗುತ್ತಾನೆ.

ಬುದ್ಧ ವಿನಯವಿಲ್ಲದ ಧರ್ಮವನ್ನು ಊಹಿಸಲು ಸಾಧ್ಯವಿಲ್ಲ ಎನ್ನುತ್ತಾನೆ. ಏಕೆಂದರೆ, ವಿನಯವೇ ಧರ್ಮ, ಧರ್ಮವೇ ವಿನಯ. ಎಲ್ಲಿ ವಿನಯವು ದಾರಿ ತಪ್ಪುತ್ತದೋ ಅಲ್ಲಿ ಧರ್ಮವು ದಾರಿ ತಪ್ಪುತ್ತದೆ. ವಿನಯವು ಸಾಧನೆ, ಸರಳತೆ, ಜಾಗೃತಿ, ಮುನ್ನೋಟ ಮತ್ತು ಪ್ರಾಜ್ಞತೆಯನ್ನು ಪ್ರತಿಬಿಂಬಿಸುತ್ತದೆ. ಅದೇ ಧರ್ಮಕ್ಕೆ ಮೂಲ. ಆದ್ದರಿಂದ ಬುದ್ಧನು ವಿನಯ ಮತ್ತು ಧರ್ಮಕ್ಕೆ ಪ್ರಥಮ ಆದ್ಯತೆ ಕೊಡುತ್ತಾನೆ. ತಮ್ಮ ಭಿಕ್ಷುಗಳಿಗೆ ಆ ಬಗ್ಗೆ ಶಿಕ್ಷಣ ಕೊಟ್ಟು ಧರ್ಮ ಮತ್ತು ವಿನಯತೆಯಲ್ಲಿ ನೆಲೆ ನಿಲ್ಲಿಸುತ್ತಾನೆ. ಇಂತಹ ಒಂದು ಪ್ರಸಂಗವನ್ನು ಪ್ರತಿಬಿಂಬಿಸುವ ಈ ಕಥೆಯನ್ನು ಗಮನಿಸಿ. ಇಲ್ಲಿ ವಿನಯ ಮತ್ತು ಧರ್ಮದೊಂದಿಗೆ ಇತಿಹಾಸ ಮತ್ತು ಸಂಸ್ಕೃತಿ ಬೆರೆತಿದೆ.

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ನಂದಿಕೆಯಲ್ಲಿನ 'ಗಿಂಜರ' ಎಂಬ ಮನೆಯಲ್ಲಿ ತಂಗಿದ್ದರು. ಅದೇ ಸಮಯದಲ್ಲಿ ಸಮೀಪವೇ ಇದ್ದಂತಹ ಗೋಸಿಂಗ ಸಾಲವೃಕ್ಷದ ವನದಲ್ಲಿ ಅನುರುದ್ಧ, ನಂದಿಯು ಮತ್ತು ಕಂಬಿಲ ಉಳಿದುಕೊಂಡು ತಮ್ಮ ಎಂದಿನ ಸಾಧನೆಯನ್ನು ಮುಂದುವರೆಸುತ್ತಿದ್ದರು. ಅಂದು ಸಂಜೆ ಧ್ಯಾನದಿಂದ ಎದ್ದ ಬುದ್ಧರು ತಮ್ಮ ಶಿಷ್ಯರ ಸಿದ್ಧಿ ಸಾಧನೆಯನ್ನು ಕಂಡು ಅರಿಯುವ ಸಲುವಾಗಿ ಗೋಸಿಂಗ ಸಾಲವೃಕ್ಷ ವನವನ್ನು ತಲುಪಿದರು. ಆ ವನದ ಕಾವಲುಗಾರ ಬುದ್ಧರನ್ನು ಗುರುತಿಸಲಾರದೆ:

'ಶ್ರಮಣರೇ, ಕ್ಷಮಿಸಿ. ತಾವ್ಯಾರೊ ಏನೋ ನಾನರಿಯೆ. ಈ ವನದಲ್ಲಿ ಒಂದೇ ಪರಿವಾರಕ್ಕೆ ಸೇರಿದ ಮೂವರು ಶ್ರಮಣರು ತಮ್ಮ ಸಾಧನೆಯಲ್ಲಿ ತೊಡಗಿದ್ದಾರೆ. ತಾವುಗಳು ಒಳ ಪ್ರವೇಶಿಸಿ ಅವರಿಗೆ ವೃಥಾ ಕಾಲಹರಣ ಮಾಡುವುದರಿಂದ ಅವರ ಸಾಧನೆಗೆ ಭಂಗವಾಗುತ್ತದೆ. ಆದ್ದರಿಂದ ಪ್ರವೇಶವನ್ನು ನಿಷಿದ್ಧಗೊಳಿಸಿದ್ದೇನೆ.' ಎನ್ನಲು ಈ ಸಂಭಾಷಣೆಯನ್ನು ಕೇಳಿಸಿಕೊಂಡ ಅನುರದ್ಧನು ಕುಳಿತಲ್ಲಿಂದ ಮೇಲೆದ್ದು ಹೊರನೋಡಿದಾಗ ಬುದ್ಧರನ್ನು ಕಂಡು ಓಡೋಡಿ ಬಂದು ಕ್ಷಮೆಯಾಚಿಸುತ್ತಾ ವಿನಯದಿಂದ ವಂದಿಸಿ ತಲೆಬಾಗಿದ. ಬಳಿಕ ಕಾವಲುಗಾರರನ್ನು ಉದ್ದೇಶಿಸಿ:

'ಅಯ್ಯ.... ಬಂದಿರುವವರು ನಮ್ಮ ಭಗವಾನರು. ನಮ್ಮ ಪೂಜ್ಯ ಗುರುಗಳು. ಅವರನ್ನು ತಡೆಯಬೇಡ' ಎನ್ನಲು ಆತ ತನ್ನ ತಪ್ಪಿಗಾಗಿ ಅವರಲ್ಲಿ ದುಃಖ ವ್ಯಕ್ತಪಡಿಸಿ ಕ್ಷಮೆಯಾಚಿಸಿದ. ಮುಗುಳ್ನಕ್ಕ ಬುದ್ಧರು ಆತನಿಗೆ ಆಶೀರ್ವದಿಸಿ ಮುನ್ನಡೆದರು. ಆಗ ಅನುರುದ್ಧನು ತನ್ನ ಗೆಳೆಯರನ್ನು ಉದೇಶಿಸಿ:

'ಆಯುಷ್ಮಂತರಾದ, ನಂದಿಯ ಮತ್ತು ಕಂಬಿಲರೇ, ಭಗವಾನರು ಆಗಮಿಸಿರುವರು ಅವರನ್ನು ಸ್ವಾಗತಿಸೋಣ ಬನ್ನಿ ' ಎಂದು ಕರೆಯಲು ಹೊರಬಂದ ಅವರುಗಳು ಗಾಢ ಶ್ರದ್ಧೆಯಿಂದ ಭಗವಾನರಿಗೆ ವಂದಿಸಿದರು. ಬಳಿಕ ಒಬ್ಬ ಅವರ ಚೀವರ ಮತ್ತು ಭಿಕ್ಷಾಪಾತ್ರೆಯನ್ನು ತೆಗೆದುಕೊಂಡನು. ಇನ್ನೊಬ್ಬ ಕುಳಿತುಕೊಳ್ಳಲು ಆಸನವನ್ನು ಸಿದ್ಧಪಡಿಸಿದ. ಮಗದೊಬ್ಬ ಕಾಲು ತೊಳೆಯಲು ನೀರು ಕೊಟ್ಟ, ನಂತರ ತಮಗಾಗಿ ಸಿದ್ಧಪಡಿಸಿದ್ದ ಅಸನದಲ್ಲಿ ಕುಳಿತುಕೋ
ಬುದ್ಧರು:

'ಸಹೋದರರರೇ, ತಾವುಗಳು ಕುಶಲವೇ? ಇಲ್ಲಿ ಏನಾದರೂ



ಅನಾನುಕೂಲವಿದೆಯೇ? ಎಂದಿನ ಭಿಕ್ಷೆಯು ದೊರೆಯುತ್ತಿದ್ದೆಯೇ?' ಎನ್ನಲು ಅವರುಗಳು:

ಗುರುದೇವಾ, ನಾವುಗಳು ಕುಶಲವಾಗಿದ್ದೇವೆ. ಇಲ್ಲಿ ಯಾವ ತೊಂದರೆಯೂ ಇಲ್ಲ. ಪಿಂಡಪಾತವು ನಮಗೆ ಯಾವ ತೊಂದರೆಯನ್ನು ಉಂಟುಮಾಡಿಲ್ಲ.'

'ಸಹೋದರರೇ, ತಮ್ಮ ಜೀವನಕ್ರಮ ಹೇಗೆ ಸಾಗಿದೆ?'

'ಗುರುದೇವಾ, ತಾವು ತೋರಿಸಿಕೊಟ್ಟಂತೆ ನಿಜಕ್ಕೂ ನಾವುಗಳೆಲ್ಲ ಒಂದಾಗಿ ವಿವಾದಗಳಿಲ್ಲದೆ ಒಮ್ಮತದಿಂದ ಇದ್ದೇವೆ. ಹಾಲು ಮತ್ತು ನೀರು ಒಂದಾಗುವ ರೀತಿಯಲ್ಲಿ ಪರಸ್ಪರ ಕರುಣೆಯ ಕಣ್ಣುಳ್ಳವರಾಗಿ ಜೀವಿಸುತ್ತಿದ್ದೇವೆ. ನಮಗೆ ಲಾಭಕಾರಿಯೂ, ಯಶವನ್ನು ತರುವಂತಹ ಬ್ರಹ್ಮಚರಿಯವನ್ನು ಪಾಲಿಸುವ ಗೆಳೆಯರೊಂದಿಗೆ ಬದುಕುವ ಸುಯೋಗವು ಆನಂದ ತಂದಿದೆ. ಶಾರೀರಿಕ, ಮಾತು ಮತ್ತು ಮನಸ್ಸಿನ ಮೂಲಕ ಕಾರ್ಯಗಳನ್ನು ನಡೆಸುವಾಗಲೂ ಸಾರ್ವಜನಿಕವಾಗಿರಲಿ ಅಥವಾ ವೈಯಕ್ತಿಕವಾಗಿ ಆಗಲಿ ನಮ್ಮಲ್ಲಿ ಮೈತ್ರಿಯುತ ಭಾವನೆಯೇ ಉಂಟಾಗುತ್ತದೆ. ನಮ್ಮದು ಶರೀರ ಬೇರೆ ಬೇರೆ ಇದ್ದರೂ ಭಾವನೆ ಮತ್ತು ಮನಸ್ಸು ಒಂದೇ ಆಗಿದೆ'

'ಸಹೋದರರೇ, ಒಳ್ಳೆಯದು...... ಬಹಳ ಒಳ್ಳೆಯದು.....!

'ಗುರುದೇವಾ, ತಾವುಗಳು ಶಿಕ್ಷಣಕೊಟ್ಟಂತೆ ನಿಜಕ್ಕೂ ಎಚ್ಚರಿಕೆ, ಶ್ರದ್ಧೆ ಮತ್ತು ಸಂಯಮದಿಂದ ಜೀವಿಸುತ್ತಿರುವೆವು.'

'ಸಹೋದರರೇ, ಆ ಬಗೆಯನ್ನು ಸವಿವರವಾಗಿ ಹೇಳಿರಿ.'

'ಗುರುದೇವಾ, ನಮ್ಮಲ್ಲಿ ಹಳ್ಳಿಯಿಂದ ಭಿಕ್ಷಾಟನೆಯನ್ನು ಯಾರು ಮೊದಲು ಮುಗಿಸಿಕೊಂಡು ಬರುತ್ತಾರೋ ಅವರು ಆಸನಗಳನ್ನು ಹಾಕುತ್ತಾರೆ. ಕುಡಿಯುವ ಮತ್ತು ಕೈ ತೊಳೆಯುವ ನೀರಿನ ವ್ಯವಸ್ಥೆ ಮಾಡುತ್ತಾರೆ. ಕಸವನ್ನು ಗುಡಿಸಿ ಕುಟೀರವನ್ನು ಸ್ವಚ್ಛ ಮಾಡುತ್ತೇವೆ. ಕೊನೆಗೆ ಬಂದವರು ಹೆಚ್ಚಿಗೆ ಭಿಕ್ಷೆ ತಂದಿದ್ದರೆ, ಮಿಕ್ಕವರು ಇಚ್ಛೆಪಟ್ಟರೆ ಸೇವಿಸುತ್ತಾರೆ. ಅಥವಾ ಆ ಎಂಜಲನ್ನು ಹಸಿರಿಲ್ಲದ ಕಡೆ ಅಥವಾ ಜೀವಿಗಳಿಲ್ಲದ ಕಡೆ ಚೆಲ್ಲುತ್ತೇವೆ.'

'ಗುರುದೇವಾ, ಮರುದಿನ ಬೆಳಗಿನ ಕಾರ್ಯಗಳಿಗೆ ನೀರನ್ನು ತುಂಬಿಸುವಾಗ ಪಾತ್ರೆಯ ಭಾರ ಹೆಚ್ಚಾಗಿದ್ದರೆ ಅನಗತ್ಯವಾಗಿ ಮಾತನಾಡುವ ಬದಲು ಮತ್ತೊಬ್ಬರನ್ನು ಕೈ ಸನ್ನೆಯಿಂದ ಕರೆಯುತ್ತೇವೆ. ಮಾತನಾಡುವ ಅಗತ್ಯವಿದ್ದರೆ ಐದು ದಿನಗಳಿಗೊಮ್ಮೆ ರಾತ್ರಿಯಲ್ಲಿ ಕುಳಿತು ಧರ್ಮದ ವಿಷಯವಾಗಿ ಮಾತ್ರ ಮಾತನಾಡುತ್ತೇವೆ. ಇದೇ ನಾವುಗಳು ಅನುಸರಿಸುತ್ತಿರುವ ಎಚ್ಚರ, ಶ್ರದ್ಧೆ ಮತ್ತು ಸಂಯಮ.'

'ಸಹೋದರರೇ, ಒಳ್ಳೆಯದು.... ಬಹಳ ಒಳ್ಳೆಯದು. ಆದರೆ ಮನುಷ್ಯ ಧರ್ಮಕ್ಕೂ ಮೀರಿದ ಜ್ಞಾನ ದರ್ಶನವನ್ನು ಪಡೆಯುವ ಸಲುವಾಗಿ ವಿಶೇಷವಾಗಿ ಸಾಧನೆಗೈಯಬೇಕಾದ ಧ್ಯಾನ ಜೀವನವನ್ನು ಸಾಧಿಸಿರುವಿರೇನು?'

'ಗುರುದೇವಾ, ಇಲ್ಲಿ ನಾವು ಅಪೇಕ್ಷೆಪಟ್ಟ ಕಾಲದಲ್ಲಿ ಕಾಮ ಮತ್ತು ಅಕುಶಲವಾದ ಧರ್ಮವನ್ನು ದಾಟಿದವರಾಗಿದ್ದೇವೆ. ಸವಿತರ್ಕರಾಗಿ, ಸವಿಚಾರವಾಗಿ ಏಕಾಂತದಿಂದ ಹುಟ್ಟಿದ ಆನಂದ ಮತ್ತು ಸುಖದಿಂದ ಸಮಾಧಿಯ ನಾಲ್ಕು ಹಂತಗಳನ್ನು ಸಾಧಿಸಿ ಪಡೆದಿದ್ದೇವೆ. ಹಿಂದಿನ

'ಗುರುದೇವಾ, ತಾವು ತೋರಿಸಿಕೊಟ್ಟಂತೆ ನಿಜಕ್ಕೂ ನಾವುಗಳೆಲ್ಲ ಒಂದಾಗಿ ವಿವಾದಗಳಿಲ್ಲದೆ ಒಮ್ಮತದಿಂದ ಇದ್ದೇವೆ. ಹಾಲು ಮತ್ತು ನೀರು ಒಂದಾಗುವ ರೀತಿಯಲ್ಲಿ ಪರಸ್ಪರ ಕರುಣೆಯ ಕಣ್ಣುಳ್ಳವರಾಗಿ ಜೀವಿಸುತ್ತಿದ್ದೇವೆ. ನಮಗೆ ಲಾಭಕಾರಿಯೂ, ಯಶವನ್ನು ತರುವಂತಹ ಬ್ರಹ್ಮಚರಿಯವನ್ನು ಪಾಲಿಸುವ ಗೆಳೆಯರೊಂದಿಗೆ ಬದುಕುವ ಸುಯೋಗವು ಆನಂದ ತಂದಿದೆ. ಶಾರೀರಿಕ, ಮಾತು ಮತ್ತು ಮನಸ್ಸಿನ ಮೂಲಕ ಕಾರ್ಯಗಳನ್ನು ನಡೆಸುವಾಗಲೂ ಸಾರ್ವಜನಿಕವಾಗಿರಲಿ ಅಥವಾ ವೈಯಕ್ತಿಕವಾಗಿ ಆಗಲಿ ನಮ್ಮಲ್ಲಿ ಮೈತ್ರಿಯುತ ಭಾವನೆಯೇ ಉಂಟಾಗುತ್ತದೆ. ಶರೀರ ಬೇರೆ ಬೇರೆ ಇದ್ದರೂ ಭಾವನೆ ಮತ್ತು ಮನಸ್ಸು ಒಂದೇ ಆಗಿದೆ'

ಮಾನಸಿಕ ಏರಿಳಿತಗಳು ಅಸ್ತಂಗತವಾಗಿ ದುಃಖವೂ ಅಲ್ಲದ ಸುಖವೂ ಅಲ್ಲದ ಉಪೇಕ್ಷಾದಿಂದ ಉಂಟಾದ ಪರಿಶುದ್ಧ ಎಚ್ಚರ ಸ್ಥಿತಿಯನ್ನು ಸಾಧಿಸಿದ್ದೇವೆ. ಆ ಮೂಲಕ ಮನಸ್ಸನ್ನು ಉಪಶಾಂತಿ ಗೊಳಿಸಿಕೊಂಡಿದ್ದೇವೆ.'

'ಸಹೋದರರೇ, ಒಳ್ಳೆಯದು....... ಬಹಳ ಒಳ್ಳೆಯದು. ಈ ಬಗೆಯ ಮನುಷ್ಯ ಧರ್ಮಕ್ಕೂ ಮತ್ತು ಧ್ಯಾನ ಧರ್ಮಕ್ಕೂ ಮೀರಿದ ಮತ್ತೇನನ್ನು ಸಾಧಿಸಿ ಗುರುತಿಸಿರುವಿರಿ?'

'ಗುರುದೇವಾ, ಅಪೇಕ್ಷೆಪಟ್ಟ ಕಾಲದಲ್ಲಿ ರೂಪದ ಗುರುತಿಸುವಿಕೆಯನ್ನು ಅತಿಕ್ರಮಿಸಿ ಅಸ್ತಂಗತವಾಗಿಸಿದ್ದೇವೆ. ನಾನಾ ವಿಧದ ಗುರುತಿಸುವಿಕೆಗಳನ್ನು ಆಲೋಚಿಸದೆ 'ಅನಂತ ಆಕಾಶ' ವೆಂದು ಆಕಾಸಾನಯತನ ಸ್ಥಿತಿ ಸಾಧಿಸಿ ನೆಲೆಗೊಂಡಿದ್ದೇವೆ. ಮುಂದುವರೆದು 'ಅನಂತ ವಿಜ್ಞಾನ' ವೆಂದು ವಿಜ್ಞಾನಾಯತನ ಸಾಧಿಸಿ ನೆಲೆಗೊಂಡಿದ್ದೇವೆ. ಮತ್ತು ಮುಂದುವರೆದು 'ಏನೂ ಇಲ್ಲ' ಸ್ಥಿತಿ ಸಾಧಿಸಿ ನೆಲೆಗೊಂಡಿದ್ದೇವೆ. ಗುರುವೇ, ಈ ಸ್ಥಿತಿಯನ್ನೂ ಪೂರ್ಣವಾಗಿ ಅತಿಕ್ರಮಿಸಿ ಸ್ಥಿತಿ ಸಾಧಿಸಿ ನೆಲೆಗೊಂಡಿದ್ದೇವೆ.'

'ಸಹೋದರರೇ, ಒಳ್ಳೆಯದು.... ಬಹಳ ಒಳ್ಳೆಯದು. ಈ ಬಗೆಯ ಸಾಧನೆ ಸಿದ್ಧಿಗಳನ್ನೂ ಮೀರಿದ ವಿಶೇಷ ಸಾಧನೆಯ ಯೋಗ್ಯ ಜೀವನವನ್ನು ಸಾಧಿಸಿರುವಿರೇನು?'

'ಗುರುದೇವಾ, ಏಕೆ ಸಾಧ್ಯವಿಲ್ಲ. ಮತ್ತೂ ಸಾಧಿಸಿದ್ದೇವೆ. ಅದೆಂದರೆ: ಅಪೇಕ್ಷೆಪಟ್ಟ ಕಾಲದಲ್ಲಿ 'ನೇವಸಯತನ' ಸ್ಥಿತಿಯನ್ನೂ ಪೂರ್ಣವಾಗಿ ಅತಿಕ್ರಮಿಸಿ 'ಸಂಜ್ಞಾ' ಮತ್ತು 'ವೇದನೆ'ಗಳನ್ನೂ ನಿರೋಧಿಸಿದ ಸ್ಥಿತಿ ಸಾಧಿಸಿಕೊಂಡು ನೆಲೆಗೊಂಡಿದ್ದೇವೆ. ಆ ಮೂಲಕ 'ಪ್ರಜ್ಞೆ' ಯನ್ನು ಕಂಡುಕೊಂಡವರಾಗಿದ್ದೇವೆ. 'ಅಸವ'ಗಳನ್ನೂ ಪೂರ್ಣವಾಗಿ ಕ್ಷಯಿಸಿದವರಾಗಿದ್ದೇವೆ.'

'ಗುರುದೇವಾ, ನಾವುಗಳು ಈ ಜೀವನಕ್ಕೂ ಮೀರಿರುವ, ಈ ಜೀವನವನ್ನೂ ಉಪಶಾಂತಗೊಳಿಸಿರುವ, ಆರ್ಯನ ಜ್ಞಾನ ದರ್ಶನ ವಿಶೇಷ ಸಾಧನೆಯ ಯೋಗ್ಯ ಜೀವನವನ್ನು ಸಾಧಿಸಿಕೊಂಡಿರುವೆವು. ಇವುಗಳನ್ನೇ ನಾವುಗಳು ಉಪಯುಕ್ತ, ಯೋಗ್ಯ, ಎಲ್ಲಕ್ಕೂ ಮಿಗಿಲಾದ ಮತ್ತು ಅತ್ಯುತ್ತಮವಾದ ಜೀವನವೆಂದು ಕಂಡುಕೊಂ ಡಿದ್ದೇವೆ.'

'ಸಹೋದರರೇ, ಒಳ್ಳೆಯದು..... ಬಹಳ ಒಳ್ಳೆಯದು. ಸರಿಯಾದ ರೀತಿಯಲ್ಲಿ ಸರಿಯಾದ ಸಾಧನೆಯನ್ನು ಮಾಡಿರುವಿರಿ. ಇವುಗಳಿಗಿಂತ ಶ್ರೇಷ್ಠವಾದ ಜೀವನ ಮಾರ್ಗ ಮತ್ತೊಂದಿಲ್ಲ! ಇನ್ನು ನಿಮ್ಮಿಂದ ಲೋಕದ ದುಃಖಿತರಿಗೆ ಧರ್ಮೋಪದೇಶವಾಗಲಿ. ನಾನಿನ್ನು ಬರುವೆ' ಎಂದ ಬುದ್ಧರು ಕುಳಿತಲ್ಲಿಂದ ಮೇಲೆದ್ದು ತಮ್ಮ ನಿವಾಸದತ್ತ ಹೊರಟರು. ಆಗ ಆ ಮೂರು ಭಿಕ್ಷುಗಳು ಬುದ್ಧರಿಗೆ ವಂದಿಸಿ ಅವರೊಂದಿಗೆ ಬಹುದೂರ ನಡೆದು ಬಂದು ತಮ್ಮ ಶ್ರದ್ಧೆ, ಪ್ರೀತಿ, ವಿನಯ ಮತ್ತು ಧರ್ಮವನ್ನು ತೋರಿದರು.

ಹೀಗೆ ಮಾರ್ಗ ಮಧ್ಯದಲ್ಲಿ ಬುದ್ಧರಿಗೆ 'ದೀಘ' ನೆಂಬ ಮಾಂತ್ರಿಕನು ಎದುರಾಗಿ:

'ದೇವಾ, ಈ ಬಗೆಯ ಸಿದ್ಧಿ ಸಾಧನೆ ಮತ್ತು ಅರಿವಿನಿಂದ ಬಹುಜನಗಳ ಹಿತ ಮತ್ತು ಕಲ್ಯಾಣ ಹೇಗೆ ಸಾಧ್ಯ?' ಎನ್ನಲು ಬುದ್ಧನು ನಸುನಕ್ಕು,

'ಎಲೈ ದೀಘನೇ, ಇತರರೇಕೆ ಶ್ರಮಣರನ್ನು ಕಂಡಾಗ ತಲೆಬಾಗಿ ನಮಿಸಿ ದಾರಿ ಸರಿದು ನಿಲ್ಲುವರು?'

'ದೇವಾ, ನಾವುಗಳೂ ಕೂಡ ಅವರಂತೆಯೇ ಮನುಷ್ಯರು ನಿಜ. ಆದರೆ ಅವರುಗಳು ಸಾಧಿಸಿದ್ದನ್ನು ಪಡೆದ ಪರಮ ಜ್ಞಾನವನ್ನು ನಾವುಗಳು ಪಡೆಯಲು ವಿಫಲರಾಗಿರುವ ಪಾಪಪ್ರಜ್ಞೆ ಹಾಗೂ ಪಶ್ಚಾತ್ತಾಪದ ಪ್ರತಿ ಫಲವಾಗಿ'

ಎಲೈ ದೀಘನೇ, ಅದು ನಿಜವೇ ಆದರೆ, ಈ ಮೂರು ಕುಲಪುತ್ರರು ಸಾಧಿಸಿ ಪಡೆದ ಪರಿಶುದ್ಧ ಜ್ಞಾನವನು ಅವರ ಕುಲದವರು ಸಂತೋಷ ಮನದವರಾಗಿ ಅನುಸರಿಸಿದರೆ ಅದರಿಂದಾಗಿ ಬಹುಕಾಲದವರೆಗೆ ಅವರುಗಳಿಗೆ ಸುಖ ಮತ್ತು ಸೌಖ್ಯ ಉಂಟಾಗುವುದಿಲ್ಲವೆ?'

'ದೇವಾ, ಖಂಡಿತಾ ಉಂಟಾಗುತ್ತದೆ!'

'ಎಲೈ ದೀಘನೇ, ಅದೇ ರೀತಿ ಆ ಮೂವರು ಭಿಕ್ಷುಗಳ ಬಂಧು ಬಾಂಧವರು, ಸ್ನೇಹಿತರು, ಪರಿಚಯದವರು, ಹಳ್ಳಿಯವರು, ಪಟ್ಟಣ ಮತ್ತು ನಗರದವರು ಸಂತೋಷ ಮನಸ್ಸಿನಿಂದ ಬೋಧನೆಯನ್ನು ಕೇಳಿ ಆಚರಿಸಿದರೆ ಅವರುಗಳಿಗೆ ಬಹುಕಾಲ ಸುಖ, ಸೌಖ್ಯ ದೊರೆಯುವುದಿಲ್ಲವೆ?'

'ದೇವಾ, ಖಂಡಿತ ದೊರೆಯುತ್ತದೆ !'

'ಎಲೈ ದೀಘನೇ, ಅದೇ ರೀತಿ ದೇವತೆಗಳು, ಮಾರರು, ಬ್ರಹ್ಮರು, ಶ್ರಮಣರು, ಬ್ರಾಹ್ಮಣರು, ಪ್ರಜೆಗಳು ಹಾಗೂ ರಾಜರೂ ಸಂತೋಷ, ಶ್ರದ್ಧೆ ಮತ್ತು ಪ್ರಜ್ಞೆಯಿಂದ ಮನಸ್ಸಿಟ್ಟು ಆ ಪರಮ ಜ್ಞಾನವನ್ನು ತಮ್ಮದಾಗಿಸಿಕೊಂಡರೆ ಬಹುಜನರ ಹಿತ ಮತ್ತು ಬಹುಜನರ ಸುಖವನ್ನು ಕಾಪಾಡಿದಂತಾಗಲಿಲ್ಲವೆ?' ಎನ್ನಲು ಆ ಮಾಂತ್ರಿಕನಾದ ದೀಘನು ಬುದ್ಧನಿಗೆ ಗಾಢ ಶ್ರದ್ಧೆಯಿಂದ ಎರಡೂ ಕೈಗಳನ್ನು ಜೋಡಿಸಿ ತಲೆಬಾಗಿ:

ಹೌದು ಗೌತಮರೇ, ತಾವುಗಳು ದೇವ ಮಾನವರಿಗೆಲ್ಲ ಶ್ರೇಷ್ಠ ಗುರುವೆ ಸರಿ.......! ಎಂದು ವಂದಿಸಿದ.

ಮೂಲಪಾಳಿ: ಚೂಳಗೋಸಿಂಗ ಸುತ್ತಂ
ಮಜ್ಝಿಮ ನಿಕಾಯ, ಸಂಪುಟ-೩

□

'SAMVADA' Kannada Monthly, Dec. 2008 RNI-KAR KAN/2002/9246 CPMG/KA/BGW-70
Office of Posting: RAJAJINAGAR HO, Date of Posting: 27-28 of Every Month

ಕವಿತೆಗಳು
ಕೆ.ಜಿ. ಶಂಕರಪಿಳ್ಳೆ
ಅನುವಾದ :
ತೇರ್‍ಳಿ ಎನ್. ಶೇಖರ್
ಬೆಲೆ : 120/-

ಕೇಂದ್ರ ಸಾಹಿತ್ಯ ಅಕಾದೆಮಿ,
ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜ
ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂ



ಲ ರೂ ಜ ಎ ಲ ನ್ವಾ
ಅನುವಾದ:
(ಶ್ರೀಮತಿ) ಶ್ರೀ ಹರ್ಲೇಕರ
ಬೆಲೆ : 350/-



ಕನುಪರ್ತಿ ವರಲಕ್ಷ್ಮಿ
ಪೀಲಾಪ್ರಗಡ ರಾಜ್ಯಲಕ್ಷ್ಮಿ
ಬೆಲೆ: 40/-



ತೀ.ನಂ.ಶ್ರೀ
ತೀ.ನಂ.ಶ
ಬೆಲೆ : 2



ಸೂಫಿ ಹೇಳಿದ ಕಥೆ
ಕೆ.ಪಿ. ರಾಮನುಣ್ಣಿ
ಅನುವಾದ :
ಡಾ.ಅಶೋಕ ಕುಮಾರ್
ಬೆಲೆ : 100/-



ಅಕ್ಕಮಹಾದೇವಿ
ಗುರುಲಿಂಗ ಕಾಪಸೆ
ಬೆಲೆ: 40/-



ಒಂದು ಗಿ
ಹಕ್ಕಿಗಳು
ವಿಶ್ರಾಮ
ಅನುವಾದ
ಅಶೋಕ
ಬೆಲೆ : 2



ಶ್ರೀ ಬಸವಣ್ಣನವರ
ವಚನ ಸಂಗ್ರಹ
ಸಂಪಾದಕರು :
ಸ.ಸ. ಮಾಳವಾಡ
ಬೆಲೆ : 65/-

ಅ.ನು.ಕೃಷ್ಣರಾಯರು
ಜಿ.ಎಸ್.ಅಮೂರ
ಬೆಲೆ : 40/-

ಸುಂದರಿ
ಉರೂಬ
ಅನುವಾದ
ಮೋಹನ
ಬೆಲೆ : 2



ಶ್ರೀರಂಗ
ಎನ್ಕೆ.ಕುಲಕರ್ಣಿ
ಬೆಲೆ : 40/-

ಆರ್.ಕಲ್ಯಾಣಮ್ಮ
ಎಸ್.ಡಿ.ಶಶಿಕಲಾ
ಬೆಲೆ : 40/-



ನ ಹನ್ಯತೆ
ಮೈತ್ರೇಯಿ
ಅನುವಾದ
ವಿಜಯಕು
ಬೆಲೆ : 2



ರಾಷ್ಟ್ರಕವಿ ಕುವೆಂಪು
ಪ್ರಭು ಶಂಕರ
ಬೆಲೆ: 40/-

ಆಧುನಿಕ ಮಹಾಭಾರತ
ಗುಂಟೂರು ಶೇಷೇಂದ್ರ ಶರ್ಮಾ
ಅನುವಾದ :
ಅರ್ಕಸಾಲಿ ವೃಷಭೇಂದ್ರಾಚಾರ್
ಬೆಲೆ : 200/-

ಕೇತು ವಿ
ತೆಲುಗು
ಕೇತು ವಿ
ಅನುವಾದ
ಮೀರಾಸಾ
ಬೆಲೆ : 1

ತ.ರಾ.ಸು
ಎಂ.ಎಸ್.ಪಾಟೀಲ
ಬೆಲೆ : 40/-



ಮಧುರಚೆನ್ನ
ಗುರುಲಿಂಗ ಕಾಪಸೆ
ಬೆಲೆ : 40/-

ನೆಲವೆದ್ದು
ವಿಶ್ವಾಸ
ಕನ್ನಡಕ್ಕೆ :
ಪೋಕಳೆ
ಬೆಲೆ : 3